ಸಂಪುಟ 2, ಸಂಚಿಕೆ 22

# ನ್ಯೂ ಇಂಡಿಯಾ ಸಮಾಚಾರ

ಮೇ 16-31, 2022
ಉಚಿತ ವಿತರಣೆಗಾಗಿ



8 ವರ್ಷಗಳು
ಕರ್ತವ್ಯದ ಹಾದಿಯತ್ತ

## ರಾಷ್ಟ್ರ ಮೊದಲು

ನವಭಾರತದ ಯಶಸ್ವಿ ಪಯಣಕ್ಕಾಗಿ
ಪ್ರತಿಯೊಂದು ವಿಭಾಗವನ್ನು ಸಶಕ್ತಗೊಳಿಸಿದ
ದೃಢವಾದ ರಾಷ್ಟ್ರ ನೀತಿಯ ಪರಿಣಾಮವಾಗಿ
ಕಳೆದ ಎಂಟು ವರ್ಷಗಳಲ್ಲಿ ಉತ್ತಮ ಆಡಳಿತವು
ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಗೋಚರಿಸುತ್ತಿದೆ...
ಸುವರ್ಣ ಭಾರತದ ಪಯಣದಲ್ಲಿ ಅಮೃತಕಾಲವು
ಈಗ ಜನಸಾಮಾನ್ಯರ ಕರ್ತವ್ಯಕಾಲವಾಗಿದೆ.

# “ಪ್ರಧಾನ ಮಂತ್ರಿ ವಸ್ತುಸಂಗ್ರಹಾಲಯವು ಯುವಕರ ಆಕರ್ಷಣೆಯ ಕೇಂದ್ರವಾಗಿದೆ, ಅವರನ್ನು ದೇಶದ ಅಮೂಲ್ಯವಾದ ಪರಂಪರೆಯೊಂದಿಗೆ ಬೆಸೆಯುತ್ತದೆ”



ದೇಶದ ಪ್ರಧಾನ ಮಂತ್ರಿಗಳ ಶ್ರಮವನ್ನು ಸ್ಮರಿಸಲು ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕಿಂತಲೂ ಉತ್ತಮವಾದ ಸಂದರ್ಭ ಯಾವುದಿದೆ? ಪ್ರಧಾನಮಂತ್ರಿ ವಸ್ತುಸಂಗ್ರಹಾಲಯವು ಯುವಜನರಿಗೆ ದೇಶದ ಅಮೂಲ್ಯ ಪರಂಪರೆಯನ್ನು ಪರಿಚಯಿಸುತ್ತಿದೆ. ಈ ವಿಷಯವು ಭೂತ, ವರ್ತಮಾನ ಮತ್ತು ಭವಿಷ್ಯವನ್ನು ಹೆಣೆಯುವ ರೀತಿಯಲ್ಲಿ ರಚನೆಯಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ‘ಮನ್ ಕಿ ಬಾತ್’ ನಲ್ಲಿ ಪ್ರಧಾನಮಂತ್ರಿ ವಸ್ತುಸಂಗ್ರಹಾಲಯ ಮತ್ತು ದೇಶಾದ್ಯಂತದ ಇತರ ವಸ್ತುಸಂಗ್ರಹಾಲಯಗಳ ಕುರಿತು ಚರ್ಚಿಸಿದರು ಮತ್ತು ವಸ್ತುಸಂಗ್ರಹಾಲಯದ ಬಗ್ಗೆ ಏಳು ಪ್ರಶ್ನೆಗಳನ್ನು ಕೇಳಿದರು. # MuseumQuiz ಎಂಬ ಹ್ಯಾಶ್‌ಟ್ಯಾಗ್‌ನೊಂದಿಗೆ NaMo ಅಪ್ಲಿಕೇಶನ್ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಅವರು ಜನರನ್ನು ಆಹ್ವಾನಿಸಿದರು. ಇದರೊಂದಿಗೆ ದೇಶದಲ್ಲಿ ಹೆಚ್ಚುತ್ತಿರುವ ನಗದು ರಹಿತ ಚಟುವಟಿಕೆಗಳು, ವೇದ ಗಣಿತ, ಪ್ರತಿ ಜಿಲ್ಲೆಯಲ್ಲಿ 75 ಅಮೃತ ಸರೋವರಗಳ ರಚನೆ, ತಂತ್ರಜ್ಞಾನ, ಜಲ ಸಂರಕ್ಷಣೆಯ ಪ್ರತಿಜ್ಞೆ ಕುರಿತು ಪ್ರಧಾನಿ ಮಾತನಾಡಿದರು. ಗುರುಗ್ರಾಮದ ಸಾರ್ಥಕ್ ಹೆಸರನ್ನು ಉಲ್ಲೇಖಿಸಿದರಲ್ಲದೆ, ಅವರು ಕೋಲ್ಕತ್ತಾದ ಗೌರವ್ ಟೆಕ್ರಿವಾಲ್ ಅವರೊಂದಿಗೆ ವೇದ ಗಣಿತದ ಕುರಿತು ಸಂವಾದ ನಡೆಸಿದರು.

- **# MuseumMemories ನಲ್ಲಿ ನಿಮ್ಮ ಅನುಭವವನ್ನು ಹಂಚಿಕೊಳ್ಳಿ:** ಮೇ 18 ರಂದು, ಪ್ರಪಂಚವು ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನವನ್ನು ಆಚರಿಸುತ್ತದೆ. ಇದರ ಹಿನ್ನೆಲೆಯಲ್ಲಿ, ನನ್ನ ಯುವ ಒಡನಾಡಿಗಳಿಗಾಗಿ ನಾನು ಯೋಜನೆಯೊಂದನ್ನು ನೀಡುತ್ತಿದ್ದೇನೆ. ರಜಾದಿನಗಳಲ್ಲಿ ನಿಮ್ಮ ಗೆಳೆಯರೊಂದಿಗೆ ಸ್ಥಳೀಯ ವಸ್ತುಸಂಗ್ರಹಾಲಯಕ್ಕೆ ಪ್ರವಾಸವನ್ನು ಏಕೆ ಹೋಗಬಾರದು? #MuseumMemories ಜೊತೆಗೆ ನಿಮ್ಮ ಅನುಭವವನ್ನು ಹಂಚಿಕೊಳ್ಳಿ. ವಸ್ತುಸಂಗ್ರಹಾಲಯದ ಬಗೆಗಿನ ಕುತೂಹಲವು ಇತರರ ಆಸಕ್ತಿಯನ್ನೂ ಕೆರಳಿಸುತ್ತದೆ.
- **ಪ್ರತಿ ಜಿಲ್ಲೆಗೆ 75 ಅಮೃತ ಸರೋವರಗಳು:** ನೀರಿನ ಕ್ಷೇತ್ರದಲ್ಲಿ ಮಾಡುವ ಪ್ರತಿಯೊಂದು ಪ್ರಯತ್ನವು ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಅಮೃತ ಕಾಲದ ಸಂಕಲ್ಪಗಳು ನೀರಿನ ಸಂರಕ್ಷಣೆಯನ್ನೂ ಒಳಗೊಂಡಿವೆ. ಪ್ರತಿ ಜಿಲ್ಲೆಯಲ್ಲಿ 75 ಅಮೃತ ಸರೋವರಗಳನ್ನು ನಿರ್ಮಿಸಲಾಗುವುದು. ವಾಲ್ಮೀಕಿ ರಾಮಾಯಣವು ನೀರಿನ ಮೂಲಗಳ ಜೋಡಣೆಗೆ ಮತ್ತು ನೀರಿನ ಸಂರಕ್ಷಣೆಗೆ ಬಲವಾದ ಗಮನವನ್ನು ನೀಡುತ್ತದೆ.
- **ನೀರನ್ನು ಸಂರಕ್ಷಿಸಲು ಪ್ರತಿಜ್ಞೆ ಮಾಡಿ:** ನಿಮ್ಮ ನೆರೆಹೊರೆಯಲ್ಲಿರುವ ಹಳೆಯ ಕೊಳಗಳು, ಬಾವಿಗಳು ಮತ್ತು ಸರೋವರಗಳ ಬಗ್ಗೆ ತಿಳಿದುಕೊಳ್ಳಿ. ಅಮೃತ ಸರೋವರ ಅಭಿಯಾನವನ್ನು ನೀರಿನ ಸಂರಕ್ಷಣೆಗೆ ಬಳಸಿಕೊಳ್ಳಲಾಗುವುದು. ಸ್ಥಳೀಯ ಪ್ರವಾಸಿ ಆಕರ್ಷಣೆಗಳನ್ನೂ ಸಹ ನಿರ್ಮಿಸಲಾಗುವುದು. ಸಿಂಧೂ ಮತ್ತು ಹರಪ್ಪ ನಾಗರೀಕತೆಗಳಾದ್ಯಂತ ನೀರಿನ ಸಂರಕ್ಷಣೆಯ ಪ್ರಾಮುಖ್ಯದ ಬಗ್ಗೆ ಜನರಿಗೆ ಅರಿವಿತ್ತು. ನಾವು ಅದೇ ದಿಕ್ಕಿನಲ್ಲಿ ಮತ್ತೊಮ್ಮೆ ಪ್ರಯತ್ನಿಸಬೇಕು.
- **ಮಕ್ಕಳಿಗೆ ವೇದ ಗಣಿತವನ್ನು ಕಲಿಸಬೇಕು:** ಭಾರತೀಯರಾದ ನಮಗೆ ಗಣಿತವು ಎಂದಿಗೂ ಸವಾಲಿನ ವಿಷಯವಾಗಿರಲಿಲ್ಲ. ಇದರ ಪ್ರಮುಖ ಕಾರಣಗಳಲ್ಲಿ ನಮ್ಮ ವೇದ ಗಣಿತವೂ ಒಂದು. ವೇದ ಗಣಿತವನ್ನು ಎಲ್ಲಾ ಪೋಷಕರು ಮಕ್ಕಳಿಗೆ ಕಲಿಸಬೇಕು. ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಮತ್ತು ಅವರ ತಾರ್ಕಿಕ ಹಾಗು ವಿಶ್ಲೇಷಣಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- **ದೇಶವು ಡಿಜಿಟಲ್ ಆರ್ಥಿಕ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುತ್ತಿದೆ:** ಡಿಜಿಟಲ್ ಆರ್ಥಿಕತೆಯು ದೇಶದಲ್ಲಿ ಸಂಸ್ಕೃತಿಯನ್ನು ಹುಟ್ಟುಹಾಕುತ್ತಿದೆ. ಸಣ್ಣ ಬೀದಿಗಳ ಮೂಲೆಗಳಲ್ಲೂ, ಡಿಜಿಟಲ್ ಪಾವತಿಗಳು ಹೆಚ್ಚಿನ ಗ್ರಾಹಕರಿಗೆ ಸೇವೆ ಸಲ್ಲಿಸಲು ನೆರವಾಗಿವೆ. ಡಿಜಿಟಲ್ ಹಣದೊಂದಿಗೆ, ಯಾವುದೇ ಸಮಸ್ಯೆಗಳಿರುವುದಿಲ್ಲ. ಪ್ರತಿದಿನ, ನೀವು ಯುಪಿಐ ಪಾವತಿಯ ಪ್ರಯೋಜನಗಳನ್ನು ಪಡೆದುಕೊಳ್ಳುತ್ತೀರಿ.
- **ತಂತ್ರಜ್ಞಾನವು ಜೀವನವನ್ನು ಬದಲಾಯಿಸುತ್ತಿದೆ:** ತಂತ್ರಜ್ಞಾನವು ನಮ್ಮ ಸುತ್ತಲೂ ನಿರಂತರವಾಗಿ ಗೋಚರಿಸುತ್ತಿದೆ, ಸಾಮಾನ್ಯ ಜನರ ಜೀವನವನ್ನು ಬದಲಾಯಿಸುತ್ತಿದೆ. ವಿಶೇಷಚೇತನರ ಅಸಾಧಾರಣ ಸಾಮರ್ಥ್ಯಗಳನ್ನು ತಂತ್ರಜ್ಞಾನವು ದೇಶ ಮತ್ತು ಜಗತ್ತಿಗೆ ಪ್ರಯೋಜನಕಾರಿಯಾಗುವಂತೆ ಬಳಸಿಕೊಂಡಿದೆ. ಅನೇಕ ಸ್ಟಾರ್ಟ್‌ಅಪ್‌ಗಳು ಮತ್ತು ಸಂಸ್ಥೆಗಳು ಈ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸುತ್ತಿವೆ.
- **ಕೊರೊನಾ ಬಗ್ಗೆ ಜಾಗರೂಕರಾಗಿರಿ:** ಕೊರೊನಾ ಬಗ್ಗೆಯೂ ಎಚ್ಚರದಿಂದಿರಬೇಕು. ಮುಖಗವಸು ಧರಿಸುವುದು, ನಿಯಮಿತವಾಗಿ ಕೈ ತೊಳೆಯುವುದು, ಸಾಂಕ್ರಾಮಿಕ ತಡೆಗಟ್ಟುವಿಕೆಗೆ ಅಗತ್ಯವಾದ ಕ್ರಮಗಳು ಏನೇ ಇರಲಿ, ಅವುಗಳನ್ನು ಅನುಸರಿಸಿ.

ಈ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಮನ್ ಕಿ ಬಾತ್ ಕೇಳಬಹುದು.

ನ್ಯೂ ಇಂಡಿಯಾ
# ಸಮಾಚಾರ

ಸಂಪುಟ 2, ಸಂಚಿಕೆ 22 ಮೇ 16-31, 2022

ಸಂಪಾದಕರು
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋ, ನವದೆಹಲಿ

ಹಿರಿಯ ಸಲಹಾ ಸಂಪಾದಕರು
**ಸಂತೋಷ್ ಕುಮಾರ್**

ಹಿರಿಯ ಸಹಾಯಕ ಸಲಹಾ ಸಂಪಾದಕರು
**ವಿಭೋರ್ ಶರ್ಮಾ**

ಸಹಾಯಕ ಸಲಹಾ ಸಂಪಾದಕರು
**ಚಂದನ್ ಕುಮಾರ್ ಚೌಧರಿ**
**ಅಖಿಲೇಶ್ ಕುಮಾರ್**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ಅನಿಲ್ ಪಟೇಲ್** (ಗುಜರಾತಿ),
**ನದೀಮ್ ಅಹ್ಮದ್** (ಉರ್ದು),
**ಸೋನಿತ್ ಕುಮಾರ್ ಗೋಸ್ವಾಮಿ** (ಅಸ್ಸಾಮಿ),
**ವಿನಯಾ ಪಿ.ಎಸ್.** (ಮಲಯಾಳಂ)
**ಪಾಲ್‌ಮಿ ರಕ್ಷಿತ್** (ಬಂಗಾಳಿ)
**ಹರಿಹರ ಪಂಡಾ** (ಒಡಿಯಾ)

ಹಿರಿಯ ವಿನ್ಯಾಸಕರು
**ಶ್ಯಾಮ್ ಶಂಕರ್ ತಿವಾರಿ**
**ರವೀಂದ್ರ ಕುಮಾರ್ ಶರ್ಮಾ**

ವಿನ್ಯಾಸಕರು
**ದಿವ್ಯಾ ತಲ್ವಾರ್, ಅಭಯ್ ಗುಪ್ತಾ**



**13 ಭಾಷೆಗಳಲ್ಲಿ ಲಭ್ಯವಿರುವ ನ್ಯೂ ಇಂಡಿಯಾ ಸಮಾಚಾರ್ ಓದಲು ಕ್ಲಿಕ್ ಮಾಡಿ**
https://newindiasamachar.pib.gov.in/news.aspx

**ನ್ಯೂ ಇಂಡಿಯಾ ಸಮಾಚಾರ್ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:**
https://newindiasamachar.pib.gov.in/archive.aspx

## ಒಳಪುಟಗಳಲ್ಲಿ

### 'ಭಾರತ ಮೊದಲು' ಎಂಬ ಸಂಕಲ್ಪದೊಂದಿಗೆ ರಾಷ್ಟ್ರವು ಸಶಕ್ತವಾಗುತ್ತಿದೆ



**ಮುಖಪುಟ ಲೇಖನ** ಸಬ್ ಕಾ ಪ್ರಯಾಸ್ ನೊಂದಿಗೆ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್ ಧ್ಯೇಯವಾಕ್ಯವನ್ನು ಅನುಸರಿಸಿ 8 ವರ್ಷಗಳ ಉತ್ತಮ ಆಡಳಿತ | 04-11

ಅವರ ಬರಹಗಳು

### ಕ್ರಾಂತಿಯ ಕಿಡಿ ಹೊತ್ತಿಸಿದವು



ಈ ಬಾರಿ ಹಿಂದಿ ಪತ್ರಿಕೋದ್ಯಮ ದಿನದ ಅಂಗವಾಗಿ ಅಮೃತ ಮಹೋತ್ಸವದ ಸರಣಿಯಲ್ಲಿ ತಮ್ಮ ಅಕ್ಷರಗಳನ್ನು ಅಸ್ತ್ರವನ್ನಾಗಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಮಹಾನ್ ವೀರರ ಕಥೆಯನ್ನು ಓದಿ. | 76-79

### ಅಹಿಲ್ಯಾಬಾಯಿ: ಉದಾತ್ತ ರಾಣಿ

ಅಹಿಲ್ಯಾಬಾಯಿ ಹೋಳ್ಕರ್ ಅವರು ಭಾರತದ ಇತಿಹಾಸದಲ್ಲಿ ಅಳಿಸಲಾಗದ ಛಾಪು ಮೂಡಿಸಿದ್ದಾರೆ | 80

## ವಿಶೇಷ ಪ್ಯಾಕೇಜ್

ಆರೋಗ್ಯಕರ ಭಾರತ - ಬಲಿಷ್ಠ ಭಾರತ | 12-17
ಮನುಕುಲದ ಭವಿಷ್ಯದ ಬಗ್ಗೆ ಕಾಳಜಿ | 18-21
ನವ ಭಾರತದ ಹೃದಯದಲ್ಲಿ ಮಹಿಳಾ ಶಕ್ತಿ | 22-26
ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ | 27-29
ಯುವಜನರ ಕನಸಿನ ಭಾರತ | 30-34
ಭಾರತ ವಿಶ್ವಗುರುವಾಗುತ್ತದೆ | 35-40
ಬಲಿಷ್ಠ ರೈತ, ನೆಮ್ಮದಿಯ ಗ್ರಾಮ | 41-48
ಶ್ರೇಷ್ಠ ಪರಂಪರೆಯನ್ನು, ಶ್ರೇಷ್ಠ ಸಂಪ್ರದಾಯವನ್ನು ಒಳ್ಳೆಯ ಆಶಯದೊಂದಿಗೆ ಪಾಲಿಸುತ್ತಿರುವ ರಾಷ್ಟ್ರ | 49-55
ರಾಷ್ಟ್ರದ ಸ್ಥಿತಿ ಮತ್ತು ನಿರ್ದೇಶನಕ್ಕೆ ಹೊಸ ಒತ್ತು ನೀಡಲು ಸೂತ್ರ | 56-62
ದೇಶದ ರಕ್ಷಣಾ ಕ್ಷೇತ್ರದ ಪುನಶ್ಚೇತನ | 63-64
ನವಭಾರತದ ಕನಸುಗಳಿಗೆ ಡಿಜಿಟಲ್ ಒತ್ತು | 65-69
ದೇಶದ ಸಂಪನ್ಮೂಲಗಳ ಮೇಲೆ ಎಲ್ಲರಿಗೂ ಸಮಾನ ಹಕ್ಕು | 70-75

**ಮುದ್ರಣ ಮತ್ತು ಪ್ರಕಟಣೆ: ಸತ್ಯೇಂದ್ರ ಪ್ರಕಾಶ್**, ಪ್ರಧಾನ ಮಹಾನಿರ್ದೇಶಕರು, ಬ್ಯೂರೋ ಆಫ್ ಔಟ್ ರೀಚ್ ಮತ್ತು ಕಮ್ಯುನಿಕೇಷನ್ ಪರವಾಗಿ.
**ಮುದ್ರಣಾಲಯ** : ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್, ಎಫ್‌ಬಿಡಿ-ಒನ್ ಕಾರ್ಪೊರೇಟ್ ಪಾರ್ಕ್, 10ನೇ ಮಹಡಿ, ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003. **ಸಂಪರ್ಕ ವಿಳಾಸ** : ಕೊಠಡಿ ಸಂಖ್ಯೆ 278, ಬ್ಯೂರೋ ಆಫ್ ಔಟ್ ರೀಚ್ ಕಮ್ಯುನಿಕೇಷನ್ 2 ನೇ ಮಹಡಿ, ಸೂಚನಾ ಭವನ, ನವದೆಹಲಿ -110003. **ಇಮೇಲ್** : response-nis@pib.gov.in, **RNI No.** : DELKAN/2020/78828

# ಸಂಪಾದಕೀಯ

ಶುಭಾಶಯಗಳು!

ಎದ್ದೇಳಿ.

ನಿಮ್ಮ ಸಾಮರ್ಥ್ಯವನ್ನು ಗುರಿತಿಸಿ...

ನಿಮ್ಮ ಎಲ್ಲಾ ಜವಾಬ್ದಾರಿಗಳನ್ನು ತಿಳಿಯಿರಿ...

ಇದೇ ಸಮಯ, ಸರಿಯಾದ ಸಮಯ! ಭಾರತದ ಅಮೂಲ್ಯ ಸಮಯ!

ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುವ ಮೂಲಕ ಭಾರತದ ಅಭಿವೃದ್ಧಿ ಪಯಣವನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ಯಲು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೆಂಪು ಕೋಟೆಯ ಮೇಲಿನಿಂದ ನೀಡಿದ ಈ ಕರೆಯು ಮೂಲ ಮಂತ್ರವಾಗಿದೆ. 2014ರಲ್ಲಿಯೇ ಈ ಕೆಲಸ ಆರಂಭವಾಗಿದೆ. ಕಳೆದ 8 ವರ್ಷಗಳಿಂದ ಅಭಿವೃದ್ಧಿಯ ಪಯಣ ಈಗ ಅಮೃತ ಕಾಲದ ಅಡಿಪಾಯವಾಗುತ್ತಿದೆ ಮತ್ತು ಭವಿಷ್ಯದ ಭಾರತವು ತನ್ನ ಮಹತ್ವಾಕಾಂಕ್ಷೆಯ ಗುರಿಗಳನ್ನು ಪೂರೈಸಲು ನಿರ್ಧರಿಸಿದೆ. ಆಚರಣೆ ಇಲ್ಲದೆ ಯಾವುದೇ ಸಂಕಲ್ಪ ಯಶಸ್ವಿಯಾಗುವುದಿಲ್ಲ.

ಈ ಕ್ಷೇತ್ರದಲ್ಲಿ ಯುವಕರು ಭಾರತದ ಶಕ್ತಿಯಾಗಿದ್ದಾರೆ. ಸರಾಸರಿ 29 ವರ್ಷ ವಯಸ್ಸಿನ ಭಾರತವು ವಿಶ್ವದ ಅತ್ಯಂತ ಕಿರಿಯ ದೇಶವಾಗಿದೆ. ಯುವಕರ ಸ್ಫೂರ್ತಿಯಾದ ಸ್ವಾಮಿ ವಿವೇಕಾನಂದ ಅವರು ಭಾರತದ ಭವಿಷ್ಯದ ಬಗ್ಗೆ ಮಾತನಾಡುವಾಗ, ಅವರ ಕಣ್ಣುಗಳ ಮುಂದೆ ತಾಯಿ ಭಾರತಿಯ ಭವ್ಯತೆಯ ಚಿತ್ರಣವಿತ್ತು. “ನಿಮಗೆ ಸಾಧ್ಯವಾದಷ್ಟೂ ಹಿಂದೆ ತಿರುಗಿ ನೋಡಿ”ಎಂದು ಅವರು ಹೇಳುತ್ತಿದ್ದರು. ನಿಮ್ಮ ಹಿಂದೆ ಸದಾ ಹರಿಯುವ ಬುಗ್ಗೆಗಳ ನೀರನ್ನು ಕುಡಿಯಿರಿ, ನಂತರ ಮುಂದೆ ಹೋಗಿ, ಭಾರತವನ್ನು ಹಿಂದೆಂದಿಗಿಂತಲೂ ಉಜ್ವಲವಾಗಿ, ಶ್ರೇಷ್ಠವಾಗಿ ಮತ್ತು ಉತ್ತಮವಾಗಿ ಮಾಡಿ. “ಇದನ್ನು ಸಾಕಾರ ಮಾಡಿ”

ಸ್ವತಂತ್ರ ಭಾರತದಲ್ಲಿ ಜನಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾಮಿ ವಿವೇಕಾನಂದರ ತತ್ವಗಳನ್ನು ಅಳವಡಿಸಿಕೊಳ್ಳುವ ಮೂಲಕ ಭಾರತಕ್ಕೆ ಹೊಸ ಮಾರ್ಗವನ್ನು ನೀಡಿದ್ದಾರೆ. ಪರಿಣಾಮವಾಗಿ, ಕಳೆದ ಎಂಟು ವರ್ಷಗಳಲ್ಲಿ, ‘ದೇಶ ಮೊದಲು’ ತತ್ವವು ಪ್ರತಿ ಯೋಜನೆ ಮತ್ತು ಕಾರ್ಯಕ್ರಮದ ಅಡಿಪಾಯವಾಗಿದೆ. ಅವರ ಸಂದೇಶವು ಸ್ಪಷ್ಟವಾಗಿದೆ: ದೇಶವು ನಿಧಾನವಾಗಿ, ತುಂಡುಗಳಾಗಿ ಅಥವಾ ಅರೆಮನಸ್ಸಿನಿಂದ ಮುಂದುವರಿಯಲು ಸಾಧ್ಯವಿಲ್ಲ. ಸ್ವಲ್ಪವೇ ಹೆಚ್ಚಿನ ಕೆಲಸ ಮಾಡುವ ಮೂಲಕ ಅದನ್ನು ಸಾಧಿಸುವುದು ಅಸಾಧ್ಯ. ಏನು ಮಾಡಬೇಕೋ ಅದನ್ನು ಪ್ರಮುಖ ರೀತಿಯಲ್ಲಿ ಮಾಡಬೇಕಾಗುತ್ತದೆ. ಈ ರೀತಿಯ ಚಿಂತನೆಯು ಭಾರತದ ಜನಸಾಮಾನ್ಯರ ಮನಸ್ಥಿತಿಯನ್ನು ಬದಲಾಯಿಸಿದೆ ಮತ್ತು ಇದರ ಪರಿಣಾಮವಾಗಿ ದೇಶವು ಈಗ ಸಂಕಲ್ಪಗಳನ್ನು ಮಾಡುತ್ತಿದೆ ಮತ್ತು ಫಲಿತಾಂಶಗಳನ್ನು ಸಾಧಿಸುತ್ತಿದೆ. ಬದಲಾವಣೆ ತರಲು ಪ್ರಧಾನಿ ನರೇಂದ್ರ ಮೋದಿ ಅವರು ಸಂಕಲ್ಪ ಯಾತ್ರೆ ಆರಂಭಿಸಿದ್ದು, ಅದಕ್ಕೆ ಅಮೃತ ಕಾಲ ಎಂದು ಕರೆದಿದ್ದಾರೆ.

ನ್ಯೂ ಇಂಡಿಯಾ ಸಮಾಚಾರದ ಈ ವಿಶೇಷ ಸಂಚಿಕೆಯು ಕಳೆದ ಎಂಟು ವರ್ಷಗಳಿಂದ 700 ಕ್ಕೂ ಹೆಚ್ಚು ಉಪಕ್ರಮಗಳ ಮೂಲಕ ಉತ್ತಮ ಆಡಳಿತದ ಅಚಲ ಉದ್ದೇಶಗಳೊಂದಿಗೆ ದೇಶದ ಸರ್ವಾಂಗೀಣ ಮತ್ತು ಸರ್ವತೋಮುಖ ಅಭಿವೃದ್ಧಿಯ ಪಯಣದಲ್ಲಿ ಭಾಗವಹಿಸಿದ ರಾಷ್ಟ್ರದ 130 ಕೋಟಿ ಜನರಿಗೆ ಸಮರ್ಪಿಸಲಾಗಿದೆ. ವಿಶ್ವದಲ್ಲಿ ಭಾರತದ ಹೆಮ್ಮೆ ಹೆಚ್ಚಿದೆ ಮತ್ತು ಆಡಳಿತದಲ್ಲಿ ನಂಬಿಕೆಯೂ ಬೆಳೆದಿದೆ.

ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ ಮತ್ತು ಅದ್ಭುತವಾದ ಅಭಿವೃದ್ಧಿಯ ಪ್ರಯಾಣದ ಭಾಗವಾಗಿರಿ.

**ನಿಮ್ಮ ಸಲಹೆಗಳನ್ನು ನಮ್ಮ ಇ-ಮೇಲ್ response-nis@pib.gov.in ಗೆ ಕಳುಹಿಸಿ.**

ಹಿಂದಿ, ಇಂಗ್ಲಿಷ್ ಮತ್ತು ಇತರ
11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/
ಡೌನ್‌ಲೋಡ್ ಮಾಡಿ.
https://newindiasamachar.pib.gov.in/news.aspx

**(ಜೈದೀಪ್ ಭಟ್ನಾಗರ್)**

# ಅಂಚೆ ಪೆಟ್ಟಿಗೆ




ಪ್ರಿಯ ಸಂಪಾದಕರೇ,

ಪತ್ರಿಕೆಯನ್ನು ನಿಯಮಿತವಾಗಿ ಮೇಲ್ ಮಾಡುತ್ತಿರುವುದಕ್ಕಾಗಿ ಧನ್ಯವಾದಗಳು. ಭಾರತದಂತಹ ವಿಶಾಲವಾದ ಮತ್ತು ವೈವಿಧ್ಯಮಯ ರಾಷ್ಟ್ರದಲ್ಲಿ, ಜನಸಂಖ್ಯೆಯ ಪ್ರತಿಯೊಂದು ವಲಯದ ಅಗತ್ಯಗಳನ್ನು ಪೂರೈಸುವುದು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಉದ್ದೇಶಿಸಿರುವ ಎಲ್ಲಾ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸುವುದು ಸವಾಲಿನ ಕೆಲಸವಾಗಿದೆ, ಇದನ್ನು ನಮ್ಮ ಗೌರವಾನ್ವಿತ ಪ್ರಧಾನ ಮಂತ್ರಿ ಮತ್ತು ಅವರ ತಂಡವು ಅತ್ಯುತ್ತಮವಾಗಿ ಮಾಡಿದೆ. ನಾನು ಪತ್ರಿಕೆಯನ್ನು ಹೆಚ್ಚು ಓದುತ್ತಿದ್ದಂತೆ ಅಧಿಕಾರದಲ್ಲಿರುವವರ ನಿಸ್ವಾರ್ಥ ಕೆಲಸವೂ ಮೆಚ್ಚುಗೆ ಗಳಿಸುತ್ತಿದೆ. ವಿಶ್ವದ ಮಹಾಶಕ್ತಿಗಳು ಭಾರತವನ್ನು ಗೌರವ ಮತ್ತು ಅಭಿಮಾನದಿಂದ ನೋಡುತ್ತಿವೆ. ಹೀಗೆ ಹಲವಾರು ಕಾರ್ಯಗಳನ್ನು ನಡೆಸಲಾಗುತ್ತಿದೆ. ಇದೇ ರೀತಿ ಮುಂದುವರಿದರೆ ಭಾರತ ಸೂಪರ್ ಪವರ್ ಮತ್ತು ಆದರ್ಶ ದೇಶವಾಗಲಿದೆ ಎಂಬ ವಿಶ್ವಾಸ ನನಗಿದೆ. ನ್ಯೂ ಇಂಡಿಯಾ ಸಮಾಚಾರದಂತಹ ಅದ್ಭುತ ಪತ್ರಿಕೆಯನ್ನು ಹೊರತರುವ ಜವಾಬ್ದಾರಿ ಹೊತ್ತಿರುವ ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

ಪ್ರೊ.ಪಿ.ಪ್ರೇಮಾ,
ತಂಜಾವೂರು
prof.prema@gmail.com

ಆತ್ಮೀಯ ಸಂಪಾದಕರೇ,

ಆರಂಭದಲ್ಲಿ, ಅತ್ಯುತ್ತಮ ಪತ್ರಿಕೆಗಾಗಿ ನಿಮಗೆ ಮತ್ತು ನಿಮ್ಮ ತಂಡಕ್ಕೆ ಅಭಿನಂದನೆಗಳು. ನನ್ನ ಮಕ್ಕಳು ಮತ್ತು ವಿದ್ಯಾರ್ಥಿಗಳೊಂದಿಗೆ ನಾನು ಪತ್ರಿಕೆಯ ಲಿಂಕ್ ಅನ್ನು ಹಂಚಿಕೊಂಡಿದ್ದೇನೆ. ಇದರಿಂದ ಅವರು ಕೂಡ ವೈವಿಧ್ಯಮಯ ಮತ್ತು ಆಸಕ್ತಿದಾಯಕ ವಿಷಯಗಳಿಗೆ ತೆರೆದುಕೊಳ್ಳುತ್ತಾರೆ. ಹೆಚ್ಚಿನ ಓದುಗರನ್ನು ಗಳಿಸಲು ಪತ್ರಿಕೆಯನ್ನು ಜನಪ್ರಿಯಗೊಳಿಸಬೇಕು. ಶುಭಾಶಯಗಳು ಮತ್ತು ವಂದನೆಗಳು

ಡಾ.ಸ್ಮಿತಾ ಭಂಡಾರೆ ಕಾಮತ್
smithabhandarekamat2030@gmail.com

ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿಯವರ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯನ್ನು ರಾಷ್ಟ್ರದ ಅಭಿವೃದ್ಧಿಯಲ್ಲಿ ಅರ್ಥಪೂರ್ಣಗೊಳಿಸಲು 'ಸಬ್ ಕಾ ಪ್ರಯಾಸ್' ಹೇಗೆ ಸಹಕಾರಿಯಾಗಿದೆ ಎಂಬುದು ತಿಳಿಯಿತು. ಇದು ಏಪ್ರಿಲ್ 16-30, 2022 ರ 'ನ್ಯೂ ಇಂಡಿಯಾ ಸಮಾಚಾರ್' ಸಂಚಿಕೆಯ ಮುಖಪುಟ ಲೇಖನವಾಗಿದೆ. ಇದು 13 ಭಾಷೆಗಳಲ್ಲಿ ಲಭ್ಯವಿದೆ. ಇದು ಭಾರತದ ಪರಂಪರೆಯನ್ನು ಉಳಿಸುವ ಮತ್ತು ಅಪಹರಿಸಲಾಗಿದ್ದ ಪರಂಪರೆಯನ್ನು ಭಾರತಕ್ಕೆ ಮರಳಿ ತರುವ ಅದ್ಭುತ ಕಥೆಯನ್ನು ಸಹ ಹೇಳಿದೆ. ಎಲ್ಲಾ ಲೇಖನಗಳು, ಅಂದರೆ, 'ಗ್ರಾಮ ಪ್ರತಿನಿಧಿಗಳ ಸಂಕಲ್ಪವು ಬೆಳವಣಿಗೆಯನ್ನು ಉತ್ತೇಜಿಸುತ್ತಿದೆ', 'ಬಜೆಟ್ ರಾಷ್ಟ್ರದ ಪ್ರಗತಿಗೆ ವೇಗವನ್ನು ನೀಡುತ್ತಿದೆ', 'ಪ್ರಧಾನಿ ಆವಾಸ್ ಯೋಜನೆ ಗ್ರಾಮೀಣ ಹಿಂದುಳಿದವರ ಜೀವನವನ್ನು ಪರಿವರ್ತಿಸುತ್ತಿದೆ' ಮತ್ತು 'ಹಿಂಸಾಚಾರ ಹಾಗು ಅರಾಜಕತೆಯನ್ನು ವಿರೋಧಿಸುವುದು ನಮ್ಮ ಕರ್ತವ್ಯ' ಇದು ಶ್ಲಾಘನೀಯವಾಗಿವೆ. ಈ ಪತ್ರಿಕೆ ಸಾಧ್ಯವಾದಷ್ಟು ಜನರಿಗೆ ತಲುಪಬೇಕು.

ಚೌಧರಿ ಶಕ್ತಿ ಸಿಂಗ್
ವಕೀಲರು, ಕರ್ನಾಲ್.
shaktisinghadv@gmail.com.

**ಸಂಪರ್ಕ ವಿಳಾಸ: ಕೊಠಡಿ ಸಂಖ್ಯೆ-278, ಬ್ಯೂರೋ ಆಫ್ ಔಟ್ ರೀಚ್ ಮತ್ತು ಕಮ್ಯುನಿಕೇಷನ್, 2 ನೇ ಮಹಡಿ, ಸೂಚನಾ ಭವನ, ನವದೆಹಲಿ -110003**
**ಇ-ಮೇಲ್: response-nis@pib.gov.in**

ಕರ್ತವ್ಯದ ಹಾದಿಯತ್ತ ವರ್ಷಗಳು

# ಕೇವಲ 8 ನಿಮಿಷಗಳು

## ... ಭಾರತದ ಅಭಿವೃದ್ಧಿಯ ವೇಗ



**$61,92,000** ಮೌಲ್ಯದ ರಫ್ತು

**76** ಕೋಟಿ ಜಿಡಿಪಿ



**1576** ಹೊಸ ಉದ್ಯೋಗ

**112** ಆಯುಷ್ಮಾನ್ ಭಾರತ್ ನಿಂದ ಪ್ರಯೋಜನ ಪಡೆದಿದ್ದಾರೆ

**17,600** ಮೊಬೈಲ್ ಸಂಪರ್ಕಗಳು



**4,872** ಹೊಸ ಮೊಬೈಲ್ ಗಳ ತಯಾರಿಕೆ

**$13,60,000** ಎಫ್ ಡಿ ಐ ಸ್ವೀಕರಿಸಲಾಗಿದೆ



**72** ವಾಹನಗಳನ್ನು ರಫ್ತು ಮಾಡಲಾಗಿದೆ



**400** ಹೊಸ ವಾಹನಗಳನ್ನು ತಯಾರಿಸಲಾಗಿದೆ



**10,400** ಹೊಸ ಅಂತರ್ಜಾಲ ಬಳಕೆದಾರರ ಸೇರ್ಪಡೆ




**120** ಯುಪಿಐ ವಹಿವಾಟುಗಳು

ಮೂಲ: MyGov

# ಸಂಕಲ್ಪದೊಂದಿಗೆ ರಾಷ್ಟ್ರವು ಸಶಕ್ತವಾಗುತ್ತಿದೆ

# 'ಭಾರತ ಮೊದಲು'

## "ಯೋಜನೆಗಳು ವೇಗ ಪಡೆದಾಗ, ರಾಷ್ಟ್ರವು ಮುಂದೆ ಸಾಗುತ್ತದೆ"

ಪ್ರಧಾನಿ ನರೇಂದ್ರ ಮೋದಿಯವರ ಈ ಚಿಂತನೆಯು ಅಭಿವೃದ್ಧಿಗೆ ಉತ್ತೇಜನ ನೀಡಲು ದಿಟ್ಟ ಸುಧಾರಣೆಗಳನ್ನು ಕೈಗೊಂಡಿರುವ ನಿರ್ವಿವಾದ ನಾಯಕನನ್ನಾಗಿ ಮಾಡಿದೆ. ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳುವುದಷ್ಟೇ ಅಲ್ಲ, ಅವುಗಳನ್ನು ವಾಸ್ತವವಾಗಿ ಅನುಷ್ಠಾನಗೊಳಿಸುವುದು ಪ್ರಧಾನಿ ನರೇಂದ್ರ ಮೋದಿಯವರ ನೀತಿಗಳ ವಿಶಿಷ್ಟ ಲಕ್ಷಣವಾಗಿದೆ. ಸಾರ್ವಜನಿಕ ಸಹಭಾಗಿತ್ವ ಮತ್ತು ಸಾರ್ವಜನಿಕ ಶಕ್ತಿಯನ್ನು ಉತ್ತಮ ಆಡಳಿತದ ಪ್ರೇರಕ ಶಕ್ತಿಯನ್ನಾಗಿ ಮಾಡುವುದು, ಪ್ರತಿಯೊಂದು ಕ್ಷೇತ್ರದಲ್ಲೂ ಈ ಮಂತ್ರವನ್ನು ಅರಿತುಕೊಳ್ಳುವುದು ಪ್ರತಿಯೊಬ್ಬರೂ ಭಾರತೀಯನಾಗಿರುವುದಕ್ಕೆ ಹೆಮ್ಮೆಪಡುವಂತೆ ಮಾಡಿದೆ. ಹೊಸ ಯೋಜನೆಗಳನ್ನು ಪ್ರಾರಂಭಿಸುವುದಾಗಿರಲಿ ಅಥವಾ ಹಿಂದಿನ ಯೋಜನೆಗಳನ್ನು ನವೀಕರಿಸುವುದಾಗಿರಲಿ, ಇಂತಹ 700 ಕ್ಕೂ ಹೆಚ್ಚು ಯೋಜನೆಗಳ ಮೂಲಕ ಸಾಮಾನ್ಯ ನಾಗರಿಕರ ಜೀವನವನ್ನು ಸುಲಭಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಈಗ ಭಾರತ ನವನಿರ್ಮಾಣದ ಮಹತ್ವಾಕಾಂಕ್ಷೆಯೊಂದಿಗೆ ದೇಶವು ಅಮೃತ ಕಾಲದ ಹಾದಿಯಲ್ಲಿ ಸಾಗುತ್ತಿದೆ...



ಭಾರತವು ಪ್ರತಿಯೊಂದು ಕ್ಷೇತ್ರದಲ್ಲೂ ವೇಗವಾಗಿ ಪ್ರಗತಿಯನ್ನು ಸಾಧಿಸುತ್ತಿದೆ, ಇದು ಪ್ರತಿಯೊಂದು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವುದು ಮಾತ್ರವಲ್ಲದೆ ಬಿಕ್ಕಟ್ಟನ್ನು ರಾಷ್ಟ್ರದ ಏಳಿಗೆಗೆ ಅವಕಾಶವನ್ನಾಗಿ ಪರಿವರ್ತಿಸುವ ದೇಶದ ಸಮರ್ಥ ನಾಯಕತ್ವದಿಂದಾಗಿ ಸಾಧ್ಯವಾಗಿದೆ. ಹೊಸ ಗುರಿಗಳನ್ನು ಹಾಕಿಕೊಳ್ಳುವುದು ಮತ್ತು ಅದರ ಪ್ರಯೋಜನಗಳನ್ನು ಸಮಾಜದ ಅಂಚಿನಲ್ಲಿರುವ ಜನರಿಗೆ ವರ್ಗಾಯಿಸುವುದು ಹೊಸ ಆದ್ಯತೆಯನ್ನು ಪಡೆದಿದೆ. ಭಾರತ ಕಳೆದ ಎಂಟು ವರ್ಷಗಳಲ್ಲಿ ಅಭಿವೃದ್ಧಿಯ ಹೊಸ ಅಧ್ಯಾಯವನ್ನು ಬರೆಯುತ್ತಿದೆ. ಆಡಳಿತವನ್ನು ಉತ್ತಮ ಆಡಳಿತವನ್ನಾಗಿ ಪರಿವರ್ತಿಸುವ ಮತ್ತು ಸಾರ್ವಜನಿಕ ಸಹಭಾಗಿತ್ವದೊಂದಿಗೆ ಜನಶಕ್ತಿಯನ್ನು ಬೆಸೆಯುವ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ಚಾಣಾಕ್ಷ ಚಿಂತನೆಯಿಂದಾಗಿ ಇದು ಸಾಧ್ಯವಾಗಿದೆ. ಪ್ರಸ್ತುತ ದೇಶದಲ್ಲಿ ಕೇಂದ್ರ ಸರ್ಕಾರದ 700ಕ್ಕೂ ಹೆಚ್ಚು ಯೋಜನೆಗಳು ಜಾರಿಯಲ್ಲಿವೆ. ಇವುಗಳು ದೀರ್ಘಾವಧಿಯ ದೃಷ್ಟಿಕೋನವನ್ನು ಹೊಂದಿರುವ ಹೊಸ ಯೋಜನೆಗಳನ್ನು ಒಳಗೊಂಡಿವೆ, ಜೊತೆಗೆ ಹಿಂದಿನವುಗಳನ್ನು ವ್ಯಾಪಕವಾದ ಸುಧಾರಣೆಗಳೊಂದಿಗೆ ಜಾರಿಗೆ ತರಲಾಗಿದೆ. ಈಗಿನ ಕೇಂದ್ರ ಸರಕಾರವು ಕಳೆದ 8 ವರ್ಷಗಳಲ್ಲಿ ಸರಾಸರಿ ನಾಲ್ಕು ದಿನಕ್ಕೆ ಒಂದು ಹೊಸ ಯೋಜನೆ ಅಥವಾ ಹಿಂದಿನ ಯೋಜನೆಗಳನ್ನು ಸುಧಾರಣೆಗಳೊಂದಿಗೆ ಮಾರ್ಪಡಿಸಿದೆ ಎಂಬ ಅಂಶದಿಂದ ಅದರ ಪ್ರಮಾಣವನ್ನು ಅರ್ಥಮಾಡಿಕೊಳ್ಳಬಹುದು. ಈ ಯೋಜನೆಗಳು ಸಮಾಜದ ಪ್ರತಿಯೊಂದು ವರ್ಗಕ್ಕೂ ಪ್ರಯೋಜನವನ್ನು ನೀಡಿವೆ ಮತ್ತು ಪ್ರತಿಯೊಬ್ಬ ನಾಗರಿಕನನ್ನು ಬಲಿಷ್ಠ ಮತ್ತು ಸ್ವಾವಲಂಬಿಯನ್ನಾಗಿ ಮಾಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿವೆ ಹಾಗು ರಾಷ್ಟ್ರವನ್ನು ಆತ್ಮನಿರ್ಭರ ಮಾಡುತ್ತಿವೆ.

ಕಳೆದ 8 ವರ್ಷಗಳಲ್ಲಿ ಭಾರತ ವಿಶ್ವಗುರುವಾಗಿ ಹೊರಹೊಮ್ಮಿದೆ. ರಷ್ಯಾ-ಉಕ್ರೇನ್ ಬಿಕ್ಕಟ್ಟಿನ ನಡುವೆ ಭಾರತವು ಆಪರೇಷನ್ ಗಂಗಾ ಕಾರ್ಯಾಚರಣೆಯನ್ನು ಕೈಗೊಂಡಿತು, ಸಿಒಪಿ-26 ಸಂದರ್ಭದಲ್ಲಿ ಗ್ಲಾಸ್ಗೋದಲ್ಲಿ ಅದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಧ್ವನಿಯಾಯಿತು ಆದರೆ ವಿಶ್ವಸಂಸ್ಥೆ, ಬಿಮ್ ಸ್ಟೆಕ್ ಜಿ-20 ಅಂತಹ ಜಾಗತಿಕ ವೇದಿಕೆಗಳಲ್ಲಿ ಅದರ ನಿಲುವನ್ನು ತಿಳಿಯಲು ಎಲ್ಲರ ಕಣ್ಣುಗಳು ಭಾರತದ ಮೇಲೆ ನೆಟ್ಟಿದ್ದವು. ವಸುಧೈವ ಕುಟುಂಬಕಮ್‌ನ ಸ್ಫೂರ್ತಿಯೊಂದಿಗೆ, ಬಿಕ್ಕಟ್ಟಿನ ಸಮಯದಲ್ಲಿ ನೆರೆಹೊರೆಯವರು ಮತ್ತು ಪ್ರಪಂಚದ ಇತರ ದೇಶಗಳಿಗೆ ಸಹಾಯ ಹಸ್ತ ಚಾಚಲು ಭಾರತವು ಮೊದಲ ದೇಶವಾಯಿತು. ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ, ಭಾರತವು ಜಗತ್ತಿನ ಔಷಧಾಲಯವಾಗಿ ಹೊರಹೊಮ್ಮಿತು. ಕಳೆದ 8 ವರ್ಷಗಳಲ್ಲಿ ಭಾರತವು ವಿಶ್ವಾಸಾರ್ಹ ಜಾಗತಿಕ ಪಾಲುದಾರನಾಗಿ ಹೊರಹೊಮ್ಮಿದೆ ಅದೇ ಸಮಯದಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಲ್ಲಿ ಜನಸಾಮಾನ್ಯರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ದೇಶದಲ್ಲಿ ತ್ವರಿತ ಪರಿವರ್ತನೆಯಾಗಿದೆ. "ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಮತ್ತು ಸಬ್ ಕಾ ಪ್ರಯಾಸ್" ಎಂಬ ಮಂತ್ರವು ಈಗ ರಾಷ್ಟ್ರ ಮತ್ತು ಸಮಾಜದ ಅಭಿವೃದ್ಧಿಯ ಧ್ಯೇಯವಾಕ್ಯವಾಗಿದೆ.

ಮೊದಲು ಜಾತಿ, ಧರ್ಮವನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಲಾಗುತ್ತಿತ್ತು ಆದರೆ ಈಗ ಜಾತಿ, ಧರ್ಮದ ಭೇದವಿಲ್ಲದೆ ಸಮಾಜದ ಎಲ್ಲ ವರ್ಗಗಳ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು 'ಸರ್ವಜನ ಹಿತಾಯ, ಸರ್ವಜನ ಸುಖಾಯ'ಎಂಬ ಮನೋಭಾವನೆಯಲ್ಲಿ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಯುವಕರಾಗಿರಲಿ, ಮಹಿಳೆಯರಿರಲಿ, ರೈತರಿರಲಿ, ಬಡವರಿರಲಿ, ಪರಿಶಿಷ್ಟ ಜಾತಿಯವರಿರಲಿ, ಪರಿಶಿಷ್ಟ ಪಂಗಡದವರಿರಲಿ, ವೃದ್ಧರಿರಲಿ ಅಥವಾ ಅಲ್ಪಸಂಖ್ಯಾತರಿರಲಿ ಕಳೆದ 8 ವರ್ಷಗಳಲ್ಲಿ ಸಮಾಜದ ಪ್ರತಿಯೊಂದು ವರ್ಗವನ್ನೂ ಕೇಂದ್ರ ಸರ್ಕಾರದ ಯೋಜನೆಗಳ ವ್ಯಾಪ್ತಿಗೆ ತರಲಾಗಿದೆ. ಡಿಜಿಟಲ್ ಇಂಡಿಯಾ, ಸ್ಟಾರ್ಟಪ್-ಸ್ಟ್ಯಾಂಡಪ್ ಇಂಡಿಯಾ, ಆಯುಷ್ಮಾನ್ ಭಾರತ್, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಉಜ್ವಲಾ, ಜಲ ಜೀವನ್ ಮಿಷನ್, ಕಿಸಾನ್ ಸಮ್ಮಾನ್ ನಿಧಿ, ಮುದ್ರಾ ಯೋಜನೆ, ಸ್ವನಿಧಿ ಯೋಜನೆ, ಒಂದು ರಾಷ್ಟ್ರ- ಒಂದು ಪಡಿತರ ಚೀಟಿ, ಅಕ್ಸೆಸಿಬಲ್ ಇಂಡಿಯಾ ಅಭಿಯಾನ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ, ಕೌಶಲ್ಯ ಅಭಿವೃದ್ಧಿ, ಖೇಲೋ ಇಂಡಿಯಾ, ಮಿಷನ್ ಕರ್ಮಯೋಗಿ, ಸ್ವಚ್ಛತಾ ಮಿಷನ್, ಕಾರ್ಮಿಕ ಸುಧಾರಣೆಗಳು, ಸ್ವಾಮಿತ್ವ, ಪಿ ಎಲ್ ಐ, ಭಾರತಮಾಲಾದಂತಹ ಹಲವಾರು ಯೋಜನೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರತಿಯೊಬ್ಬ ನಾಗರಿಕರಿಗೆ ಪ್ರಯೋಜನವನ್ನು ನೀಡಿವೆ. ಅಭಿವೃದ್ಧಿ ಪಯಣದಲ್ಲಿ ಹಿಂದೆ ಉಳಿದಿರುವ ಪ್ರತಿಯೊಂದು ವರ್ಗ ಅಥವಾ ಪ್ರದೇಶವು ಈಗ ಪ್ರಗತಿಯ ಭಾಗವಾಗುತ್ತಿದೆ.

ಅಲ್ಲದೆ, ದಲಿತರು, ಹಿಂದುಳಿದವರು, ಆದಿವಾಸಿಗಳು ಮತ್ತು ಸಾಮಾನ್ಯ ವರ್ಗದ ಬಡವರ ಸಬಲೀಕರಣದ ಉದ್ದೇಶದಿಂದ ಮೀಸಲಾತಿಯನ್ನು ಅವರಿಗೆ ನೀಡಲಾಗುತ್ತಿದೆ. ಅಭಿವೃದ್ಧಿ ಪಯಣದಲ್ಲಿ ದೇಶದ ಯಾವುದೇ ವ್ಯಕ್ತಿ, ವರ್ಗ ಅಥವಾ ಪ್ರದೇಶವು ಹಿಂದೆ ಉಳಿಯಬಾರದು ಎಂದು ಸರ್ಕಾರವು ಅಂತರ್ಗತ ಅಭಿವೃದ್ಧಿಯನ್ನು ಉತ್ತೇಜಿಸುತ್ತಿದೆ. ಪೂರ್ವ ಭಾರತ ಅಥವಾ ಈಶಾನ್ಯ ಅಥವಾ ಜಮ್ಮು ಮತ್ತು ಕಾಶ್ಮೀರ, ಲಡಾಖ್, ಕರಾವಳಿ ಪ್ರದೇಶಗಳು ಅಥವಾ ಬುಡಕಟ್ಟು ಪ್ರದೇಶಗಳು ಸೇರಿದಂತೆ ಸಂಪೂರ್ಣ ಹಿಮಾಲಯ ಪ್ರದೇಶಗಳು ಅಭಿವೃದ್ಧಿ ಪಯಣದ ಬೆಳವಣಿಗೆಯ ಎಂಜಿನ್ ಆಗುತ್ತಿವೆ. ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್ ಅಭಿವೃದ್ಧಿಯ ಅಪರಿಮಿತ ಸಾಧ್ಯತೆಗಳತ್ತ ಸಾಗುತ್ತಿವೆ. ಅಭಿವೃದ್ಧಿಯ ಪಯಣದಲ್ಲಿ ಹಿಂದೆ ಬಿದ್ದಿವೆ ಎಂದು ಭಾವಿಸಿದ್ದ ಜಿಲ್ಲೆಗಳು, ಅವರ ಆಕಾಂಕ್ಷೆಗಳೂ ಜಾಗೃತಗೊಂಡು ಪ್ರಗತಿಯ ಪಥದತ್ತ ಸಾಗಲಿವೆ. ದೇಶದ 110ಕ್ಕೂ ಹೆಚ್ಚು ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ರಸ್ತೆಗಳು ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಯೋಜನೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಮಹತ್ವಾಕಾಂಕ್ಷೆಯ ಜಿಲ್ಲೆಗಳು ಭಾರತದ ಇತರ ಜಿಲ್ಲೆಗಳಿಗೆ ಸಮನಾಗಿ ಅಭಿವೃದ್ಧಿಯಾಗುವಂತೆ ಮಾಡಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಬಂಡವಾಳಶಾಹಿ ಮತ್ತು ಸಮಾಜವಾದದ ಬಗ್ಗೆ ಆರ್ಥಿಕ ಜಗತ್ತಿನಲ್ಲಿ ಬಹಳಷ್ಟು ಚರ್ಚಿಸಲಾಗಿದೆ, ಆದರೆ ಭಾರತವು ಸಹಕಾರಿಗಳಿಗೆ ಒತ್ತು ನೀಡುತ್ತಿದೆ. ಈ ವಲಯದ ಸಬಲೀಕರಣಕ್ಕಾಗಿ ಪ್ರತ್ಯೇಕ ಸಚಿವಾಲಯ ರಚಿಸುವ ಮೂಲಕ ಈ ದಿಸೆಯಲ್ಲಿ ಕ್ರಮಕೈಗೊಳ್ಳಲಾಗಿದೆ.

ವಾಸ್ತವವಾಗಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರ ಮತ್ತು ಸಮಾಜದ ಅಭಿವೃದ್ಧಿಗಾಗಿ, ದೇಶದ ಸಾಮಾನ್ಯ ನಾಗರಿಕರ ಜೀವನದಲ್ಲಿ ಪರಿವರ್ತನೆಯಾಗಬೇಕು ಮತ್ತು ಬದುಕಲು

**ಬಾಬಾಸಾಹೇಬರ ಸಿದ್ಧಾಂತದ ತಿರುಳಲ್ಲಿ ಸಮಾನತೆ ಹಲವು ರೂಪಗಳಲ್ಲಿ ಬೇರೂರಿದೆ. ಸಮಾನತೆಯ ಗೌರವ, ಕಾನೂನಿನ ಸಮಾನತೆ, ಹಕ್ಕುಗಳ ಸಮಾನತೆ, ಮಾನವ ಘನತೆಯ ಸಮಾನತೆ, ಅವಕಾಶಗಳ ಸಮಾನತೆ... ಹೀಗೆ ಹಲವು ವಿಚಾರಗಳನ್ನು ಅವರು ನಿರಂತರವಾಗಿ ಎತ್ತಿ ಹಿಡಿದಿದ್ದಾರೆ. ಭಾರತದಲ್ಲಿನ ಸರ್ಕಾರಗಳು ಸಂವಿಧಾನವನ್ನು ಅನುಸರಿಸಬೇಕು ಮತ್ತು ಧರ್ಮ ಭೇದವಿಲ್ಲದೆ, ಜಾತಿ ಭೇದವಿಲ್ಲದೆ ನಡೆಯಬೇಕು ಎಂದು ಅವರು ಯಾವಾಗಲೂ ಆಶಿಸಿದರು. ಇಂದು ಈ ಸರ್ಕಾರದ ಪ್ರತಿಯೊಂದು ಯೋಜನೆಯಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡುವ ಪ್ರಯತ್ನವನ್ನು ನೀವು ನೋಡುತ್ತೀರಿ.**
**- ನರೇಂದ್ರ ಮೋದಿ, ಪ್ರಧಾನಮಂತ್ರಿ**



> **ನನ್ನ 'ಭಾರತದ ಪರಿಕಲ್ಪನೆ' ಸಹಿಷ್ಣುತೆಯನ್ನು ಆಧರಿಸಿರುವುದು ಮಾತ್ರವಲ್ಲ, ಇದು ದೃಷ್ಟಿಕೋನಗಳ ವಿವಿಧತೆಯನ್ನೂ ಸಂತೋಷದಿಂದ ಸ್ವೀಕರಿಸುತ್ತದೆ. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸಂವೇದನೆಯನ್ನು ಗೌರವಿಸಲಾಗುತ್ತದೆ. 'ಭಾರತದ ಪರಿಕಲ್ಪನೆ'ಯ ಕೇಂದ್ರ ತತ್ವವು ಸತ್ಯ, ಶಾಂತಿ ಮತ್ತು ಅಹಿಂಸೆಯಿಂದ ರೂಪಿತವಾಗಿದೆ. ನಮ್ಮ ಧರ್ಮಗ್ರಂಥಗಳು 'ಸತ್ಯಮೇವ ಜಯತೇ' ಅಂದರೆ ಸತ್ಯಕ್ಕೆ ಜಯ ಎಂದು ಬೋಧಿಸುತ್ತವೆ. ವರ್ಗ, ಜಾತಿ, ಅಥವಾ ಪಂಥವನ್ನು ಲೆಕ್ಕಿಸದೆ ಭಾರತದ ಪ್ರತಿಯೊಬ್ಬ ಪ್ರಜೆಗೂ ನ್ಯಾಯವು ವೇಗವಾಗಿ ಮತ್ತು ಸಮಾನವಾಗಿ ಸಿಗುವ ಭಾರತಕ್ಕೆ ನಾನು ಬದ್ಧನಾಗಿದ್ದೇನೆ. ಅನ್ಯಾಯಕ್ಕೆ ಕಾನೂನು ಅಥವಾ ನೈತಿಕ ಮಾನ್ಯತೆಯಿಲ್ಲದ ಭಾರತ ಅದು.**
> **- ನರೇಂದ್ರ ಮೋದಿ, ಪ್ರಧಾನಮಂತ್ರಿ**

> **ಇಂದು, ಭಾರತದಲ್ಲಿ ಸಮೃದ್ಧಿಯಿದೆ. ನಾವು ನಮ್ಮ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯ ಉತ್ಸಾಹವನ್ನು ಗಟ್ಟಿಗೊಳಿಸಬೇಕಾಗಿದೆ. ಅಭಿವೃದ್ಧಿಯಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಇದ್ದಾಗ ಮಾತ್ರ ಈ ವಿಶ್ವಾಸ ಬರುತ್ತದೆ.**
> **-ನರೇಂದ್ರ ಮೋದಿ (ಸೆಮಿಕಾನ್ ಇಂಡಿಯಾ ಕಾರ್ಯಕ್ರಮ ಉದ್ದೇಶಿಸಿ ಮಾತನಾಡುವಾಗ)**

ಸುಲಭವಾಗುವಂತೆ ವ್ಯವಸ್ಥೆ ಇರಬೇಕು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ನಂಬುತ್ತಾರೆ. ತನ್ನ ಉದ್ದೇಶವನ್ನು ಸಾಧಿಸಲು ಸರ್ಕಾರವು ಸಾಮಾನ್ಯ ನಾಗರಿಕರನ್ನು ಅಭಿವೃದ್ಧಿ ಪಯಣದಲ್ಲಿ ಪ್ರಮುಖ ಆಟಗಾರರನ್ನಾಗಿ ಮಾಡಿದೆ. "ಕಳೆದ 8 ವರ್ಷಗಳಲ್ಲಿ ದೇಶದಲ್ಲಿ ಹಲವು ಪ್ರಮುಖ ಸಂಗತಿಗಳು ನಡೆದಿವೆ. ವರ್ತನೆಯ ಬದಲಾವಣೆಯು ಇಂತಹ ಹಲವು ಅಭಿಯಾನಗಳ ತಿರುಳಾಗಿದೆ. ಇವು ಕಷ್ಟದ ಕೆಲಸಗಳು ಮತ್ತು ರಾಜಕಾರಣಿಗಳು ಎಂದಿಗೂ ಅವುಗಳನ್ನು ಮುಟ್ಟಲು ಧೈರ್ಯ ಕೂಡ ಮಾಡುವುದಿಲ್ಲ. ಆದರೆ ನಾನು ರಾಜಕೀಯದಿಂದ ದೂರವಿದ್ದೇನೆ. ಸ್ನೇಹಿತರೇ, ಪ್ರಜಾಪ್ರಭುತ್ವದಲ್ಲಿ ಒಂದು ವ್ಯವಸ್ಥೆ ಇದೆ, ನಾನು ಆ ಕ್ರಮದ ಮೂಲಕ ಬಂದಿದ್ದೇನೆ ಎಂಬುದು ಬೇರೆ ವಿಷಯ. ನನ್ನ ಸ್ವಭಾವವು ಮೂಲತಃ ರಾಜಕೀಯವಲ್ಲ, ನಾನು ಸಾರ್ವಜನಿಕ ನೀತಿಗೆ ಸಂಬಂಧಿಸಿದ ವ್ಯಕ್ತಿ, ನಾನು ಜೀವನದೊಂದಿಗೆ ಸಂಪರ್ಕ ಹೊಂದಿದ ವ್ಯಕ್ತಿ ಸಾಮಾನ್ಯ ಮನುಷ್ಯ, ನಡೆವಳಿಕೆಯನ್ನು ಬದಲಾಯಿಸುವ ನನ್ನ ಪ್ರಯತ್ನ ಮತ್ತು ಸಮಾಜದ ಮೂಲಭೂತ ಅವಶ್ಯಕತೆಗಳಲ್ಲಿ ಬದಲಾವಣೆಯನ್ನು ತರಲು ಮಾಡಿದ ಪ್ರಯತ್ನವು ನನ್ನ ಭರವಸೆ ಮತ್ತು ಆಕಾಂಕ್ಷೆಯ ಭಾಗವಾಗಿದೆ."

**ಸಾಮಾನ್ಯ ನಾಗರಿಕರ ಬದುಕನ್ನು ಬದಲಾಯಿಸುವ ತಂತ್ರಜ್ಞಾನ**

ಅಸ್ತಿತ್ವದಲ್ಲಿರುವ ಕೇಂದ್ರ ಸರ್ಕಾರದ ಯೋಜನೆಗಳ ಯಶಸ್ಸಿಗೆ ತಂತ್ರಜ್ಞಾನವು ಮೂಲವಾಗಿದೆ. ದೇಶದಲ್ಲೇ ಪ್ರಥಮ ಬಾರಿಗೆ ಸಮಾಜದ ಕಟ್ಟಕಡೆಯ ಜನರೂ ಸರ್ಕಾರದ ಯೋಜನೆಗಳ ನೇರ ಫಲಾನುಭವಿಗಳಾಗುವ ಸಾಧ್ಯತೆ ಇದೆ ಎಂಬ ಅಂಶದಿಂದ ಯೋಜನೆಗಳನ್ನುತಂತ್ರಜ್ಞಾನದೊಂದಿಗೆಜೋಡಿಸಿದ್ದರಮಹತ್ವವನ್ನು ಅರ್ಥಮಾಡಿಕೊಳ್ಳಬಹುದು. ಆಡಳಿತ ಸುಧಾರಣೆಗಳು, ರೈಲು ಸುಧಾರಣೆಗಳು, ನಿರಂತರ ವಿದ್ಯುತ್ ಪೂರೈಕೆ, ಭ್ರಷ್ಟಾಚಾರ ನಿರ್ಮೂಲನೆ, ತೆರಿಗೆ ಪಾರದರ್ಶಕತೆ, ಜಿಎಸ್ಟಿ, ಒಂದು ರಾಷ್ಟ್ರ-ಒಂದು ತೆರಿಗೆ, ಕೌಶಲ್ಯ ಭಾರತ, ಸ್ಟಾರ್ಟ್‌ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ರೈತರು-ಮಹಿಳೆಯರಿಗಾಗಿ ತೆಗೆದುಕೊಂಡ ಕ್ರಮಗಳು, ಶಿಕ್ಷಣ ಕ್ಷೇತ್ರದ ಬದಲಾವಣೆಯಿಂದ ರಕ್ಷಣಾ ಕ್ಷೇತ್ರದ ಆಧುನೀಕರಣದವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನವು ನವಭಾರತದ ಅಭಿವೃದ್ಧಿಗೆ ಸಾಧನವಾಗಿವೆ ಮತ್ತು ದಶಕಗಳಷ್ಟು ಕಾಲ ಬಾಕಿ ಉಳಿದಿದ್ದ ಯೋಜನೆಗಳು ಸಾಕಾರಗೊಳ್ಳುತ್ತಿವೆ, ಹಿಂದೆ ಅಸಾಧ್ಯವೆಂದು ತೋರುತ್ತಿದ್ದ ಕ್ರಾಂತಿಕಾರಿ ಬದಲಾವಣೆಗಳು ಈಗ ಸಾಧ್ಯವಾಗಿವೆ.

ಸರಕಾರ ಜನರ ಕಲ್ಯಾಣಕ್ಕಾಗಿ ಹಲವು ಕ್ರಮಗಳನ್ನು ಕೈಗೊಂಡಿದೆ. ಲಡಾಖ್‌ನಲ್ಲಿ ಮೈನಸ್ 30 ಡಿಗ್ರಿ ಉಷ್ಣಾಂಶದಲ್ಲಿ ಕೊಳವೆ ನೀರನ್ನು

ಒದಗಿಸುವುದು ಅಥವಾ ಅಸ್ಸಾಂನ ಶಾಪ ಎಂದು ಕರೆಯಲಾಗುವ ಬ್ರಹ್ಮಪುತ್ರ ನದಿಯ ಮೇಲೆ ಬೋಗಿಬೀಲ್‌ನ ಸೇತುವೆ ನಿರ್ಮಾಣ, ರೋಹ್ತಾಂಗ್‌ನ ಮನಾಲಿ-ಲೇಹ್ ಹೆದ್ದಾರಿಯಲ್ಲಿ ಅಟಲ್ ಸುರಂಗ ನಿರ್ಮಾಣ, ಎಲ್‌ಪಿಜಿ ಒದಗಿಸುವುದು, ಹಳ್ಳಿಗಳಲ್ಲಿ ವಿದ್ಯುತ್ ಮತ್ತು ರಸ್ತೆ ಸೌಲಭ್ಯಗಳು, 11 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸುವ ಮೂಲಕ ದೇಶವನ್ನು ಬಯಲು ಶೌಚ ಮುಕ್ತಗೊಳಿಸುವುದು ಅಥವಾ 11 ಕೋಟಿ ರೈತರಿಗೆ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ 1.75 ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ಮೊತ್ತವನ್ನು ನೀಡುವಂತಹ ಹಲವಾರು ಉಪಕ್ರಮಗಳ ಮೂಲಕ ಸರ್ಕಾರವು ದೇಶವನ್ನು ಪರಿವರ್ತಿಸುವ ದೃಢವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅಲ್ಲದೆ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯೊಂದಿಗೆ ದೇಶವನ್ನು ಶಿಕ್ಷಣದ ಜಾಗತಿಕ ಕೇಂದ್ರವನ್ನಾಗಿ ಮಾಡುವ ಪ್ರಯತ್ನಗಳನ್ನು ಮಾಡಲಾಗಿದೆ, ಹೊಸತನದ ಶೋಧಗಳನ್ನು ಉತ್ತೇಜಿಸಲು ಶಾಲೆಗಳಲ್ಲಿ ಅಟಲ್ ಇನ್ನೋವೇಶನ್ ಮಿಷನ್ ಅನ್ನು ಪರಿಚಯಿಸಲಾಗಿದೆ, ಸ್ಟಾರ್ಟ ಅಪ್ ನಿಂದ ಯುನಿಕಾರ್ನ್‌ಗೆ ಬೆಳವಣಿಗೆ, ಶಾಶ್ವತ ಶಾಂತಿ ಸ್ಥಾಪನೆ ಖಚಿತಪಡಿಸಿಕೊಳ್ಳಲು ಬೋಡೋ ಬ್ರೂ-ರಿಯಾಂಗ್‌ನಂತಹ ಒಪ್ಪಂದಗಳು, ವಾಯು ಮತ್ತು ರೈಲು ಸಂಪರ್ಕ ಜಾಲದೊಂದಿಗೆ ಈಶಾನ್ಯ ಪ್ರದೇಶಕ್ಕೆ ಸಂಪರ್ಕ ಸಾಧಿಸುವುದು, ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿಯ ರದ್ದು, ತ್ರಿವಳಿ ತಲಾಖ್‌ನಂತಹ ಪದ್ಧತಿಗಳನ್ನು ಕೊನೆಗೊಳಿಸುವುದು, ಸಾಮಾಜಿಕ ಸಾಮರಸ್ಯದೊಂದಿಗೆ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿದ್ದು ಮತ್ತು ಜಾಗತಿಕ ಕೋವಿಡ್ ಸಾಂಕ್ರಾಮಿಕದಂತಹ ಬಿಕ್ಕಟ್ಟಿನ ಸಮಯದಲ್ಲಿ ಸ್ವಾವಲಂಬಿ ಭಾರತದ ಉತ್ಸಾಹವನ್ನು ಜಾಗೃತಗೊಳಿಸಿದ್ದು - ಹೀಗೆ ಸಂಕೋಲೆಗಳನ್ನು ಮುರಿದು ಕ್ರಾಂತಿಕಾರಿ ಬದಲಾವಣೆಗಳೊಂದಿಗೆ ನವಭಾರತ ನಿರ್ಮಾಣಕ್ಕೆ ದಿಕ್ಕು ತೋರುವ ನೂರಾರು ಉದಾಹರಣೆಗಳಿವೆ.

## 'ಪ್ರಗತಿ'ಯೊಂದಿಗೆ ಅಭಿವೃದ್ಧಿಯ ಹೊಸ ಮಾರ್ಗ

'ಪ್ರಗತಿ' ವೇದಿಕೆ ಮೂಲಕ ದೇಶಾದ್ಯಂತ ಸಾವಿರಾರು ಕೋಟಿ ರೂ.ಗಳ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸಲಾಗಿದೆ. ಇದು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದಲ್ಲದೆ, ಸರ್ವತೋಮುಖ ಅಭಿವೃದ್ಧಿಯ ಪ್ರಯೋಜನಗಳು ನೇರವಾಗಿ ರೈತರು, ಆದಿವಾಸಿಗಳು, ಬಡವರು ಮತ್ತು ಮಹಿಳೆಯರಿಗೆ ತಲುಪುತ್ತಿವೆ. ಪ್ರಧಾನಿ ನರೇಂದ್ರ ಮೋದಿಯವರ ಪ್ರಯತ್ನದಿಂದಾಗಿ ದೇಶದ ವಿವಿಧ ರಾಜ್ಯಗಳಲ್ಲಿ ಕೋಟ್ಯಂತರ ರೂಪಾಯಿಗಳ ನನೆಗುದಿಗೆ ಬಿದ್ದಿರುವ ಮತ್ತು ಬಾಕಿ ಉಳಿದಿರುವ ಯೋಜನೆಗಳು ಒಂದರ ಹಿಂದೆ ಒಂದರಂತೆ ವೇಗವಾಗಿ ಪೂರ್ಣಗೊಳ್ಳುತ್ತಿವೆ. PRAGATI -Pro- Active Governance and Timely Implementation ಅಂದರೆ, ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನ (ಪ್ರಗತಿ) ವೇದಿಕೆಯ ಸಹಾಯದಿಂದ ಈ ಕ್ರಾಂತಿಕಾರಿ ಬದಲಾವಣೆ ಸಾಧ್ಯವಾಗಿದೆ. ಪ್ರಧಾನಿ ಮೋದಿಯವರ ಮಾರ್ಗದರ್ಶನದಿಂದಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳ ನಡುವೆ ಸಮನ್ವಯವಿದ್ದು, ಹಲವು ಬಾಕಿ ಇರುವ ಯೋಜನೆಗಳು ಪೂರ್ಣಗೊಳ್ಳಲು ಕಾರಣವಾಗಿದೆ. ಈ ವೇದಿಕೆಯಲ್ಲಿನ ಅಭಿವೃದ್ಧಿ ಯೋಜನೆಗಳನ್ನು ಪ್ರಧಾನಿ ಮೋದಿ ಅವರೇ ಮೇಲ್ವಿಚಾರಣೆ ಮಾಡುತ್ತಾರೆ. ಅವರು

**2014 ರಿಂದ ಎಂಟು ವರ್ಷಗಳಲ್ಲಿ ಸುಮಾರು 91 ಲಕ್ಷ ಕೋಟಿ ರೂ.ಗಳನ್ನು ಅಭಿವೃದ್ಧಿ ಯೋಜನೆಗಳಿಗೆ ವೆಚ್ಚ ಮಾಡಲಾಗಿದೆ. 2004 ರಿಂದ 2014 ರವರೆಗೆ, ಒಟ್ಟು 49.2 ಲಕ್ಷ ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಲಾಗಿತ್ತು.**


NSitharamanOffice
@nsitharamanoffc

RBI data shows total developmental expenditure incurred by Modi Govt in 2014-22 was Rs 90.9 lakh cr, far higher than is being alleged by some sections of the Opposition. In contrast, only Rs 49.2 lakh crore was spent on this during 2004-14.
Source: bit.ly/36YDW5D

ಮಾರ್ಚ್ 25, 2015 ರಿಂದ ಅದರ ಪ್ರತಿ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದಾರೆ. ಅವರು ಮಾರ್ಚ್ 25, 2015 ರಿಂದ ಪ್ರತಿ ತಿಂಗಳು ಈ ಬಗ್ಗೆ ಸಭೆ ನಡೆಸುತ್ತಿದ್ದಾರೆ. 'ಪ್ರಗತಿ' ಇದುವರೆಗೆ 39 ಸಭೆಗಳನ್ನು ನಡೆಸಿದೆ, ಇದರಲ್ಲಿ 14.82 ಲಕ್ಷ ಕೋಟಿ ರೂ. ಮೌಲ್ಯದ 311 ದೀರ್ಘಾವಧಿಯ ಯೋಜನೆಗಳನ್ನು ಪರಿಶೀಲಿಸಲಾಗಿದೆ. ಈ ಪೈಕಿ 3.41 ಲಕ್ಷ ಕೋಟಿ ರೂ.ಗಳ 71 ಯೋಜನೆಗಳನ್ನು ತ್ವರಿತ ಗತಿಯಲ್ಲಿ ಆರಂಭಿಸಲಾಗಿದೆ. ವಿವಿಧ ಇಲಾಖೆಗಳ ನಡುವೆ ಸಮಾಲೋಚನೆಗಳ ಮೂಲಕ ತ್ವರಿತ ಪರಿಹಾರಗಳನ್ನು ಕಂಡುಕೊಳ್ಳಲು ಇದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.

## ಹೊಸ ಅಭ್ಯಾಸಗಳು ಭಾರತದ ಅಭಿವೃದ್ಧಿ ಪಯಣಕ್ಕೆ ಮಾರ್ಗದರ್ಶಿ

ಇಂದು ದೇಶದ ಆಚಾರ-ವಿಚಾರಗಳು ಮತ್ತು ನೀತಿಗಳು ಬದಲಾಗಿವೆ ಮತ್ತು ಹೊಸ ಸಂಪ್ರದಾಯಗಳು ಹೊರಹೊಮ್ಮುತ್ತಿವೆ, ಇದು ಪ್ರಧಾನಿ ಮೋದಿಯವರ ಪ್ರಾಯೋಗಿಕ ಕಾರ್ಯ ವಿಧಾನದಿಂದ ಸಾಧ್ಯವಾಗಿದೆ. ತ್ವರಿತ ನಿರ್ಧಾರಗಳು, ತ್ವರಿತ ಕ್ರಮಗಳು, ಬಡವರ ಬಗ್ಗೆ ಕಾಳಜಿ, ತಂತ್ರಜ್ಞಾನದೊಂದಿಗೆ ಪ್ರಗತಿ ಮತ್ತು ಜೀವನಮಟ್ಟದಲ್ಲಿ ಸುಧಾರಣೆ ಸರ್ಕಾರದ ವಿವಿಧ ಉಪಕ್ರಮಗಳ ವಿಶಿಷ್ಟ ಲಕ್ಷಣಗಳಾಗಿವೆ. ಈ ನಿಟ್ಟಿನಲ್ಲಿ, ವಿಶ್ವದ ಅತ್ಯಂತ ಕಿರಿಯ ರಾಷ್ಟ್ರವಾದ ಭಾರತದ ಜನಸಂಖ್ಯೆಯ ಅರ್ಧದಷ್ಟು ಜನರು 27 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ, ಅವರು ಆಕಾಂಕ್ಷೆಗಳನ್ನು ಹೊಂದಿದ್ದಾರೆ ಮತ್ತು ರಾಷ್ಟ್ರವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಉತ್ಸಾಹವನ್ನು ಹೊಂದಿದ್ದಾರೆಂದು ಅವರು ಚೆನ್ನಾಗಿ ಅರ್ಥಮಾಡಿಕೊಂಡಿರುವುದರಿಂದ ಪ್ರಧಾನಿ ಮೋದಿಯವರ ವಿಧಾನವೂ ಸ್ಪಷ್ಟವಾಗಿದೆ. ಪ್ರಧಾನಿ ಮೋದಿಯವರ ನವ ಭಾರತ ಮಂತ್ರದಿಂದಾಗಿ ಭಾರತದ ಬಗೆಗಿನ ಜಗತ್ತಿನ ದೃಷ್ಟಿಕೋನವೂ ಬದಲಾಗಿದೆ. ಭಾರತ ಏಕೆ? ಎಂಬುದು ಹಿಂದಿನ ವಿಶ್ವ ಸಮುದಾಯದ ವಿಧಾನವಾಗಿತ್ತು. ಆದರೆ ಈಗ ವಾತಾವರಣ ಬದಲಾಗಿದೆ ಮತ್ತು ಜಗತ್ತು ಭಾರತ ಏಕಲ್ಲ? ಎಂದು ಹೇಳುತ್ತಿದೆ. ನರೇಂದ್ರ ಮೋದಿಯವರು ಪ್ರಧಾನಿಯಾಗಿ ರೂಪಿಸಿದ ನವ ಭಾರತ ಇದಾಗಿದೆ. ಅವರು ನೆಲದ ಮಟ್ಟದಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಸೂಕ್ತ ಆದ್ಯತೆ ನೀಡುತ್ತಾರೆ. ಪ್ರಧಾನಿ ಮೋದಿ ಅವರು ಅಭಿವೃದ್ಧಿ ಯೋಜನೆಗಳನ್ನು ಅವುಗಳ ಯಶಸ್ವಿ ಅನುಷ್ಠಾನಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡ ನಂತರ ಅನಾವರಣಗೊಳಿಸುತ್ತಾರೆ. ಕೆಂಪು ಕೋಟೆಯ ಪ್ರಾಂಗಣದಿಂದ ಘೋಷಿಸಲಾದ ಯೋಜನೆಗಳು ಅಂದುಕೊಂಡ ಪ್ರಕಾರ ಶೇ.100 ರಷ್ಟು ಸಾಕಾರಗೊಳ್ಳಲು ಇದು ಕಾರಣವಾಗಿದೆ.

**‘ಭಾರತ್ ಜೋಡೋ’ ನಿಲುವಿನೊಂದಿಗೆ ಬಲಿಷ್ಠ ಭಾರತದ ನಿರ್ಮಾಣ**

ಪ್ರತಿಯೊಂದು ದೇಶದ ಅಭಿವೃದ್ಧಿ ಪಯಣದಲ್ಲಿ ಅದು ತನ್ನನ್ನು ತಾನು ಪುನರ್ ವ್ಯಾಖ್ಯಾನಿಸಿಕೊಳ್ಳುವ ಸಮಯ ಬರುತ್ತದೆ. ಅದು ಹೊಸ ಸಂಕಲ್ಪಗಳನ್ನು ಮಾಡುತ್ತದೆ. ಅಂತಹುದೇ ಸಮಯ ಭಾರತದ ಅಭಿವೃದ್ಧಿ ಪಯಣದಲ್ಲೂ ಬಂದಿದೆ, ಇಲ್ಲಿ ದೇಶವನ್ನು ನವನಿರ್ಮಾಣದ ಹಾದಿಯಲ್ಲಿ ಕೊಂಡೊಯ್ಯಲು ಹೊಸ ಸಂಕಲ್ಪಗಳನ್ನು ಮಾಡಬೇಕಾಗಿದೆ. ಅಮೃತ ಕಾಲದ ಪ್ರಯಾಣವು ಆಜಾದಿ ಕಾ ಅಮೃತ ಮಹೋತ್ಸವದ ಅವಧಿಯಿಂದ ಪ್ರಾರಂಭವಾಗಿದೆ. ಇದು ಪರಿವರ್ತನೆಯ ಮುನ್ನುಡಿಯಾಗಿ ಕಾರ್ಯನಿರ್ವಹಿಸುತ್ತದೆ. ‘ಸಂಕಲ್ಪ್ ಸೇ ಸಿದ್ಧಿ’ ಮಂತ್ರವು ಅಮೃತ ಕಾಲದಲ್ಲಿ ಭಾರತವು ತನ್ನ ಮಹತ್ವಾಕಾಂಕ್ಷೆಗಳನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ. 2014 ರಿಂದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತದ ಅಭಿವೃದ್ಧಿಗೆ ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಈಗ ಕಡತಗಳನ್ನು ಹತ್ತಿಕ್ಕುವ ಸಂಸ್ಕೃತಿಗೆ ಕಡಿವಾಣ ಹಾಕಲಾಗಿದೆ. ಸರ್ಕಾರವು ತನ್ನ ಪ್ರತಿಯೊಂದು ಧ್ಯೇಯೋದ್ದೇಶಗಳನ್ನು ಮತ್ತು ಪ್ರತಿಯೊಂದು ನಿರ್ಣಯವನ್ನು ಜನರ ಸಹಕಾರದೊಂದಿಗೆ ಪೂರೈಸುತ್ತಿದೆ. ಈಗ ರಾಷ್ಟ್ರದ ಪ್ರಗತಿಯೊಂದಿಗೆ ಜನರನ್ನು ಸಂಪರ್ಕಿಸುವ ಕೆಲಸ ಮಾಡುವ ಸರ್ಕಾರವಿದೆ. ಈಗ ಸರ್ಕಾರವು ಏಕ್ ಭಾರತ್-ಶ್ರೇಷ್ಠ ಭಾರತ್ ಪರಿಕಲ್ಪನೆಯನ್ನು ಉತ್ತೇಜಿಸುತ್ತದೆ ಮತ್ತು ‘ಭಾರತ್ ಜೋಡೋ’ ಬಗ್ಗೆ ಒತ್ತಿಹೇಳುತ್ತದೆ.

**ಅಮೃತ ಸಂಕಲ್ಪ: ಭಾರತದ ಮಹತ್ವಾಕಾಂಕ್ಷೆಗಳ ಮರು ವ್ಯಾಖ್ಯಾನ**

ಸಾರ್ವಜನಿಕ ಸಹಭಾಗಿತ್ವದ ಫಲವೇ ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ ಮತ್ತು ಸಬ್ ಕಾ ಪ್ರಯಾಸ್. ಸ್ವಚ್ಛ ಭಾರತದಿಂದ ಪ್ರಾರಂಭವಾದ ಈ ಪ್ರಕ್ರಿಯೆಯು ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ ಮುಂತಾದ ಇತರ ಅಭಿಯಾನಗಳಲ್ಲೂ ಉತ್ಸಾಹದಿಂದ ಮುಂದುವರಿಯಿತು. ಸ್ಥಳೀಯತೆಗೆ ಆದ್ಯತೆ ಅಭಿಯಾನವೂ ಅಷ್ಟೇ ಯಶಸ್ವಿಯಾಗಿದೆ. ಪ್ರಧಾನಿ ಮೋದಿಯವರು ಜನಸಾಮಾನ್ಯರ ಆಕಾಂಕ್ಷೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ನಂತರವೇ, ಅವರು ಮುಂದಿನ ಕಾರ್ಯತಂತ್ರದಲ್ಲಿ ಕೆಲಸ ಮಾಡುತ್ತಾರೆ ಮತ್ತು ಅದನ್ನು ವಾಸ್ತವಕ್ಕೆ ತಿರುಗಿಸುತ್ತಾರೆ. ನಾವು ಇತ್ತೀಚಿನ ಕೆಲವು ಉದಾಹರಣೆಗಳನ್ನು ನೋಡಿದರೆ, ಕೊರೊನಾ ಅವಧಿಯಲ್ಲಿ, ಅವರು ಸ್ವಾವಲಂಬನೆಯ ಅಭಿಯಾನವನ್ನು ಪ್ರಾರಂಭಿಸಿದರು. ಅದು ನಾಗರಿಕರ ಮನಸ್ಸನ್ನು ಗೆದ್ದಿತು. ಲಾಕ್‌ಡೌನ್‌ನಿಂದಾಗಿ ಕೊರೊನಾ ಸಮಯದಲ್ಲಿ, ಸಂಚಾರವನ್ನು ನಿರ್ಬಂಧಿಸಲಾಗಿತ್ತು, ಸಾಮಾನ್ಯ ನಾಗರಿಕರ ಅಗತ್ಯಗಳು ಮತ್ತು ಕಾಳಜಿಗಳನ್ನು ನೋಡಿಕೊಳ್ಳುವ ಕ್ರಮಗಳೊಂದಿಗೆ ಕೊರೊನಾ ವಿರುದ್ಧದ ಹೋರಾಟವನ್ನು ಕೈಗೊಳ್ಳಲಾಯಿತು. ದೇಶದಲ್ಲಿ ಲಾಕ್‌ಡೌನ್ ಮಾರ್ಚ್ 25 ರಂದು ಪ್ರಾರಂಭವಾಯಿತು ಮತ್ತು ಮಾರ್ಚ್ 26 ರ ನಂತರ, 1.7 ಲಕ್ಷ ಕೋಟಿ ರೂ ಗರೀಬ್ ಕಲ್ಯಾಣ ಯೋಜನೆ ಪ್ರಾರಂಭಿಸಲಾಯಿತು, ಇದು ಕಷ್ಟದ ಸಮಯದಲ್ಲಿ ದೇಶದ ಸಾಮಾನ್ಯ ನಾಗರಿಕರ ಬಗ್ಗೆ ಪ್ರಧಾನಿ ಮೋದಿಯವರ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

> **ನಮ್ಮ ಸಿದ್ಧಾಂತ ದೇಶದ ಒಳಿತಿಗಾಗಿಯೇ ಇದೆ. ರಾಷ್ಟ್ರ ಮೊದಲು ಎಂಬ ಅದೇ ಸಿದ್ಧಾಂತದೊಂದಿಗೆ ನಾವು ಬೆಳೆದಿದ್ದೇವೆ. ರಾಷ್ಟ್ರೀಯ ನೀತಿಯ ಭಾಷೆಯಲ್ಲಿ ರಾಜಕೀಯದ ಪಾಠ ಹೇಳಿಕೊಡುವುದು ನಮ್ಮ ಸಿದ್ಧಾಂತ. ನಮ್ಮ ರಾಜಕೀಯದಲ್ಲೂ ರಾಷ್ಟ್ರೀಯ ನೀತಿಯೇ ಪ್ರಧಾನ. ರಾಜಕೀಯ ಮತ್ತು ರಾಷ್ಟ್ರೀಯ ನೀತಿಯ ನಡುವೆ ಒಂದನ್ನು ನಾವು ಒಪ್ಪಿಕೊಳ್ಳಬೇಕು. ನಾವು ಮೌಲ್ಯಗಳನ್ನು ಹೊಂದಿದ್ದೇವೆ: ರಾಷ್ಟ್ರೀಯ ನೀತಿಯನ್ನು ಒಪ್ಪಿಕೊಳ್ಳುವುದು ಮತ್ತು ರಾಜಕೀಯವನ್ನು ಎರಡನೇ ಸ್ಥಾನದಲ್ಲಿರಿಸುವುದು. “ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್’ ಎಂದು ಹೇಳುವ ನಮ್ಮ ಸಿದ್ಧಾಂತವು ಅದೇ ಮಂತ್ರವನ್ನು ಅನುಸರಿಸುತ್ತದೆ ಎಂದು ನಾವು ಹೆಮ್ಮೆಪಡುತ್ತೇವೆ.**
> **- ನರೇಂದ್ರ ಮೋದಿ, ಪ್ರಧಾನಮಂತ್ರಿ**





**ಪರಿವರ್ತನೆಯಾಗುತ್ತಿರುವ ಭಾರತ**

ಕಳೆದ ಎಂಟು ವರ್ಷಗಳಲ್ಲಿ ಆರಂಭಿಸಿದ ಹಲವು ಯೋಜನೆಗಳ ಲಾಭ ಕೋಟ್ಯಂತರ ಬಡವರಿಗೆ ತಲುಪಿದೆ. ಉಜ್ವಲದಿಂದ ಆಯುಷ್ಮಾನ್ ಭಾರತದವರೆಗೆ ಈ ಎಲ್ಲಾ ಯೋಜನೆಗಳು ಸಾಮಾನ್ಯ ನಾಗರಿಕರಲ್ಲಿ ಬಹಳ ಜನಪ್ರಿಯವಾಗಿವೆ. ದೇಶ ಮೊದಲಿಗಿಂತ ಹೆಚ್ಚು ವೇಗವಾಗಿ ಪ್ರಗತಿ ಸಾಧಿಸುತ್ತಿದೆ. ಆದರೆ ಈ ಪ್ರಯಾಣ ಇಲ್ಲಿಗೆ ಮುಗಿಯುವುದಿಲ್ಲ. ದೇಶವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು. ಈ ಸಂಕಲ್ಪದೊಂದಿಗೆ, ಭಾರತವು 'ಅಮೃತ ಕಾಲ' ಪ್ರಯಾಣವನ್ನು ಪ್ರಾರಂಭಿಸಿದೆ, ಅಲ್ಲಿ ಶೇ.100 ರಷ್ಟು ಹಳ್ಳಿಗಳು ರಸ್ತೆಗಳನ್ನು ಹೊಂದಿರಬೇಕು, ಶೇ.100 ರಷ್ಟು ಕುಟುಂಬಗಳು ಬ್ಯಾಂಕ್ ಖಾತೆಗಳನ್ನು ಹೊಂದಿರಬೇಕು, ಶೇ.100 ರಷ್ಟು ಫಲಾನುಭವಿಗಳು ಆಯುಷ್ಮಾನ್ ಭಾರತ್ ಕಾರ್ಡ್‌ಗಳನ್ನು ಹೊಂದಿರಬೇಕು ಮತ್ತು ಉಜ್ವಲ ಯೋಜನೆಯಡಿ ಶೇ.100 ರಷ್ಟು ಅರ್ಹ ವ್ಯಕ್ತಿಗಳು ಎಲ್‌ಪಿಜಿ ಸಂಪರ್ಕವನ್ನು ಹೊಂದಿರಬೇಕು. ಸರ್ಕಾರದ ವಿಮಾ ಯೋಜನೆಯಾಗಲಿ, ಪಿಂಚಣಿ ಯೋಜನೆಯಾಗಲಿ ಅಥವಾ ವಸತಿ ಯೋಜನೆಯಾಗಲಿ, ಅರ್ಹರಾದ ಪ್ರತಿಯೊಬ್ಬ ವ್ಯಕ್ತಿಯನ್ನು ಲಿಂಕ್ ಮಾಡಬೇಕು. ಸ್ವನಿಧಿ ಯೋಜನೆಯ ಮೂಲಕ ಬೀದಿ ಬದಿ ವ್ಯಾಪಾರಿಗಳನ್ನು ಬ್ಯಾಂಕಿಂಗ್ ವ್ಯವಸ್ಥೆಯ ವ್ಯಾಪ್ತಿಗೆ ತರಲು ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಇಂದು, ದೇಶವು ಹರ್ ಘರ್ ಜಲ್ ಮಿಷನ್‌ನಲ್ಲಿ ವೇಗವಾಗಿ ಕೆಲಸ ಮಾಡುತ್ತಿದೆ. ಜಲ ಜೀವನ್ ಮಿಷನ್‌ನ ಕೇವಲ ಎರಡೂವರೆ ವರ್ಷಗಳಲ್ಲಿ, 9 ಕೋಟಿಗೂ ಹೆಚ್ಚು ಕುಟುಂಬಗಳು ನಲ್ಲಿಯಿಂದ ನೀರು ಪಡೆಯಲು ಪ್ರಾರಂಭಿಸಿವೆ. ಇಲ್ಲಿಯವರೆಗೆ, 75 ಸಾವಿರಕ್ಕೂ ಹೆಚ್ಚು ಆರೋಗ್ಯ-ಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈಗ ಬ್ಲಾಕ್ ಮಟ್ಟದಲ್ಲಿ ಉತ್ತಮ ಆಸ್ಪತ್ರೆಗಳು ಮತ್ತು ಆಧುನಿಕ ಪ್ರಯೋಗಾಲಯಗಳ ಜಾಲವನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಮಾಡಲಾಗುತ್ತಿದೆ. ದೇಶದ ಸಾವಿರಾರು ಆಸ್ಪತ್ರೆಗಳು ಈಗ ತಮ್ಮದೇ ಆದ ಆಮ್ಲಜನಕ ಘಟಕಗಳನ್ನು ಹೊಂದಿವೆ. ಖಂಡಿತವಾಗಿಯೂ, 2014 ರ ನಂತರ, ದೇಶದ ರಾಜಕೀಯದಲ್ಲಿ ಮಾತ್ರವಲ್ಲದೆ ಕೆಲಸ ಮಾಡುವ ಮತ್ತು ಆಡಳಿತದ ಚಿಂತನೆಯ ವಿಧಾನದಲ್ಲೂ ಅಭೂತಪೂರ್ವ ಬದಲಾವಣೆಯಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ಬದುಕಿನ ಹೋರಾಟವೇ ಇದಕ್ಕೆ ಕಾರಣ. ಆರಂಭಿಕ ವರ್ಷದ ಹೋರಾಟಗಳು ಪ್ರಧಾನಿ ಮೋದಿಯವರ ಮನಸ್ಸಿನಲ್ಲಿ ಬಲವಾದ ಪ್ರಭಾವ ಬೀರಿವೆ. ದೇಶ ಮೊದಲು ಆದ್ಯತೆಯಾಗಿರುವ ರಾಷ್ಟ್ರೀಯವಾದಿ ವಿಚಾರಗಳಿಂದ ಉತ್ತೇಜಿತವಾದ ಸಿದ್ಧಾಂತದಲ್ಲಿ ಅವರು ಬೆಳೆದರು. ಅಲ್ಲಿ ರಾಜಕೀಯದ ಪಾಠವನ್ನು ರಾಷ್ಟ್ರೀಯ ನೀತಿಯ ಭಾಷೆಯಲ್ಲಿ ಕಲಿಸಲಾಗುತ್ತದೆ. ಪ್ರಧಾನಿ ಮೋದಿಯವರ ರಾಜಕೀಯದಲ್ಲೂ ರಾಷ್ಟ್ರೀಯ ನೀತಿಯೇ ಪ್ರಧಾನ. ಈ ಗುಣವು ಪ್ರಧಾನಿ ನರೇಂದ್ರ ಮೋದಿಯವರನ್ನು ದೇಶ ಮಾತ್ರವಲ್ಲದೆ ವಿಶ್ವದ ಇತರ ನಾಯಕರಿಗಿಂತ ಭಿನ್ನವಾಗಿಸಿದೆ. ಅವರ ಜೀವನ ಪಯಣದಲ್ಲಿ ಅನೇಕ ಏರಿಳಿತಗಳಿದ್ದವು, ಆದರೆ ಅವರು ಎಂದಿಗೂ ರಾಷ್ಟ್ರ ಮೊದಲು ಎಂಬ ಚಿಂತನೆಯನ್ನು ಬಿಡಲಿಲ್ಲ. ■

## ಆರೋಗ್ಯ ರಕ್ಷಣೆ

# ಆರೋಗ್ಯಕರ ಭಾರತ, ಬಲಿಷ್ಠ ಭಾರತ

ಯಶಸ್ಸು ಮತ್ತು ಸಂಪತ್ತು ಉತ್ತಮ ಆರೋಗ್ಯದ ಅಡಿಪಾಯದ ಮೇಲೆ ನಿರ್ಮಿತವಾಗಿರುತ್ತವೆ. ಒಬ್ಬ ವ್ಯಕ್ತಿ, ಕುಟುಂಬ, ಸಮಾಜ ಅಥವಾ ಇಡೀ ದೇಶದ ಪ್ರಗತಿಯು ಅದರ ಆರೋಗ್ಯದ ಆಧಾರದ ಮೇಲೆ ನಿರ್ಮಿಸಲ್ಪಡುತ್ತದೆ. ಇದಕ್ಕಾಗಿಯೇ ಕಳೆದ ಎಂಟು ವರ್ಷಗಳಿಂದ ಆರೋಗ್ಯ ಕ್ಷೇತ್ರವು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಕೋವಿಡ್‌ನಂತಹ ಸಾಂಕ್ರಾಮಿಕ ರೋಗದ ನಡುವೆಯೂ, ಆರೋಗ್ಯ ಸಂಬಂಧಿತ ಮೂಲಸೌಕರ್ಯವನ್ನು ತಾಲ್ಲೂಕು ಮಟ್ಟಕ್ಕಿಂತ ಮೇಲೆ ನಿರ್ಮಿಸುವ ಹೊಸ ಉಪಕ್ರಮವು ಪ್ರಾರಂಭವಾಗಿದೆ.



ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳು ಕುಟುಂಬ ಮತ್ತು ಸಮಾಜವನ್ನು ಭಾವನಾತ್ಮಕವಾಗಿ ಮತ್ತು ಆರ್ಥಿಕವಾಗಿ ದುರ್ಬಲಗೊಳಿಸುತ್ತವೆ. ಹಾಗಾಗಿ ಕಳೆದ 7-8 ವರ್ಷಗಳಲ್ಲಿ ದೇಶದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಬೃಹತ್ತಾದ ಮತ್ತು ಸಮಗ್ರವಾದ ಕೆಲಸ ಮಾಡಲಾಗುತ್ತಿದೆ. ನಮ್ಮ ಸರ್ಕಾರವು ಏಳು ವಿಷಯಗಳ ಮೇಲೆ ಅಥವಾ ಆರೋಗ್ಯದ ಸಪ್ತಋಷಿಗಳ ಬಗ್ಗೆ ಗಮನ ಕೇಂದ್ರೀಕರಿಸಿದೆ.

-ನರೇಂದ್ರ ಮೋದಿ, ಪ್ರಧಾನ ಮಂತ್ರಿ (ಅಸ್ಸಾಂನಲ್ಲಿ 7 ಕ್ಯಾನ್ಸರ್ ಆಸ್ಪತ್ರೆಗಳ ಉದ್ಘಾಟನೆ ಸಂದರ್ಭದಲ್ಲಿ)

ಯೋಜನೆ

ಪ್ರಾರಂಭ ಅಕ್ಟೋಬರ್ 2016

**ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಯೋಜನೆ**

### ಜೆನೆರಿಕ್ ಔಷಧಗಳು ಇಲ್ಲಿ ಶೇ.50 ರಿಂದ 90ರಷ್ಟು ಅಗ್ಗವಾಗಿರುತ್ತವೆ

**ಉದ್ದೇಶ:** ನಾಗರಿಕರು ಔಷಧಕ್ಕಾಗಿ ಖರ್ಚು ಮಾಡುವ ಹಣವನ್ನು ತಗ್ಗಿಸುವುದು. ಕೈಗೆಟುಕುವ ಜೆನೆರಿಕ್ ಔಷಧಿಗಳು ಮತ್ತು ಶಸ್ತ್ರಚಿಕಿತ್ಸಾ ಪರಿಕರಗಳನ್ನು (ಮಾರುಕಟ್ಟೆ ಬೆಲೆಗಿಂತ ಶೇ.50–90 ರವರೆಗೆ ಕಡಿಮೆ) ಅಗ್ಗದ ಬೆಲೆಯಲ್ಲಿ ಪೂರೈಸುವುದು ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

**ಪ್ರಗತಿ**

ಮಾರ್ಚ್ 31, 2022 ರವರೆಗೆ, ದೇಶಾದ್ಯಂತ 8700 ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಯೋಗಾಲಯಗಳಲ್ಲಿ ಬಳಸುವ ಕೆಲ ರಾಸಾಯನಿಕ ಮಿಶ್ರಣಗಳನ್ನು ಹೊರತುಪಡಿಸಿ, ಈ ಯೋಜನೆಯು ರಾಷ್ಟ್ರೀಯ ಅಗತ್ಯ ಔಷಧಿಗಳ ಪಟ್ಟಿಯಲ್ಲಿರುವ ಎಲ್ಲಾ ಔಷಧಿಗಳನ್ನು ಒಳಗೊಂಡಂತೆ ಸುಮಾರು 1600 ಔಷಧಗಳು ಮತ್ತು 250 ಶಸ್ತ್ರಚಿಕಿತ್ಸಾ ಪರಿಕರಗಳನ್ನು ಒಳಗೊಂಡಿದೆ. ಸರಿಸುಮಾರು 1.25 ಕೋಟಿ ಜನರು ಪ್ರತಿ ತಿಂಗಳು ಔಷಧಿಗಳನ್ನು ಖರೀದಿಸುತ್ತಾರೆ. ಯೋಜನೆಯಡಿ ಸ್ಯಾನಿಟರಿ ಪ್ಯಾಡ್‌ಗಳನ್ನು ಪ್ರತಿ ಪ್ಯಾಡ್‌ಗೆ 1 ರೂ.ನಂತೆ ಮಾರಾಟ ಮಾಡಲಾಗುತ್ತಿದೆ.

**10,500** ಕೇಂದ್ರಗಳನ್ನು 2025 ರ ವೇಳೆಗೆ ಸ್ಥಾಪಿಸಲಾಗುವುದು. ಈಗ ಯೋಜನೆಯಡಿ ಕೇಂದ್ರದ ಮಾಲೀಕರಿಗೆ 5 ಲಕ್ಷ ರೂ. ಪ್ರೋತ್ಸಾಹ ಧನ.

ಯೋಜನೆ

ಪಿಎಂಜೆಎವೈ-ಆಯುಷ್ಮಾನ್ ಭಾರತ್

ಪ್ರಾರಂಭ ಸೆಪ್ಟೆಂಬರ್ 23, 2018

**ಬಡತನದ ಕಾರಣದಿಂದಾಗಿ ಈಗ ಯಾವುದೇ ಚಿಕಿತ್ಸೆಯನ್ನು ನಿಲ್ಲಿಸಲಾಗಿಲ್ಲ**

**ಉದ್ದೇಶ:** 10 ಕೋಟಿ 74 ಲಕ್ಷ ಕುಟುಂಬಗಳ 50 ಕೋಟಿ ಜನರಿಗೆ ವರ್ಷಕ್ಕೆ 5 ಲಕ್ಷ ರೂ.ಗಳ ಉಚಿತ ಚಿಕಿತ್ಸೆ.

**ಮಾಹಿತಿ ಪಡೆಯಿರಿ:** ಯೋಜನೆಗಾಗಿ, mera.pmjay.gov.in ವೆಬ್‌ಸೈಟ್ ಮತ್ತು ಶುಲ್ಕ ರಹಿತ ಸಂಖ್ಯೆ 14555 ಮತ್ತು 1800-111-565 ರಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಪ್ರಗತಿ

ಮಾರ್ಚ್ 2022 ರವರೆಗೆ ಆಯುಷ್ಮಾನ್ ಭಾರತ್ ಯೋಜನೆಯಡಿ 17.90 ಕೋಟಿ ಫಲಾನುಭವಿಗಳಿಗೆ ಆಯುಷ್ಮಾನ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. 3.28 ಕೋಟಿಗೂ ಹೆಚ್ಚು ಜನರು ಚಿಕಿತ್ಸಾ ಸೌಲಭ್ಯವನ್ನು ಬಳಸಿದ್ದಾರೆ. ಈ ಯೋಜನೆಯ ವ್ಯಾಪ್ತಿಗೆ ಸುಮಾರು 27,300 ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳನ್ನು ತರಲಾಗಿದೆ. ಮಹಿಳೆಯರಿಗಾಗಿ ಮಾತ್ರ ಇರುವ ವ್ಯವಸ್ಥೆಯಲ್ಲಿ 141 ರೀತಿಯ ವೈದ್ಯಕೀಯ ಚಿಕಿತ್ಸೆಗಳನ್ನು ಸೇರಿಸಲಾಗಿದೆ. ಅಕ್ಟೋಬರ್ 2019 ಮತ್ತು ಸೆಪ್ಟೆಂಬರ್ 2021 ರ ನಡುವೆ, ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆದ ಶೇಕಡಾ 46.7 ರಷ್ಟು ಜನರು ಮಹಿಳೆಯರು.

ಯೋಜನೆ

ಇ- ಸಂಜೀವಿನಿ ಒಪಿಡಿ ಆರೋಗ್ಯ ಮತ್ತು ಕ್ಷೇಮ ಕೇಂದ್ರ

ಪ್ರಾರಂಭ 2018 ಮತ್ತು 2020

**ಮನೆಯ ಸಮೀಪ ಮತ್ತು ಮನೆಯಲ್ಲೇ ಚಿಕಿತ್ಸಾ ಸೌಲಭ್ಯ**

**ಉದ್ದೇಶ:** ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಮೂಲಕ, ಮನೆಯಿಂದ ವೈದ್ಯರಿಗೆ ಇರುವ ಅಂತರವು 30 ನಿಮಿಷಗಳಿಗಿಂತ ಕಡಿಮೆಯಿದ್ದು, ಟೆಲಿಮೆಡಿಸಿನ್ ಮೂಲಕ ಮನೆಯಿಂದಲೇ ವೈದ್ಯರನ್ನು ಸಂಪರ್ಕಿಸಬಹುದು.

**ಮಾಹಿತಿ ಪಡೆಯಿರಿ:** ಏಪ್ರಿಲ್ 20, 2022 ರವರೆಗೆ, ಈ ಸೇವೆಯ ಮೂಲಕ 3 ಲಕ್ಷದ 16 ಸಾವಿರ ಗಂಟೆಗಳ ಸಮಾಲೋಚನೆಯನ್ನು ಒದಗಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಸೇವೆಯನ್ನು ವೆಬ್‌ಸೈಟ್ https://esanjeevaniopd.in ನಲ್ಲಿ ಪಡೆಯಬಹುದು.

ಪ್ರಗತಿ

ಆಯುಷ್ಮಾನ್ ಭಾರತ್‌ನ ಭಾಗವಾಗಿ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ನಿರ್ಮಾಣವು 2018 ರಲ್ಲಿ ಪ್ರಾರಂಭವಾಯಿತು. 29 ಏಪ್ರಿಲ್ 2022 ರೊಳಗೆ ಅಂತಹ 1.18 ಲಕ್ಷ ಕೇಂದ್ರಗಳನ್ನು ತೆರೆಯಲಾಗಿದೆ. 1.02 ಕೋಟಿ ಕ್ಷೇಮ ಸೆಷನ್‌ಗಳನ್ನು ನಡೆಸಲಾಗಿದೆ, 85.63 ಕೋಟಿ ಜನರು ಭಾಗವಹಿಸಿದ್ದಾರೆ. ಡಿಸೆಂಬರ್ 2022 ರ ವೇಳೆಗೆ 1.58 ಲಕ್ಷ ಕೇಂದ್ರಗಳೊಂದಿಗೆ ಸ್ಥಾಪಿಸುವ ಗುರಿ ಹೊಂದಲಾಗಿದೆ. 2020 ರಲ್ಲಿ ಪ್ರಾರಂಭವಾದ ಟೆಲಿಮೆಡಿಸಿನ್ ಕಾರ್ಯಕ್ರಮ ಇ-ಸಂಜೀವಿನಿ, 1 ಲಕ್ಷಕ್ಕೂ ಹೆಚ್ಚು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಸಂಪರ್ಕ ಹೊಂದಿದೆ. ಪ್ರತಿದಿನ, ಇ-ಸಂಜೀವಿನಿ ದೇಶಾದ್ಯಂತ 90,000 ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ.

ಯೋಜನೆ

ವೈದ್ಯಕೀಯ ಸಾಧನ ಪಾರ್ಕ್ಸ್ ಪ್ರೋತ್ಸಾಹ ಯೋಜನೆ

ಪ್ರಾರಂಭ 2020–2021 ರಿಂದ 2024–2025 ರವರೆಗೆ

**ಭಾರತದ ವೈದ್ಯಕೀಯ ಸಾಧನಗಳ ತಯಾರಿಕಾ ಉದ್ಯಮದ ವೇಗದ ಬೆಳವಣಿಗೆಗೆ**

**ಉದ್ದೇಶ:** ವಿಶ್ವ ದರ್ಜೆಯ ಮೂಲಸೌಕರ್ಯವನ್ನು ನಿರ್ಮಿಸುವ ಮೂಲಕ ದೇಶೀಯ ಮಾರುಕಟ್ಟೆಯಲ್ಲಿ ವೈದ್ಯಕೀಯ ಉಪಕರಣಗಳ ಲಭ್ಯತೆಯನ್ನು ಹೆಚ್ಚಿಸುವುದರೊಂದಿಗೆ ಭಾರತೀಯ ವೈದ್ಯಕೀಯ ಸಾಧನ ವಲಯವನ್ನು ಜಾಗತಿಕ ನಾಯಕನನ್ನಾಗಿ ಮಾಡುವುದು.

ಭಾರತದ ವೈದ್ಯಕೀಯ ಪರಿಕರಗಳ ವ್ಯಾಪಾರವು ಸುಮಾರು 5 ಶತಕೋಟಿ ಡಾಲರ್ ಮೌಲ್ಯದ್ದಾಗಿದೆ, ಒಟ್ಟು ಆದಾಯದ 80-90 ಪ್ರತಿಶತದಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಏಪ್ರಿಲ್ 1, 2020 ರಿಂದ ಜಾರಿಗೆ ಬರುವಂತೆ, ವೈದ್ಯಕೀಯ ಸಾಧನಗಳನ್ನು ಈಗ ಔಷಧಿಗಳಾಗಿ ವ್ಯಾಖ್ಯಾನಿಸಲಾಗಿದೆ ಮತ್ತು ಅಧಿಸೂಚಿಸಲಾಗಿದೆ.

ಪ್ರಗತಿ

**₹ 400**

ಕೋಟಿ ವೆಚ್ಚದಲ್ಲಿ ವೈದ್ಯಕೀಯ ಸಾಧನ ಪಾರ್ಕ್ ಪ್ರೋತ್ಸಾಹ ಯೋಜನೆ ಜಾರಿಗೊಳಿಸಲಾಗುತ್ತಿದೆ. ಆರ್ಥಿಕ ಸಹಾಯಕ್ಕಾಗಿ ಅರ್ಜಿ ಸಲ್ಲಿಸಿದ 16 ರಾಜ್ಯಗಳ ಪೈಕಿ ಉತ್ತರ ಪ್ರದೇಶ, ತಮಿಳುನಾಡು, ಮಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ಆ ಯೋಜನೆಯ ಅವಧಿ 2024–2025 ಆಗಿದೆ.

ಯೋಜನೆ

ಪ್ರಾರಂಭ ಜುಲೈ, 2014

ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ

**ಅದೇ ಔಷಧಿ, ಸರಿಯಾದ ಬೆಲೆ. ಮಧುಮೇಹ, ಕ್ಯಾನ್ಸರ್ ಔಷಧಿ ಈಗ ಅಗ್ಗ.**

**ಉದ್ದೇಶ:** ಮಧುಮೇಹ, ಹೃದಯರಕ್ತನಾಳ, ಕ್ಯಾನ್ಸರ್ ಔಷಧಗಳು ಮತ್ತು ಸ್ಟೆಂಟ್‌ಗಳು ಮತ್ತು ಮಂಡಿ ಚಿಪ್ಪುಗಳ ವೆಚ್ಚವನ್ನು ನಿಯಂತ್ರಿಸುವ ಮೂಲಕ ಚಿಕಿತ್ಸೆಗೆಂದು ಮಾಡಲಾಗುವ ಖರ್ಚನ್ನು ಕಡಿಮೆ ಮಾಡುವುದು.

ಪ್ರಗತಿ

ಜುಲೈ 2014 ರಲ್ಲಿ, ಯೋಜನೆಯು 106 ಮಧುಮೇಹ ವಿರೋಧಿ ಮತ್ತು ಹೃದಯರಕ್ತನಾಳದ ಔಷಧಿಗಳ ಬೆಲೆಯನ್ನು ನಿಗದಿಪಡಿಸಿತು. ಮಾರ್ಚ್ 16, 2016 ರಂದು, ಎನ್ ಎಲ್ ಇ ಎಂ 2015 ಕಾಯಿದೆಯ ಜಾರಿಯ ನಂತರ 102 ಮಿಶ್ರಣಗಳ ಗರಿಷ್ಠ ಬೆಲೆ ನಿಗದಿಪಡಿಸಲಾಯಿತು. ಫೆಬ್ರವರಿ 2017 ರಲ್ಲಿ, ಸ್ಟೆಂಟ್‌ಗಳ ಬೆಲೆಯನ್ನು ಬಿಡುಗಡೆ ಮಾಡಲಾಯಿತು ಮತ್ತು ಆಗಸ್ಟ್ 2017 ರಲ್ಲಿ, ಆರ್ಥೋಪೆಡಿಕ್ ಮಂಡಿ ಚಿಪ್ಪುಗಳ ಬೆಲೆಯನ್ನು ಬಿಡುಗಡೆ ಮಾಡಲಾಯಿತು.

ಔಷಧಿಗಳು ಮತ್ತು ವೈದ್ಯಕೀಯ ಸಾಧನಗಳ ಮೇಲಿನ ಬೆಲೆ ನಿಯಂತ್ರಣದ ಪರಿಣಾಮವಾಗಿ ಗ್ರಾಹಕರು ಪ್ರತಿ ವರ್ಷ ಸುಮಾರು

**8400**

ಕೋಟಿ ರೂ.ಗಳನ್ನು ಉಳಿಸಿದ್ದಾರೆ.

# ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆಯ ಹೊಸ ಕಥೆ ಬರೆದ ಯೋಜನೆಗಳು

ಯೋಜನೆ

ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್

ಪ್ರಾರಂಭ 25 ಅಕ್ಟೋಬರ್ 2021

**ದೇಶದ ಆರೋಗ್ಯ ಮೂಲಸೌಕರ್ಯವನ್ನು ಸುಧಾರಿಸುವ ಸಮಯ**

**ಉದ್ದೇಶ:** ಪ್ರತಿ ಹಂತದಲ್ಲೂ ದೇಶದ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವುದು

ಪ್ರಗತಿ

- ಕಳೆದ ವರ್ಷ ವಾರಾಣಸಿಯಲ್ಲಿ ಪ್ರಧಾನಿ ಮೋದಿಯವರು ಈ ಯೋಜನೆಗೆ ಚಾಲನೆ ನಿಡಿದರು. ಇದು ದೇಶದ ಆರೋಗ್ಯ ಮೂಲಸೌಕರ್ಯವನ್ನು ಸುಧಾರಿಸಲು ಇದುವರೆಗಿನ ಅತಿದೊಡ್ಡ ಉಪಕ್ರಮವಾಗಿದ್ದು, ಐದು ವರ್ಷಗಳಲ್ಲಿ 64 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚ ಮಾಡಲಾಗುತ್ತದೆ.
- 5 ಬಿ ಎಸ್ ಎಲ್-3 ಪರೀಕ್ಷಾ ಪ್ರಯೋಗಾಲಯವು 33 ರೋಗಗಳನ್ನು ವಿಶ್ಲೇಷಿಸುವ ಮತ್ತು ಮುನ್ಸೂಚನೆ ನೀಡುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುತ್ತದೆ.
- 12 ಕೇಂದ್ರೀಯ ಆಸ್ಪತ್ರೆಗಳಲ್ಲಿ ಕ್ರಿಟಿಕಲ್ ಕೇರ್ ಬ್ಲಾಕ್‌ಗಳನ್ನು ನಿರ್ಮಿಸಲಾಗುವುದು. ಅವುಗಳಲ್ಲಿ 1800 ಹೆಚ್ಚುವರಿ ಹಾಸುಗೆಗಳು ಇರುತ್ತವೆ.
- 17,788 ಗ್ರಾಮೀಣ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ತೆರೆಯಲಾಗುವುದು. ನಾಲ್ಕು ಹೊಸ ಪ್ರಾದೇಶಿಕ ವೈರಾಣು ಸಂಸ್ಥೆಗಳನ್ನು ಪ್ರಾರಂಭಿಸಲಾಗುವುದು.

**602**

ಕ್ರಿಟಿಕಲ್ ಕೇರ್ ಬ್ಲಾಕ್‌ಗಳನ್ನು ಉತ್ತರ ಪ್ರದೇಶದ ಎಲ್ಲಾ 75 ಜಿಲ್ಲೆಗಳಲ್ಲಿ ಸ್ಥಾಪಿಸಲಾಗುವುದು.

## ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ

ಮಾತೃ ವಂದನಾ ಯೋಜನೆಯನ್ನು 2016 ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯು ಜನವರಿ 1, 2017 ರಿಂದ ದೇಶದ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಿದೆ. ಇದರ ಅಡಿಯಲ್ಲಿ ಗರ್ಭಿಣಿಯರ ಸುರಕ್ಷಿತ ಹೆರಿಗೆಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಉತ್ತಮ ಪೋಷಣೆಗಾಗಿ ಐದು ಸಾವಿರ ರೂಪಾಯಿಗಳನ್ನು ನೀಡಲಾಗುತ್ತಿದೆ. ಇಂದು ದೇಶದ 650 ಜಿಲ್ಲೆಗಳಲ್ಲಿ ಈ ಯೋಜನೆಯ ಲಾಭ ಪಡೆಯುವ ಮಹಿಳೆಯರ ಸಂಖ್ಯೆ ಸುಮಾರು ಎರಡು ಕೋಟಿ. ಹಣಕಾಸು ವರ್ಷ 2018 ರಿಂದ 2020 ರವರೆಗೆ, ಈ ಯೋಜನೆಯಡಿಯಲ್ಲಿ 1.75 ಕೋಟಿ ಅರ್ಹ ಫಲಾನುಭವಿಗಳಿಗೆ ಒಟ್ಟು 5931.95 ಕೋಟಿ ರೂ.ಪಾವತಿಸಲಾಗಿದೆ.



ಯೋಜನೆ

ಪ್ರಾರಂಭ 27 ಸೆಪ್ಟೆಂಬರ್ 2021

ಆಯುಷ್ಮಾನ್ ಭಾರತ್ ಡಿಜಿಟಲ್ ಆರೋಗ್ಯ ಮಿಷನ್

**ಪ್ರತಿಯೊಬ್ಬ ನಾಗರಿಕನ ಸ್ವಂತ ಆರೋಗ್ಯ ಗುರುತಿನ ಖಾತೆ**

**ಉದ್ದೇಶ:** ಪ್ರತಿಯೊಬ್ಬ ನಾಗರಿಕನ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯು ಒಂದೇ ಕ್ಲಿಕ್‌ನಲ್ಲಿ ಲಭ್ಯವಿರಬೇಕು.

ಪ್ರಯೋಜನಗಳನ್ನು ಪಡೆದುಕೊಳ್ಳಿ : ಅಧಿಕೃತ ವೆಬ್‌ಸೈಟ್ ndhm.gov.in ಗೆ ಭೇಟಿ ನೀಡುವ ಮೂಲಕ ನೀವು ನಿಮ್ಮ ಸ್ವಂತ ಆರೋಗ್ಯ ಖಾತೆಯನ್ನು ಸೃಷ್ಟಿಸಬಹುದು.

**ಪ್ರಗತಿ**

ಇದನ್ನು ಪ್ರಧಾನಿ ಮೋದಿಯವರು ಆಗಸ್ಟ್ 15, 2020 ರಂದು ಕೆಂಪು ಕೋಟೆಯಿಂದ ಘೋಷಿಸಿದರು. ಆರು ರಾಜ್ಯಗಳಲ್ಲಿ ನಡೆದ ಪ್ರಾಯೋಗಿಕ ಯೋಜನೆಯ ನಂತರ, ಇದನ್ನು ದೇಶಾದ್ಯಂತ ಜಾರಿಗೆ ತರಲಾಗಿದೆ. ಇದು ಆಧಾರ್ ಕಾರ್ಡ್‌ನಂತೆ ಆರೋಗ್ಯ ಕಾರ್ಡ್ ಆಗಿದ್ದು, ಇದರಲ್ಲಿ ಫಲಾನುಭವಿಯ ಎಲ್ಲಾ ಆರೋಗ್ಯ ಸಂಬಂಧಿತ ಡೇಟಾ ಇರುತ್ತದೆ.

ಏಪ್ರಿಲ್ 20, 2022 ರವರೆಗೆ ಈ ಮಿಷನ್ ಅಡಿಯಲ್ಲಿ

**21,50,71,056**

ಜನರ ಆರೋಗ್ಯ ಖಾತೆಗಳನ್ನು ತೆರೆಯಲಾಗಿದೆ

## ರಾಷ್ಟ್ರೀಯ ಪೋಷಣಾ ಅಭಿಯಾನ

ಈ ಯೋಜನೆಯನ್ನು ಮಾರ್ಚ್ 8, 2018 ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ರಾಜಸ್ಥಾನದಿಂದ ಪ್ರಾರಂಭಿಸಲಾಯಿತು. ಅದಕ್ಕೂ ಮೊದಲು, ಈ ಯೋಜನೆಯನ್ನು ನ್ಯೂಟ್ರಿಷನ್ ಮಿಷನ್ ಎಂದು ಕರೆಯಲಾಗುತ್ತಿತ್ತು ಮತ್ತು ಇದನ್ನು 2018 ರಲ್ಲಿ ಪೋಷಣಾ ಅಭಿಯಾನ್ ಎಂಬ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಯಗತಗೊಳಿಸಲಾಯಿತು. ಈ ಯೋಜನೆಯಡಿ ಮಗುವಿನ ಜನನದ ನಂತರದ ಮೊದಲ 1000 ದಿನಗಳವರೆಗೆ ಹೆಚ್ಚಿನ ಗಮನ ನೀಡಲಾಗುತ್ತದೆ. ಇದು 0-6 ವರ್ಷ ವಯಸ್ಸಿನ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ಮಹಿಳೆಯರ ಆರೋಗ್ಯ ಮತ್ತು ಪೋಷಣೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಇವುಗಳಲ್ಲಿ ಹಂತ ಹಂತವಾಗಿ ಅಪೌಷ್ಟಿಕತೆ ನಿವಾರಣೆಗೆ 3 ವರ್ಷಗಳ ಗುರಿ ನಿಗದಿಪಡಿಸಲಾಗಿದೆ. 2030 ರ ವೇಳೆಗೆ ಎಲ್ಲಾ ರೀತಿಯ ಹಸಿವು ಮತ್ತು ಅಪೌಷ್ಟಿಕತೆಯನ್ನು ಕೊನೆಗೊಳಿಸುವ ಗುರಿಯನ್ನು ಭಾರತ ಹೊಂದಿದೆ. ಇದರೊಂದಿಗೆ, ಜನರಿಗೆ, ವಿಶೇಷವಾಗಿ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಗುರಿಯನ್ನು ನಿಗದಿಪಡಿಸಲಾಗಿದೆ. ಇದಕ್ಕಾಗಿ ಸಾರ್ವಜನಿಕ ಪಡಿತರ ಅಂಗಡಿಗಳಿಂದ ಸಾರವರ್ಧಿತ ಅಕ್ಕಿ ವಿತರಣೆ ಆರಂಭಿಸಲಾಗಿದೆ.

## ಕ್ಷಯರೋಗ ಮುಕ್ತ ಭಾರತ

ವಿಶ್ವಸಂಸ್ಥೆಯು 2030 ರ ವೇಳೆಗೆ ಕ್ಷಯರೋಗವನ್ನು ವಿಶ್ವದಿಂದ ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿದೆ, ಆದರೆ ಭಾರತವು 2025 ರ ಗುರಿಯನ್ನು ಹೊಂದಿದೆ. ಈ ಅಭಿಯಾನವು ಮೂರು ವರ್ಷಗಳ ಹಿಂದೆ 12 ಸಾವಿರ ಕೋಟಿ ರೂಪಾಯಿಗಳ ಬಜೆಟ್‌ನೊಂದಿಗೆ ಪ್ರಾರಂಭವಾಯಿತು.

## ಭಾರತದ ಮಲೇರಿಯಾ ಮುಕ್ತ ಯೋಜನೆ

ಜುಲೈ 2017 ರಲ್ಲಿ, ಮೋದಿ ಸರ್ಕಾರವು ಮಲೇರಿಯಾ ನಿರ್ಮೂಲನೆಗಾಗಿ ರಾಷ್ಟ್ರೀಯ ಕಾರ್ಯತಂತ್ರದ ಯೋಜನೆ 2017–22 ಅನ್ನು ಘೋಷಿಸಿತು, ಇದು ದೇಶದಲ್ಲಿ ಮಲೇರಿಯಾವನ್ನು ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿದೆ. ಈಶಾನ್ಯ ಭಾರತದಲ್ಲಿ ಗುರಿ ಸಾಧಿಸಿದ ನಂತರ, ಮಹಾರಾಷ್ಟ್ರ, ಒಡಿಶಾ, ಜಾರ್ಖಂಡ್, ಛತ್ತೀಸ್‌ಗಢ ಮತ್ತು ಮಧ್ಯಪ್ರದೇಶವನ್ನು ಪ್ರಸ್ತುತ ಗುರಿಯಾಗಿಸಲಾಗುತ್ತಿದೆ. ಮಲೇರಿಯಾ ನಿರ್ಮೂಲನೆಗಾಗಿ ರಾಷ್ಟ್ರೀಯ ಚೌಕಟ್ಟು 2016-2030 ಅನ್ನು ಸರ್ಕಾರವು 2016 ರಲ್ಲಿ ಬಿಡುಗಡೆ ಮಾಡಿದೆ.

### ಭಾರತ: ಪ್ರಪಂಚದ ಔಷಧಾಲಯ

- ಜೆನೆರಿಕ್ ಔಷಧಗಳ ಉತ್ಪಾದನೆಯಲ್ಲಿ ಭಾರತವು ವಿಶ್ವದ ಅತಿದೊಡ್ಡ ದೇಶವಾಗಿದೆ. ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ಶೇ. 20 ರಷ್ಟು ಪಾಲನ್ನು ಹೊಂದಿದೆ.
- ಭಾರತದ ಔಷಧೀಯ ಉದ್ಯಮವು 2020-21ರಲ್ಲಿ ಶೇ.12 ವಾರ್ಷಿಕ ಬೆಳವಣಿಗೆಯೊಂದಿಗೆ 50 ಡಾಲರ್ ಶತಕೋಟಿ ದಾಟಿದೆ.
- ಭಾರತವು 200 ಕ್ಕೂ ಹೆಚ್ಚು ದೇಶಗಳಿಗೆ ಉತ್ತಮ ಗುಣಮಟ್ಟದ ಔಷಧಿಗಳನ್ನು ಪೂರೈಸುತ್ತದೆ.





## ಯೋಗದ ಜನಪ್ರಿಯತೆ ಹೆಚ್ಚಿದೆ

ತನ್ನ ಮೊದಲ ವರ್ಷದಲ್ಲಿಯೇ, ಸರ್ಕಾರವು ದೇಶದ ಆರೋಗ್ಯದ ಬಗ್ಗೆ ಮಾತ್ರವಲ್ಲ, ಭೂಮಿಯ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುವುದಾಗಿ ಹೇಳಿತು. ಆಯುಷ್ ಸಚಿವಾಲಯದ ಸ್ಥಾಪನೆಯೊಂದಿಗೆ, ಯೋಗವು ಪ್ರಪಂಚದಾದ್ಯಂತದ ವಿದ್ಯಮಾನವಾಗಿದೆ. ದೇಶದಲ್ಲಿ ಯೋಗಾಭ್ಯಾಸ ಮಾಡುವವರ ಸಂಖ್ಯೆಯು ಹಿಂದೆಂದಿಗಿಂತಲೂ ಹೆಚ್ಚು ವಿಸ್ತರಿಸಿದೆ, ಒತ್ತಡ ಮುಕ್ತ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಲು. ಅಷ್ಟೇ ಅಲ್ಲ, ಯೋಗ ತರಬೇತಿಗೆ ಸಂಬಂಧಿಸಿದ ಉದ್ಯೋಗಾವಕಾಶಗಳು ಕೂಡ ವಿಸ್ತರಿಸಿವೆ. ಯೋಗವನ್ನು ಈಗ ಪ್ರಪಂಚದಾದ್ಯಂತ ಸುಮಾರು 177 ದೇಶಗಳಲ್ಲಿ ಅಭ್ಯಾಸ ಮಾಡಲಾಗುತ್ತಿದೆ.

## ಯೋಜನೆ

ಪ್ರಾರಂಭ ಡಿಸೆಂಬರ್ 25, 2014

## ಪ್ರಗತಿ

ಮಿಷನ್ ಇಂದ್ರಧನುಷ್

**ಯಾವುದೇ ಮಗು ಅಥವಾ ತಾಯಿ ಲಸಿಕೆ ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು**

**ಉದ್ದೇಶ:** ಎಲ್ಲಾ ಗರ್ಭಿಣಿಯರು ಮತ್ತು ಎರಡು ವರ್ಷದೊಳಗಿನ ಮಕ್ಕಳಿಗೆ ಸಂಪೂರ್ಣವಾಗಿ ಲಸಿಕೆ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

ಮಿಷನ್ ಇಂದ್ರಧನುಷ್ ಚಾಲನೆಯ ಸಮಯದಲ್ಲಿ ಏಳು ರೋಗಗಳಿಗೆ ಲಸಿಕೆ ನೀಡಲಾಗುತ್ತಿತ್ತು. ಇದನ್ನು ಪ್ರಸ್ತುತ 12 ರೋಗಗಳಿಗೆ ಹೆಚ್ಚಿಸಲಾಗಿದೆ. ಇದರಿಂದ 4.10 ಕೋಟಿ ಎಳೆಯರಿಗೆ ಲಸಿಕೆ ಹಾಕಲಾಗಿದೆ. ಫೆಬ್ರವರಿ 2022 ರಲ್ಲಿ, ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಮೂಲಕ ವಾರ್ಷಿಕವಾಗಿ 30 ಮಿಲಿಯನ್‌ಗಿಂತಲೂ ಹೆಚ್ಚು ಗರ್ಭಿಣಿಯರು ಮತ್ತು 26 ಮಿಲಿಯನ್ ಮಕ್ಕಳನ್ನು ಒಳಗೊಳ್ಳುವ ಗುರಿಯೊಂದಿಗೆ ತೀವ್ರ ಮಿಷನ್ ಇಂದ್ರಧನುಷ್ 4.0 ಅನ್ನು ಪ್ರಾರಂಭಿಸಲಾಯಿತು.

ಕರ್ತವ್ಯದ ಹಾದಿಯತ್ತ 8 ವರ್ಷಗಳು




ಗುಜರಾತ್‌ನ ಜಾಮ್‌ನಗರದಲ್ಲಿ ವಿಶ್ವದ ಮೊದಲ ಜಾಗತಿಕ ಸಾಂಪ್ರದಾಯಿಕ ಔಷಧಿ ಕೇಂದ್ರಕ್ಕೆ ಅಡಿಪಾಯ ಹಾಕಲಾಯಿತು

# ಸಾಂಪ್ರದಾಯಿಕ ಔಷಧದಲ್ಲಿ ವಿಶ್ವ ನಾಯಕ

ಭಾರತದ ಆಯುರ್ವೇದದ ಮೌಲ್ಯವನ್ನು ಈಗ ಪ್ರಪಂಚದಾದ್ಯಂತ ಗುರುತಿಸಲಾಗಿದೆ. 2014 ರಲ್ಲಿ, ಕೇಂದ್ರ ಸರ್ಕಾರವು ಆಯುಷ್ ಸಚಿವಾಲಯವನ್ನು ಸ್ಥಾಪಿಸುವ ಮೂಲಕ ಆಯುರ್ವೇದ, ಯೋಗ ಮತ್ತು ಇತರ ಸಾಂಪ್ರದಾಯಿಕ ಔಷಧ ವ್ಯವಸ್ಥೆಗಳನ್ನು ವಿಲೀನಗೊಳಿಸಲು ಕ್ರಮ ಕೈಗೊಂಡಿದೆ. ಭಾರತದ ಪ್ರಯತ್ನಗಳಿಂದಾಗಿ ಪ್ರಪಂಚದಾದ್ಯಂತ ಜೂನ್ 21, 2015 ರಂದು ಅಂತರರಾಷ್ಟ್ರೀಯ ಯೋಗ ದಿನವು ಪ್ರಾರಂಭವಾಯಿತು. ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದಲ್ಲಿ ಗುಜರಾತ್‌ನ ಜಾಮ್‌ನಗರದಲ್ಲಿ ವಿಶ್ವದ ಮೊದಲ ಜಾಗತಿಕ ಸಾಂಪ್ರದಾಯಿಕ ಔಷಧಿ ಕೇಂದ್ರಕ್ಕೆ ಏಪ್ರಿಲ್ 19 ರಂದು ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, "ನಮ್ಮ ಆಯುರ್ವೇದವನ್ನು ಜೀವನ ಜ್ಞಾನವೆಂದು ಅರ್ಥೈಸಲಾಗಿದೆ. ಆಯುರ್ವೇದವನ್ನು ಐದನೇ ವೇದವೆಂದು ಕರೆಯುತ್ತಾರೆ." ಎಂದು ಹೇಳಿದರು.

- ಎಂಟು ವರ್ಷಗಳಲ್ಲಿ ಆಯುಷ್ ಕಾಲೇಜುಗಳ ಸಂಖ್ಯೆ ಸುಮಾರು 200 ರಿಂದ 780 ಕ್ಕೆ ಏರಿಕೆಯಾಗಿವೆ.
- 435 ಹೊಸ ಆಯುಷ್ ಆಸ್ಪತ್ರೆಗಳನ್ನು ತೆರೆಯಲಾಗಿದೆ ಮತ್ತು ಈಗ ಭಾರತದಲ್ಲಿ ಅವು 3859 ಇವೆ.
- 29951 ಆಯುಷ್ ಔಷಧಾಲಯಗಳು ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ಔಷಧದ ಮೂಲಕ ದೇಶಕ್ಕೆ ಸೇವೆ ಸಲ್ಲಿಸುತ್ತಿವೆ. ಆಯುಷ್ ಉತ್ಪಾದನಾ ಉದ್ಯಮವು 2022 ರಲ್ಲಿ 1 ಲಕ್ಷ 40 ಸಾವಿರ ಕೋಟಿಗಳನ್ನು ತಲುಪುವ ನಿರೀಕ್ಷೆಯಿದೆ. 18 ಶತಕೋಟಿ ಡಾಲರ್ ಆಯುಷ್‌ನ ಮಾರುಕಟ್ಟೆಯಾಗಿದೆ, ಇದು 2027 ರ ವೇಳೆಗೆ ಶೇ.50 ರಷ್ಟು ಬೆಳವಣಿಗೆಯಾಗಲಿದೆ ಎಂದು ಅಂದಾಜಿಸಲಾಗಿದೆ. 2014 ರಲ್ಲಿ ಇದು 3 ಶತಕೋಟಿ ಡಾಲರ್ ಗಿಂತ ಕಡಿಮೆಯಿತ್ತು.

## ವೈದ್ಯಕೀಯ ಶಿಕ್ಷಣದಲ್ಲಿ ಪರಿವರ್ತನೆ

### ಶೇ.75 ರಷ್ಟು ಸ್ನಾತಕ ಮತ್ತು ಶೇ. 93 ರಷ್ಟು ಸ್ನಾತಕೋತ್ತರ ಸೀಟುಗಳು ಹೆಚ್ಚಳ



ಕಳೆದ 8 ವರ್ಷಗಳಲ್ಲಿ ವೈದ್ಯಕೀಯ ಶಿಕ್ಷಣದ ಸುಧಾರಣೆಗೆ ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ 50ರಷ್ಟು ಸೀಟುಗಳಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸರಿಸಮಾನವಾಗಿ ಶುಲ್ಕ ವಿಧಿಸಲಾಗಿದೆ. ವೈದ್ಯಕೀಯ ಶಿಕ್ಷಣವನ್ನು ಸುಧಾರಿಸುವ ಸಲುವಾಗಿ, ಭಾರತೀಯ ವೈದ್ಯಕೀಯ ಮಂಡಳಿಯನ್ನು ರದ್ದುಗೊಳಿಸಲಾಯಿತು ಮತ್ತು ಅದರ ಸ್ಥಾನದಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು ರಚಿಸಲಾಯಿತು. ಅಲ್ಲದೆ, ವೈದ್ಯಕೀಯ ಸಂಸ್ಥೆಗಳಲ್ಲಿ ಒಬಿಸಿ ವರ್ಗಕ್ಕೆ 27 ಪ್ರತಿಶತ ಮತ್ತು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ 10 ಪ್ರತಿಶತ ಮೀಸಲಾತಿ ನೀಡಲಾಗಿದೆ. ಇದಲ್ಲದೆ, ದೇಶದ ಎಲ್ಲಾ ಸರ್ಕಾರಿ, ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕೆ ನೀಟ್ ಪರೀಕ್ಷೆಯನ್ನು ಕಡ್ಡಾಯಗೊಳಿಸಿರುವುದು ಒಂದು ಐತಿಹಾಸಿಕ ಹೆಜ್ಜೆಯಾಗಿದೆ.

| ಸ್ನಾತಕ ಪದವಿ ಸೀಟುಗಳು | |
|---|---|
| 2014 | 51,348 |
| 2022* | 89,875 |

| ಸ್ನಾತಕೋತ್ತರ ಪದವಿ ಸೀಟುಗಳು | |
|---|---|
| 2014 | 31,185 |
| 2022* | 60,202 |

**ವೈದ್ಯಕೀಯ ಕಾಲೇಜುಗಳು ಮತ್ತು ಏಮ್ಸ್**

| 2014 ರಲ್ಲಿ | 2022* ರಲ್ಲಿ |
|---|---|
| 387 ವೈದ್ಯಕೀಯ ಕಾಲೇಜುಗಳು ಮತ್ತು 6 ಏಮ್ಸ್ | 596 ವೈದ್ಯಕೀಯ ಕಾಲೇಜುಗಳು ಮತ್ತು 22 ಏಮ್ಸ್ |

*ಮಾರ್ಚ್‌ವರೆಗೆ




# ಕೋವಿಡ್ ವಿರುದ್ಧ ದೃಢವಾದ ಹೋರಾಟ

ಕೋವಿಡ್‌ನಂತಹ ಭಯಾನಕ ಸಾಂಕ್ರಾಮಿಕ ರೋಗ ಬಂದಾಗ, ಅದನ್ನು ಹೇಗೆ ಎದುರಿಸಬೇಕೆಂದು ನಮಗೆ ತಿಳಿದಿರಲಿಲ್ಲ. ನಮ್ಮ ಮೂಲಸೌಕರ್ಯಗಳು ಕಾರ್ಯರೂಪಕ್ಕೆ ಬಂದಿಲ್ಲ. ಪಿಪಿಇ ಕಿಟ್‌ಗಳು ಮತ್ತು ಎನ್95 ಮಾಸ್ಕ್‌ಗಳನ್ನು ಭಾರತದಲ್ಲಿ ವಿರಳವಾಗಿ ತಯಾರಿಸಲಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ, ಭಾರತವು "ಜಾನ್ ಹೈ ತೋ ಜಹಾ ಹೈ" ಮತ್ತು ನಂತರ ಪ್ರಧಾನಿ ಮೋದಿಯವರ "ಜಾನ್ ಭಿ, ಜಹಾ ಭಿ" ಎಂಬ ಮಂತ್ರದೊಂದಿಗೆ, ಕೋವಿಡ್ ವಿರುದ್ಧ ದೃಢವಾಗಿ ಹೋರಾಡಿದೆ, ಅಲ್ಲದೇ ಇಂದು ವಿಶ್ವದಾದ್ಯಂತ ಅನೇಕ ದೇಶಗಳಿಗೆ ಸಹಾಯ ಮಾಡುತ್ತಿದೆ. ಕೋವಿಡ್ ಸಾಂಕ್ರಾಮಿಕ ಪ್ರತಿಕ್ರಿಯೆಯಾಗಿ ಭಾರತವು ಅತ್ಯಂತ ಕಠಿಣವಾದ ಲಾಕ್‌ಡೌನ್ ಅನ್ನು ವಿಧಿಸಿತು. ಮತ್ತೊಂದೆಡೆ, ಈ ರೋಗವನ್ನು ಎದುರಿಸಲು ಮತ್ತು ಅದರ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸಲು ಸಿದ್ಧತೆಗಳನ್ನು ಪ್ರಾರಂಭಿಸಿತು. ಏಪ್ರಿಲ್ 2020 ರಲ್ಲಿ, ಲಸಿಕೆ ಕಾರ್ಯಪಡೆಯನ್ನು ರಚಿಸಲಾಯಿತು. ಭಾರತವು ಕೇವಲ ಎಂಟು ತಿಂಗಳಲ್ಲಿ ಎರಡು ಲಸಿಕೆಗಳನ್ನು ಸ್ವೀಕರಿಸಿದ್ದು ಮಾತ್ರವಲ್ಲದೆ, ಅದರ ಸಂಗ್ರಹಣೆ, ಸಾರಿಗೆ, ಖರೀದಿ, ಶೀತಲ ಸರಪಳಿ ಮತ್ತು ಅಪ್ಲಿಕೇಶನ್ ಮೂಲಕ ಜನವರಿ 16, 2021 ರಂದು ವಿಶ್ವದ ಅತಿದೊಡ್ಡ ಲಸಿಕಾ ಅಭಿಯಾನವನ್ನು ಪ್ರಾರಂಭಿಸಿತು. 'ಹರ್ ಘರ್ ದಸ್ತಕ್' ಮತ್ತು 'ಎಲ್ಲರಿಗೂ ಲಸಿಕೆ, ಉಚಿತ ಲಸಿಕೆ' ಯಂತಹ ಅಭಿಯಾನಗಳನ್ನು ಪ್ರಾರಂಭಿಸುವ ಮೂಲಕ, ಭಾರತವು ದಾಖಲೆ ಸಮಯದಲ್ಲಿ ಅತಿ ಹೆಚ್ಚು ಜನರಿಗೆ ಲಸಿಕೆಯನ್ನು ನೀಡಿದ್ದು ಮಾತ್ರವಲ್ಲದೆ 'ಪರೀಕ್ಷೆ, ಪತ್ತೆ ಮತ್ತು ಮತ್ತು ಚಿಕಿತ್ಸೆ' ತಂತ್ರದ ಮೂಲಕ ಸಾಂಕ್ರಾಮಿಕವನ್ನು ಎದುರಿಸಿತು. ಪ್ರಧಾನಿ ಮೋದಿ ಅವರ ಜನ್ಮದಿನದಂದು, ಒಂದೇ ದಿನದಲ್ಲಿ 2.5 ಕೋಟಿ ಲಸಿಕೆಗಳನ್ನು ನೀಡಲಾಯಿತು, ಇದು ವಿಶ್ವದ ಯಾವುದೇ ದೇಶವು ಸಾಧಿಸದ ಸಾಧನೆಯಾಗಿದೆ. ಪ್ರಧಾನಿ ಮೋದಿಯವರು ಭಾರತದ ಎಲ್ಲಾ ಕೋವಿಡ್ ತಡೆ ಅಭಿಯಾನಗಳನ್ನು ವೈಯಕ್ತಿಕವಾಗಿ ಪರಿಶೀಲಿಸಿದ್ದಾರೆ. ಅವರು ಇತ್ತೀಚೆಗೆ ಏಪ್ರಿಲ್ 27 ರಂದು ಮುಖ್ಯಮಂತ್ರಿಗಳೊಂದಿಗಿನ ಸಭೆಯಲ್ಲಿ ಹೊಸ ಕೋವಿಡ್ ಪ್ರಕರಣಗಳ ಬಗ್ಗೆ ಪರಿಶೀಲನಾ ಸಭೆ ನಡೆಸಿದರು.

## ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತದ ಪ್ರಗತಿ.

- ಭಾರತ ಇಂದು ಪಿಪಿಇ ಕಿಟ್‌ಗಳು ಮತ್ತು ಎನ್95 ಮಾಸ್ಕ್‌ಗಳ ವಿಶ್ವದ ಎರಡನೇ ಅತಿದೊಡ್ಡ ಉತ್ಪಾದಕ ರಾಷ್ಟ್ರವಾಗಿದೆ. ನಾವು 48 ದೇಶಗಳಿಗೆ ಪಿಪಿಇ ಕಿಟ್‌ಗಳನ್ನು ಪೂರೈಸುತ್ತಿದ್ದೇವೆ.
- 2020 ರಲ್ಲಿ, ಭಾರತದಲ್ಲಿ ಮೊದಲ ಕೋವಿಡ್ ಪ್ರಕರಣ ವರದಿಯಾದಾಗ, ಅದನ್ನು ಪರೀಕ್ಷಿಸಲು ದೇಶದಲ್ಲಿ ಕೇವಲ ಒಂದು ಪ್ರಯೋಗಾಲಯ ಇತ್ತು. ಈಗ ಇದನ್ನು 3360 ಪ್ರಯೋಗಾಲಯಗಳಲ್ಲಿ ಪರೀಕ್ಷಿಸಲಾಗುತ್ತಿದೆ.

ಕೊ-ವಿನ್ ಡಿಜಿಟಲ್ ಪ್ಲಾಟ್‌ಫಾರ್ಮ್ ಮೂಲಕ ನೋಂದಣಿ. ದೇಶಾದ್ಯಂತ 4143 ಹೊಸ ಆಮ್ಲಜನಕ ಉತ್ಪಾದನಾ ಘಟಕಗಳಿವೆ. ತುರ್ತು ಪ್ರತಿಕ್ರಿಯೆ ಪ್ಯಾಕೇಜ್ ಅಡಿಯಲ್ಲಿ 631 ಜಿಲ್ಲೆಗಳಲ್ಲಿ ಮಕ್ಕಳ ಆರೈಕೆ ಘಟಕಗಳಿವೆ.

- ಮೇ 2 ರವರೆಗೆ 189.23 ಕೋಟಿ ಲಸಿಕೆ ಡೋಸ್ ನೀಡಲಾಗಿದೆ. ಈ ಸಾಧನೆ ಮಾಡಿದ ವಿಶ್ವದ ಎರಡನೇ ದೇಶ ಭಾರತವಾಗಿದೆ.
- 27 ಏಪ್ರಿಲ್ 2022 ರ ಹೊತ್ತಿಗೆ, 96 ಪ್ರತಿಶತ ವಯಸ್ಕರು ಕನಿಷ್ಠ ಒಂದು ಡೋಸ್ ಲಸಿಕೆಯನ್ನು ಪಡೆದಿದ್ದಾರೆ, 15 ವರ್ಷಕ್ಕಿಂತ ಮೇಲ್ಪಟ್ಟವರಲ್ಲಿ ಸುಮಾರು 85 ಪ್ರತಿಶತದಷ್ಟು ಜನರು ಎರಡೂ ಡೋಸ್ ಸ್ವೀಕರಿಸಿದ್ದಾರೆ. ಇದರೊಂದಿಗೆ, ಈಗ 26 ಏಪ್ರಿಲ್ 2022 ರಂದು, 6-12 ವರ್ಷ ವಯಸ್ಸಿನ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆಯನ್ನು ನೀಡಲು ಅನುಮತಿ ನೀಡಲಾಗಿದೆ.

ಯೋಜನೆ

ಜಲ ಜೀವನ್ ಮಿಷನ್ - ಹರ್ ಘರ್ ಜಲ್

ಪ್ರಾರಂಭ 15 ಆಗಸ್ಟ್, 2019

**ಭಾರತದ ಗ್ರಾಮೀಣ ಪ್ರದೇಶದಲ್ಲಿ ಮನೆಗಳಿಗೆ ಶುದ್ಧ ಕುಡಿಯುವ ನೀರು**

**ಉದ್ದೇಶ:** 2024 ರ ವೇಳೆಗೆ ಪ್ರತಿ ಮನೆಗೂ ನಲ್ಲಿ ನೀರಿನ ಸಂಪರ್ಕವನ್ನು ಕಲ್ಪಿಸುವ ಗುರಿ.

ಪ್ರಗತಿ

- ಯೋಜನೆ ಆರಂಭವಾದ 32 ತಿಂಗಳಲ್ಲಿ 6.30 ಕೋಟಿ ಮನೆಗಳು ನಲ್ಲಿ ಸಂಪರ್ಕ ಪಡೆದಿವೆ. ಈಗ 19.32 ಕೋಟಿ ಗ್ರಾಮೀಣ ಕುಟುಂಬಗಳ ಪೈಕಿ ಸುಮಾರು 9.35 ಕೋಟಿ ಮನೆಗಳು ನಲ್ಲಿ ನೀರು ಪಡೆಯಲಾರಂಭಿಸಿವೆ.
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ದಾದ್ರಾ ಮತ್ತು ನಗರ ಹವೇಲಿ, ದಮನ್ ಮತ್ತು ದಿಯು ಜೊತೆಗೆ ಗೋವಾ, ತೆಲಂಗಾಣ ಮತ್ತು ಹರಿಯಾಣ ರಾಜ್ಯಗಳ ಪ್ರತಿ ಮನೆಯೂ ಈಗ ನಲ್ಲಿ ನೀರಿನ ಸಂಪರ್ಕ ಪಡೆದಿವೆ.
- ಮಾರ್ಚ್ 31, 2022 ರವರೆಗೆ ಈ ಯೋಜನೆಗೆ 3.6 ಲಕ್ಷ ಕೋಟಿ ರೂ. ವೆಚ್ಚವಾಗಲಿದ್ದು, ಇದರಲ್ಲಿ 2.08 ಲಕ್ಷ ಕೋಟಿ ರೂ. ಕೇಂದ್ರ ಸರ್ಕಾರದ ಪಾಲು ಆಗಿರುತ್ತದೆ.

**₹ 61,120**

ಕೋಟಿ ರೂ. ಖರ್ಚು ಮಾಡಲಾಗಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ 3.8 ಕೋಟಿ ಕುಟುಂಬಗಳ ಮನೆಗಳಿಗೆ ನೀರು ಒದಗಿಸಲು 60 ಸಾವಿರ ಕೋಟಿ ರೂ. ಅನುದಾನ ಒದಗಿಸಲಾಗಿದೆ.

## ಪರಿಸರ ಸ್ನೇಹಿ ನೀತಿಗಳೊಂದಿಗೆ ಭವಿಷ್ಯದ ಸಂರಕ್ಷಣೆ



पृथ्वी सगन्धा सरसास्तथाप: स्पर्शी च वायुर्ज्वलितं च तेज:।
नभ: सशब्दं महत्ता सहै व कुर्वन्तु सर्वे गम सुप्रभातम्॥"

ಮೇಲಿನ ಸಂಸ್ಕೃತದ ಶ್ಲೋಕವು ಪ್ರತಿಯೊಬ್ಬರ ಜೀವನದಲ್ಲಿ ಪ್ರಕೃತಿಯ ಪ್ರಾಮುಖ್ಯದ ಮೇಲೆ ಬೆಳಕು ಚೆಲ್ಲುತ್ತದೆ. ಗಾಳಿ, ನೀರು ಮತ್ತು ಆಕಾಶ ಎಲ್ಲವೂ ಮಾನವನ ಅಸ್ತಿತ್ವದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವ ಪ್ರಕೃತಿಯ ಮಹತ್ವದ ಭಾಗಗಳಾಗಿವೆ. ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ಉತ್ತಮ ಪರಿಸರ ಮತ್ತು ಶುದ್ಧ ನೀರು ಜೀವನದ ಐದು ಮೂಲಭೂತ ಅಂಶಗಳಾಗಿ ಸೇರಿಕೊಂಡಿವೆ. ಹೀಗಿದ್ದರೂ 2019ರ ವರೆಗೆ ಕುಡಿಯುವ ನೀರು ಪಡೆಯಲು ದೇಶದ ಬಹುಸಂಖ್ಯಾತ ಜನತೆ ದೂರದವರೆಗೆ ನಡೆಯಬೇಕಾಗಿದ್ದಿದ್ದು ವಿಪರ್ಯಾಸವೇ ಸರಿ. ಸ್ವಚ್ಛ ಪರಿಸರದತ್ತ ಕೈಗೊಳ್ಳಬೇಕಾದ ಕ್ರಮಗಳಿಗೆ ಈ ಹಿಂದೆ ಆದ್ಯತೆ ನೀಡಿಲ್ಲ. ಈಗ ಜಲ ಜೀವನ್ ಮಿಷನ್‌ನಂತಹ ಯೋಜನೆಯು ಪ್ರತಿ ಮನೆಗೂ ನಲ್ಲಿ ನೀರಿನ ಸಂಪರ್ಕವನ್ನು ಪಡೆಯಲು ಅನುಕೂಲ ಮಾಡಿಕೊಟ್ಟಿದೆ ಪ್ರಧಾನಿ ಮೋದಿಯವರ ಪಂಚಾಮೃತ ಮಂತ್ರವು ಪರಿಸರವನ್ನು ರಕ್ಷಿಸುವ ದಿಕ್ಕಿನಲ್ಲಿ ಬಹಳ ನಿರ್ಣಾಯಕವಾಗಿದೆ.

ಪ್ರಾರಂಭ ಡಿಸೆಂಬರ್ 30, 2021

ಯೋಜನೆ

ಉದ್ದೇಶ

**ಅಣೆಕಟ್ಟೆ ಸುರಕ್ಷತೆಗೆ ಹೊಸ ಕಾನೂನು**

### ಅಣೆಕಟ್ಟುಗಳು ಈಗ ಸುರಕ್ಷಿತವಾಗಿರಲಿವೆ

**ಉದ್ದೇಶ:** ಅಣೆಕಟ್ಟುಗಳ ಸುರಕ್ಷತೆಗಾಗಿ ಸಾಂಸ್ಥಿಕ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುವುದು.

- ಭಾರತದಲ್ಲಿ 5334 ಬೃಹತ್ ಮತ್ತು 411 ನಿರ್ಮಾಣ ಹಂತದ ಅಣೆಕಟ್ಟುಗಳು ಮತ್ತು ಸಾವಿರಾರು ಇತರ ಸಣ್ಣ ಅಣೆಕಟ್ಟುಗಳಿವೆ. ಅಣೆಕಟ್ಟು ಪುನಶ್ಚೇತನ ಮತ್ತು ಸುಧಾರಣಾ ಯೋಜನೆಗಳು- ಡ್ರಿಪ್ 1 ರಲ್ಲಿ 7 ರಾಜ್ಯಗಳ 223 ಅಣೆಕಟ್ಟುಗಳನ್ನು ಡ್ರಿಪ್-2 ಮತ್ತು ಡ್ರಿಪ್-3 ಗಳಲ್ಲಿ 19 ರಾಜ್ಯಗಳ 736 ಅಣೆಕಟ್ಟುಗಳನ್ನು ಎರಡು ಹಂತಗಳಲ್ಲಿ 10,211 ಕೋಟಿ ಅಂದಾಜು ವೆಚ್ಚದಲ್ಲಿ, ಅನುಷ್ಠಾನ ಮಾಡಲಾಗುತ್ತದೆ. ಗಮನಾರ್ಹವಾಗಿ, ಭಾರತ ಸರ್ಕಾರವು ಅಣೆಕಟ್ಟುಗಳ ಸರಿಯಾದ ಮೇಲ್ವಿಚಾರಣೆ, ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಣೆಕಟ್ಟು ಸುರಕ್ಷತಾ ಕಾಯಿದೆ 2021 ಅನ್ನು ಜಾರಿಗೊಳಿಸಿದೆ. ಇದು ಡಿಸೆಂಬರ್ 30, 2021 ರಂದು ಜಾರಿಗೆ ಬಂದಿತು. ಇದರ ಅಡಿಯಲ್ಲಿ, ಎರಡು ರಾಷ್ಟ್ರೀಯ ಮತ್ತು ಎರಡು ರಾಜ್ಯ-ಮಟ್ಟದ ಸಂಸ್ಥೆಗಳನ್ನು ರಚಿಸಲಾಗಿದೆ.

ಕರ್ತವ್ಯದ ಹಾದಿಯತ್ತ 8 ವರ್ಷಗಳು

ಯೋಜನೆ

ಅಟಲ್ ಭೂಜಲ ಯೋಜನೆ

ಪ್ರಾರಂಭ 25 ಡಿಸೆಂಬರ್, 2019

## ಬದುಕಿಗೆ ನೀರು ಅನಿವಾರ್ಯ

**ಉದ್ದೇಶ:** ನೀರಿನ ಒತ್ತಡ ಹೆಚ್ಚಿರುವ 7 ರಾಜ್ಯಗಳ 78 ಗುರುತಿಸಲಾದ ಜಿಲ್ಲೆಗಳಲ್ಲಿ ಅಂತರ್ಜಲ ಸಂಪನ್ಮೂಲಗಳ ನಿರ್ವಹಣೆಯನ್ನು ಸುಧಾರಿಸುವುದು.



### ಪ್ರಗತಿ

ಗುಜರಾತ್, ಹರಿಯಾಣ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ 8350 ಪಂಚಾಯತ್‌ಗಳು ಈ ಯೋಜನೆಯ ನೇರ ಪ್ರಯೋಜನವನ್ನು ಪಡೆಯುತ್ತವೆ. ಐದು ವರ್ಷಗಳವರೆಗೆ 6000 ಕೋಟಿ ರೂ.ಬಜೆಟ್‌ನ ಈ ಯೋಜನೆಯು 50 ಪ್ರತಿಶತ ವಿಶ್ವಬ್ಯಾಂಕ್ ಸಾಲ ಮತ್ತು 50 ಪ್ರತಿಶತ ಅನುದಾನವನ್ನು ಭಾರತ ಸರ್ಕಾರ ಒಳಗೊಂಡಿದೆ. ನೀರು ಬಳಕೆದಾರರ ಸಂಘದಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ನೀರಿನ ಭದ್ರತೆಗೆ ಯೋಜನೆ ಸಿದ್ಧಪಡಿಸುವ ಸಮಿತಿಯಲ್ಲಿ ಶೇ.20ರಷ್ಟು ಮಹಿಳೆಯರು ಭಾಗವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ದೇಶಾದ್ಯಂತ 5516 ಜಲ ಭದ್ರತಾ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ.

ಯೋಜನೆ

ನಮಾಮಿ ಗಂಗೆ ಮಿಷನ್

ಪ್ರಾರಂಭ ಜೂನ್ 2014

## ಗಂಗಾ ನದಿಯು ಸ್ವಚ್ಛತೆಯಿಂದ ಮತ್ತು ಅಡೆತಡೆಯಿಲ್ಲದೆ ಸಾಗುತ್ತದೆ

**ಉದ್ದೇಶ:** ಗಂಗಾ ನದಿ ಮತ್ತು ಅದರ ಉಪನದಿಗಳನ್ನು ಪುನರುಜ್ಜೀವನಗೊಳಿಸುವ ಗುರಿ.



### ಪ್ರಗತಿ

ನಮಾಮಿ ಗಂಗೆ ಮಿಷನ್ ಅಡಿಯಲ್ಲಿ ಇದುವರೆಗೆ 30,853 ಕೋಟಿ ರೂ. ಅಂದಾಜು ವೆಚ್ಚದಲ್ಲಿ 364 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪೈಕಿ 183 ಯೋಜನೆಗಳನ್ನು ಪೂರ್ಣಗೊಳಿಸಿ ಕಾರ್ಯಾರಂಭ ಮಾಡಲಾಗಿದೆ. ಗಂಗಾನದಿಯುದ್ದಕ್ಕೂ ಪಟ್ಟಣಗಳಿಂದ ದಿನಕ್ಕೆ 2953 ಮಿಲಿಯನ್ ಲೀಟರ್ (ಎಂಎಲ್‌ಡಿ) ಕೊಳಚೆ ನೀರು ಉತ್ಪಾದನೆಗೆ ವಿರುದ್ಧವಾಗಿ, ಸಂಸ್ಕರಣಾ ಸಾಮರ್ಥ್ಯವು 2407 ಎಂಎಲ್‌ಡಿ ತಲುಪಿದೆ, ಇದು ಕಾರ್ಯಕ್ರಮದ ಪ್ರಾರಂಭದ ಸಮಯದಲ್ಲಿ 1305 ಎಂಎಲ್‌ಡಿ ಇತ್ತು. ಜತೆಗೆ ಇನ್ನೂ 934 ಎಂಎಲ್ ಡಿ ಎಸ್ ಟಿಪಿ ಸಾಮರ್ಥ್ಯಕ್ಕೆ ಮಂಜೂರಾತಿ ನೀಡಲಾಗಿದೆ. ಈಗ ನಮಾಮಿ ಗಂಗೆ ಮಿಷನ್ 2 ಅನ್ನು 2026 ರವರೆಗೆ ವಿಸ್ತರಿಸಲಾಗಿದೆ.

ಯೋಜನೆ

ನದಿ ಜೋಡಣೆ ಯೋಜನೆ

ಅನುಮೋದನೆ 8 ಡಿಸೆಂಬರ್, 2021

## ಹಳ್ಳಿಗರು ಮತ್ತು ರೈತರು ನದಿಗಳ ಜೋಡಣೆಯಿಂದ ಸಮೃದ್ಧಿ ಪಡೆಯುತ್ತಾರೆ

**ಉದ್ದೇಶ:** ಬರಪೀಡಿತ ಪ್ರದೇಶಗಳಿಗೆ ನೀರು ಪೂರೈಕೆ.

**ಪ್ರಗತಿ:** ಭಾರತದಲ್ಲಿ ನದಿಗಳನ್ನು ಜೋಡಿಸುವ ಕಲ್ಪನೆಯನ್ನು 1858 ರಲ್ಲಿ ಬ್ರಿಟಿಷ್ ನೀರಾವರಿ ಎಂಜಿನಿಯರ್ ಸರ್ ಆರ್ಥರ್ ಥಾಮಸ್ ಅವರು ಮೊದಲು ಪ್ರಸ್ತಾಪಿಸಿದರು. ಆದರೆ ಇದರಲ್ಲಿ ಪ್ರಗತಿ ಕಾಣಲಿಲ್ಲ. ನಂತರ 1980 ರಲ್ಲಿ, ರಾಷ್ಟ್ರೀಯ ದೃಷ್ಟಿಕೋನ ಯೋಜನೆಯಡಿಯಲ್ಲಿ 30 ನದಿ ಜೋಡಣೆಗಳನ್ನು ಗುರುತಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 2014 ರಲ್ಲಿ ಅಧಿಕಾರಕ್ಕೆ ಬಂದಾಗ, ಸೆಪ್ಟೆಂಬರ್ 2014 ರಲ್ಲಿ ನದಿಗಳ ಜೋಡಣೆಯ ವಿಶೇಷ ಸಮಿತಿಯನ್ನು ರಚಿಸಿತು. 2015 ರಲ್ಲಿ ಕಾರ್ಯಪಡೆಯನ್ನು ರಚಿಸಲಾಯಿತು. ಇಲ್ಲಿಯವರೆಗೆ, 8 ಜೋಡಣೆಗಳ ವಿವರವಾದ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗಿದೆ. ಕೆನ್- ಬೆಟ್ವಾ ಜೋಡಣೆ ಯೋಜನೆಯು ಅನುಷ್ಠಾನಗೊಳ್ಳುತ್ತಿರುವ ಮೊದಲ ಯೋಜನೆಯಾಗಿದೆ.

**₹ 44, 605**

ಕೋಟಿ ಅಂದಾಜು ವೆಚ್ಚದ ಯೋಜನೆಗೆ ಡಿಸೆಂಬರ್ 8, 2021 ರಂದು ಸಂಪುಟ ಅನುಮೋದನೆ ನೀಡಿತು. 25 ಮಿಲಿಯನ್ ಹೆಕ್ಟೇರ್ ಪ್ರದೇಶ ಮತ್ತು ಹೆಚ್ಚಿದ ಅಂತರ್ಜಲ ಬಳಕೆಯು 10 ಮಿಲಿಯನ್ ಹೆಕ್ಟೇರ್‌ಗಳಿಗೆ ಮತ್ತಷ್ಟು ನೀರಾವರಿ ಪ್ರಯೋಜನಗಳನ್ನು ಒದಗಿಸುವ ಸಾಧ್ಯತೆಯಿದೆ. 34 ದಶಲಕ್ಷ ಕಿ.ವ್ಯಾ. ವಿದ್ಯುತ್ ಉತ್ಪಾದನೆ ಮತ್ತು ಪ್ರವಾಹ ನಿಯಂತ್ರಣವು ಅನೇಕ ಪ್ರಯೋಜನಗಳನ್ನು ನೀಡುತ್ತದೆ.

ಪ್ರಗತಿ

ಯೋಜನೆ

ಪ್ರಾರಂಭ ಅಕ್ಟೋಬರ್ 2, 2014

ಸ್ವಚ್ಛ ಭಾರತ್ ಮಿಷನ್- ಗ್ರಾಮೀಣ

## ಬಯಲು ಮಲವಿಸರ್ಜನೆ ಮುಕ್ತ , ಈಗ ಒಡಿಎಫ್ ಪ್ಲಸ್

**ಉದ್ದೇಶ:** ದೇಶವನ್ನು ಬಯಲು ಮಲ ವಿಸರ್ಜನೆ ಮುಕ್ತವಾಗಿಸುವುದು

### ಪ್ರಗತಿ

2014 ರಿಂದ ಈ ಯೋಜನೆಯಡಿ 10.93 ಕೋಟಿಗೂ ಹೆಚ್ಚು ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಅದೇ ಆಧಾರದ ಮೇಲೆ, ದೇಶದ ಎಲ್ಲಾ ಗ್ರಾಮಗಳು ಅಕ್ಟೋಬರ್ 2, 2019 ರಂದು ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡಿವೆ. ಒಡಿಎಫ್‌ಅನ್ನು ಸಾಧಿಸಿದ ನಂತರ, ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ 2 ನೇ ಹಂತವನ್ನು 2025 ರ ವೇಳೆಗೆ ಎಲ್ಲಾ ಹಳ್ಳಿಗಳನ್ನು ಒಡಿಎಫ್+ ಮಾಡಲು ನಡೆಸಲಾಗುತ್ತಿದೆ, ಅಂದರೆ, ಒಡಿಎಫ್ ನ ಸುಸ್ಥಿರತೆಯ ಮೇಲೆ ಗಮನ ಕೇಂದ್ರೀಕರಿಸುವ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯನ್ನು ಒದಗಿಸುವುದು. ಇದು ಬೇಡಿಕೆ ಆಧರಿತ ಯೋಜನೆಯಾಗಿದ್ದು, ರಾಷ್ಟ್ರೀಯ ಯೋಜನಾ ಸಮಿತಿಯಿಂದ ಅನುಮೋದಿಸಲ್ಪಟ್ಟ ರಾಜ್ಯಗಳು ತಮ್ಮ ಯೋಜನೆಗಳನ್ನು ಕಳುಹಿಸುತ್ತವೆ. 29 ಸಾವಿರ ಗ್ರಾಮಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆ ಹೊರತುಪಡಿಸಿ 54 ಸಾವಿರ ಗ್ರಾಮಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ವ್ಯವಸ್ಥೆ ಪೂರ್ಣಗೊಂಡಿದೆ. ಗೋಬರ್ಧನ್ ಯೋಜನೆ ಕೂಡ ಇದರ ಒಂದು ಭಾಗವಾಗಿದೆ.

# ಶುದ್ಧ ಇಂಧನ ಮಿಷನ್

ಯೋಜನೆ

ಪ್ರಧಾನ ಮಂತ್ರಿ ಉಜಾಲಾ ಯೋಜನೆ

ಪ್ರಾರಂಭ ಜನವರಿ 5, 2015

## ಎಲ್ಇಡಿ ಬಲ್ಬ್‌ಗಳನ್ನು ಉತ್ತೇಜಿಸುವ ಮೂಲಕ ಪರಿಸರವನ್ನು ರಕ್ಷಿಸುವುದು

ಉದ್ದೇಶ: ಪ್ರತಿ ಮನೆಗೂ ಕೈಗೆಟಕುವ ದರದಲ್ಲಿ ಎಲ್ಇಡಿ ಬಲ್ಬ್‌ಗಳನ್ನು ಒದಗಿಸುವುದು.

ಪ್ರಗತಿ

- ಎಲ್ಲರಿಗೂ ಕೈಗೆಟಕುವ ಎಲ್ಇಡಿಗಳ ಉನ್ನತ ಜ್ಯೋತಿ (ಉಜಾಲಾ) ಕಾರ್ಯಕ್ರಮವು ವಿಶ್ವದ ಅತಿದೊಡ್ಡ ಸಬ್ಸಿಡಿ ರಹಿತ ಸ್ವದೇಶಿ ಬೆಳಕಿನ ಕಾರ್ಯಕ್ರಮವಾಗಿದೆ. ಇದರಡಿ 70 ರೂ.ಗೆ ಎಲ್ ಇಡಿ ಬಲ್ಬ್, 220 ರೂ.ಗೆ ಎಲ್ ಇಡಿ ಟ್ಯೂಬ್ ಲೈಟ್, 1110 ರೂ.ಗೆ ಎಲ್ ಇಡಿ ಫ್ಯಾನ್ ಗಳನ್ನು ನೀಡಲಾಗುತ್ತಿದ್ದು, 2014ರವರೆಗೆ 350 ರೂ. ಇದ್ದ ಎಲ್ ಇಡಿ ಬಲ್ಬ್ ಈಗ 70 ರೂ.ಗೆ ಲಭ್ಯವಿದೆ. ಹಾಗೆಯೇ ಗ್ರಾಮ ಉಜಾಲಾ ಅಭಿಯಾನದ ಅಡಿಯಲ್ಲಿ 10 ರೂ.ಗೆ ಎಲ್ ಇಡಿ ಲಭ್ಯವಾಗುತ್ತಿದೆ.
- ಯೋಜನೆಯ ಪ್ರಾರಂಭದಿಂದ, 22 ಏಪ್ರಿಲ್ 2022 ರವರೆಗೆ 36.79 ಕೋಟಿ ಎಲ್ಇಡಿಗಳನ್ನು ವಿತರಿಸಲಾಗಿದೆ.
- 47,778 ಮಿಲಿಯನ್ ಕಿ.ವ್ಯಾ ನಷ್ಟು ವಾರ್ಷಿಕ ಇಂಧನ ಉಳಿತಾಯವನ್ನು ಸಾಧಿಸಲಾಗಿದೆ.
- 9,565 ಮೆಗಾವ್ಯಾಟ್‌ನ ಗರಿಷ್ಠ ಬೇಡಿಕೆಯನ್ನು ನಿವಾರಿಸಲಾಗಿದೆ. ಪ್ರಧಾನ ಮಂತ್ರಿ ಉಜಾಲಾ ಯೋಜನೆಯಿಂದ ವಾರ್ಷಿಕವಾಗಿ 3.86 ಕೋಟಿ ಟನ್ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಯನ್ನು ಕಡಿಮೆ ಮಾಡಲಾಗಿದೆ.

ಪ್ರಸ್ತುತ, ದೇಶದಲ್ಲಿ ತಿಂಗಳಿಗೆ

**40**

ಮಿಲಿಯನ್ ಎಲ್ಇಡಿ ಬಲ್ಬ್ ಗಳನ್ನು ತಯಾರಿಸಲಾಗುತ್ತಿದೆ. 2014ರಲ್ಲಿ ಈ ಸಂಖ್ಯೆ ತಿಂಗಳಿಗೆ 1 ಲಕ್ಷ ಮಾತ್ರ ಇತ್ತು.

## ಶುದ್ಧ ಇಂಧನದತ್ತ ಹೆಜ್ಜೆಗಳು



ಉದ್ದೇಶ: ಮಾಲಿನ್ಯ ಮುಕ್ತ ಭವಿಷ್ಯಕ್ಕಾಗಿ ಶುದ್ಧ ಇಂಧನದ ಪರ್ಯಾಯ ಮೂಲಗಳನ್ನು ಸೃಷ್ಟಿಸುವುದು ಮತ್ತು ಮಾಲಿನ್ಯದ ಅಂಶಗಳನ್ನು ಕಡಿಮೆ ಮಾಡುವುದು.

### ರಾಷ್ಟ್ರೀಯ ಹೈಡ್ರೋಜನ್ ಮಿಷನ್

- ಪ್ರಧಾನಮಂತ್ರಿ ಮೋದಿಯವರು 15 ಆಗಸ್ಟ್ 2021 ರಂದು ಕೆಂಪು ಕೋಟೆಯಿಂದ ರಾಷ್ಟ್ರೀಯ ಹೈಡ್ರೋಜನ್ ಮಿಷನ್ ಅನ್ನು ಪ್ರಾರಂಭಿಸುವುದಾಗಿ ಘೋಷಿಸಿದರು. ಸಾಮಾನ್ಯ ಬಜೆಟ್‌ನಲ್ಲಿ ಇದಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಭಾರತದ ಮೊದಲ ಹೈಡ್ರೋಜನ್ ಪೈಲಟ್ ಸ್ಥಾವರವನ್ನು 21 ಏಪ್ರಿಲ್ 2022 ರಂದು ಅಸ್ಸಾಂನ ಜೋರ್ಹತ್‌ನಲ್ಲಿ ಕಾರ್ಯಗತಗೊಳಿಸಲಾಯಿತು.

### ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣವನ್ನು ಉತ್ತೇಜಿಸುವುದು

- ಪೆಟ್ರೋಲ್‌ಗೆ ಎಥೆನಾಲ್ ಅನ್ನು ಸೇರಿಸುವುದರಿಂದ ಇಂಗಾಲದ ಮಾನಾಕ್ಸೈಡ್ ಹೊರಸೂಸುವಿಕೆಯನ್ನು ಶೇ.35 ರಷ್ಟು ಕಡಿಮೆ ಮಾಡುತ್ತದೆ. 2014 ರವರೆಗೆ, ಭಾರತದಲ್ಲಿ ಶೇ.1.5 ರಷ್ಟು ಎಥೆನಾಲ್ ಅನ್ನು ಪೆಟ್ರೋಲ್‌ನೊಂದಿಗೆ ಮಿಶ್ರಣ ಮಾಡಲಾಗಿತ್ತು. ಇದು ಪ್ರಸ್ತುತ ಶೇ.8.1 ರಷ್ಟು ಮಿತಿಯನ್ನು ಹೊಂದಿದೆ. ಏಪ್ರಿಲ್ 1, 2023 ರಿಂದ, ಶೇ.20 ಎಥೆನಾಲ್ ಅನ್ನು ಪೆಟ್ರೋಲ್‌ನೊಂದಿಗೆ ಬೆರೆಸಲಾಗುತ್ತದೆ.

### ಇ-ಚಾರ್ಜಿಂಗ್ ಕೇಂದ್ರಗಳು

- ಭಾರತ ಸರ್ಕಾರವು ಜನರು ಎಲೆಕ್ಟ್ರಿಕ್ ವಾಹನಗಳತ್ತ ಒಲವು ತೋರಲು ಸಹಾಯ ಮಾಡುತ್ತಿದೆ. ದೇಶದಲ್ಲಿ ಸುಮಾರು 4500 ಚಾರ್ಜಿಂಗ್ ಕೇಂದ್ರಗಳನ್ನು ಅನುಮೋದಿಸಲಾಗಿದೆ. ಹೆದ್ದಾರಿಯ ಎರಡೂ ಬದಿಗಳಲ್ಲಿ ಪ್ರತಿ 25 ಕಿ.ಮೀ.ಗೆ ಕನಿಷ್ಠ ಒಂದು ಚಾರ್ಜಿಂಗ್ ಸ್ಟೇಷನ್ ಮತ್ತು ಹೆದ್ದಾರಿಯ ಎರಡೂ ಬದಿಗಳಲ್ಲಿ ಪ್ರತಿ 100 ಕಿ.ಮೀ ದೂರದವರೆಗೆ / ಹೆವಿ ಡ್ಯೂಟಿ ಇವಿಗಳಿಗಾಗಿ ಕನಿಷ್ಠ ಒಂದು ಚಾರ್ಜಿಂಗ್ ಸ್ಟೇಷನ್. ನಗರಕ್ಕೆ, 3 ಕಿ.ಮೀ x 3 ಕಿ.ಮೀ. ಗ್ರಿಡ್‌ನಲ್ಲಿ ಕನಿಷ್ಠ ಒಂದು ಚಾರ್ಜಿಂಗ್ ಕೇಂದ್ರವನ್ನು ಸ್ಥಾಪಿಸಲಾಗುವುದು. ಚಾರ್ಜಿಂಗ್ ಸ್ಟೇಷನ್‌ಗಾಗಿ ಮಾರ್ಗಸೂಚಿಗಳನ್ನು ನೀಡಲಾಗಿದೆ. ಮಾರ್ಚ್ 25, 2022 ರ ಹೊತ್ತಿಗೆ, ದೇಶದಲ್ಲಿ 10.76 ಲಕ್ಷ ಎಲೆಕ್ಟ್ರಿಕ್ ವಾಹನಗಳನ್ನು ನೋಂದಾಯಿಸಲಾಗಿದೆ.

ಯೋಜನೆ

ಪ್ರಾರಂಭ 25 ಸೆಪ್ಟೆಂಬರ್ 2017

ಪ್ರಧಾನ ಮಂತ್ರಿ ಸೌಭಾಗ್ಯ ಯೋಜನೆ

## ಬಡವರಿಗೆ ವಿದ್ಯುತ್ ಹಕ್ಕು

ಉದ್ದೇಶ: ದೇಶದ ಕೊನೆಯ ಮೈಲಿಯವರೆಗೂ ಪ್ರತಿ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.



ಪ್ರಗತಿ

ಈ ಯೋಜನೆಯಡಿ ಬಡ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕವನ್ನು ನೀಡಲಾಗುತ್ತದೆ. ಈ ಅರ್ಹತೆ ಇಲ್ಲದವರು ಕನಿಷ್ಠ 500 ರೂ. ಗಳ ಶುಲ್ಕದಲ್ಲಿ ಸಂಪರ್ಕ ಪಡೆಯಬಹುದು. ದೇಶದ ಶೇ.99.99ರಷ್ಟು ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ತಲುಪಿದೆ.

**ಯೋಜನೆಯಡಿ ಇದುವರೆಗೆ 2.63 ಕೋಟಿಗೂ ಹೆಚ್ಚು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.**

ಯೋಜನೆ

ಪ್ರಾರಂಭ 1 ಏಪ್ರಿಲ್ 2015

**ಫೇಮ್ ಇಂಡಿಯಾ**

## ಮಾಲಿನ್ಯ ಮುಕ್ತ ಸಾರಿಗೆಯತ್ತ ಹೆಜ್ಜೆ

ಉದ್ದೇಶ: ಸಾರ್ವಜನಿಕ ಸಾರಿಗೆಯಲ್ಲಿ ಇ-ವಾಹನಗಳ ಬಳಕೆಯನ್ನು ಉತ್ತೇಜಿಸುವುದು.

**ಫೇಮ್ ಇಂಡಿಯಾದ ಮೊದಲ ಹಂತದಲ್ಲಿ 5 ಕೋಟಿ ಲೀಟರ್ ಇಂಧನವನ್ನು ಉಳಿಸಲಾಗಿದೆ.**

**ಬ್ಯಾಟರಿ ವಿನಿಮಯ ನೀತಿ**

ಎಲೆಕ್ಟ್ರಿಕ್ ವಾಹನಗಳಲ್ಲಿ, ಬ್ಯಾಟರಿಯ ಚಾರ್ಜ್ ಮತ್ತು ನಿರ್ವಹಣೆಗೆ ತೆಗೆದುಕೊಳ್ಳುವ ಸಮಯವು ದೊಡ್ಡ ಅಡಚಣೆಯಾಗಿದೆ. ಇದಕ್ಕಾಗಿ ದೇಶದಲ್ಲಿ ಪ್ರಥಮ ಬಾರಿಗೆ ಬ್ಯಾಟರಿ ವಿನಿಮಯ ನೀತಿಯನ್ನು ಘೋಷಿಸಲಾಗಿದೆ.

## ಪ್ರಗತಿ

ಫೇಮ್ ಇಂಡಿಯಾ ಯೋಜನೆಯು ಎರಡು ಹಂತಗಳನ್ನು ಹೊಂದಿದೆ. ಮೊದಲ ಹಂತವು 1 ಏಪ್ರಿಲ್ 2015 ರಂದು ಪ್ರಾರಂಭವಾಯಿತು ಮತ್ತು 31 ಮಾರ್ಚ್ 2019 ರವರೆಗೆ ನಡೆಯಿತು. ಎರಡನೇ ಹಂತವು 1 ಏಪ್ರಿಲ್ 2019 ರಂದು ಪ್ರಾರಂಭವಾಗಿದ್ದು, ಐದು ವರ್ಷಗಳವರೆಗೆ ಇರುತ್ತದೆ,. ಇದರ ಅಡಿಯಲ್ಲಿ, ಇ-ವಾಹನಗಳ ಮೇಲೆ 18000 ದಿಂದ 3 ಲಕ್ಷ ರೂ.ವರೆಗೆ ಸಹಾಯಧನವನ್ನು ಒದಗಿಸಲಾಗುತ್ತಿದೆ. ಫೇಮ್ ಇಂಡಿಯಾ ಹಂತ-II ಅಡಿಯಲ್ಲಿ 2.3 ಲಕ್ಷ ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸುವುದರ ಜೊತೆಗೆ, 65 ನಗರಗಳಿಗೆ 6315 ಇ-ಬಸ್‌ಗಳನ್ನು ಅನುಮೋದಿಸಲಾಗಿದೆ. ಅಲ್ಲದೆ, 68 ನಗರಗಳಿಗೆ 2877 ಚಾರ್ಜಿಂಗ್ ಕೇಂದ್ರಗಳು ಮತ್ತು 25 ಹೆದ್ದಾರಿ ಎಕ್ಸ್‌ಪ್ರೆಸ್‌ವೇನಲ್ಲಿ 1576 ಚಾರ್ಜಿಂಗ್ ಕೇಂದ್ರಗಳಿಗೆ ಅನುಮೋದನೆ ನೀಡಲಾಗಿದೆ.

ಯೋಜನೆ

ಒಂದು ರಾಷ್ಟ್ರ-ಒಂದು ಅನಿಲ ಗ್ರಿಡ್

ಪ್ರಾರಂಭ ಜೂನ್, 2014

## ಒಂದು ರಾಷ್ಟ್ರ-ಒಂದು ವ್ಯವಸ್ಥೆಯ ವಿಸ್ತರಣೆ

ಉದ್ದೇಶ: ದೇಶದ ಪ್ರತಿ ಮನೆಗೆ ಎಲ್‌ಪಿಜಿ ಮತ್ತು ವಾಹನಗಳಿಗೆ ಸಿಎನ್‌ಜಿ ಒದಗಿಸುವುದು



## ಪ್ರಗತಿ

2014 ರ ಹಿಂದಿನ 27 ವರ್ಷಗಳಲ್ಲಿ, ದೇಶದಲ್ಲಿ 15 ಸಾವಿರ ಕಿಮೀ ಅನಿಲ ಪೈಪ್‌ಲೈನ್‌ಗಳನ್ನು ಹಾಕಲಾಗಿತ್ತು. 2021 ರ ಜನವರಿಯಲ್ಲಿ ಕೊಚ್ಚಿಯಿಂದ ಮಂಗಳೂರಿಗೆ 450 ಕಿಮೀ ಅನಿಲ ಪೈಪ್‌ಲೈನ್ ಕಾರ್ಯಾರಂಭ ಮಾಡಿದೆ. ಈ ಯೋಜನೆಯಡಿ 5 ವರ್ಷಗಳಲ್ಲಿ 16000 ಕಿ.ಮೀ ಅನಿಲ ಪೈಪ್ ಲೈನ್ ಹಾಕಬೇಕಿದೆ. ಪ್ರಧಾನ ಮಂತ್ರಿ ಊರ್ಜ ಗಂಗಾ ಯೋಜನೆಯಡಿ ಉತ್ತರ ಪ್ರದೇಶದ ಜಗದೀಶ್‌ಪುರದಿಂದ ಪಶ್ಚಿಮ ಬಂಗಾಳದ ಹಲ್ದಿಯಾಕ್ಕೆ ಸಂಪರ್ಕ ಕಲ್ಪಿಸುವ 2500 ಕಿ.ಮೀ ಉದ್ದದ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ. ಈ ಯೋಜನೆಯಡಿ ಕಳೆದ ವರ್ಷ ದೋಭಿ-ದುರ್ಗಾಪುರ ಪೈಪ್‌ಲೈನ್‌ನ 350 ಕಿ.ಮೀ ಉದ್ದದ ಪೈಪ್‌ಲೈನ್ ಅನ್ನು ಪ್ರಧಾನಿಯವರು ದೇಶಕ್ಕೆ ಸಮರ್ಪಿಸಿದ್ದಾರೆ.

ಯೋಜನೆ

ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮ

ಪ್ರಾರಂಭ 10 ಜನವರಿ 2019

## ಶುದ್ಧ ಗಾಳಿಯನ್ನು ಉತ್ತೇಜಿಸುವುದು

ಉದ್ದೇಶ: 2024 ರ ವೇಳೆಗೆ 132 ನಗರಗಳಲ್ಲಿ ಗಾಳಿಯಲ್ಲಿರುವ ಹಾನಿಕಾರಕ ಕಣಗಳ ಪ್ರಮಾಣವನ್ನು 20 ರಿಂದ 30 ಪ್ರತಿಶತದಷ್ಟು ಕಡಿಮೆ ಮಾಡುವುದು.

ಪ್ರಗತಿ

- ಯೋಜನೆಯು ಪ್ರಾರಂಭದಲ್ಲಿ 102 ನಗರಗಳನ್ನು ಒಳಗೊಂಡಿತ್ತು. ನಂತರ ಇನ್ನೂ 30 ನಗರಗಳನ್ನು ಸೇರಿಸಲಾಯಿತು.
- ದೇಶದ 29 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರದೇಶಗಳಲ್ಲಿ 303 ನಗರಗಳು / ಪಟ್ಟಣಗಳನ್ನು ಒಳಗೊಂಡಿರುವ ಈ ಕಾರ್ಯಕ್ರಮದ ಅಡಿಯಲ್ಲಿ 818 ಮಾನವ ಕಾರ್ಯಾಚರಣೆಯ ಕೇಂದ್ರಗಳಿವೆ.
- ಇದರ ಜೊತೆಗೆ, 57 ನಗರಗಳಲ್ಲಿ 86 ನೈಜ-ಸಮಯದ ನಿರಂತರ ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳಿವೆ. ದೆಹಲಿಯಲ್ಲಿ ಇಂತಹ 18 ಕೆಂದ್ರಗಳಿದ್ದು, 20 ಕೇಂದ್ರಗಳು ಸ್ಥಾಪನೆ ಹಂತದಲ್ಲಿವೆ. ದೇಶಾದ್ಯಂತ ಇಂತಹ 309 ಕೇಂದ್ರಗಳಿವೆ.
- ದೆಹಲಿ ಎನ್ ಸಿ ಆರ್ ಗಾಗಿ ಗ್ರೇಡೆಡ್ ರೆಸ್ಪಾನ್ಸ್ ಆಕ್ಷನ್ ಪ್ಲಾನ್ ಅನ್ನು ಪ್ರಾರಂಭಿಸಲಾಗಿದೆ.
- ಉತ್ತಮ ಗಾಳಿಯ ಗುಣಮಟ್ಟವನ್ನು ತೋರಿಸುವ ನಗರಗಳ ಸಂಖ್ಯೆ 2019 ರಲ್ಲಿದ್ದ 86 ರಿಂದ 2020 ರಲ್ಲಿ 96 ಕ್ಕೆ ಏರಿದೆ.
- ವಾಹನ ಮಾಲಿನ್ಯವನ್ನು ಕಡಿಮೆ ಮಾಡಲು, ಭಾರತವು BS-VI ಇಂಧನ ಗುಣಮಟ್ಟವನ್ನು ನೇರವಾಗಿ BS-IV ನಂತರ ಅಳವಡಿಸಿಕೊಂಡಿದೆ.

ಯೋಜನೆ

ಪ್ರಾರಂಭ ಅಕ್ಟೋಬರ್ 2, 2014

ಸ್ವಚ್ಛ ಭಾರತ್ ಮಿಷನ್-ನಗರ

## ಏಕ-ಬಳಕೆಯ ಪ್ಲಾಸ್ಟಿಕ್‌ನ ಸಂಪೂರ್ಣ ನಿರ್ಮೂಲನೆಯನ್ನು ಗಮನದಲ್ಲಿಟ್ಟುಕೊಂಡು ನಗರಗಳಲ್ಲಿ ಹೆಚ್ಚಿನ ಸ್ವಚ್ಛತಾ ಅಭಿಯಾನ

ಉದ್ದೇಶ: ನಗರಗಳಲ್ಲಿ ಸಾರ್ವತ್ರಿಕ ನೈರ್ಮಲ್ಯವನ್ನು ಸಾಧಿಸುವುದು

## ಪ್ರಗತಿ

6.21 ಲಕ್ಷ ಸಮುದಾಯ ಮತ್ತು ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ನಗರ ಘನತ್ಯಾಜ್ಯ ನಿರ್ವಹಣೆಗಾಗಿ 89,650 ವಾರ್ಡ್‌ಗಳ ಪೈಕಿ 87,095 ವಾರ್ಡ್‌ಗಳಲ್ಲಿ ಶೇ.100ರಷ್ಟು ಮನೆ ಮನೆಗೆ ತೆರಳಿ ಸಂಗ್ರಹಣೆ ಮಾಡಲಾಗುತ್ತಿದೆ. ಯೋಜನೆ ಆರಂಭವಾದಾಗ ತ್ಯಾಜ್ಯ ಸಂಸ್ಕರಣಾ ಸಾಮರ್ಥ್ಯ ಶೇ.20 ರಷ್ಟಿದ್ದು, ಈಗ ಶೇ.72ಕ್ಕೆ ಏರಿಕೆಯಾಗಿದೆ. ಸ್ವಚ್ಛ ಭಾರತ್ ಮಿಷನ್ ನಗರ 2.0 ಅನ್ನು 2ನೇ ಅಕ್ಟೋಬರ್ 2021 ರಂದು "ಕಸ ಮುಕ್ತ ನಗರಗಳ" ಸಮಗ್ರ ದೃಷ್ಟಿಯೊಂದಿಗೆ ಪ್ರಾರಂಭಿಸಲಾಗಿದೆ. 5 ವರ್ಷಗಳ ಎರಡನೇ ಹಂತದಲ್ಲಿ, ಏಕ-ಬಳಕೆಯ ಪ್ಲಾಸ್ಟಿಕ್‌ಗಳನ್ನು ನಿಗ್ರಹಿಸಲು ಮತ್ತು ಮಲ ತ್ಯಾಜ್ಯ ಮತ್ತು ತ್ಯಾಜ್ಯ ನೀರಿನ ನಿರ್ವಹಣೆಯೊಂದಿಗೆ ನಿರ್ಮಾಣ ತ್ಯಾಜ್ಯದ ಪರಿಣಾಮಕಾರಿ ನಿರ್ವಹಣೆಗೆ ಒತ್ತು ನೀಡಲಾಗಿದೆ.

ಇದುವರೆಗೆ **62.65** ಲಕ್ಷ ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಿಸಲಾಗಿದೆ



# ನವ ಭಾರತವು ಮಹಿಳಾ ಸಬಲೀಕರಣದ ಮೇಲೆ ಗಮನ ಕೇಂದ್ರೀಕರಿಸಿದೆ

ಕಾನೂನುಗಳ ಬದಲಾವಣೆಗಳು ಮತ್ತು ಹೊಸ ಉಪಕ್ರಮಗಳ ಮೂಲಕ, ಸರ್ಕಾರವು ಮಹಿಳೆಯರು ಪುರುಷರೊಂದಿಗೆ ಸಮಾನವಾಗಿ ನಡೆಯಲು ಮತ್ತು ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಪ್ರದರ್ಶಿಸುವ ವಾತಾವರಣವನ್ನು ಸೃಷ್ಟಿಸಿದೆ. ಭಾರತೀಯ ವಾಯುಪಡೆಯಲ್ಲಿ ಫೈಟರ್ ಪೈಲಟ್‌ಗಳು, ಕಮಾಂಡೋಗಳು ಅಥವಾ ಕೇಂದ್ರ ಪೊಲೀಸ್ ಪಡೆಗಳ ನೇಮಕಾತಿ ಅಥವಾ ಸೈನಿಕ ಶಾಲೆಗಳಿಗೆ ಹೆಣ್ಣುಮಕ್ಕಳ ಪ್ರವೇಶದಂತಹ ಸಾಂಪ್ರದಾಯಿಕವಲ್ಲದ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗಾಗಿ ಅವಕಾಶಗಳನ್ನು ಕಲ್ಪಿಸುವ ಮೂಲಕ, ಮಹಿಳೆಯರು ಎಲ್ಲೆಡೆ ಇದ್ದಾರೆ. ಮುದ್ರಾ ಯೋಜನೆಯಲ್ಲಿ ಮಹಿಳೆಯರಲ್ಲಿ ಉದ್ಯಮಶೀಲತೆ ಹೆಚ್ಚಿಸಲು ಅವಕಾಶವಿದೆ. ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣವನ್ನು ಖಾತ್ರಿಪಡಿಸುವ ಉದ್ದೇಶದಿಂದ ಸರ್ಕಾರವು "ಮಿಷನ್ ಶಕ್ತಿ" ಎಂಬ ಸಮೂಹ ಕಾರ್ಯಕ್ರಮವನ್ನು ಸೃಷ್ಟಿಸಿದೆ. ಮಹಿಳೆಯರ ಬಗ್ಗೆ ಕೇಂದ್ರ ಸರ್ಕಾರದ ಉಪಕ್ರಮಗಳು, ಪ್ರತಿ ಬಿಕ್ಕಟ್ಟಿನಲ್ಲಿ ಅವರನ್ನು ಬೆಂಬಲಿಸುವ ಯೋಜನೆಗಳು ಮತ್ತು ಜೀವನವನ್ನು ಸುಲಭಗೊಳಿಸುವ ಯೋಜನೆಗಳು, ಮಹಿಳೆಯರ ಬಗ್ಗೆ ಸರ್ಕಾರದ ಅರ್ಥಪೂರ್ಣ ಮತ್ತು ಸಮರ್ಪಿತ ಚಿಂತನೆಯನ್ನು ತೋರಿಸುತ್ತವೆ.

# ಸೈನ್ಯದಲ್ಲಿ ಮಹಿಳೆಯರ ಭಾಗವಹಿಸುವಿಕೆ;
# ಸೈನಿಕ ಶಾಲೆಗಳಿಗೆ ಮುಕ್ತ ಪ್ರವೇಶ ಯೋಜನೆ

ಯೋಜನೆ

**ಸೈನಿಕ ಶಾಲೆಗಳಿಗೆ ಹೆಣ್ಣುಮಕ್ಕಳ ಪ್ರವೇಶ**

**ಆರಂಭದ ವರ್ಷ 2021-2022**

### ಸೈನಿಕ್ ಶಾಲೆಗಳು ಈಗ ಬಾಲಕಿಯರ ಪ್ರವೇಶಕ್ಕಾಗಿ ತೆರೆದಿವೆ

ಉದ್ದೇಶ: ಸೇನೆಯಲ್ಲಿ ಮಹಿಳೆಯರಿಗೆ ಅವಕಾಶಗಳನ್ನು ಒದಗಿಸುವುದು

ಪ್ರಗತಿ

- ಸೈನಿಕ್ ಸ್ಕೂಲ್ ಸೊಸೈಟಿ ನೀತಿಯ ಪ್ರಕಾರ 2018-2019ರಲ್ಲಿ ಚಿಂಗ್‌ಚಿಪ್ ಸೈನಿಕ್ ಶಾಲೆಯು ಮೊದಲ ಬಾರಿಗೆ ಬಾಲಕಿಯರ ಕೆಡೆಟ್‌ಗಳನ್ನು ಪೈಲಟ್ ಪ್ರಾಜೆಕ್ಟ್ ಆಗಿ ಪ್ರವೇಶ ನೀಡಿತು. ಇದರ ಯಶಸ್ಸಿನ ನಂತರ ಎಲ್ಲಾ ಸೈನಿಕ್ ಶಾಲೆಗಳಲ್ಲಿ 6 ನೇ ತರಗತಿ ಖಾಲಿ ಹುದ್ದೆಗಳಲ್ಲಿ 10 ಪ್ರತಿಶತವನ್ನು ಹೆಣ್ಣು ಮಕ್ಕಳಿಗಾಗಿ ಮೀಸಲಿರಿಸಲಾಗಿದೆ.
- 2021-2022ರ ಶೈಕ್ಷಣಿಕ ವರ್ಷದಲ್ಲಿ 33 ಸೈನಿಕ ಶಾಲೆಗಳಲ್ಲಿ 320 ವಿದ್ಯಾರ್ಥಿನಿಯರು VI ನೇ ತರಗತಿಗೆ ಪ್ರವೇಶ ಪಡೆದಿದ್ದಾರೆ. 2022-2023ರ ಶೈಕ್ಷಣಿಕ ಅವಧಿಗೆ, 335 ಸೀಟುಗಳು ಬಾಲಕಿಯರಿಗಾಗಿ ಲಭ್ಯವಿದೆ.
- ಅದೇ ರೀತಿ, ನವೆಂಬರ್ 2021 ರಲ್ಲಿ ಎನ್ ಡಿ ಎ 2022 ಕ್ಕೆ ನಡೆದ ಪರೀಕ್ಷೆಯಲ್ಲಿ 1, 16,891 ಹೆಣ್ಣು ಮಕ್ಕಳು ಹಾಜರಾಗಿದ್ದರು. ಈ ತಂಡದ ನೇಮಕಾತಿಗಾಗಿ ಆಯ್ಕೆ ಪ್ರಕ್ರಿಯೆಯು ಇನ್ನೂ ನಡೆಯುತ್ತಿದೆ.

- ಆರಂಭದಲ್ಲಿ ಸಿಆರ್‌ಪಿಎಫ್ ಮತ್ತು ಸಿಐಎಸ್‌ಎಫ್‌ನಲ್ಲಿ ಕಾನ್ಸ್‌ಟೇಬಲ್ ಮಟ್ಟದಲ್ಲಿ 33 ಪ್ರತಿಶತ ಮತ್ತು ಗಡಿ ಕಾವಲು ಪಡೆಗಳಲ್ಲಿ-ಬಿಎಸ್‌ಎಫ್, ಎಸ್‌ಎಸ್‌ಬಿ ಮತ್ತು ಐಟಿಬಿಪಿ-14-15 ಪ್ರತಿಶತ ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಲಾಗುವುದು ಎಂದು ಸರ್ಕಾರ ನಿರ್ಧರಿಸಿದೆ. ಪ್ರಸ್ತುತ, ಸಿಐಎಸ್‌ಎಫ್‌ನಲ್ಲಿ 6.37 ಪ್ರತಿಶತ ಸೇರಿದಂತೆ ಎಲ್ಲಾ ಏಜೆನ್ಸಿಗಳಲ್ಲಿ ಕೇವಲ 3.68 ಪ್ರತಿಶತದಷ್ಟು ಹುದ್ದೆಗಳನ್ನು ಮಾತ್ರ ಮಹಿಳೆಯರು ಹೊಂದಿದ್ದಾರೆ.
- ದೆಹಲಿ ಪೊಲೀಸ್ ಸೇರಿದಂತೆ ಎಲ್ಲಾ ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಪಡೆಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸುವ ಸಲುವಾಗಿ, ಭಾರತ ಸರ್ಕಾರವು ಮಾರ್ಚ್ 20,2015.ರಂದು ಕಾನ್ಸ್‌ಟೆಬಲ್‌ನಿಂದ ಸಬ್-ಇನ್ಸ್‌ಪೆಕ್ಟರ್‌ವರೆಗಿನ ನಾನ್‌ಗೆಜೆಟೆಡ್ ಹುದ್ದೆಗಳ ನೇಮಕಾತಿಯಲ್ಲಿ ಮಹಿಳೆಯರಿಗೆ 33 ಪ್ರತಿಶತ ಮೀಸಲಾತಿಯನ್ನು ಅನುಮೋದಿಸಿದೆ.
- ಜನವರಿ 2020 ರಲ್ಲಿ ಬ್ಯೂರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೊಲೀಸರಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿ ಭಾಗವಹಿಸುವಿಕೆಯು ಶೇಕಡಾ 10.3 ರಷ್ಟಿದೆ, ಇದನ್ನು 33 ಪ್ರತಿಶತಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸಲಹೆ ನೀಡಿದೆ. ಪ್ರತಿ ಪೊಲೀಸ್ ಠಾಣೆಯಲ್ಲಿ 3 ಮಹಿಳಾ ಸಬ್‌ಇನ್ಸ್‌ಪೆಕ್ಟರ್‌ಗಳು ಮತ್ತು 10 ಕಾನ್ಸ್‌ಟೆಬಲ್‌ಗಳನ್ನು ಹೊಂದಿರಬೇಕು. ಇದರಿಂದ ಮಹಿಳಾ ಸಹಾಯ ಕೇಂದ್ರವು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ.
- ರಕ್ಷಣಾ ಪಡೆಗಳಲ್ಲಿ ನಿಜವಾಗಿಯೂ 10,493 ಮಹಿಳಾ ಅಧಿಕಾರಿಗಳು ಇದ್ದಾರೆ, ಇದರಲ್ಲಿ 4734 ಸೇನಾ ನರ್ಸಿಂಗ್ ಸೇವೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 2021 ರಲ್ಲಿ ಭಾರತೀಯ ಸೇನೆಯಲ್ಲಿ 60 ಮಹಿಳಾ ಅಭ್ಯರ್ಥಿಗಳನ್ನು ಅಧಿಕಾರಿಗಳನ್ನಾಗಿ ನೇಮಿಸಲಾಯಿತು. 2018 ಮತ್ತು 2021 ರ ನಡುವಿನ ಅವಧಿಯಲ್ಲಿ, 170 ಮಹಿಳಾ ಅಭ್ಯರ್ಥಿಗಳನ್ನು ನೌಕಾಪಡೆಯಲ್ಲಿ ಅಧಿಕಾರಿಗಳಾಗಿ ನೇಮಿಸಿಕೊಳ್ಳಲಾಗಿದೆ.
- ಭಾರತೀಯ ವಾಯುಪಡೆಯು ಮಾರ್ಚ್ 28, 2022 ರವರೆಗೆ 15 ಮಹಿಳಾ ಫೈಟರ್ ಪೈಲಟ್‌ಗಳನ್ನು ನಿಯೋಜಿಸಿದೆ ಮತ್ತು ಮಹಿಳಾ ಅಧಿಕಾರಿಗಳನ್ನು ಈಗ ಎಲ್ಲಾ ಯುದ್ಧ ಪಾತ್ರಗಳಿಗೆ ಸೇರಿಸಿಕೊಳ್ಳಲಾಗುತ್ತಿದೆ. ಅದೇ ರೀತಿ ನೌಕಾಪಡೆಯ ಹಡಗುಗಳಲ್ಲಿ 28 ಮಹಿಳಾ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ನೌಕಾ ವಿಮಾನ ಮತ್ತು ಹೆಲಿಕಾಪ್ಟರ್ ಸಾಗಿಸಬಹುದಾದ ಹಡಗುಗಳಲ್ಲಿ ಮಹಿಳಾ ಅಧಿಕಾರಿಗಳನ್ನು ಯುದ್ಧ ಪಾತ್ರಗಳಲ್ಲಿ ನಿಯೋಜಿಸಲಾಗಿದೆ.
- ಭಾರತೀಯ ಸೇನೆಯ ಮಿಲಿಟರಿ ಪೊಲೀಸ್ ಕೋರ್‌ನಲ್ಲಿ ಇತರ ಶ್ರೇಣಿಗಳಿಗೆ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ಅವಕಾಶವನ್ನು 2019 ರಲ್ಲಿ ಪರಿಚಯಿಸಲಾಯಿತು. ಈ ಯೋಜನೆಯ ಅಡಿಯಲ್ಲಿ, ಹಂತ ಹಂತವಾಗಿ ವಾರ್ಷಿಕ ಆಧಾರದ ಮೇಲೆ ನೇಮಕಾತಿಯನ್ನು ಮಾಡಲಾಗುತ್ತದೆ. 2019-2020 ಖಾಲಿ ಹುದ್ದೆಗಳಿಗೆ ಒಟ್ಟು 100 ಜನರಿಗೆ ತರಬೇತಿ ನೀಡಲಾಗಿದೆ.






# ಈ ಯೋಜನೆಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನೆರವಾಗುತ್ತವೆ

**ಪ್ರಧಾನ ಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ)**

ಪ್ರಾರಂಭ ಏಪ್ರಿಲ್ 8, 2015

## ಈ ಯೋಜನೆಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನೆರವಾಗುತ್ತವೆ

**ಉದ್ದೇಶ:** ಉದ್ಯಮಶೀಲತೆ ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ಮುದ್ರಾ ಯೋಜನೆಯಲ್ಲಿ ಮಹಿಳೆಯರ ಬಲವಾದ ಭಾಗವಹಿಸುವಿಕೆಯನ್ನು ತರುವುದು.

- ವ್ಯಕ್ತಿಗಳು, ಸೂಕ್ಷ್ಮ ಮತ್ತು ಸಣ್ಣ ವ್ಯಾಪಾರಗಳು ಮತ್ತು ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳು ಶಿಶು ವಿಭಾಗದಲ್ಲಿ 50 ಸಾವಿರ ರೂಪಾಯಿಗಳವರೆಗೆ, ಕಿಶೋರ ವರ್ಗದಲ್ಲಿ 50 ಸಾವಿರ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳವರೆಗೆ ಮತ್ತು ಯುವ ವರ್ಗದಲ್ಲಿ 5 ಲಕ್ಷ ರೂಪಾಯಿಗಳವರೆಗೆ ಉತ್ಪಾದನೆ, ವ್ಯಾಪಾರ ಅಥವಾ ಸೇವೆಯ ಕ್ಷೇತ್ರದಲ್ಲಿ ಆದಾಯ ತರುವ ಚಟುವಟಿಕೆಗಾಗಿ ಸಾಲ ಪಡೆಯಬಹುದು.
- ಯೋಜನೆಯ ಪ್ರಾಥಮಿಕ ಫಲಾನುಭವಿಗಳು 5 ಲಕ್ಷದಿಂದ 10 ಲಕ್ಷ ರೂ.ವರೆಗಿನ ಸಾಲವನ್ನು ಪಡೆಯುವ ಮಹಿಳೆಯರಾಗಿರುತ್ತಾರೆ. ಮಾರ್ಚ್ 18, 2022 ರವರೆಗೆ 18.52 ಲಕ್ಷ ಕೋಟಿ ರೂ.ಮೌಲ್ಯದ 34.28 ಕೋಟಿ ಸಾಲಗಳನ್ನು ಯೋಜನೆಯಡಿ ವಿತರಿಸಲಾಗಿದೆ, 8.10 ಲಕ್ಷ ಕೋಟಿ ರೂ. ಮೌಲ್ಯದ 23.27 ಕೋಟಿಗಿಂತ ಹೆಚ್ಚು ಸಾಲಗಳು ಅಥವಾ ಸರಿಸುಮಾರು 68 ಪ್ರತಿಶತ ಮಹಿಳೆಯರಿಗೆ ನೀಡಲಾಗಿದೆ. ಯೋಜನೆಯ ಪರಿಣಾಮದ ಕುರಿತ ರಾಷ್ಟ್ರೀಯ ಸಮೀಕ್ಷೆಯ ಪ್ರಕಾರ, ಇದು 2015 ಮತ್ತು 2018 ರ ನಡುವೆ

**1.12** ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡಿದೆ, ಇದರಲ್ಲಿ 68.92 ಲಕ್ಷ (ಶೇ.62) ಮಹಿಳೆಯರು ನೇಮಕಗೊಂಡಿದ್ದಾರೆ.

**ಮಹಿಳಾ ಉದ್ಯಮಿಗಳ ಆರ್ಥಿಕ ಸಬಲೀಕರಣ ಮತ್ತು ಮಹಿಳೆಯರಿಂದ ಸ್ಟಾರ್ಟ್‌ಅಪ್‌ಗಳು (ಡಬ್ಲ್ಯುಇಇ)**

ಪ್ರಾರಂಭ ಆಗಸ್ಟ್, 2018

## ಮಹಿಳಾ ಉದ್ಯಮಿಗಳಿಗೆ ಪರಿಸರ ವ್ಯವಸ್ಥೆಯು ಸುಧಾರಿಸುತ್ತಿದೆ.

**ಉದ್ದೇಶ:** ಮಹಿಳಾ ಸೂಕ್ಷ್ಮ ಉದ್ಯಮಗಳಿಗೆ ಪೋಷಣೆ ಮತ್ತು ಬೆಳವಣಿಗೆಯ ಕಾರ್ಯಕ್ರಮಗಳನ್ನು ಒದಗಿಸುವುದು. ಇದರಿಂದ ಅವರು ಹೊಸ ವ್ಯವಹಾರಗಳನ್ನು ಪ್ರಾರಂಭಿಸಬಹುದು.

- ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯವು ಮಹಿಳೆಯರ ನೇತೃತ್ವದ ವ್ಯವಹಾರಗಳ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ಜರ್ಮನ್ ಸರ್ಕಾರದ ಸಹಯೋಗದೊಂದಿಗೆ "ಮಹಿಳಾ ಉದ್ಯಮಿಗಳ ಆರ್ಥಿಕ ಸಬಲೀಕರಣ ಮತ್ತು ಮಹಿಳೆಯರಿಂದ ಸ್ಟಾರ್ಟ್‌ಅಪ್‌ಗಳನ್ನು" ಕೈಗೊಳ್ಳುತ್ತಿದೆ.
- ಮಹಾರಾಷ್ಟ್ರ, ರಾಜಸ್ಥಾನ, ತೆಲಂಗಾಣ, ಉತ್ತರ ಪ್ರದೇಶ ಮತ್ತು ಇತರ ಎಂಟು ಈಶಾನ್ಯ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ವ್ಯವಹಾರಗಳನ್ನು ಕಾರ್ಯಕ್ರಮದ ಮೂಲಕ ಉತ್ತೇಜಿಸಲಾಗುತ್ತಿದೆ.
- ಈ 5.9 ಮಿಲಿಯನ್ ಯುರೋ ಬಜೆಟ್ ಕಾರ್ಯಕ್ರಮವು ಇಲ್ಲಿಯವರೆಗೆ 725 ಮಹಿಳಾ ವ್ಯವಹಾರಗಳಿಗೆ ಸಹಾಯ ಮಾಡಿದೆ. ಕಾರ್ಯಕ್ರಮವು ಆಗಸ್ಟ್ 2018 ರಲ್ಲಿ ಪ್ರಾರಂಭವಾಯಿತು ಮತ್ತು ಜನವರಿ 2023 ರಲ್ಲಿ ಕೊನೆಗೊಳ್ಳುತ್ತದೆ.
- ಮಹಿಳಾ ಉದ್ಯಮಶೀಲತೆಯನ್ನು ಬೆಂಬಲಿಸಲು ಮತ್ತು ಮಹಿಳಾ ಉದ್ಯಮಿಗಳಿಗೆ ಪರಿಸರ ವ್ಯವಸ್ಥೆಯನ್ನು ಸುಧಾರಿಸಲು ನೀತಿ ರಚನೆ, ಸಂಶೋಧನೆ ಮತ್ತು ಇತರ ವಿಧಾನಗಳನ್ನು ಬಳಸಲಾಗುತ್ತಿದೆ.

**2.50**
ಕೋಟಿಗೂ ಹೆಚ್ಚು ಸುಕನ್ಯಾ ಸಮೃದ್ಧಿ ಖಾತೆಗಳನ್ನು ಇದುವರೆಗೆ ತೆರೆಯಲಾಗಿದೆ

ನಿಧಿಯ ಶೇ.10 ರಷ್ಟನ್ನು ಅಂದರೆ, ಭಾರತ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ ನಿರ್ವಹಿಸುವ ನಿಧಿಯಲ್ಲಿ ರೂ 1000 ಕೋಟಿಯನ್ನು ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್‌ಗಳಿಗಾಗಿ ಕಾಯ್ದಿರಿಸಲಾಗಿದೆ.

ಮಹಿಳಾ ಸಾಮರ್ಥ್ಯ ಅಭಿವೃದ್ಧಿ ಉಪಕ್ರಮವು ಮಹಿಳಾ-ನೇತೃತ್ವದ ಉದ್ಯಮಗಳಿಗೆ ಸಾಮರ್ಥ್ಯ-ನಿರ್ಮಾಣ ಕಾರ್ಯಕ್ರಮವಾಗಿದ್ದು ಅದು ಮಹತ್ವಾಕಾಂಕ್ಷಿ ಮತ್ತು ಸ್ಥಾಪಿತ ಮಹಿಳಾ ಉದ್ಯಮಿಗಳ ಯಶಸ್ಸಿಗೆ ಸಹಾಯ ಮಾಡುತ್ತದೆ.

ಡಿಸೆಂಬರ್ 8, 2021 ರವರೆಗೆ, 60,000 ಮಾನ್ಯತೆ ಪಡೆದ ವ್ಯಾಪಾರಗಳಲ್ಲಿ 46 ಪ್ರತಿಶತ ಅಥವಾ 27,665 ಸ್ಟಾರ್ಟ್‌ಅಪ್‌ಗಳು ಕನಿಷ್ಠ ಒಬ್ಬ ಮಹಿಳಾ ನಿರ್ದೇಶಕರನ್ನು ಹೊಂದಿದ್ದವು.

ಏಪ್ರಿಲ್ 5, 2016 ರಂದು ಪ್ರಾರಂಭವಾದ ಸ್ಟ್ಯಾಂಡಪ್ ಇಂಡಿಯಾ ಕಾರ್ಯಕ್ರಮವನ್ನು 2025 ರ ವರೆಗೆ ವಿಸ್ತರಿಸಲಾಗಿದೆ. ಇದರ ಅಡಿಯಲ್ಲಿ, ಬ್ಯಾಂಕ್‌ನ ಪ್ರತಿಯೊಂದು ಶಾಖೆಯು ಕನಿಷ್ಠ ಒಬ್ಬ ಎಸ್ ಸಿ ಅಥವಾ ಎಸ್ ಟಿ ವ್ಯಕ್ತಿಗೆ ಮತ್ತು ಒಬ್ಬ ಮಹಿಳೆಗೆ 10 ಲಕ್ಷದಿಂದ 1 ಕೋಟಿ ರೂ.ವರೆಗಿನ ಸಾಲವನ್ನು ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಸಮುದಾಯದ ಸಹಭಾಗಿತ್ವದ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸಲು ಮಹಿಳಾ ಶಕ್ತಿ ಕೇಂದ್ರಗಳು ನವೆಂಬರ್, 2017 ರಿಂದ ಚಾಲನೆಯಲ್ಲಿವೆ.

**ಯೋಜನೆ**

## ಬೇಟಿ ಬಚಾವೋ, ಬೇಟಿ ಪಢಾವೋ

**ಪ್ರಾರಂಭ** ಜನವರಿ 22, 2015

### ಲಿಂಗಾನುಪಾತ ಸುಧಾರಿಸುತ್ತದೆ, ಹೆಣ್ಣು ಮಕ್ಕಳು ನಮ್ಮ ಹೆಮ್ಮೆಯಾಗುತ್ತಾರೆ

**ಉದ್ದೇಶ:** ಲಿಂಗಾನುಪಾತಗಳು ಕಡಿಮೆಯಾಗುತ್ತಿರುವ ಸಮಸ್ಯೆಯನ್ನು ಬಗೆಹರಿಸುವುದು ಮತ್ತು ಉನ್ನತ ಶಿಕ್ಷಣವನ್ನು ಮುಂದುವರಿಸಲು ಮಹಿಳೆಯರನ್ನು ಪ್ರೋತ್ಸಾಹಿಸುವ ವಾತಾವರಣವನ್ನು ಸೃಷ್ಟಿಸುವುದು.

**ಪ್ರಗತಿ**

- ಮಕ್ಕಳ ಲಿಂಗ ಅನುಪಾತವು ದಶಕಕ್ಕೊಮ್ಮೆ ಜನಗಣತಿಯ ಸಮಯದಲ್ಲಿ ಪತ್ತೆಯಾಗುವ ಪ್ರಕ್ರಿಯೆಯಾಗಿದೆ. ಈ ಕಾರಣಕ್ಕಾಗಿಯೇ ಜನನದ ಲಿಂಗ ಅನುಪಾತವನ್ನು ಅನುಸರಿಸಲಾಗುತ್ತಿದೆ.
- ಆರೋಗ್ಯ ಸಚಿವಾಲಯದ ಪ್ರಕಾರ, ಜನನದ ರಾಷ್ಟ್ರೀಯ ಲಿಂಗ ಅನುಪಾತವು 2014-2015 ರಲ್ಲಿ 918 ರಷ್ಟಿತ್ತು ಮತ್ತು ಇದು 2019-2020 ರಲ್ಲಿ 934 ಕ್ಕೆ ಏರಿದೆ.
- ಮಕ್ಕಳ ಲಿಂಗ ಅನುಪಾತಗಳು ಮತ್ತು ಜೀವನ ಚಕ್ರದ ನಿರಂತರತೆಯನ್ನು ಕಡಿಮೆ ಮಾಡುವಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಜಾರಿಗೆ ತಂದ ಕಾರ್ಯತಂತ್ರದ ಪರಿಣಾಮವನ್ನು ಹಲವಾರು ರಾಜ್ಯಗಳಲ್ಲಿ ಪತ್ತೆ ಮಾಡಲಾಗಿದೆ, ಇದನ್ನು ಕಾರ್ಯಪಡೆಯು ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣೆ ನಡೆಸುತ್ತಿದೆ.

**ಯೋಜನೆ**

## ಮಹಿಳಾ ತಂತ್ರಜ್ಞಾನ ಪಾರ್ಕ್ (ಡಬ್ಲ್ಯು ಟಿ ಪಿ)

### ಡಬ್ಲ್ಯು ಟಿ ಪಿ ಉದ್ಯಮಶೀಲತೆಯ ದುರ್ಬಲ ಅಂಶವನ್ನು ಬಲಪಡಿಸುತ್ತದೆ

**ಉದ್ದೇಶ:** ನಿರ್ದಿಷ್ಟ ಪ್ರದೇಶದಲ್ಲಿ ಮಹಿಳಾ ಉದ್ಯಮಶೀಲತೆ ಮತ್ತು ಉದ್ಯೋಗವನ್ನು ಉತ್ತೇಜಿಸಲು ಮಹಿಳಾ-ಆಧಾರಿತ ಜೀವನೋಪಾಯ ವ್ಯವಸ್ಥೆಯಲ್ಲಿ ದುರ್ಬಲ ಅಂಶವನ್ನು ಸುಧಾರಿಸುವುದು.

**ಪ್ರಗತಿ**

ಸ್ಥಳೀಯ ಮಟ್ಟದಲ್ಲಿ ಸ್ವಾವಲಂಬನೆಗಾಗಿ, ಕೌಶಲ್ಯ ಅಭಿವೃದ್ಧಿ ಮತ್ತು ಸಾಮರ್ಥ್ಯ ವೃದ್ಧಿಯನ್ನು ನೀಡಲು ಉತ್ತಮ ಅಭ್ಯಾಸಗಳನ್ನು ಬಳಸಲಾಗುತ್ತದೆ. ಈ ಪಾರ್ಕ್‌ಗಳಲ್ಲಿ ಸಿಎಡಿ ಬಳಸಿ ಡಿಜಿಟಲ್ ಆರ್ಟ್ ಮೇಕಿಂಗ್ ಮತ್ತು ಕ್ರಾಫ್ಟ್ ಡಿಸೈನಿಂಗ್, ಕೃಷಿ ತ್ಯಾಜ್ಯದಿಂದ ಇಂಧನ ತಯಾರಿಕೆ, ಕೃಷಿ ಕಂಪ್ಯೂಟರೀಕೃತ ಕಸೂತಿ ಮತ್ತಿತರ ತರಬೇತಿ ನೀಡಲಾಗುತ್ತದೆ.

ಇದುವರೆಗೆ ದೇಶಾದ್ಯಂತ 13 ತಾಂತ್ರಿಕ ಪಾರ್ಕ್ ಗಳನ್ನು ಸ್ಥಾಪಿಸಲಾಗಿದೆ, ಇನ್ನೂ ಹೆಚ್ಚಿನ ಪಾರ್ಕ್ ಗಳನ್ನು ಸ್ಥಾಪಿಸಲಾಗುತ್ತಿದೆ.

ಯೋಜನೆ

**ಮಿಷನ್ ಶಕ್ತಿ: ಸಮಗ್ರ ಮಹಿಳಾ ಸಬಲೀಕರಣ ಕಾರ್ಯಕ್ರಮ**

ಆರಂಭ

15 ನೇ ಹಣಕಾಸು ಆಯೋಗದ ಅವಧಿ
2021-2022 ರಿಂದ 2025-2026 ರವರೆಗೆ

## ಯೋಜನೆಗಳು ಮಹಿಳೆಯರಿಗೆ ತಲುಪುವುದನ್ನು ಕೊನೆಯ ಮೈಲಿಯವರೆಗೂ ನಿಗಾ ಇಡುವುದು

ಪ್ರಗತಿ

**ಉದ್ದೇಶ:** ಮಹಿಳೆಯರ ಸುರಕ್ಷತೆ, ಭದ್ರತೆ ಮತ್ತು ಸಬಲೀಕರಣಕ್ಕಾಗಿ ಉಪಕ್ರಮಗಳನ್ನು ಬಲಪಡಿಸುವುದು.

- ಮಹಿಳೆಯರ ಜೀವನ ಚಕ್ರದ ನಿರಂತರತೆಯ ಮೇಲೆ ಪರಿಣಾಮ ಬೀರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಅವರನ್ನು ಸಚಿವಾಲಯ, ಇಲಾಖೆ ಮತ್ತು ಆಡಳಿತದ ವಿವಿಧ ಹಂತಗಳಲ್ಲಿ ಹೆಚ್ಚಿನ ಸಾರ್ವಜನಿಕ ಸಹಭಾಗಿತ್ವ, ಪಂಚಾಯತ್‌ಗಳು ಮತ್ತು ಸ್ಥಳೀಯ ಆಡಳಿತದ ಸಹಾಯದಿಂದ ಮಹಿಳಾ ನೇತೃತ್ವದ ಅಭಿವೃದ್ಧಿಯ ಮೂಲಕ ಸರ್ಕಾರದ ದೃಷ್ಟಿಯನ್ನು ಮುಂದಕ್ಕೆ ಕೊಂಡೊಯ್ಯುವ ಶಕ್ತಿ ಒಂದು ಸಮೂಹ ಯೋಜನೆ ಪ್ರಾರಂಭಿಸಲಾಗಿದೆ
- ಮಿಷನ್ ಸಂಬಾಲ್ ಮತ್ತು ಸಾಮರ್ಥ್ಯ ಶಕ್ತಿಯ ಎರಡು ಉಪ ಯೋಜನೆಗಳಾಗಿವೆ. ಮಹಿಳೆಯರ ರಕ್ಷಣೆ ಮತ್ತು ಭದ್ರತೆಗಾಗಿ ಒನ್ ಸ್ಟಾಪ್ ಸೆಂಟರ್, ಮಹಿಳಾ ಸಹಾಯವಾಣಿ, ಬೇಟಿ ಬಚಾವೋ, ಬೇಟಿ ಪಢಾವೋ ಮತ್ತು ನಾರಿ ಅದಾಲತ್ ಕಾರ್ಯಕ್ರಮಗಳನ್ನು ಸಂಬಾಲ್‌ಗೆ ಸೇರಿಸಲಾಗಿದೆ. ಮಹಿಳಾ ಸಬಲೀಕರಣಕ್ಕಾಗಿ ಉಜ್ವಲ, ಸ್ವಾಧಾರ್, ಮತ್ತು ಸಕ್ಷಮ್‌ನಲ್ಲಿ ಉದ್ಯೋಗಿ ಮಹಿಳಾ ವಸತಿ ನಿಲಯದಂತಹ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ. 2021-2022ರ ಯೋಜನೆ ಅನುಷ್ಠಾನವನ್ನು 15ನೇ ಹಣಕಾಸು ಆಯೋಗವು ಅನುಮೋದಿಸಿದೆ.

# ಮಹಿಳೆಯರಿಗೆ ಜೀವನವನ್ನು ಸುಲಭಗೊಳಿಸಲು ಯೋಜನೆಗಳು

- ಮೇ 1, 2016 ರಂದು ಪ್ರಾರಂಭವಾದ ಉಜ್ವಲಾ 1.0 ಮತ್ತು ಉಜ್ವಲಾ 2.0 ನಲ್ಲಿ 9 ಕೋಟಿಗೂ ಹೆಚ್ಚು ಗ್ಯಾಸ್ ಸಂಪರ್ಕಗಳನ್ನು ನೀಡಲಾಗಿದೆ. ಅಡುಗೆಮನೆಯು ಹೊಗೆ ಮುಕ್ತವಾಯಿತು ಮತ್ತು ಮಹಿಳೆಯರ ಆರೋಗ್ಯದ ಮೇಲೆ ಉಂಟಾದ ಸಕಾರಾತ್ಮಕ ಪರಿಣಾಮಗಳು ಬಹಿರಂಗವಾದವು.
- 55 ವರ್ಷದ ಕಾನೂನನ್ನು ಬದಲಾಯಿಸುವ ಮೂಲಕ ಹೆರಿಗೆ ರಜೆಯನ್ನು 12 ವಾರಗಳಿಂದ 26 ವಾರಗಳಿಗೆ ಹೆಚ್ಚಿಸಲಾಗಿದೆ.
- ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ ಮಹಿಳಾ ಅರ್ಜಿದಾರರಿಗೆ ಆದ್ಯತೆಯನ್ನು ನಿಗದಿಪಡಿಸಲಾಗಿದೆ.
- ಸಖಿ-ಒನ್-ಸ್ಟಾಪ್ ಸೆಂಟರ್ ಏಪ್ರಿಲ್ 1, 2015 ರಂದು ಪ್ರಾರಂಭವಾಯಿತು. ಹಿಂಸಾಚಾರಕ್ಕೆ ಒಳಗಾದ ಮಹಿಳೆಯರಿಗೆ ಪೊಲೀಸ್ ಸೌಲಭ್ಯಗಳು, ಕಾನೂನು ನೆರವು ಮತ್ತು ಸಮಾಲೋಚನೆ ಹಾಗು ವೈದ್ಯಕೀಯ ನೆರವು ಒಂದೇ ಸೂರಿನಡಿ ಸುಲಭವಾಗಿ ದೊರೆಯುತ್ತವೆ. ದೇಶಾದ್ಯಂತ 729 ಜಿಲ್ಲೆಗಳಲ್ಲಿ 733 ಕೇಂದ್ರಗಳನ್ನು ಅನುಮೋದಿಸಲಾಗಿದೆ, ಅದರಲ್ಲಿ 704 ಕೇಂದ್ರಗಳು 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಲ್ಲಿ 4.93 ದಶಲಕ್ಷ ಮಹಿಳೆಯರಿಗೆ ನೆರವು ನೀಡಲಾಗಿದೆ.
- ಏಪ್ರಿಲ್ 1, 2016 ರಂದು ಪ್ರಾರಂಭವಾದ ಸ್ವಾಧಾರ್ ಗೃಹ ಯೋಜನೆಯು ಸಂಕಷ್ಟದಲ್ಲಿರುವ ಮಹಿಳೆಯರಿಗೆ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುತ್ತದೆ. ಕೇಂದ್ರ ಸರ್ಕಾರವು ಉತ್ತರ ಪ್ರದೇಶದ ವೃಂದಾವನದಲ್ಲಿ ಕೃಷ್ಣ ಕುಟೀರ ಗೃಹವನ್ನು ನಿರ್ಮಿಸಿದೆ. ಇದನ್ನು ಆಗಸ್ಟ್ 31, 2018 ರಂದು ಪ್ರಾರಂಭಿಸಲಾಯಿತು ಮತ್ತು ಇದು ದೇಶದಲ್ಲಿ ವಿಧವೆಯರಿಗಾಗಿ ಇರುವ ಅತಿದೊಡ್ಡ ಆಶ್ರಯ ತಾಣವಾಗಿದೆ. ಈ ಸ್ವಾಧಾರ್ ಗೃಹಗಳು ಶೇಕಡಾ 76 ರಷ್ಟು ಬಳಕೆಯನ್ನು ಹೊಂದಿವೆ.
- ಆಗಸ್ಟ್ 1, 2019 ರಂದು, ತ್ರಿವಳಿ ತಲಾಖ್ ಕುರಿತು ಕಾನೂನನ್ನು ಅಂಗೀಕರಿಸಲಾಯಿತು, ಇದು ಮುಸ್ಲಿಂ ಮಹಿಳೆಯರಲ್ಲಿ ಹಠಾತ್ ವಿಚ್ಛೇದನದ ಭಯವನ್ನು ಕೊನೆಗೊಳಿಸಿತು.



ಕೈಗಾರಿಕೆ-ವಾಣಿಜ್ಯ-ಆರ್ಥಿಕತೆ

# ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ

ಎಂಟು ವರ್ಷಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ, ಆರ್ಥಿಕತೆಯು ಅಸ್ತವ್ಯಸ್ತವಾಗಿತ್ತು. ಉದ್ಯಮದ ನಿಶ್ಚಲತೆ, ಹೂಡಿಕೆಯಲ್ಲಿ ಇಳಿಕೆ ಮತ್ತು ಕಾನೂನುಗಳ ಗೋಜಲು ಸೇರಿದಂತೆ ಹಲವಾರು ಸವಾಲುಗಳಿದ್ದವು. ಪ್ರಧಾನಿ ಮೋದಿಯವರು ಸುಧಾರಣಾ ಮಾರ್ಗವನ್ನು ಆರಿಸಿಕೊಂಡರು. ಇದಕ್ಕಾಗಿ, ಆರ್ಥಿಕತೆಯಲ್ಲಿ ಅಗತ್ಯವಾದ ರಚನಾತ್ಮಕ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಕೈಗಾರಿಕೆಗಳು ಮತ್ತು ಹೂಡಿಕೆಗಳಿಗೆ ಉತ್ತಮ ವಾತಾವರಣವನ್ನು ಸೃಷ್ಟಿಸಲಾಯಿತು. ತೆರಿಗೆ ಸಂಗ್ರಹ ವ್ಯವಸ್ಥೆ ಸುಧಾರಿಸಿತು. ಕೋವಿಡ್ ಸವಾಲಿನ ಸಮಯದಲ್ಲಿ, ಸ್ವಾವಲಂಬಿ ಭಾರತ ಅಭಿಯಾನವು ಆಮದುಗಳನ್ನು ಕಡಿಮೆ ಮಾಡುವ ಮತ್ತು ರಫ್ತು ಹೆಚ್ಚಿಸಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ದೇಶದಲ್ಲಿ ಅಗತ್ಯ ವಸ್ತುಗಳನ್ನು ತಯಾರಿಸುವತ್ತ ಗಮನಹರಿಸಲಾಯಿತು. ಇದರ ಪರಿಣಾಮವಾಗಿ ವಿಶ್ವದ ಐದನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಭಾರತವೂ ಇದೀಗ ವಿಶ್ವದ ಅತಿದೊಡ್ಡ ಆರ್ಥಿಕತೆ ಎನಿಸಿಕೊಂಡಿದೆ.

## ಜಿಎಸ್‌ಟಿ: ಒಂದು ತೆರಿಗೆ, ಒಂದು ರಾಷ್ಟ್ರ

ವ್ಯಾಟ್ ದರಗಳು ಮತ್ತು ನಿಬಂಧನೆಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತವೆ ಮತ್ತು ಹೂಡಿಕೆದಾರರನ್ನು ಆಕರ್ಷಿಸಲು ವಿವಿಧ ರಾಜ್ಯಗಳು ಆಗಾಗ್ಗೆ ತಮ್ಮ ದರಗಳನ್ನು ಕಡಿಮೆ ಮಾಡುವುದು ಕಂಡುಬಂದಿದೆ. ಇದರಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡಕ್ಕೂ ಆದಾಯ ನಷ್ಟವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಏಕ ಮತ್ತು ಸರಳ ಜಿಎಸ್‌ಟಿಯನ್ನು 2017 ರಲ್ಲಿ ಪರಿಚಯಿಸಲಾಯಿತು. ತೆರಿಗೆ ದರಗಳು ಮತ್ತು ಕಾರ್ಯವಿಧಾನಗಳು ಈಗ ದೇಶದಾದ್ಯಂತ ಸ್ಥಿರವಾಗಿವೆ.

ಜಿಎಸ್‌ಟಿಯ ಅನುಷ್ಠಾನದಿಂದಾಗಿ ಮಾಸಿಕ ಮನೆಯ ವೆಚ್ಚದಲ್ಲಿ **4%** ರವರೆಗೆ ಉಳಿತಾಯವಾಗಿದೆ.

ಮಾರ್ಚ್ 2022 ರಲ್ಲಿ ಜಿಎಸ್‌ಟಿ ಸಂಗ್ರಹವು

**₹ 1,42,095**

ಕೋಟಿ ಆಗಿತ್ತು. ಇದು ಇದುವರೆಗಿನ ಅತಿದೊಡ್ಡ ದಾಖಲೆಯಾಗಿದೆ.



## ಕಂಪನಿಗಳ (ತಿದ್ದುಪಡಿ) ಕಾಯಿದೆ

2017 ರಲ್ಲಿ, ಸಣ್ಣ ಉದ್ಯಮಗಳಿಗೆ ಪರಿಹಾರ ಒದಗಿಸಲು ಕಂಪನಿಗಳ ಕಾಯಿದೆಗೆ ತಿದ್ದುಪಡಿ ಮಾಡಲಾಯಿತು. ಕಂಪನಿಗಳ ಕಾನೂನಿನ ಸಮಿತಿಯು 2013 ರ ಕಾಯಿದೆಯು 16 ತಾಂತ್ರಿಕ ದೋಷಗಳನ್ನು ಅಪರಾಧೀಕರಣದಿಂದ ಹೊರಗಿಡಲು ಮತ್ತು ಅವುಗಳನ್ನು ನಾಗರಿಕ ದೋಷಗಳೆಂದು ಪರಿಗಣಿಸಲು ಶಿಫಾರಸು ಮಾಡಿತು. ಕಂಪನಿಯ ನಿರ್ದೇಶಕರನ್ನು ಹೆಚ್ಚು ಜವಾಬ್ದಾರಿಯುತ ಮತ್ತು ಉತ್ತರದಾಯಿಗಳನ್ನಾಗಿ ಮಾಡುವ ಮೂಲಕ ಕಾರ್ಪೊರೇಟ್ ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

### ಋಣಭಾರ ಮತ್ತು ದಿವಾಳಿತನ ಸಂಹಿತೆ

ಋಣಭಾರ ಮತ್ತು ದಿವಾಳಿತನ ಸಂಹಿತೆ 2016 ಅನ್ನು ರೂಪಿಸಲಾಗಿದೆ. ಇದು ಅಸ್ತಿತ್ವದಲ್ಲಿರುವ "ಸಾಲಗಾರನ ನಿಯಂತ್ರಣ" ವ್ಯವಸ್ಥೆಯಿಂದ ಮತ್ತು "ಸಾಲ ನೀಡಿದವನ ನಿಯಂತ್ರಣ" ವ್ಯವಸ್ಥೆಯ ಕಡೆಗೆ ಬೃಹತ್ ಬದಲಾವಣೆಗೆ ಕಾರಣವಾಯಿತು. ವ್ಯಾಪಾರ ಮಾಡುವ ಸುಲಭತೆಯನ್ನು ಸುಧಾರಿಸುವ ಮತ್ತು ಎನ್ ಪಿ ಎ ಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಇದು ಗಮನಾರ್ಹವಾದುದು ಎಂದು ಸಾಬೀತಾಯಿತು. ಸಂಸತ್ತು ಇತ್ತೀಚೆಗೆ ಇದಕ್ಕೆ ಅಗತ್ಯವಾದ ತಿದ್ದುಪಡಿಗಳನ್ನು ಅಂಗೀಕರಿಸಿತು.

**2014ರಲ್ಲಿ ಭಾರತದ ಜಿಡಿಪಿ 1.10 ಲಕ್ಷ ಕೋಟಿ ರೂ. ಇತ್ತು, ಈಗ 2.30 ಲಕ್ಷ ಕೋಟಿ ರೂ. ಆಗಿದೆ.**

### ಕಾರ್ಪೊರೇಟ್ ತೆರಿಗೆ: ಕಂಪನಿಗಳ ಮೇಲೆ ಕಡಿಮೆ ತೆರಿಗೆ ಹೊರೆ

ಈ ಹಿಂದೆ, ದೇಶೀಯ ಕಂಪನಿಗಳು ಶೇ.30 ರಷ್ಟು ಕಾರ್ಪೊರೇಟ್ ತೆರಿಗೆಯನ್ನು ಪಾವತಿಸಬೇಕಾಗಿತ್ತು. ಇದರ ಜೊತೆಗೆ ಹೆಚ್ಚುವರಿ ಶುಲ್ಕವನ್ನೂ ವಿಧಿಸಲಾಗುತ್ತಿತ್ತು. ಈಗ ಅದನ್ನು ಶೇ.22ಕ್ಕೆ ಇಳಿಸಲಾಗಿದೆ. ಪರಿಣಾಮಕಾರಿ ದರ, ಹೆಚ್ಚುವರಿ ಶುಲ್ಕ ಮತ್ತು ಸೆಸ್ ಸೇರಿ ಶೇ. 25.17 ಇದೆ. ಹಿಂದೆ, ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಪರಿಣಾಮಕಾರಿ ಕಾರ್ಪೊರೇಟ್ ತೆರಿಗೆ ದರವನ್ನು ಹೊಂದಿತ್ತು.

### ಅನಗತ್ಯ ಕಾನೂನುಗಳ ಹೊರೆಯಿಂದ ಮುಕ್ತಿ

ಅನಗತ್ಯ ಕಾನೂನುಗಳು ಜೀವನ ಮತ್ತು ಸ್ಪರ್ಧಾತ್ಮಕ ವ್ಯಾಪಾರಗಳ ಮೇಲೆ ಅನಗತ್ಯ ಹೊರೆಯನ್ನು ಹೇರುತ್ತವೆ. ಅಂತಹ 2,875 ಕಾನೂನುಗಳು ಅಥವಾ ವ್ಯಾಪಾರದ ಅಡೆತಡೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ, 2007 ಅನ್ನು ರದ್ದುಗೊಳಿಸಲಾಗಿದೆ. ಅಷ್ಟೇ ಅಲ್ಲ, ಅಗತ್ಯ ಅನುಮೋದನೆಗಳನ್ನು ಪಡೆಯುವ ಗಡುವನ್ನು ಏಕಗವಾಕ್ಷಿ ಅನುಮತಿಗೆ ಇಳಿಸಲಾಗಿದೆ.

### ಮುಖಾಮುಖಿರಹಿತ ಮೌಲ್ಯಮಾಪನ, ತೆರಿಗೆ ಸುಧಾರಣೆಗಳು

ತೆರಿಗೆ ಸುಧಾರಣೆಗಳ ದಿಕ್ಕಿನಲ್ಲಿ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಪ್ರಾಮಾಣಿಕ ತೆರಿಗೆದಾರರನ್ನು ಸಬಲೀಕರಣಗೊಳಿಸಲು ಮುಖಾಮುಖಿರಹಿತ ಮೌಲ್ಯಮಾಪನ ವ್ಯವಸ್ಥೆಯನ್ನು ಪರಿಚಯಿಸಲಾಯಿತು. ಇದರ ಪರಿಣಾಮವಾಗಿ, 2021-22 ನೇ ಹಣಕಾಸು ವರ್ಷದಲ್ಲಿ ವೈಯಕ್ತಿಕ ತೆರಿಗೆ ಸಂಗ್ರಹವು 48 ಪ್ರತಿಶತ ಮತ್ತು ಕಾರ್ಪೊರೇಟ್ ತೆರಿಗೆ ಸಂಗ್ರಹವು 41 ಪ್ರತಿಶತದಷ್ಟು ಹೆಚ್ಚಾಗಿದೆ. ಪರೋಕ್ಷ ತೆರಿಗೆ ಸಂಗ್ರಹದಲ್ಲಿ ಶೇ.20ರಷ್ಟು ಹೆಚ್ಚಳವಾಗಿದೆ. ನಿಗದಿತ ಗುರಿಗಿಂತ 5 ಲಕ್ಷ ಕೋಟಿ ಹೆಚ್ಚಿಗೆ ಅಂದರೆ, 27.07 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ.

## ಸುಲಭವಾಗಿ ವ್ಯಾಪಾರ ಮಾಡುವುದು

ಈ ಸೂಚ್ಯಂಕವನ್ನು ವಿಶ್ವಬ್ಯಾಂಕ್ ಬಿಡುಗಡೆ ಮಾಡಿದೆ. ಸುಲಭ ವ್ಯಾಪಾರದ ಶ್ರೇಯಾಂಕಕ್ಕಾಗಿ ಇದು ಆರ್ಥಿಕತೆಯ ಹಲವಾರು ನಿಯತಾಂಕಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಯಾವುದೇ ದೇಶದಲ್ಲಿ ವ್ಯಾಪಾರವನ್ನು ಪ್ರಾರಂಭಿಸುವುದು ಎಷ್ಟು ಸುಲಭ ಅಥವಾ ವ್ಯಾಪಾರ ಮಾಡುವಲ್ಲಿನ ಅಡೆತಡೆಗಳಂತಹ ಪ್ರಶ್ನೆಗಳನ್ನು ಪರಿಹರಿಸುವ ಮೂಲಕ ಮಾರುಕಟ್ಟೆಯ ಸೂಕ್ತತೆಯನ್ನು ತಿಳಿದುಕೊಳ್ಳಲು ಹೂಡಿಕೆದಾರರಿಗೆ ಇದು ಮಾರ್ಗದರ್ಶನ ನೀಡುತ್ತದೆ.




ವ್ಯಾಪಾರ ಮಾಡುವ ಸುಲಭ ಸೂಚ್ಯಂಕದಲ್ಲಿ ಅಗ್ರ 50 ದೇಶಗಳಲ್ಲಿ ಭಾರತ ಸ್ಥಾನವನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಸರ್ಕಾರ ಹೊಂದಿದೆ.

### ಸತತ ಮೂರನೇ ತಿಂಗಳು, ಭಾರತವು ಉದಯೋನ್ಮುಖ ಮಾರುಕಟ್ಟೆಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ

ಬಲವಾದ ರಫ್ತು ಮತ್ತು ಉತ್ಪಾದನಾ ಚಟುವಟಿಕೆಯಿಂದಾಗಿ 2022 ರ ಜನವರಿಯಲ್ಲಿ ಸತತ ಮೂರನೇ ತಿಂಗಳು ಭಾರತವು ಉದಯೋನ್ಮುಖ ಮಾರುಕಟ್ಟೆಯ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಕೊರೊನಾ ಸಾಂಕ್ರಾಮಿಕದ ಓಮಿಕ್ರಾನ್ ರೂಪಾಂತರದ ಹೊರತಾಗಿಯೂ, ಭಾರತದ ಉತ್ಪಾದನೆ ಮತ್ತು ಸೇವಾ ಚಟುವಟಿಕೆಯ ಕ್ಷೇತ್ರಗಳು ಜನವರಿಯಲ್ಲಿ ವಿಸ್ತರಿಸಲ್ಪಟ್ಟವು ಮತ್ತು ಹೊಸ ಉದ್ಯೋಗಗಳು ಹಾಗು ಉತ್ಪಾದನೆಯ ಬೆಳವಣಿಗೆಯು ಪ್ರಬಲವಾಗಿದೆ. ಮಿಂಟ್ ಎಮರ್ಜಿಂಗ್ ಮಾರ್ಕೆಟ್ ಟ್ರ್ಯಾಕರ್ ಪ್ರಕಾರ. ಏಳು ಸೂಚಕಗಳನ್ನು ಬಳಸಿ ಸಂಕಲಿಸಲಾದ ಈ ಪಟ್ಟಿಯಲ್ಲಿ ಭಾರತ 81 ಅಂಕಗಳನ್ನು ಪಡೆದುಕೊಂಡಿದೆ.

2017 ರಲ್ಲಿ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಮತ್ತು ಅನುಷ್ಠಾನ ಟ್ರಸ್ಟ್ ಸ್ಥಾಪನೆಯೊಂದಿಗೆ ದೆಹಲಿ-ಮುಂಬೈ, ಅಮೃತಸರ-ಕೋಲ್ಕತ್ತಾ, ಚೆನ್ನೈ-ಬೆಂಗಳೂರು, ವೈಜಾಗ್-ಚೆನ್ನೈ, ಮತ್ತು ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್‌ಗಳ ನಿರ್ಮಾಣವನ್ನು ಪ್ರಾರಂಭಿಸಲಾಗಿದೆ. ಇದರೊಂದಿಗೆ ಉತ್ತರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ರಕ್ಷಣಾ ಉತ್ಪಾದನೆಗೆ ಎರಡು ರಕ್ಷಣಾ ಕಾರಿಡಾರ್‌ಗಳಿಗೂ ಸಹ ಅನುಮೋದನೆ ನೀಡಲಾಗಿದೆ.

### ಎಂಎಸ್ಎಂಇ ಮೇಲೆ ವಿಶೇಷ ಗಮನ

11 ಕೋಟಿಗೂ ಹೆಚ್ಚು ಜನರಿಗೆ ಉದ್ಯೋಗ ನೀಡುವ ಮತ್ತು ಭಾರತದ ಜಿಡಿಪಿಗೆ ಶೇ. 29 ರಷ್ಟು ಕೊಡುಗೆ ನೀಡುವ ಸೂಕ್ಷ್ಮ, ಸಣ್ಣ ಮತ್ತು ಗುಡಿ ಕೈಗಾರಿಕೆ ವಲಯಕ್ಕೆ ಮೊದಲ ಬಾರಿಗೆ ಯಾವುದೇ ಸರ್ಕಾರವು ಇಂತಹ ಕ್ರಮಗಳನ್ನು ಕೈಗೊಂಡಿರಲಿಲ್ಲ ಮತ್ತು ಅವುಗಳ ಹಾದಿಯಲ್ಲಿಯೇ ಸ್ವಾವಲಂಬನೆಯ ಕನಸು ನನಸಾಗುತ್ತಿದೆ. ಕೊರೋನಾ ಅವಧಿಯಲ್ಲಿ ಹೆಚ್ಚು ಪರಿಣಾಮ ಬೀರಿದ ಈ ವಲಯವನ್ನು ಮರು ವ್ಯಾಖ್ಯಾನಿಸಲಾಗಿದೆ. ಸ್ವಾವಲಂಬಿ ಭಾರತ ಪ್ಯಾಕೇಜ್‌ನಲ್ಲಿ ಒಟ್ಟು 5 ಲಕ್ಷ ಕೋಟಿ ರೂ.ಗಿಂತ ಹೆಚ್ಚಿನ ಆರು ನಿಬಂಧನೆಗಳನ್ನು ಸೇರಿಸಲಾಗಿದೆ. ಎಂಎಸ್ಎಂಇಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು 72 ಗಂಟೆಗಳ ಒಳಗೆ ಪರಿಹರಿಸಲು ಚಾಂಪಿಯನ್ಸ್ ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ.

### ಒಂದು ಉತ್ಪನ್ನ, ಒಂದು ಜಿಲ್ಲೆ

ಒಂದು ಜಿಲ್ಲೆ, ಒಂದು ಉತ್ಪನ್ನ ಯೋಜನೆಯ ಮೂಲಕ ನಿರ್ದಿಷ್ಟ ಉತ್ಪನ್ನಕ್ಕೆ ಹೆಸರಾದ ಜಿಲ್ಲೆಗಳನ್ನು ಗುರುತಿಸಲಾಗಿದೆ. ಅವುಗಳ ಉತ್ಪನ್ನಗಳ ಪ್ರೋತ್ಸಾಹಕ್ಕೆ ಬೇಕಾದ ಎಲ್ಲಾ ಸಹಾಯವನ್ನು ಇಲ್ಲಿ ಒದಗಿಸಲಾಗಿದೆ. ಇಲ್ಲಿಯವರೆಗೆ 103 ಜಿಲ್ಲೆಗಳಿಂದ 106 ಉತ್ಪನ್ನಗಳನ್ನು ಆಯ್ಕೆ ಮಾಡಲಾಗಿದೆ. 739 ಜಿಲ್ಲೆಗಳಿಂದ 739ಕ್ಕೂ ಅಧಿಕ ಉತ್ಪನ್ನಗಳ ಪಟ್ಟಿ ಸಿದ್ಧಪಡಿಸಬೇಕಿದೆ.

### ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ

ಕೊರೊನಾ ಸಾಂಕ್ರಾಮಿಕದ ಸಂಕಷ್ಟದ ಸಮಯದಲ್ಲಿ ಕಟ್ಟುನಿಟ್ಟಾದ ಲಾಕ್‌ಡೌನ್‌ನ ನಂತರ ಮೈನಸ್ 23.9 ಪ್ರತಿಶತಕ್ಕೆ ಕುಸಿದ ಜಿಡಿಪಿ ಬೆಳವಣಿಗೆಯ ದರವನ್ನು ಸುಧಾರಿಸಿದ್ದು ಮಾತ್ರವಲ್ಲದೆ, ವಿಶ್ವದ ಆರ್ಥಿಕ ತಜ್ಞರು ಊಹಿಸಿದ್ದ ಆರ್ಥಿಕ ಹಿಂಜರಿತದ ಭಯವನ್ನು ಸುಳ್ಳಾಗಿಸಿದ್ದು ಸರ್ಕಾರದ ದೂರದೃಷ್ಟಿಯ ಫಲಿತಾಂಶವಾಗಿದೆ. ಭಾರತದಲ್ಲಿ. 2021 ರ ಅಕ್ಟೋಬರ್-ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯ ದರವು 5.4 ಪ್ರತಿಶತದಷ್ಟಿತ್ತು, ಇದು ಪ್ರಪಂಚದ ಯಾವುದೇ ರಾಷ್ಟ್ರದ ದರಕ್ಕಿಂತ ಹೆಚ್ಚಾಗಿದೆ. ಸರ್ಕಾರವು 2022–2023ರ ಮೊದಲ ಮುಂಗಡ ಅಂದಾಜನ್ನು ಬಿಡುಗಡೆ ಮಾಡಿದೆ, ಅದು 9.2 ಪ್ರತಿಶತದಷ್ಟಿದೆ. 2030 ರ ವೇಳೆಗೆ, ಭಾರತವು ಜಪಾನ್ ಅನ್ನು ಹಿಂದಿಕ್ಕಿ ಏಷ್ಯಾದ ಎರಡನೇ ಅತಿದೊಡ್ಡ ಆರ್ಥಿಕತೆಯಾಗಬಹುದು.





# ಕೈಗಾರಿಕಾ ಕ್ರಾಂತಿ-4.0 ಗೆ ಸಿದ್ಧತೆ
## ಮೊದಲ ಬಾರಿಗೆ, ಕೈಗಾರಿಕೆಗಳಿಗೆ ಪಿ ಎಲ್ ಐ ನಂತಹ ಯೋಜನೆ



ಭಾರತದ ಉತ್ಪಾದನಾ ಸಾಮರ್ಥ್ಯ ಮತ್ತು ರಫ್ತುಗಳನ್ನು ಹೆಚ್ಚಿಸಲು, 2021-2022 ರ ಆರ್ಥಿಕ ವರ್ಷಗಳಲ್ಲಿ 13 ಪ್ರಮುಖ ಉತ್ಪಾದನಾ ವಲಯಗಳಿಗೆ ಪಿ ಎಲ್ ಐ ಯೋಜನೆಯಲ್ಲಿ ಒಟ್ಟು 1.97 ಲಕ್ಷ ಕೋಟಿ ರೂ. ಘೋಷಿಸಲಾಯಿತು, ಇದರಲ್ಲಿ ಮೊಬೈಲ್ ಉತ್ಪಾದನೆ ಮತ್ತು ವಿಶೇಷ ಎಲೆಕ್ಟ್ರಾನಿಕ್ ಬಿಡಿಭಾಗಗಳು, ನಿರ್ಣಾಯಕ ಆರಂಭಿಕ ಔಷಧಿಗಳ ತಯಾರಿಕೆ, ಮಧ್ಯಂತರ ಔಷಧಗಳು ಮತ್ತು ಈಗಾಗಲೇ ಘೋಷಿಸಲಾದ ಸಕ್ರಿಯ ಔಷಧೀಯ ಘಟಕಗಳು ಮತ್ತು ವೈದ್ಯಕೀಯ ಸಾಧನಗಳು ಸೇರಿವೆ. ಗುರಿಯನ್ನು ಸಾಧಿಸುವ ಸಲುವಾಗಿ 14 ವಲಯಗಳಲ್ಲಿ ಉತ್ಪಾದನೆ ಆಧಾರಿತ ಪ್ರೋತ್ಸಾಹ ಯೋಜನೆಗೆ ಅಗಾಧ ಪ್ರತಿಕ್ರಿಯೆ ದೊರೆತಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಾಮಾನ್ಯ ಬಜೆಟ್‌ನಲ್ಲಿ ತಿಳಿಸಿದ್ದಾರೆ. ಇದು 60 ಲಕ್ಷ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ. ಮುಂದಿನ ಐದು ವರ್ಷಗಳಲ್ಲಿ ಹೆಚ್ಚುವರಿಯಾಗಿ 30 ಲಕ್ಷ ಕೋಟಿ ರೂ. ಆದಾಯ ಬರುವ ಸಾಧ್ಯತೆ ಇದೆ. ಹತ್ತು ವಲಯಗಳಲ್ಲಿ 410 ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ.

# ಪ್ರಗತಿಯ ಹೊಸ ಉತ್ತುಂಗದಲ್ಲಿ

**418 ಶತಕೋಟಿ ಡಾಲರ್ ಹೊಸ ಎತ್ತರ ತಲುಪಿದ ರಫ್ತುಗಳು**

2021-2022 ನೇ ಆರ್ಥಿಕ ವರ್ಷಗಳಲ್ಲಿ, ಭಾರತವು ಸರಕು ರಫ್ತಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿತು. ಈ ಒಂದು ವರ್ಷದಲ್ಲಿ, ರಫ್ತಿನ ಒಟ್ಟು ಮೌಲ್ಯ 418 ಬಿಲಿಯನ್ ಡಾಲರ್ ಆಗಿತ್ತು.

**ಭಾರತವು ಈಗ ಮೊಬೈಲ್ ಫೋನ್‌ಗಳ ವಿಶ್ವದ ಎರಡನೇ ಅತಿದೊಡ್ಡ ಉತ್ಪಾದಕ ರಾಷ್ಟ್ರವಾಗಿದೆ**

2014-2015 ರಲ್ಲಿ, ಮೊಬೈಲ್ ಫೋನ್ ಉತ್ಪಾದನೆಯು 19,000 ಕೋಟಿ ರೂ.ಮೌಲ್ಯದ ಸುಮಾರು 6 ಕೋಟಿ ಯುನಿಟ್‌ಗಳಾಗಿದ್ದು, ಇದು 2020-2021 ರಲ್ಲಿ 30 ಕೋಟಿ ಯೂನಿಟ್‌ಗಳಿಗೆ ಮತ್ತು 2.20 ಲಕ್ಷ ಕೋಟಿ ರೂ.ಗಳಿಗೆ ಏರಿಕೆಯಾಗಿದೆ. 2014 ರಲ್ಲಿ ಸೆಲ್ಯುಲಾರ್ ಫೋನ್‌ಗಳು ಮತ್ತು ಬಿಡಿಭಾಗಗಳನ್ನು ಉತ್ಪಾದಿಸುವ ಎರಡು ಕಾರ್ಖಾನೆಗಳು ಮಾತ್ರ ಇದ್ದವು, ಆದರೆ 2021 ರ ವೇಳೆಗೆ ಆ ಸಂಖ್ಯೆ 200 ಕ್ಕೆ ಏರಿಕೆಯಾಯಿತು.

**ಬೆಳೆಯುತ್ತಿರುವ ವಿದೇಶಿ ವಿನಿಮಯ ಮೀಸಲು**

ನವೆಂಬರ್ 2021 ರ ಹೊತ್ತಿಗೆ, ಚೀನಾ, ಜಪಾನ್ ಮತ್ತು ಸ್ವಿಟ್ಜರ್ಲೆಂಡ್ ನಂತರ ಭಾರತವು ವಿಶ್ವದ ನಾಲ್ಕನೇ ಅತಿದೊಡ್ಡ ವಿದೇಶಿ ವಿನಿಮಯ ಮೀಸಲು ಹೊಂದಿದ ದೇಶವಾಗಿದೆ.




## ಜಾಗತಿಕ ಸಮುದಾಯದ ವಿಶ್ವಾಸ: ದಾಖಲೆಯ ಎಫ್‌ಡಿಐ

ಎಫ್‌ಡಿಐ ಒಳಹರಿವು ಹೊಸ ದಾಖಲೆಯ ಮಟ್ಟಕ್ಕೆ ಏರಿರುವುದು ಸರ್ಕಾರದ ಹೂಡಿಕೆದಾರ ಸ್ನೇಹಿ ಎಫ್‌ಡಿಐ ನೀತಿ ಮತ್ತು ಜಾಗತಿಕ ಸಮುದಾಯದ ಹೆಚ್ಚುತ್ತಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿವೆ, 2014-15ರಲ್ಲಿ ಭಾರತಕ್ಕೆ ಎಫ್‌ಡಿಐ ಒಳಹರಿವು 45.14 ಶತಕೋಟಿ ಡಾಲರ್ ದಾಖಲಾಗಿದ್ದು, ಅಂದಿನಿಂದ ಸ್ಥಿರವಾದ ಬೆಳವಣಿಗೆಯನ್ನು ದಾಖಲಿಸಿದೆ. 2020-21 ನೇ ವರ್ಷದಲ್ಲಿ, ಭಾರತವು 81.97 ಶತಕೋಟಿ ಡಾಲರ್ (ತಾತ್ಕಾಲಿಕ) ಅತ್ಯಧಿಕ ವಾರ್ಷಿಕ ಎಫ್‌ಡಿಐ ಒಳಹರಿವನ್ನು ಪಡೆದುಕೊಂಡಿತು, ಇದು ಹಿಂದಿನ ವರ್ಷಕ್ಕಿಂತ ಶೇ.10 ಹೆಚ್ಚಳವನ್ನು ಪ್ರತಿನಿಧಿಸುತ್ತದೆ. 2021-22ರ ಮೊದಲ ಆರು ತಿಂಗಳಲ್ಲಿ ಕಳೆದ ವರ್ಷದ ಇದೇ ಅವಧಿಯಲ್ಲಿ 41.37 ಶತಕೋಟಿಗೆ ಹೋಲಿಸಿದರೆ ಎಫ್‌ಡಿಐ ಒಳಹರಿವು ಶೇಕಡಾ 4 ರಷ್ಟು ಏರಿಕೆಯಾಗಿ 42.86 ಬಿಲಿಯನ್ ಡಾಲರ್ ಗೆ ತಲುಪಿದೆ.



**ಆಹಾರ ಸಂಸ್ಕರಣಾ ಉದ್ಯಮ:**
- 10,900 ಕೋಟಿ ರೂ. ಅನುದಾನ
- 2.5 ದಶಲಕ್ಷ ಉದ್ಯೋಗಾವಕಾಶಗಳು.

**ಐಟಿ ಯಂತ್ರಾಂಶ:**
- 7,350 ಕೋಟಿ ರೂ. ಅನುದಾನ ನೀಡಿದ್ದು, 14 ಕಂಪನಿಗಳು ಅನುಮೋದನೆ ಪಡೆದಿವೆ.
- 1.8 ದಶಲಕ್ಷ ಉದ್ಯೋಗಾವಕಾಶಗಳು.

**ಎಸಿ, ಎಲ್‌ಇಡಿ ಮತ್ತು ಬಲ್ಬ್**
- 6,238 ಕೋಟಿ ರೂ. ಅನುದಾನ
- 4 ಲಕ್ಷ ಉದ್ಯೋಗಾವಕಾಶ.

**ಫಾರ್ಮಾ ಉದ್ಯಮ**

15,000 ಕೋಟಿ ರೂ. ಅನುದಾನ.
4 ಲಕ್ಷ ಉದ್ಯೋಗಾವಕಾಶ.
21 ಅರ್ಜಿಗಳಿಗೆ ಅನುಮೋದನೆ ದೊರೆತಿದ್ದು, 6 ಯೋಜನೆಗಳು ಆರಂಭಗೊಂಡಿವೆ.

**ಫಾರ್ಮಾಸ್ಯುಟಿಕಲ್ಎಪಿಐ (ಔಷಧಿಗಳ ಕಚ್ಚಾ ವಸ್ತು)**

6,940 ಕೋಟಿ ರೂ. ಅನುದಾನ
ದೊಡ್ಡ ಪ್ರಮಾಣದ ಔಷಧಗಳಿಗಾಗಿ 49 ಅರ್ಜಿಗಳನ್ನು ಅನುಮೋದಿಸಲಾಗಿದೆ ಮತ್ತು ಎಂಟು ಯೋಜನೆಗಳನ್ನು ಪ್ರಾರಂಭಿಸಲಾಗಿದೆ

**ಟೆಲಿಕಾಂ ತಯಾರಿಕೆ**

12,195 ಕೋಟಿ ರೂ. ಅನುದಾನ
40 ಸಾವಿರ ಉದ್ಯೋಗಾವಕಾಶಗಳು

**ಸೌರ ವಿದ್ಯುತ್ ಪಿವಿ ಮಾಡ್ಯೂಲ್ ಗಳು**

45,00 ಕೋಟಿ ರೂ. ಅನುದಾನ ಒದಗಿಸಲಾಗಿದೆ.
1.5 ದಶಲಕ್ಷ ಉದ್ಯೋಗಾವಕಾಶಗಳು.

**ಎಲೆಕ್ಟ್ರಾನಿಕ್ ತಯಾರಿಕೆ:**

40,951 ಕೋಟಿ ರೂ. ಒದಗಿಸಲಾಗಿದೆ.
2.5 ದಶಲಕ್ಷ ಉದ್ಯೋಗಾವಕಾಶಗಳು.

**ವೈದ್ಯಕೀಯ ಉಪಕರಣಗಳು**

3,420 ಕೋಟಿ ರೂ. ಒದಗಿಸಲಾಗಿದೆ.
2.5 ದಶಲಕ್ಷ ಉದ್ಯೋಗಾವಕಾಶಗಳು.

**ಆಟೋಮೊಬೈಲ್ ಬಿಡಿಭಾಗಗಳು:**

42,500 ಕೋಟಿ ರೂ. ಒದಗಿಸಲಾಗಿದೆ.
7.5 ಲಕ್ಷ ಉದ್ಯೋಗಾವಕಾಶಗಳು.

**ಡ್ರೋನ್‌ಗಳು ಮತ್ತು ಸಂಬಂಧಿತ ಉತ್ಪನ್ನಗಳು:**

3 ವರ್ಷಗಳಲ್ಲಿ 120 ಕೋಟಿ ರೂ.ಅನುದಾನ
10,000 ಉದ್ಯೋಗಾವಕಾಶಗಳು ಮತ್ತು 900 ಕೋಟಿ ರೂ. ಆದಾಯ

**ಜವಳಿ:**

10,683 ಕೋಟಿ ರೂ. ಅನುದಾನ
7.5 ಲಕ್ಷ ಉದ್ಯೋಗಾವಕಾಶಗಳು.

**ವಿಶೇಷ ಉಕ್ಕು:**

6,322 ಕೋಟಿ ರೂ.ಒದಗಿಸಲಾಗಿದೆ.
5.25 ದಶಲಕ್ಷ ಉದ್ಯೋಗಾವಕಾಶಗಳು.

**ಉನ್ನತ್ ರಸಾಯನ ಸೆಲ್**

18,100 ಕೋಟಿ ರೂ. ಅನುದಾನ
50 ಗಿ.ವ್ಯಾ. ಪ್ರತಿ ಗಂಟೆಗೆ ಉತ್ಪಾದನಾ ಸಾಮರ್ಥ್ಯವನ್ನು ಸಾಧಿಸುವ ಗುರಿ.

## ಯುವಜನರು ಮತ್ತು ವಿದ್ಯಾರ್ಥಿಗಳು

# ಭವಿಷ್ಯದ ಮೇಲೆ ಕಣ್ಣಿಟ್ಟು ಯುವಕರ ಸಬಲೀಕರಣ



ಭಾರತವು 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಜನಸಂಖ್ಯೆಯ ಶೇಕಡಾ 65 ರಷ್ಟು ಜನಸಂಖ್ಯೆಯ ಪ್ರಯೋಜನವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ದೇಶದ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಯುವಕರ ಸಬಲೀಕರಣ ಮುಖ್ಯವಾಗಿದೆ. ಯುವಕರು ಮತ್ತು ವಿದ್ಯಾರ್ಥಿಗಳ ಮೇಲೆ ವಿಶೇಷ ಗಮನ ಹರಿಸುವುದರೊಂದಿಗೆ ಗುಣಮಟ್ಟದ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಲು ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಇದರೊಂದಿಗೆ ಯುವಕರ ಕೌಶಲಾಭಿವೃದ್ಧಿಗೆ ವಿಶೇಷ ಒತ್ತು ನೀಡುವ ಮೂಲಕ ಭಾರತದ ಭವಿಷ್ಯವನ್ನು ಸುಭದ್ರಗೊಳಿಸಲಾಗುತ್ತಿದೆ.

**ಪ್ರಾರಂಭ ಜನವರಿ 16, 2016**

**ಯೋಜನೆ**

ಸ್ಟಾರ್ಟ್‌ಅಪ್ ಇಂಡಿಯಾ

### ಯುವಜನರಿಗೆ ವರದಾನವಾಗಿರುವ ಸ್ಟಾರ್ಟ್‌ಅಪ್ ಇಂಡಿಯಾ

**ಉದ್ದೇಶ:** ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮವು ದೇಶದಲ್ಲಿ ನಾವೀನ್ಯತೆ ಮತ್ತು ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸಲು ಬಲವಾದ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

**ಪ್ರಗತಿ**

ದೇಶದಲ್ಲಿ 68 ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಕಾರ್ಯನಿರ್ವಹಿಸುತ್ತಿವೆ. ಸ್ಟಾರ್ಟ್‌ಅಪ್‌ಗಳು 2016 ರಿಂದ 6 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿವೆ. 45 ಪ್ರತಿಶತದಷ್ಟು ಸ್ಟಾರ್ಟ್‌ಅಪ್‌ಗಳು 2ನೇ ಮತ್ತು 3ನೇ ಶ್ರೇಣಿ ನಗರಗಳಲ್ಲಿವೆ. ಅವುಗಳಲ್ಲಿ 45 ಪ್ರತಿಶತದಷ್ಟನ್ನು ಮಹಿಳಾ ಉದ್ಯಮಿಗಳು ಪ್ರತಿನಿಧಿಸುತ್ತಾರೆ.

**44** ಯುನಿಕಾರ್ನ್‌ಗಳನ್ನು 2021 ರಲ್ಲಿ ಸೇರಿಸಲಾಗಿದೆ. ಏಪ್ರಿಲ್ 2022 ರ ವೇಳೆಗೆ ಇನ್ನೂ 15 ಯುನಿಕಾರ್ನ್‌ಗಳನ್ನು ಸೇರಿಸಲಾಯಿತು, ಇದರಿಂದ ದೇಶದಲ್ಲಿ ಒಟ್ಟು ಯುನಿಕಾರ್ನ್‌ಗಳ ಸಂಖ್ಯೆ 100 ಕ್ಕೆ ತಲುಪಿದೆ.

ಯೋಜನೆ

## ಸ್ಟ್ಯಾಂಡಪ್ ಇಂಡಿಯಾ

ಪ್ರಾರಂಭ 5 ಏಪ್ರಿಲ್ 2016

**ಸ್ಟ್ಯಾಂಡಪ್ ಇಂಡಿಯಾ ಆರ್ಥಿಕ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಯನ್ನು ಬಲಪಡಿಸುತ್ತಿದೆ**

ಉದ್ದೇಶ: ಆರ್ಥಿಕ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿ. ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಹಿಳೆಯರು ಮತ್ತು ಸಮುದಾಯಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವುದು.

## ಪ್ರಗತಿ

ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಯೋಜನೆಯ ಆರಂಭದಿಂದ ಮಾರ್ಚ್ 21, 2022 ರವರೆಗೆ 1,33,995 ಖಾತೆಗಳಲ್ಲಿ 30,160 ಕೋಟಿ ರೂ.ವಿತರಿಸಲಾಗಿದೆ. ಪರಿಶಿಷ್ಟ ಜಾತಿಯವರ 19310 ಖಾತೆಗಳಿಗೆ 3976.84 ಕೋಟಿ ರೂ. ಅನುಮೋದನೆ ನೀಡಿದ್ದರೆ, ಪರಿಶಿಷ್ಟ ಪಂಗಡಗಳ 6435 ಖಾತೆಗಳಲ್ಲಿ 1373.71 ಕೋಟಿ ರೂ. ಅನುಮೋದನೆ ನೀಡಲಾಗಿದೆ. 2019-20 ರಲ್ಲಿ, 2020-25 ರ 15 ನೇ ಹಣಕಾಸು ಆಯೋಗದ ಅವಧಿಗೆ ಹೊಂದಿಕೆಯಾಗುವ ಸಂಪೂರ್ಣ ಅವಧಿಗೆ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯನ್ನು ವಿಸ್ತರಿಸಲಾಯಿತು.

ಯೋಜನೆ

## ಕೌಶಲ ಭಾರತ ಅಭಿಯಾನ

ಪ್ರಾರಂಭ ಜುಲೈ 15, 2015

**ಕೌಶಲ ಭಾರತವು ಕೌಶಲ್ಯ, ಮರುಕೌಶಲ್ಯ ಮತ್ತು ಉನ್ನತ ಕೌಶಲ್ಯಕ್ಕೆ ವೇಗವನ್ನು ನೀಡುತ್ತಿದೆ**

ಉದ್ದೇಶ: ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಗುರಿಯೊಂದಿಗೆ ಕೌಶಲ್ಯ, ಮರುಕೌಶಲ್ಯ ಮತ್ತು ಉನ್ನತ ಕೌಶಲ್ಯಕ್ಕಾಗಿ ವಿಶಾಲವಾದ ಮೂಲಸೌಕರ್ಯವನ್ನು ಸೃಷ್ಟಿಸುವುದು.

ಪ್ರಗತಿ

25 ಏಪ್ರಿಲ್ 2022 ರವರೆಗೆ 1,42,49,631 ವ್ಯಕ್ತಿಗಳು ನೋಂದಾಯಿಸಿಕೊಂಡಿದ್ದಾರೆ ಮತ್ತು 1,81,858 ಜನರು ಈ ಯೋಜನೆಯಡಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವು ತನ್ನ ಪ್ರಮುಖ ಯೋಜನೆಯ ಮೂರನೇ ಹಂತವಾದ ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ 3.0 (ಪಿಎಂಕೆವಿವೈ 3.0) ಯನ್ನು ಜನವರಿ 2021 ರಲ್ಲಿ ಪ್ರಾರಂಭಿಸಿದೆ. ಒಟ್ಟು 7.79 ಲಕ್ಷ ಜನರನ್ನು ನೋಂದಾಯಿಸಲಾಗಿದೆ, 5.54 ಲಕ್ಷ ಮಂದಿಗೆ ತರಬೇತಿ ನೀಡಲಾಗಿದೆ, 2.61 ಲಕ್ಷ ಜನರನ್ನು ಮೌಲ್ಯಮಾಪನ ಮಾಡಲಾಗಿದೆ ಮತ್ತು 25 ಏಪ್ರಿಲ್ 2022 ರವರೆಗೆ ಪಿಎಂಕೆವಿವೈ 3.0 ಅಡಿಯಲ್ಲಿ 2.61 ಲಕ್ಷ ಮಂದಿಯನ್ನು ಪ್ರಮಾಣೀಕರಿಸಲಾಗಿದೆ.

ಇದುವರೆಗೆ

**1,35,40,509**

ಮಂದಿ ತರಬೇತಿ ಪಡೆದಿದ್ದು, 1,08,40,911 ಮಂದಿ ಪ್ರಮಾಣ ಪತ್ರ ಪಡೆದಿದ್ದಾರೆ.

ಯೋಜನೆ

## ರಾಷ್ಟ್ರೀಯ ಶಿಕ್ಷಣ ನೀತಿ

ಪ್ರಾರಂಭ 29 ಜುಲೈ 2020

**ರಾಷ್ಟ್ರೀಯ ಶಿಕ್ಷಣ ನೀತಿ (2020) ಕ್ರಾಂತಿಕಾರಿ ಫಲಿತಾಂಶಗಳನ್ನು ತರುತ್ತದೆ**

ಉದ್ದೇಶ: ರಾಷ್ಟ್ರೀಯ ಶಿಕ್ಷಣ ನೀತಿ (2020) ಭವಿಷ್ಯದ ಭಾರತದ ಯುವಕರನ್ನು ಸಿದ್ಧಪಡಿಸುವ ಗುರಿಯನ್ನು ಹೊಂದಿದೆ ಮತ್ತು ಭಾರತವನ್ನು ವಿಶ್ವದ ಅತಿದೊಡ್ಡ ಕೌಶಲ್ಯಪೂರ್ಣ ಉದ್ಯೋಗಿಗಳ ರಾಷ್ಟ್ರವನ್ನಾಗಿ ಪರಿವರ್ತಿಸಲು ಯೋಜಿಸಿದೆ.

## ಪ್ರಗತಿ

ವಿದ್ಯಾರ್ಥಿಗಳಿಗೆ ಮರಗೆಲಸ, ವಿದ್ಯುತ್ ದುರಸ್ತಿ, ತೋಟಗಾರಿಕೆ, ಕುಂಬಾರಿಕೆ, ಕಸೂತಿ ಮುಂತಾದ ವೃತ್ತಿಪರ ಕೌಶಲ್ಯಗಳ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ನೀತಿಯ ಅಡಿಯಲ್ಲಿ, 2025 ರ ವೇಳೆಗೆ ಕನಿಷ್ಠ ಶೇ.50 ರಷ್ಟು ವಿದ್ಯಾರ್ಥಿಗಳಿಗೆ ವೃತ್ತಿಪರ ಕೌಶಲ್ಯಗಳನ್ನು ನೀಡುವ ಗುರಿಯನ್ನು ನಿಗದಿಪಡಿಸಲಾಗಿದೆ. ಇದರಿಂದ ಶಾಲಾ ಹಂತದಲ್ಲಿ ಪಡೆದ ವೃತ್ತಿಪರ ಕೌಶಲ್ಯಗಳನ್ನು ಉನ್ನತ ಮಟ್ಟದ ಅಧ್ಯಯನಕ್ಕೆ ಕೊಂಡೊಯ್ಯಬಹುದು.

ಯೋಜನೆ

ಪ್ರಾರಂಭ 29 ಸೆಪ್ಟೆಂಬರ್ 2021

## ಪ್ರಧಾನ ಮಂತ್ರಿ ಪೋಷಣ್ ಯೋಜನೆ

**ಪೋಷಣ್ ಯೋಜನೆಯು ಶಾಲಾ ವಿದ್ಯಾರ್ಥಿಗಳಿಗೆ ಪೌಷ್ಟಿಕಾಂಶವನ್ನು ಒದಗಿಸುವಲ್ಲಿ ಹೊಸ ಮಾನದಂಡವನ್ನು ನಿಗದಿಪಡಿಸಿದೆ.**

ಉದ್ದೇಶ: ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಒಂದರಿಂದ 8ನೇ ತರಗತಿವರೆಗೆ ಓದುತ್ತಿರುವ ಎಲ್ಲ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದು.

## ಪ್ರಗತಿ

ದೇಶಾದ್ಯಂತ 11.20 ಲಕ್ಷ ಶಾಲೆಗಳಲ್ಲಿ ಓದುತ್ತಿರುವ ಸುಮಾರು 11.80 ಕೋಟಿ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಪ್ರಧಾನಮಂತ್ರಿ ಪೋಷಣ್ ಯೋಜನೆಯಡಿ, ಬಾಲ ವಾಟಿಕಾ (ಪ್ರಿ-ಸ್ಕೂಲ್) ಅಂದರೆ ನರ್ಸರಿಯಿಂದ 8 ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಬರುತ್ತಾರೆ, ಈಗ ಅವರಿಗೆ ಯೋಜನೆಯಡಿ ಪೌಷ್ಟಿಕಾಂಶಯುಕ್ತ ಸಾರವರ್ಧಿತ ಅಕ್ಕಿಯನ್ನು ನೀಡಲಾಗುವುದು.

**₹130794.90**

ಕೋಟಿ ಪ್ರಧಾನ ಮಂತ್ರಿ ಪೋಷಣ್ ಯೋಜನೆಯ ಒಟ್ಟು ಬಜೆಟ್ ಆಗಿದೆ.

ಯೋಜನೆ

## ಅಟಲ್ ಇನ್ನೋವೇಶನ್ ಮಿಷನ್

ಪ್ರಾರಂಭ ಅಕ್ಟೋಬರ್ 2021

**ಅಟಲ್ ಇನ್ನೋವೇಶನ್ ಮಿಷನ್ ಭಾರತವು ತನ್ನ ಜಾಗತಿಕ ನಾವೀನ್ಯತಾ ಸೂಚ್ಯಂಕ ಶ್ರೇಯಾಂಕವನ್ನು ಸುಧಾರಿಸಲು ಸಹಾಯ ಮಾಡುತ್ತದೆ.**

ಉದ್ದೇಶ: ಶಾಲೆಗಳು, ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್ಎಂಇಗಳು) ಮತ್ತು ಕೈಗಾರಿಕೆಗಳ ಮಟ್ಟದಲ್ಲಿ ದೇಶಾದ್ಯಂತ ನಾವೀನ್ಯತೆ ಹಾಗು ಉದ್ಯಮಶೀಲತೆಯ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುವುದು ಮತ್ತು ಉತ್ತೇಜಿಸುವುದು.

ಪ್ರಗತಿ

- 26ನೇ ಏಪ್ರಿಲ್ 2022 ರಂತೆ, ದೇಶದಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಸಂಖ್ಯೆ 9,500 ಕ್ಕಿಂತ ಹೆಚ್ಚಿವೆ. ಅಲ್ಲದೆ, ಇದು 34 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 722 ಜಿಲ್ಲೆಗಳಲ್ಲಿ ಹರಡಿವೆ.
- ಪ್ರಸ್ತುತ 75 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಟಲ್ ಟಿಂಕರಿಂಗ್ ಲ್ಯಾಬ್‌ಗಳೊಂದಿಗೆ ಸಹಯೋಗ ಹೊಂದಿದ್ದಾರೆ. ಜಾಗತಿಕ ನಾವೀನ್ಯತಾ ಸೂಚ್ಯಂಕ ಶ್ರೇಯಾಂಕದಲ್ಲಿ ಭಾರತವು ಏರಿಕೆಯನ್ನು ಮುಂದುವರಿಸಿದೆ ಮತ್ತು ಪ್ರಸ್ತುತ 46 ನೇ ಸ್ಥಾನದಲ್ಲಿದೆ.
- 2015ರಲ್ಲಿ ಭಾರತ ಶ್ರೇಯಾಂಕದಲ್ಲಿ 81ನೇ ಸ್ಥಾನದಲ್ಲಿತ್ತು. ಅಟಲ್ ಇನ್ನೋವೇಶನ್ ಮಿಷನ್ ಅನ್ನು ಮಾರ್ಚ್ 2023 ರವರೆಗೆ ಮುಂದುವರಿಸಲು ಕೇಂದ್ರ ಸಚಿವ ಸಂಪುಟವು ಇತ್ತೀಚೆಗೆ ಅನುಮೋದನೆ ನೀಡಿದೆ.
- ಈ ಮಿಷನ್ ಅಡಿಯಲ್ಲಿ, ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಫಲಾನುಭವಿಗಳಿಗೆ ನೆರವು ನೀಡಲು 2,000 ಕೋಟಿ ರೂ.ಗೂ ಹೆಚ್ಚು ಖರ್ಚು ಮಾಡಲಾಗುವುದು.

### ವಿಶ್ವವಿದ್ಯಾಲಯಗಳು




**ಖೇಲೋ ಇಂಡಿಯಾ: ಕ್ರೀಡೆಗಳು ಮತ್ತು ಕ್ರೀಡಾಪಟುಗಳನ್ನು ಉತ್ತೇಜಿಸುವ ರಾಷ್ಟ್ರೀಯ ಕಾರ್ಯಕ್ರಮ**

ಪ್ರಾರಂಭ 26 ಏಪ್ರಿಲ್, 2016

ಉದ್ದೇಶ: ಹೊಸ ಪ್ರತಿಭೆಗಳನ್ನು ಗುರುತಿಸುವ ಮೂಲಕ ಕ್ರೀಡಾ ಪಟುಗಳಿಗೆ ಆರ್ಥಿಕ ಮತ್ತು ಅಭಿವೃದ್ಧಿಯ ನೆರವು.

ಪ್ರಗತಿ: ಖೇಲೋ ಇಂಡಿಯಾ ಯೋಜನೆಯು ಕ್ರೀಡಾ ಪ್ರಪಂಚದ ಅನೇಕ ಹೊಸ ಪ್ರತಿಭೆಗಳನ್ನು ರೂಪಿಸಿದೆ. ಈ ಯೋಜನೆಯು ತಳಮಟ್ಟದಿಂದ ಮೇಲಕ್ಕೆ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಿದೆ ಮತ್ತು ಅವರ ಒಲಿಂಪಿಕ್ಸ್ ಕನಸನ್ನು ನನಸಾಗಿಸಲು ಪ್ರತಿಭೆಗಳನ್ನು ಗುರುತಿಸುವಲ್ಲಿ ಮತ್ತು ಪೋಷಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದೆ. ಆಟದ ಮೈದಾನಗಳ ಅಭಿವೃದ್ಧಿ ಉಪಕ್ರಮಗಳ ಅಡಿಯಲ್ಲಿ, 2008 ಮತ್ತು 2014 ರ ನಡುವೆ ದೇಶದಲ್ಲಿ 38 ಕ್ರೀಡಾ ಮೂಲಸೌಕರ್ಯಗಳಿದ್ದರೆ, 2014 ಮತ್ತು 2020 ರ ನಡುವೆ ಈ ಸಂಖ್ಯೆ 267 ಕ್ಕೆ ಏರಿತು. ಅಲ್ಲದೆ, ತಳಮಟ್ಟದಲ್ಲಿ ಪ್ರತಿಭೆಯನ್ನು ಆಯ್ಕೆ ಮಾಡಲು 14,595 ತರಬೇತುದಾರರಿಗೆ ತರಬೇತಿ ನೀಡಲಾಗಿದೆ. 2024 ರ ವೇಳೆಗೆ, ಕ್ರೀಡೆಗಾಗಿ 25 ಶ್ರೇಷ್ಠತಾ ಕೇಂದ್ರಗಳು, 100 ರಾಷ್ಟ್ರೀಯ ಶ್ರೇಷ್ಠತಾ ಅಕಾಡೆಮಿ ಮತ್ತು 1,000 ಖೇಲೋ ಇಂಡಿಯಾ ಕೇಂದ್ರಗಳನ್ನು ದೇಶದಾದ್ಯಂತ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾಗುವುದು.

ಯೋಜನೆ

ಪ್ರಾರಂಭ ಸೆಪ್ಟೆಂಬರ್ 5, 2017

## ದೀಕ್ಷಾ

**ಮಕ್ಕಳಿಗೆ ಶಿಕ್ಷಣ ನೀಡುವುದರ ಜೊತೆಗೆ ಶಿಕ್ಷಕರು ಆನ್‌ಲೈನ್ ತರಬೇತಿಯನ್ನು ಪಡೆಯುತ್ತಿದ್ದಾರೆ**

ಉದ್ದೇಶ: ಮಕ್ಕಳ ಆನ್‌ಲೈನ್ ಶಿಕ್ಷಣಕ್ಕಾಗಿ ಹಾಗೂ ಶಿಕ್ಷಕರ ಆನ್‌ಲೈನ್ ತರಬೇತಿಗಾಗಿ ದೀಕ್ಷಾ ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ.

ದೀಕ್ಷಾ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಹಲವಾರು ಭಾಷೆಗಳಲ್ಲಿ ಅಧ್ಯಯನ ಸಾಮಗ್ರಿಗಳನ್ನು ಹೊಂದಿದೆ. 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ದೀಕ್ಷಾ ಅಳವಡಿಸಿಕೊಳ್ಳಲಾಗಿದೆ.

### ಏರಿಕೆಯಾಗಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ



### ರಾಷ್ಟ್ರೀಯ ಪರೀಕ್ಷಾ ಸಂಸ್ಥೆ

ಒಂದು ರಾಷ್ಟ್ರ, ಒಂದು ಪರೀಕ್ಷೆ. ಮೇ 2018 ರಲ್ಲಿ ರಾಷ್ಟ್ರೀಯ ನೇಮಕಾತಿ ಏಜೆನ್ಸಿ - ಅಂತರರಾಷ್ಟ್ರೀಯ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು, ಅದರ ಮೂಲಕ ಪರೀಕ್ಷೆಯನ್ನು ನಡೆಸಲಾಗುತ್ತದೆ. ಇದು ಸರ್ಕಾರಿ ಉದ್ಯೋಗಗಳಿಗಾಗಿ ವಿವಿಧ ಪರೀಕ್ಷೆಗಳಲ್ಲಿ ಕಾಣಿಸಿಕೊಳ್ಳುವ ಅಗತ್ಯಕ್ಕೆ ಅಂತ್ಯ ಹಾಡಿತು. ಪ್ರತಿ ವರ್ಷ ಸುಮಾರು 60 ಲಕ್ಷ ಅಭ್ಯರ್ಥಿಗಳು ವಿವಿಧ ಸಂಸ್ಥೆಗಳ ಪ್ರವೇಶ ಪರೀಕ್ಷೆಗೆ ಹಾಜರಾಗುತ್ತಾರೆ.

### ಸ್ವಯಂ

ಯುವ ಮಹತ್ವಾಕಾಂಕ್ಷೆಯ ಮನಸ್ಸುಗಳಿಗಾಗಿ ಸಕ್ರಿಯ ಕಲಿಕೆಯ ಸ್ಟಡಿ ವೆಬ್ (ಸ್ವಯಂ) 9-12ನೇ ತರಗತಿಗಳಿಂದ ಸ್ನಾತಕೋತ್ತರ ಹಂತದವರೆಗೆ ಆನ್‌ಲೈನ್ ಕೋರ್ಸ್‌ಗಳನ್ನು ಒದಗಿಸುವ ಸಮಗ್ರ ವೇದಿಕೆಯಾಗಿದೆ. ಸ್ವಯಂ ನಲ್ಲಿ ಪ್ರಸ್ತುತ ಹಲವು ಕೋರ್ಸ್‌ಗಳು ಲಭ್ಯವಿವೆ ಮತ್ತು 19ನೇ ಏಪ್ರಿಲ್ 2022 ರಂತೆ ನೋಂದಾಯಿತ ಬಳಕೆದಾರರ ಸಂಖ್ಯೆ 2,71,90,053 ಆಗಿತ್ತು.

### ಸ್ವಯಂ ಪ್ರಭಾ

ಇದು 24X7 ಆಧಾರದ ಮೇಲೆ ದೇಶಾದ್ಯಂತ ಡೈರೆಕ್ಟ್ ಟು ಹೋಮ್ ಮೂಲಕ 34 ಉತ್ತಮ ಗುಣಮಟ್ಟದ ಶೈಕ್ಷಣಿಕ ಚಾನಲ್‌ಗಳನ್ನು ಒದಗಿಸುವ ಉಪಕ್ರಮವಾಗಿದೆ. ಇದು ವಿವಿಧ ವಿಷಯಗಳ ಪಠ್ಯಕ್ರಮ ಆಧಾರಿತ ಪಠ್ಯ ಸಾಮಗ್ರಿಗಳನ್ನು ಒಳಗೊಂಡಿರುತ್ತದೆ. ಇಂಟರ್ನೆಟ್ ಲಭ್ಯತೆ ಇನ್ನೂ ಸವಾಲಾಗಿ ಉಳಿದಿರುವ ದೂರದ ಪ್ರದೇಶಗಳನ್ನು ತಲುಪುವ ಗುರಿಯನ್ನು ಇದು ಹೊಂದಿದೆ.

### ಡಿಜಿಟಲ್ ಗ್ರಂಥಾಲಯ

ನ್ಯಾಷನಲ್ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾವು ಏಕ ಗವಾಕ್ಷಿ ಹುಡುಕಾಟ/ಬ್ರೌಸ್ ಸೌಲಭ್ಯದ ಅಡಿಯಲ್ಲಿ ಕಲಿಕೆಯ ಸಂಪನ್ಮೂಲಗಳ ವರ್ಚುವಲ್ ಭಂಡಾರಕ್ಕಾಗಿ ಚೌಕಟ್ಟನ್ನು ಅಭಿವೃದ್ಧಿಪಡಿಸುವ ಯೋಜನೆಯಾಗಿದೆ. ನ್ಯಾಷನಲ್ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾವನ್ನು 19 ಜೂನ್ 2018 ರಂದು ರಾಷ್ಟ್ರೀಯ ಓದುವ ದಿನದ ಸಂದರ್ಭದಲ್ಲಿ ಪ್ರಾರಂಭಿಸಲಾಯಿತು.

### ಡಿಜಿಟಲ್ ವಿಶ್ವವಿದ್ಯಾನಿಲಯ

ವಿಶ್ವದರ್ಜೆಯ ಉನ್ನತ ಶಿಕ್ಷಣ ಎಲ್ಲರಿಗೂ ಲಭ್ಯವಾಗುವಂತೆ ಮಾಡಲು, ಡಿಜಿಟಲ್ ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಕೇಂದ್ರ ಬಜೆಟ್ 2022 ರಲ್ಲಿ ಘೋಷಿಸಲಾಯಿತು. ಇದು ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಪ್ರವೇಶವನ್ನು ಹೆಚ್ಚಿಸುತ್ತದೆ, ವಿಶೇಷವಾಗಿ ಗ್ರಾಮೀಣ, ದೂರದ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಇದು ಹೆಚ್ಚು ಉಪಯುಕ್ತವಾಗಿದೆ.

### ನಿಷ್ಠಾ - ಎನ್‌ಐಎಸ್‌ಎಚ್‌ಟಿಎಚ್‌ಎ

ಇದು ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಪ್ರಗತಿಗೆ ರಾಷ್ಟ್ರೀಯ ಉಪಕ್ರಮವಾಗಿದೆ. ಶಿಕ್ಷಣ ಕ್ಷೇತ್ರವನ್ನು ಬಲಪಡಿಸಲು ಕೇಂದ್ರ ಸರ್ಕಾರವು ನಿಷ್ಠಾ ಯೋಜನೆಯನ್ನು ಪ್ರಾರಂಭಿಸಿದೆ, ದೇಶದ ಶಿಕ್ಷಕರಿಗೆ ತರಬೇತಿ ನೀಡುವುದು ಇದರ ಉದ್ದೇಶವಾಗಿದೆ.

### ವಿದ್ಯಾ ಪ್ರವೇಶ

ವಿದ್ಯಾ ಪ್ರವೇಶ ಎಂಬ ಹೆಸರಿನ ಮತ್ತೊಂದು ಉಪಕ್ರಮವನ್ನು ಪ್ರಾರಂಭಿಸಲಾಗಿದೆ. ಇದರ ಅಡಿಯಲ್ಲಿ, ಗ್ರೇಡ್-1 ರ ಮಕ್ಕಳಿಗೆ ಮೂರು ತಿಂಗಳ ಪ್ಲೇ ಸ್ಕೂಲ್ ಆಧಾರಿತ ಶೈಕ್ಷಣಿಕ ಮಾಡ್ಯೂಲ್ ಅನ್ನು ರಚಿಸಲಾಗಿದೆ.

### ರಾಷ್ಟ್ರೀಯ ನೇಮಕಾತಿ ಸಂಸ್ಥೆ

ಕೇಂದ್ರ ಸರ್ಕಾರಿ ಉದ್ಯೋಗಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪರಿವರ್ತನೆಯ ಸುಧಾರಣೆಗಳನ್ನು ತರಲು ರಾಷ್ಟ್ರೀಯ ನೇಮಕಾತಿ ಏಜೆನ್ಸಿಯ ರಚನೆಯನ್ನು ಅನುಮೋದಿಸಲಾಗಿದೆ. ಎಲ್ಲಾ ಸರ್ಕಾರಿ ಉದ್ಯೋಗ ಆಕಾಂಕ್ಷಿಗಳು ರಾಷ್ಟ್ರೀಯ ನೇಮಕಾತಿ ಏಜೆನ್ಸಿ ನಡೆಸುವ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗುತ್ತಾರೆ, ನಂತರ ಅವರು ಸಾಮಾನ್ಯ ಅರ್ಹತಾ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಉನ್ನತ ಮಟ್ಟದ ಪರೀಕ್ಷೆಗಾಗಿ ಯಾವುದೇ ನೇಮಕಾತಿ ಏಜೆನ್ಸಿಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತದೆ.

### ನೇಮಕಾತಿಗಳಿಗಾಗಿ ದಾಖಲೆಗಳ ಸ್ವಯಂ-ದೃಢೀಕರಣ

"ಕನಿಷ್ಠ ಸರ್ಕಾರ ಗರಿಷ್ಠ ಆಡಳಿತ" ದ ನಂತರ ಭಾರತ ಸರ್ಕಾರವು ದಾಖಲೆಗಳ ಸ್ವಯಂ ಪ್ರಮಾಣೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಜೂನ್ 2016 ರಿಂದ, ನೇಮಕಾತಿ ಏಜೆನ್ಸಿಗಳು ಅಭ್ಯರ್ಥಿಗಳು ಸಲ್ಲಿಸಿದ ಸ್ವಯಂ-ದೃಢೀಕರಿಸಿದ ದಾಖಲೆಗಳ ಆಧಾರದ ಮೇಲೆ ತಾತ್ಕಾಲಿಕ ನೇಮಕಾತಿ ಪತ್ರಗಳನ್ನು ನೀಡುತ್ತವೆ.

### ಅಸೀಮ್ ಪೋರ್ಟಲ್

ನುರಿತ ಉದ್ಯೋಗಿಗಳಿಗೆ ಜೀವನೋಪಾಯದ ಅವಕಾಶಗಳಿಗಾಗಿ ಅನುವು ಮಾಡಿಕೊಡಲು, ಕೌಶಲ್ಯದ ಉದ್ಯೋಗಿಗಳ ಮಾರುಕಟ್ಟೆಯಲ್ಲಿ ಬೇಡಿಕೆ-ಪೂರೈಕೆ ಅಂತರವನ್ನು ಕಡಿಮೆ ಮಾಡಲು ಮತ್ತು ಉದ್ಯೋಗದಾತರಿಗೆ ಕೌಶಲ್ಯಪೂರ್ಣ ಉದ್ಯೋಗಿಗಳನ್ನು ಹುಡುಕಲು ಸಹಾಯ ಮಾಡುವ ದೃಷ್ಟಿಯಿಂದ ಮಾಹಿತಿ ಹರಿವನ್ನು ಸುಧಾರಿಸಲು 'ಆತ್ಮನಿರ್ಭರ್ ನುರಿತ ಉದ್ಯೋಗಿ ಉದ್ಯೋಗದಾತ ಮ್ಯಾಪಿಂಗ್' (ಅಸೀಮ್) ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ.

ಪ್ರಾರಂಭ ಆಗಸ್ಟ್ 07, 2016

## ಯೋಜನೆ

### ಪ್ರಧಾನಮಂತ್ರಿ ರೋಜ್‌ಗಾರ್ ಪ್ರೋತ್ಸಾಹನ್ ಯೋಜನೆ

**ಪ್ರಧಾನಮಂತ್ರಿ ರೋಜಗಾರ್ ಪ್ರೋತ್ಸಾಹನ್ ಯೋಜನೆಯಿಂದಾಗಿ ಯುವಕರು ಸ್ವಾವಲಂಬಿಗಳಾಗುತ್ತಿದ್ದಾರೆ.**

ಉದ್ದೇಶ: ಉದ್ಯೋಗದಾತರನ್ನು ಉತ್ತೇಜಿಸುವುದು ಮತ್ತು ಹೊಸ ಉದ್ಯೋಗಾವಕಾಶಗಳನ್ನು ಒದಗಿಸುವುದು.

## ಪ್ರಗತಿ

ಹೆಚ್ಚಿನ ನಾಗರಿಕರು ಇದರ ಪ್ರಯೋಜನವನ್ನು ಪಡೆಯಲು ಈ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಅಭಿಯಾನಗಳನ್ನು ಸಹ ನಡೆಸಲಾಗುತ್ತಿದೆ. ಇದರ ಅಡಿಯಲ್ಲಿ, ಹೊಸ ಉದ್ಯೋಗಿಗಳಿಗೆ ಸರ್ಕಾರವು ಉದ್ಯೋಗದಾತರ ಇಪಿಎಫ್ ಪಾಲನ್ನು 8.33 ಪ್ರತಿಶತದಷ್ಟು ಪಾವತಿಸುತ್ತದೆ.

**1.21** ಕೋಟಿ ಜನರು 1.53 ಲಕ್ಷ ಸಂಸ್ಥೆಗಳ ಮೂಲಕ 27 ನವೆಂಬರ್ 2021 ರವರೆಗೆ ಪ್ರಯೋಜನ ಪಡೆದಿದ್ದಾರೆ.

## ರಾಷ್ಟ್ರೀಯ ವೃತ್ತಿ ಸೇವೆ

ಪ್ರಾರಂಭ 20 ಜುಲೈ, 2015

ಯೋಜನೆ

### ರಾಷ್ಟ್ರೀಯ ವೃತ್ತಿ ಸೇವೆಯಲ್ಲಿ ವಿಪುಲ ಉದ್ಯೋಗಾವಕಾಶಗಳು

ಉದ್ದೇಶ: ನಿರುದ್ಯೋಗಿಗಳಿಗೆ ಉದ್ಯೋಗ ಹುಡುಕಲು ಸಹಾಯ ಮಾಡುವುದು

ಪ್ರಗತಿ

- ಎನ್‌ಸಿಎಸ್ ಯೋಜನೆಯಡಿಯಲ್ಲಿ, ಎನ್‌ಸಿಎಸ್ ಪೋರ್ಟಲ್‌ನಲ್ಲಿ ಇಲ್ಲಿಯವರೆಗೆ 94 ಲಕ್ಷಕ್ಕೂ ಹೆಚ್ಚು ಖಾಲಿ ಹುದ್ದೆಗಳನ್ನು ಕಲ್ಪಿಸಲಾಗಿದೆ.
- ಎನ್‌ಸಿಎಸ್ ಯೋಜನೆಯಡಿ ಆಯೋಜಿಸಲಾದ ಉದ್ಯೋಗ ಮೇಳಗಳ ಮೂಲಕ 2 ಲಕ್ಷಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೀಡಲಾಗಿದೆ
- ಕೌನ್ಸೆಲಿಂಗ್ ಉದ್ದೇಶಗಳಿಗಾಗಿ ಎನ್‌ಸಿಎಸ್ ಪೋರ್ಟಲ್‌ನಲ್ಲಿ 3,600 ಕ್ಕೂ ಹೆಚ್ಚು ವೃತ್ತಿಗಳಿಗೆ ವೃತ್ತಿ ಸಂಬಂಧಿತ ಮಾಹಿತಿ ಲಭ್ಯವಿದೆ.
- ಉದ್ಯೋಗಗಳನ್ನು ಪಡೆಯಲು ರಾಷ್ಟ್ರೀಯ ವೃತ್ತಿ ಸೇವೆಯಲ್ಲಿ ನೋಂದಾಯಿಸಿಕೊಳ್ಳಬೇಕು. ನೋಂದಣಿ ಸೌಲಭ್ಯವು ಉಚಿತವಾಗಿದೆ. ಮಹಿಳೆಯರು ಸೇರಿದಂತೆ ಪ್ರತಿ ವರ್ಗದವರಿಗೆ ಉದ್ಯೋಗಗಳು ಲಭ್ಯವಿವೆ ಮತ್ತು ಪ್ರತಿ ವರ್ಗದ ಅಂಗವಿಕಲರಿಗೆ ಸರ್ಕಾರದ ಮನೆಯಿಂದ ಕೆಲಸ ಮಾಡಲು ಆಯ್ಕೆಯಿದೆ.



ಪ್ರಾರಂಭ 29 ಆಗಸ್ಟ್, 2019

ಯೋಜನೆ

ಫಿಟ್ ಇಂಡಿಯಾ ಆಂದೋಲನ

### ಫಿಟ್ನೆಸ್ ಕಾ ಡೋಸ್, ಆಧಾ ಘಂಟಾ ರೋಜ್

ಉದ್ದೇಶ: ಜನರ ದೈನಂದಿನ ದಿನಚರಿಯಲ್ಲಿ ದೈಹಿಕ ಕಸರತ್ತು ಮತ್ತು ಕ್ರೀಡೆಗಳನ್ನು ಸೇರಿಸುವುದು

ಪ್ರಗತಿ

18 ಏಪ್ರಿಲ್ 2022 ರವರೆಗೆ, 1013789 ಶಾಲೆಗಳು ಫಿಟ್ ಇಂಡಿಯಾ ಅಡಿಯಲ್ಲಿ ನೋಂದಾಯಿಸಿಕೊಂಡಿವೆ. ಫಿಟ್ ಇಂಡಿಯಾ ಆಂದೋಲನವು ಫಿಟ್ ಇಂಡಿಯಾ ಶಾಲಾ ವಾರ, ಫಿಟ್ ಇಂಡಿಯಾ ಫ್ರೀಡಂ ರನ್, ಫಿಟ್ ಇಂಡಿಯಾ ಸೈಕ್ಲೋಥಾನ್ ಮತ್ತು ಇನ್ನೂ ಅನೇಕ ದೈಹಿಕ ದೃಢತೆಯ ಅಭಿಯಾನಗಳೊಂದಿಗೆ ದೇಶಾದ್ಯಂತ ಲಕ್ಷಾಂತರ ಜನರನ್ನು ಸಂಪರ್ಕಿಸಿದೆ. ಫಿಟ್ ಇಂಡಿಯಾ ಆಂದೋಲನವು ಆಜಾದಿ ಕಾ ಅಮೃತ ಮಹೋತ್ಸವದ ನೆನಪಿಗಾಗಿ 2021 ರಲ್ಲಿ ಫಿಟ್ ಇಂಡಿಯಾ ಫ್ರೀಡಂ ರನ್ 2.0 ಅನ್ನು ಆಯೋಜಿಸಿತ್ತು. ಇದನ್ನು 744 ಜಿಲ್ಲೆಗಳಲ್ಲಿ, 744 ಜಿಲ್ಲೆಗಳ ಪ್ರತೀ 75 ಹಳ್ಳಿಗಳಲ್ಲಿ ಮತ್ತು ದೇಶದಾದ್ಯಂತ 30,000 ಶಿಕ್ಷಣ ಸಂಸ್ಥೆಗಳಲ್ಲಿ ಆಯೋಜಿಸಲಾಗಿತ್ತು. ಫಿಟ್ ಇಂಡಿಯಾ ಆಂದೋಲನದಲ್ಲಿ ವಯಸ್ಸಿನ ಪ್ರಕಾರ ವಿಭಿನ್ನ ಫಿಟ್‌ನೆಸ್ ಶಿಷ್ಟಾಚಾರಗಳನ್ನು ರಚಿಸಲಾಗಿದೆ.





ಅಂತರರಾಷ್ಟ್ರೀಯ

# ಭಾರತ ವಿಶ್ವ ಗುರು ಆಗುತ್ತಿದೆ

"ಒಂದು ಪ್ರೇರಣೆಯಿದ್ದರೆ, ನನ್ನ ದೇಶವು ಅಮರವಾಗಿರುತ್ತದೆ. ಜಗತ್ತು ಸ್ಮರಿಸಿಕೊಳ್ಳುವುದಾದರೆ ನನ್ನ ದೇಶವನ್ನು ನೆನಪಿಸಿಕೊಳ್ಳಿ, ನನ್ನ ದೇಶದ ಭವಿಷ್ಯವನ್ನು ನೋಡಿ, ನನ್ನ ದೇಶದ ಬಗ್ಗೆ ಜಗತ್ತು ಹೆಮ್ಮೆಯಿಂದ ಹೇಳಬೇಕು, ಇದು ಮಾನವ ಕಲ್ಯಾಣಕ್ಕೆ ದಾರಿ ತೋರಿಸುವ ದೇಶ. ಜಗತ್ತನ್ನು ಸಂಕಷ್ಟದಿಂದ ಹೊರತರುವ ಶಕ್ತಿ ಈ ದೇಶಕ್ಕಿದೆ.'' ಈ ಚಿಂತನೆಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾಮಿ ವಿವೇಕಾನಂದರ 'ಭಾರತ ವಿಶ್ವಗುರುವಾಗಬೇಕು'ಎಂಬ ಕನಸನ್ನು ನನಸು ಮಾಡುತ್ತಿದ್ದಾರೆ. ಇಂದು ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ವಿಶ್ವದ ಪ್ರತಿಯೊಂದು ಪ್ರಮುಖ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಆತ್ಮವಿಶ್ವಾಸದ ಧ್ವನಿ ಕೇಳಿಬರುತ್ತಿದೆ. ಕೋವಿಡ್‌ನ ಸಂಕಷ್ಟದ ಸಮಯದಲ್ಲಿ, ವಿಶ್ವ ಗುರು ಭಾರತವು ಬಿಕ್ಕಟ್ಟನ್ನು ಎದುರಿಸುವ ಧೈರ್ಯವನ್ನು ಜಗತ್ತಿಗೆ ತೋರಿಸಿದ್ದು ಮಾತ್ರವಲ್ಲದೆ ತನ್ನ ಶಕ್ತಿ ಮತ್ತು ತಾಳಿಕೆಯನ್ನು ತೋರಿಸಿಕೊಟ್ಟಿದೆ.

2014ರಲ್ಲಿ ನರೇಂದ್ರ ಮೋದಿ ಅವರು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಪ್ರಧಾನಿಯಾಗಿ ಆಯ್ಕೆಯಾದಾಗ ಅವರ ವಿದೇಶಾಂಗ ನೀತಿ ಹೇಗಿರುತ್ತದೆ ಎಂದು ಜಗತ್ತು ಕಾತರದಿಂದ ಕಾಯುತ್ತಿತ್ತು. ಪ್ರಪಂಚದಾದ್ಯಂತ ಹೊಸ ಸ್ನೇಹಿತರನ್ನು ಮಾಡಿಕೊಳ್ಳುವುದರ ಜೊತೆಗೆ ಹಳೆಯ ಸ್ನೇಹಿತರೊಂದಿಗೆ ಬಾಂಧವ್ಯವನ್ನು ಬಲಪಡಿಸುವ ಮೂಲಕ ಅವರು ಭಾರತದ ವಿದೇಶಾಂಗ ನೀತಿಯನ್ನು ನವೀಕೃತ ಚೈತನ್ಯದೊಂದಿಗೆ ಪುನಶ್ಚೇತನಗೊಳಿಸಿದರು. 'ಇಂಡಿಯಾ ಫಸ್ಟ್' ಅನ್ನು ತನ್ನ ಪ್ರಮುಖ ತತ್ವವಾಗಿ ಇಟ್ಟುಕೊಂಡು ಅವರು 'ಲುಕಿಂಗ್ ವೆಸ್ಟ್' ಮತ್ತು 'ಆಕ್ಟಿಂಗ್ ಈಸ್ಟ್' ಎಂಬ ನೀತಿಯನ್ನು ಅಳವಡಿಸಿಕೊಂಡರು. ಪ್ರಪಂಚದ ಬಗ್ಗೆ ಪ್ರಧಾನಿ ಮೋದಿ ನೇತೃತ್ವದ ಸರ್ಕಾರದ ದೃಷ್ಟಿಕೋನ ಹಳೆಯ ಸಂಕೋಲೆಗಳಿಂದ ಮುಕ್ತವಾಗಿದೆ. ಕೋವಿಡ್ ಸಮಯದಲ್ಲಿ 150 ಕ್ಕೂ ಹೆಚ್ಚು ದೇಶಗಳಿಗೆ ಸಹಾಯ ಮಾಡುವ ಮೂಲಕ ಅವರು ಶತಮಾನದ ಅತಿದೊಡ್ಡ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಜಗತ್ತಿಗೆ ಹೊಸ ಆತ್ಮವಿಶ್ವಾಸವನ್ನು ನೀಡಿದರು. ಕೋವಿಡ್ ನಂತರದ ಯುಗದಲ್ಲಿ, ಜಗತ್ತು ಹೊಸ ಭರವಸೆಯೊಂದಿಗೆ ಭಾರತದತ್ತ ನೋಡುತ್ತಿದೆ. ಜಿ-20 ರಿಂದ ಬ್ರಿಕ್ಸ್‌ವರೆಗೆ, ಕ್ವಾಡ್‌ನಿಂದ ಎಸ್‌ಸಿಒ ಶೃಂಗಸಭೆಯವರೆಗೆ ಮತ್ತು ಆಸಿಯಾನ್‌ನಿಂದ ಈಸ್ಟರ್ನ್ ಎಕನಾಮಿಕ್ ಫೋರಮ್ ಮತ್ತು ಸಿಒಪಿ -26 ರವರೆಗೆ ಭಾರತದ ಧ್ವನಿಯನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಒಂದು ತಿಂಗಳ ಕಾಲ ವಿಶ್ವಸಂಸ್ಥೆ ಭದ್ರತಾ ಮಂಡಳಿ (ಯುಎನ್‌ಎಸ್‌ಸಿ) ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ನಂತರ ಭಾರತವು ದೊಡ್ಡ ಜಾಗತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧವಾಗಿದೆ ಎಂದು ಸಾಬೀತುಪಡಿಸಿದೆ.

# ಕಳೆದ 8 ವರ್ಷಗಳಲ್ಲಿ ಭಾರತದ ವಿದೇಶಾಂಗ ನೀತಿಯ ಪ್ರಮುಖ ಸ್ತಂಭಗಳು...

## ನೆರೆಹೊರೆ ಮೊದಲು ಮತ್ತು ವಿಸ್ತೃತ ನೆರೆಹೊರೆ



- ಪ್ರತಿ ರಾಷ್ಟ್ರವು ತಮ್ಮ ಸ್ನೇಹಿತರನ್ನು ಎಚ್ಚರಿಕೆಯಿಂದ ಆಯ್ಕೆಮಾಡುವುದು ಮಾತ್ರವಲ್ಲದೆ ಪ್ರಪಂಚದಾದ್ಯಂತ ಪ್ರಭಾವ ಬೀರುವ ಘಟನೆಗಳನ್ನು ಗಣನೆಗೆ ತೆಗೆದುಕೊಂಡು ದೀರ್ಘಕಾಲೀನ ಸಹಯೋಗವನ್ನು ಉತ್ತೇಜಿಸುವುದು ಮುಖ್ಯವಾಗಿದೆ.
- ನೆರೆಹೊರೆಯವರೊಂದಿಗೆ ಉತ್ತಮ ಸಂಬಂಧವನ್ನು ಉತ್ತೇಜಿಸುವ ಉದ್ದೇಶದಿಂದ 'ನೆರೆಹೊರೆ ಮೊದಲು' ನೀತಿಯನ್ನು ಅಳವಡಿಸಿಕೊಳ್ಳಲಾಯಿತು. ಹಾಗೆಯೇ, ದೂರದ ದೇಶಗಳೊಂದಿಗಿನ ಸಂಬಂಧಗಳಿಗೆ ಹೊಸ ಆಯಾಮವನ್ನು ನೀಡಲು 'ವಿಸ್ತೃತ ನೆರೆಹೊರೆ' ನೀತಿಗೆ ಪ್ರಮುಖ ಆದ್ಯತೆ ನೀಡಲಾಗಿದೆ.
- ಉನ್ನತ ನಾಯಕತ್ವದ ಹೊಸ ಚಿಂತನೆಯೊಂದಿಗೆ, ಭಾರತದ ಬಗ್ಗೆ ಪ್ರಪಂಚದ ಹಿಂಜರಿಕೆಯೂ ದೂರವಾಗಲು ಪ್ರಾರಂಭಿಸಿತು ಮತ್ತು ಕೊರೊನಾ ಯುಗದಲ್ಲಿ ಭಾರತವು 'ವಸುಧೈವ ಕುಟುಂಬಕಂ' ಎಂಬ ಮನೋಭಾವದಿಂದ ಜಗತ್ತಿಗೆ ಸಾರಥ್ಯವನ್ನು ನೀಡುತ್ತಿದೆ.



## ಅಂತರರಾಷ್ಟ್ರೀಯ ಯೋಗ ದಿನ

ಭಾರತದ ಪ್ರಾಚೀನ, ಶ್ರೀಮಂತ ಸಂಪ್ರದಾಯದ ಯೋಗವು ಜಾಗತಿಕ ಮನ್ನಣೆಯನ್ನು ಪಡೆಯಿತು ಮತ್ತು ಜಗತ್ತು ಜೂನ್ 21 ಅನ್ನು ಅಂತರಾಷ್ಟ್ರೀಯ ಯೋಗ ದಿನವೆಂದು ಗುರುತಿಸಿತು.

ಕಳೆದ ವರ್ಷ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ **177** ದೇಶಗಳು ಭಾಗವಹಿಸಿದ್ದವು




## ಅಂತರರಾಷ್ಟ್ರೀಯ ಸೌರ ಒಕ್ಕೂಟ

ಅಂತರರಾಷ್ಟ್ರೀಯ ಸೌರ ಒಕ್ಕೂಟ (ಐ ಎಸ್ ಎ) ಸೌರ ಸಂಪನ್ಮೂಲ-ಸಮೃದ್ಧ ರಾಷ್ಟ್ರಗಳ ವಿಶೇಷ ಇಂಧನ ಅಗತ್ಯಗಳನ್ನು ಪೂರೈಸಲು ಭಾರತ ಮತ್ತು ಫ್ರಾನ್ಸ್ ನೇತೃತ್ವದಲ್ಲಿ ತೆಗೆದುಕೊಂಡ ಉಪಕ್ರಮವಾಗಿದೆ. ಈ ಅಂತಾರಾಷ್ಟ್ರೀಯ ಸಂಸ್ಥೆಯ ಪ್ರಧಾನ ಕಛೇರಿ ಭಾರತದಲ್ಲಿದೆ. ಇಲ್ಲಿಯವರೆಗೆ 103 ದೇಶಗಳು ಇದರ ಸದಸ್ಯತ್ವ ಪಡೆದಿವೆ.



## ಲಸಿಕೆ ಮೈತ್ರಿ

सर्वे भवन्तु सुखिनः सर्वे सन्तु निरामयाः ।।
ಕೊರೊನಾ ವಿರುದ್ಧ ಲಸಿಕೆ ಈ ಮಂತ್ರದಿಂದ ಪ್ರಾರಂಭವಾಯಿತು ಮತ್ತು ಭಾರತವು ಎರಡು ಸ್ವದೇಶಿ ಲಸಿಕೆಗಳನ್ನು ಅಭಿವೃದ್ಧಿಪಡಿಸಿ, ಅದು 150 ಕ್ಕೂ ಹೆಚ್ಚು ದೇಶಗಳಿಗೆ ಲಸಿಕೆಗಳನ್ನು ಪೂರೈಸುವ ಮೂಲಕ ಇತರ ದೇಶಗಳಿಗೆ ಸಹಾಯ ಹಸ್ತವನ್ನು ನೀಡಿತು. ಕೊರೊನಾ ಅವಧಿಯಲ್ಲಿ ಔಷಧಗಳು ಮತ್ತು ಇತರ ಅಗತ್ಯ ವಸ್ತುಗಳನ್ನು ಇತರ ದೇಶಗಳಿಗೆ ಸರಬರಾಜು ಮಾಡಲಾಯಿತು, ಇದಕ್ಕಾಗಿ ಕೆಲವು ದೇಶಗಳು ಭಾರತಕ್ಕೆ 'ಹನುಮಾನ್' ಎಂಬ ಬಿರುದನ್ನು ನೀಡಿದಿವು.



## ಕ್ವಾಡ್: 2+2 ಮಾತುಕತೆ

ಭಾರತವು ಅಮೆರಿಕಾ, ಜಪಾನ್ ಮತ್ತು ಆಸ್ಟ್ರೇಲಿಯಾದೊಂದಿಗೆ ಕ್ವಾಡ್ ಗುಂಪಿನ ಪ್ರಮುಖ ಕಾರ್ಯತಂತ್ರದ ಪಾಲುದಾರನಾಗಿದೆ. ಏಷ್ಯಾ ಮತ್ತು ಪೆಸಿಫಿಕ್‌ನ ಕಾರ್ಯತಂತ್ರದ ದೃಷ್ಟಿಕೋನದಿಂದ ಈ ಪಾಲುದಾರಿಕೆ ಬಹಳ ಮುಖ್ಯವಾಗಿದೆ. ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಜತೆಗೆ ಈಗ ರಷ್ಯಾ ಜತೆಯೂ 2+2 ಮಾತುಕತೆ ಆರಂಭವಾಗಿದೆ. ಎಂಟನೇ ಬಾರಿಗೆ ಭದ್ರತಾ ಮಂಡಳಿಯ ತಾತ್ಕಾಲಿಕ ಸದಸ್ಯತ್ವ: ಭಾರತವು ಎಂಟನೇ ಬಾರಿಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ತಾತ್ಕಾಲಿಕ ಸದಸ್ಯನಾಗಿ ಆಯ್ಕೆಯಾಯಿತು.

## ಸಹಾಯ ಹಸ್ತ ಚಾಚಿದ ಭಾರತ

- ರಷ್ಯಾ-ಉಕ್ರೇನ್ ಯುದ್ಧದ ಸಮಯದಲ್ಲಿ, 22 ಸಾವಿರಕ್ಕೂ ಹೆಚ್ಚು ನಾಗರಿಕರನ್ನು ಮರಳಿ ಕರೆತರಲು ಆಪರೇಷನ್ ಗಂಗಾವನ್ನು ಪ್ರಾರಂಭಿಸಲಾಯಿತು. ಪಾಕಿಸ್ತಾನಿ ನಾಗರಿಕರು ಸೇರಿದಂತೆ ವಿಶ್ವದ ಇತರ ದೇಶಗಳ ಭಾರತೀಯ ವಿದ್ಯಾರ್ಥಿಗಳನ್ನು ಸಹ ಸ್ಥಳಾಂತರಿಸಲಾಯಿತು.
- ಕೊರೊನಾ ಅವಧಿಯಲ್ಲಿಯೂ ಸಹ ಜವಾಬ್ದಾರಿಯುತ ರಾಷ್ಟ್ರವಾಗಿ, ಭಾರತವು ತನ್ನ ನಾಗರಿಕರನ್ನು ಪ್ರಪಂಚದಾದ್ಯಂತದ ದೇಶಗಳಿಂದ ಕರೆತರಲು 'ವಂದೇ ಭಾರತ್ ಮಿಷನ್' ಮತ್ತು 'ಆಪರೇಷನ್ ಸಮುದ್ರ ಸೇತು' ಅಭಿಯಾನವನ್ನು ಯಶಸ್ವಿಯಾಗಿ ನಡೆಸಿತು.
- ಚೀನಾದ ವುಹಾನ್ ನಗರದಿಂದ 647 ಭಾರತೀಯರೊಂದಿಗೆ 7 ಮಾಲ್ಡೀವಿಯನ್ನರನ್ನೂ ಸ್ಥಳಾಂತರಿಸಲಾಯಿತು.
- 2015 ರಲ್ಲಿ, ಯೆಮೆನ್‌ನಿಂದ ಭಾರತೀಯ ನಾಗರಿಕರನ್ನು ಸ್ಥಳಾಂತರಿಸಲು 'ಆಪರೇಷನ್ ರಾಹತ್' ಅನ್ನು ನಡೆಸಲಾಯಿತು.
- ಏಪ್ರಿಲ್ 25, 2015 ರಂದು ನೇಪಾಳದಲ್ಲಿ ಭೂಕಂಪ ಸಂಭವಿಸಿದಾಗ, ವಿಶೇಷ ವಿಮಾನವು ಪರಿಹಾರ ಸಾಮಗ್ರಿಗಳನ್ನು ಒದಗಿಸಿತು ಮತ್ತು ಭಾರತವು 67 ಮಿಲಿಯನ್ ಡಾಲರ್ ಸಹಾಯವನ್ನು ನೀಡಿತು.
- ಇಂಡೋನೇಷ್ಯಾದಲ್ಲಿ ಭೂಕಂಪ ಮತ್ತು ಸುನಾಮಿ ಸಂತ್ರಸ್ತರಿಗಾಗಿ ಆಪರೇಷನ್ ಸಮುದ್ರ ಮೈತ್ರಿ.
- ಮೊಜಾಂಬಿಕ್‌ನಲ್ಲಿ 2019 ರಲ್ಲಿ ಸಂಭವಿಸಿದ ಚಂಡಮಾರುತದ ಸಮಯದಲ್ಲಿ ಭಾರತವು ಮಾನವೀಯ ನೆರವು ಮತ್ತು ವಿಪತ್ತು ಪರಿಹಾರವನ್ನು ಒದಗಿಸಿತು.
- ಈಸ್ಟರ್ ದಿನದಂದು ಭೀಕರ ಭಯೋತ್ಪಾದಕ ದಾಳಿಯ ನಂತರ ಶ್ರೀಲಂಕಾಕ್ಕೆ ಭೇಟಿ ನೀಡಿದ ಮೊದಲ ವಿಶ್ವ ನಾಯಕ ಪ್ರಧಾನಿ ನರೇಂದ್ರ ಮೋದಿಯವರು. ಏತನ್ಮಧ್ಯೆ, ಭಾರತದ ತುರ್ತು ಆಂಬ್ಯುಲೆನ್ಸ್ ಸೇವೆಯು ಈಗ ಶ್ರೀಲಂಕಾದ ಎಲ್ಲಾ ಒಂಬತ್ತು ಪ್ರಾಂತ್ಯಗಳಲ್ಲಿ ಲಭ್ಯವಿದೆ.



## ಪಾಸ್ ಪೋರ್ಟ್

ಜಾಗತಿಕ ಸಂಬಂಧಗಳಲ್ಲಿ ಭಾರತದ ಚಿತ್ರಣ ಬದಲಾಗುತ್ತಿರುವುದಕ್ಕೆ ದೇಶದ ವಿಶ್ವಾಸಾರ್ಹತೆ, ಭದ್ರತೆ ಹೆಚ್ಚಿಸುವ ಜೊತೆಗೆ ದೇಶದ ಜನರ ಬದುಕನ್ನು ಸುಗಮಗೊಳಿಸುವ ನಿರಂತರ ಪ್ರಯತ್ನವೇ ಕಾರಣವಾಗಿದೆ. ಪಾಸ್ ಪೋರ್ಟ್ ಮತ್ತು ವೀಸಾ ಸೌಲಭ್ಯಗಳು ಇದಕ್ಕೆ ಉದಾಹರಣೆಯಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ದೇಶದಲ್ಲಿ 300ಕ್ಕೂ ಹೆಚ್ಚು ಹೊಸ ಪಾಸ್ ಪೋರ್ಟ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಧಾನಮಂತ್ರಿಗಳು ಹೇಳುವಂತೆ, ಭಾರತದ ಪಾಸ್ ಪೋರ್ಟ್ ನ ಶಕ್ತಿ ಹೆಚ್ಚಾಗಿದೆ, ಯಾವುದೇ ನಾಗರಿಕನು ಇನ್ನೊಂದು ದೇಶಕ್ಕೆ ಹೋದಾಗ, ಅವರು ತಮ್ಮ ಭಾರತೀಯ ಪಾಸ್ ಪೋರ್ಟ್ ಅನ್ನು ತೋರಿಸಿದಾಗ, ಅವರನ್ನು ಹೆಮ್ಮೆಯಿಂದ ಕಾಣಲಾಗುತ್ತದೆ. 2014ಕ್ಕಿಂತ ಮೊದಲು, ದೇಶದಲ್ಲಿ ಕೇವಲ 77 ಪಾಸ್ ಪೋರ್ಟ್ ಸೇವಾ ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದವು, ಈಗ 424 ಪೋಸ್ಟ್ ಆಫೀಸ್ ಪಾಸ್ ಪೋರ್ಟ್ ಸೇವೆಗಳೂ ಸೇರಿದಂತೆ ಒಟ್ಟು 521 ಪಾಸ್ ಪೋರ್ಟ್ ಸೇವಾ ಕೇಂದ್ರಗಳಿವೆ. 'ಆನ್ ಲೈನ್ ಅರ್ಜಿ ಸಲ್ಲಿಸಲು ಪಾಸ್ ಪೋರ್ಟ್ ಸೇವೆ' ಎಂದು ಕರೆಯಲಾಗುವ ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ. 2014 ರವರೆಗೆ, ಪಾಸ್ ಪೋರ್ಟ್ ಪಡೆಯಲು ಸಾಮಾನ್ಯವಾಗಿ ಸರಾಸರಿ 16 ದಿನಗಳು ಬೇಕಾಗುತ್ತಿತ್ತು. ಈಗ ಪಾಸ್ ಪೋರ್ಟ್ ಅನ್ನು 5 ದಿನಗಳಲ್ಲಿ ನೀಡಲಾಗುತ್ತದೆ. 2014 ರಿಂದ ಮಾರ್ಚ್ 2022 ರವರೆಗೆ 7,68,04,991 ಪಾಸ್ ಪೋರ್ಟ್ ಗಳನ್ನು ವಿತರಿಸಲಾಗಿದೆ. ವಿಶ್ವದ 16 ದೇಶಗಳಿಗೆ ಭೇಟಿ ನೀಡಲು ಭಾರತದ ನಾಗರಿಕರಿಗೆ ವೀಸಾ ಅಗತ್ಯವಿರುವುದಿಲ್ಲ. ಈ ದೇಶಗಳಿಗೆ ಪ್ರವೇಶಿಸಲು ಭಾರತೀಯ ಪಾಸ್ ಪೋರ್ಟ್ ಇದ್ದರೆ ಸಾಕು.

ಇರಾನ್, ಇಂಡೋನೇಷ್ಯಾ ಮತ್ತು ಮ್ಯಾನ್ಮಾರ್ ಸೇರಿದಂತೆ ವಿಶ್ವದ **59** ದೇಶಗಳು ಭಾರತೀಯ ಪಾಸ್ ಪೋರ್ಟ್ ಹೊಂದಿರುವವರಿಗೆ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಬಳಿಕ ವೀಸಾ- ನೀಡುವ ಸೌಲಭ್ಯ ಒದಗಿಸಿವೆ. ಈ ಸೌಲಭ್ಯದ ಅಡಿಯಲ್ಲಿ, ಭಾರತದ ನಾಗರಿಕರು ಆ ದೇಶವನ್ನು ತಲುಪಿದ ನಂತರ ವಿಮಾನ ನಿಲ್ದಾಣ ವಲಸೆ ವಿಭಾಗದಿಂದ ವೀಸಾಗಳನ್ನು ಪಡೆಯಬಹುದಾಗಿರುತ್ತದೆ.

### ಹೆನ್ಲೆ ಪಾಸ್ ಪೋರ್ಟ್ ಇಂಡೆಕ್ಸ್

ಹೆನ್ಲೆ ಪಾಸ್ ಪೋರ್ಟ್ ಸೂಚ್ಯಂಕದಲ್ಲಿ ಭಾರತೀಯ ಪಾಸ್ ಪೋರ್ಟ್ 2020ರಲ್ಲಿದ್ದ 90ನೇ ಸ್ಥಾನದಿಂದ 2021ರ 7 ಸ್ಥಾನ ಮೇಲೇರಿ 83 ನೇ ಸ್ಥಾನ ತಲುಪಿದೆ.

## ರಾಷ್ಟ್ರೀಯ ಹಿತದೃಷ್ಟಿಯಿಂದ ಆರ್.ಸಿ.ಇ.ಪಿ ಸೇರಲು ಭಾರತ ನಿರಾಕರಣೆ



ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರಿಕೆ (ಆರ್.ಸಿ.ಇ.ಪಿ) ಎಂಬುದು ಆಸಿಯಾನ್ ನ 10 ಸದಸ್ಯ ರಾಷ್ಟ್ರಗಳು ಮತ್ತು ಆಸ್ಟ್ರೇಲಿಯಾ, ಚೀನಾ, ಜಪಾನ್, ದಕ್ಷಿಣ ಕೊರಿಯಾ ಮತ್ತು ನ್ಯೂಜಿಲೆಂಡ್ ಸೇರಿ ಐದು ದೇಶಗಳು ಅಂಗೀಕರಿಸಿದ ಮುಕ್ತ ವ್ಯಾಪಾರ ಒಪ್ಪಂದವಾಗಿದೆ. ಆದರೆ ವಿಶ್ವದ ಒತ್ತಡಕ್ಕೆ ಮಣಿಯದೆ ಪ್ರಧಾನಮಂತ್ರಿ ಮೋದಿ ಅವರು ಆರ್.ಸಿ.ಇ.ಪಿ. ಗೆ ಸೇರ್ಪಡೆಯಾಗದಿರುವ ಭಾರತದ ದೃಷ್ಟಿಕೋನವನ್ನು ಬಲವಾಗಿ ಮಂಡಿಸಿದರು. ನಾವು ಪರಸ್ಪರ ಸಹಕಾರದ ಮನೋಭಾವದಿಂದ ಕೆಲಸ ಮಾಡುತ್ತೇವೆ, ಆದರೆ ನಮ್ಮ ಹಿತಾಸಕ್ತಿಗಳನ್ನು ತ್ಯಾಗ ಮಾಡಲು ಸಾಧ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಆರ್.ಸಿ.ಇ.ಪಿ ದೇಶಗಳೊಂದಿಗಿನ ನಮ್ಮ ವ್ಯಾಪಾರದ ಕೊರತೆ ಹೆಚ್ಚಾಗಿದೆ ಮತ್ತು 2004 ರಲ್ಲಿ ನಷ್ಟವು 7 ಶತಕೋಟಿ ಡಾಲರ್ ಆಗಿತ್ತು, ಇದು 2014 ರಲ್ಲಿ 78 ಶತಕೋಟಿ ಡಾಲರ್ ಗೆ ಏರಿದೆ ಎಂದು ಭಾರತ ದೃಢವಾಗಿ ಹೇಳಿದೆ. ಆರ್.ಸಿ.ಇ.ಪಿ.ಯನ್ನು ನಿರಾಕರಿಸುವ ಮೂಲಕ, ಪ್ರಧಾನಮಂತ್ರಿ ಮೋದಿ ಬಡವರು, ರೈತರು, ಡೈರಿಗಳು ಮತ್ತು ಎಂಎಸ್.ಎಂಇಗಳ ಹಿತಾಸಕ್ತಿಗಳಿಗೆ ಆದ್ಯತೆ ನೀಡಿದರು.

## ಭಯೋತ್ಪಾದನೆಯ ವಿಷಯದಲ್ಲಿ ಪಾಕಿಸ್ತಾನವನ್ನು ಪ್ರತ್ಯೇಕಿಸಲಾಗಿದೆ

- ಎಫ್.ಎ.ಟಿ.ಎಫ್.ನಲ್ಲಿ ಪಾಕಿಸ್ತಾನವನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. ಏಷ್ಯಾ ಪೆಸಿಫಿಕ್ ಉಪಗುಂಪು ಕೂಡ ಪಾಕಿಸ್ತಾನವನ್ನು ಕಪ್ಪುಪಟ್ಟಿಗೆ ಸೇರಿಸಿದೆ.
- ಕುಲಭೂಷಣ್ ಜಾಧವ್ ಪ್ರಕರಣದಲ್ಲಿ ಅಂತಾರಾಷ್ಟ್ರೀಯ ನ್ಯಾಯಾಲಯವು ಭಾರತದ ಪರವಾಗಿ ತೀರ್ಪು ನೀಡಿದ್ದು, ಪಾಕಿಸ್ತಾನಕ್ಕೆ ದೂತಾವಾಸದ ನೆರವು ನೀಡುವಂತೆ ಒತ್ತಾಯಿಸಿತು.
- ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದಲ್ಲಿ ಕನಿಷ್ಠ ಬೆಂಬಲದ ಕೊರತೆಯಿಂದಾಗಿ, ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಲು ಪಾಕಿಸ್ತಾನಕ್ಕೆ ಅವಕಾಶವೇ ಸಿಗಲಿಲ್ಲ.
- ಪುಲ್ವಾಮಾದಲ್ಲಿ ನಡೆದ ಹೇಡಿ ಭಯೋತ್ಪಾದಕ ದಾಳಿ ಮತ್ತು ನಂತರದ ಭಾರತದ ವೈಮಾನಿಕ ದಾಳಿಯ ಬಳಿಕ, ಎಲ್ಲಾ ಪ್ರಮುಖ ಜಾಗತಿಕ ನಾಯಕರು ಭಾರತದೊಂದಿಗೆ ಒಗ್ಗಟ್ಟಾಗಿ ನಿಂತರು ಎಂಬುದು ಭಾರತದ ಹೆಚ್ಚುತ್ತಿರುವ ಪ್ರಭಾವದ ಪರಿಣಾಮವಾಗಿದೆ.

# ಬಾಂಧವ್ಯದ ಬಲವರ್ಧನೆ



**ಲೀಜನ್ ಆಫ್ ಮೆರಿಟ್ ಪ್ರಶಸ್ತಿ**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಲೀಜನ್ ಆಫ್ ಮೆರಿಟ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಮೆರಿಕದ ಈ ಪ್ರತಿಷ್ಠಿತ ಗೌರವವನ್ನು ಅತ್ಯುತ್ತಮ ಸೇವೆಗಳು ಮತ್ತು ಸಾಧನೆಗಳಿಗಾಗಿ ನೀಡಲಾಗುತ್ತದೆ.



**ಗ್ಲೋಬಲ್ ಗೋಲ್ ಕೀಪರ್ ಪ್ರಶಸ್ತಿ**

ಸ್ವಚ್ಛ ಭಾರತ ಅಭಿಯಾನಕ್ಕಾಗಿ ಬಿಲ್ ಮತ್ತು ಮಿಲಿಂಡಾ ಗೇಟ್ಸ್ ಪ್ರತಿಷ್ಠಾನದಿಂದ ಪ್ರಧಾನಮಂತ್ರಿ ಮೋದಿ ಅವರಿಗೆ 'ಗ್ಲೋಬಲ್ ಗೋಲ್ ಕೀಪರ್ ಅವಾರ್ಡ್' ನೀಡಿ ಗೌರವಿಸಲಾಯಿತು.



**ಕೋಟ್ಲರ್ ಅಧ್ಯಕ್ಷೀಯ ಪ್ರಶಸ್ತಿ**

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಜನರು, ಲಾಭ ಮತ್ತು ಗ್ರಹವನ್ನು ಕೇಂದ್ರೀಕರಿಸಿದ ಫಿಲಿಪ್ ಕೋಟ್ಲರ್ ಅಧ್ಯಕ್ಷೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 2018ರಲ್ಲಿ, ಅವರು ವಿಶ್ವಸಂಸ್ಥೆಯ ಅತ್ಯುನ್ನತ ಪ್ರಶಸ್ತಿಯಾದ ಚಾಂಪಿಯನ್ಸ್ ಆಫ್ ಅರ್ತ್‌ಗೂ ಭಾಜನರಾಗಿದ್ದರು.

- ಕರೋನಾ ಕಾಲದಲ್ಲಿ ಎಲ್ಲವೂ ಸ್ಥಗಿತಗೊಂಡಾಗ, ಪ್ರಧಾನಮಂತ್ರಿ ಮೋದಿ ಅವರ ಉಪಕ್ರಮದಿಂದ ಜಾಗತಿಕ ವರ್ಚುವಲ್ ಸಮಾವೇಶಗಳು ಪ್ರಾರಂಭವಾದವು. ಕೊರೊನಾ ಅವಧಿಯಲ್ಲಿ ಅಂತಾರಾಷ್ಟ್ರೀಯ ನಾಯಕರೊಂದಿಗೆ ಸಂವಾದ ನಡೆಸುವ ಮೂಲಕ ಪ್ರಧಾನಮಂತ್ರಿಯವರು ಜಗತ್ತನ್ನು ಮುನ್ನಡೆಸಿದರು. ಅಮೆರಿಕ, ಬ್ರಿಟನ್, ಫ್ರಾನ್ಸ್, ಜರ್ಮನಿ, ಕೊಲ್ಲಿ ರಾಷ್ಟ್ರಗಳು ಮತ್ತು ಪಶ್ಚಿಮ ಏಷ್ಯಾದ ದೇಶಗಳೊಂದಿಗೆ ಪರಸ್ಪರ ಸಹಕಾರವನ್ನು ಬಲಪಡಿಸಿದರು ಮತ್ತು ಜಿ-20, ಅಲಿಪ್ತ ಚಳವಳಿ (ನ್ಯಾಮ್.) ಶೃಂಗಸಭೆಗಳಲ್ಲಿ ಭಾಗವಹಿಸಿದ್ದರು.
- ಅಧಿಕಾರಕ್ಕೆ ಬಂದ ತಕ್ಷಣವೇ, ಭಾರತವು ಇಸ್ರೇಲ್, ಫ್ರಾನ್ಸ್, ಯುನೈಟೆಡ್ ಕಿಂಗ್ಡಮ್, ಜಪಾನ್, ಅಮೆರಿಕ ಮತ್ತು ದಕ್ಷಿಣ ಕೊರಿಯಾದೊಂದಿಗೆ ಸಂಬಂಧಗಳನ್ನು ಬಲಪಡಿಸಿದರು ಮತ್ತು ಪಶ್ಚಿಮ ಏಷ್ಯಾ (ಇರಾನ್, ಸೌದಿ ಅರೇಬಿಯಾ, ಇಸ್ರೇಲ್), ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾದೊಂದಿಗೆ ಮೌಲ್ಯಯುತ ಪಾಲುದಾರಿಕೆಯನ್ನು ನಿರ್ಮಿಸಿದರು.
- ವ್ಯಾಪಾರ, ಮೋತಿಹಾರಿ-ಅಮ್ಲೇಖ್ ಗಂಜ್ ತೈಲ ಕೊಳವೆ ಮಾರ್ಗದಲ್ಲಿನ ಪ್ರಗತಿ, ಜೋಗ್ಬಾನಿ (ಬಿಹಾರ)- ಬಿರಾಟ್‌ನಗರ (ನೇಪಾಳ) ನಲ್ಲಿ ಹೊಸ ಸಮಗ್ರ ಚೆಕ್ ಪೋಸ್ಟ್ ಉತ್ತೇಜಿಸಲು ಭಾರತ-ನೇಪಾಳ ಗಡಿಯಾಚೆಗಿನ ಸಹಕಾರ. ಇತ್ತೀಚೆಗೆ, ನೇಪಾಳದ ಪ್ರಧಾನಮಂತ್ರಿ ಶೇರ್ ಬಹದ್ದೂರ್ ದೇವುಬಾ ಅವರನ್ನು ಭೇಟಿಯಾದ ನಂತರ, ಉಭಯ ದೇಶಗಳ ನಡುವೆ ಅನೇಕ ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.
- ಇದೇ ಮೊದಲ ಬಾರಿಗೆ ಭಾರತವು ಆಸ್ಟ್ರೇಲಿಯಾದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಬಹುನಿರೀಕ್ಷಿತ ಒಪ್ಪಂದದ ನಂತರ, ಈಗ ಭಾರತೀಯ ಸರಕುಗಳು ಆಸ್ಟ್ರೇಲಿಯಾದ ಮಾರುಕಟ್ಟೆಗೆ ಉತ್ತಮ ಪ್ರವೇಶವನ್ನು ಪಡೆಯುತ್ತವೆ.
- ಗ್ಲ್ಯಾಸ್ಗೋದಲ್ಲಿ ನಡೆದ ಕಾಪ್-26 ಸಭೆಯಲ್ಲಿ ಹವಾಮಾನ ನ್ಯಾಯದ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪಂಚಾಮೃತ ನಿರ್ಣಯವನ್ನು ಇಡೀ ವಿಶ್ವವೇ ಶ್ಲಾಘಿಸಿತು.
- ಕೊರೊನಾ ಅವಧಿಯಲ್ಲಿ, ಪ್ರಧಾನ ಮಂತ್ರಿ ಮೋದಿ ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸಲು ಬಾಂಗ್ಲಾದೇಶಕ್ಕೆ ಪ್ರವಾಸ ಕೈಗೊಂಡರು ಮತ್ತು ಬಾಂಗ್ಲಾದೇಶದ ರಾಷ್ಟ್ರೀಯ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದರು.
- ಬಾಂಗ್ಲಾದೇಶದೊಂದಿಗಿನ ಐತಿಹಾಸಿಕ ಭಾರತ-ಬಾಂಗ್ಲಾದೇಶ ಭೂ ಗಡಿ ಒಪ್ಪಂದವು ಜಾರಿಗೆ ಬಂದಿತು. ಇದಲ್ಲದೆ, ಕಡಲ ಗಡಿಗಳ ವಿವಾದವೂ ಕೊನೆಗೊಂಡಿತು.
- ಭಾರತ ಮತ್ತು ಮಾಲ್ಡೀವ್ಸ್ ಇತ್ತೀಚೆಗೆ ಅಡ್ಡು-ಅಟೌಲ್‌ನ ಐದು ದ್ವೀಪಗಳಲ್ಲಿ ಅಡ್ಡು-ಪ್ರವಾಸೋದ್ಯಮ ವಲಯವನ್ನು ಸ್ಥಾಪಿಸಲು 5 ಒಡಂಬಡಿಕೆಗಳಿಗೆ ಸಹಿ ಹಾಕಿದವು, ಹೊರಾಫುಶಿಯಲ್ಲಿ ಬಾಟಲ್ ನೀರಿನ ಘಟಕವನ್ನು ಸ್ಥಾಪಿಸಲು ಆರನೇ ಒಡಂಬಡಿಕೆಗೂ ಸಹಿ ಹಾಕಿದವು.
- ಅಂತಾರಾಷ್ಟ್ರೀಯ ಇಂಧನ ಶೃಂಗಸಭೆಯಲ್ಲಿ ಭಾರತದ ಸುಸ್ಥಿರ ಅಭಿವೃದ್ಧಿಗಾಗಿ ಪ್ರಧಾನಮಂತ್ರಿ ಮೋದಿ ಅವರಿಗೆ ಸೆರಾ ವೀಕ್ ಜಾಗತಿಕ ಇಂಧನ ಮತ್ತು ಪರಿಸರ ನಾಯಕತ್ವ ಪ್ರಶಸ್ತಿ ನೀಡಿ ಗೌರವಿಸಲಾಯಿತು.
- 2019 ರಲ್ಲಿ, ಪ್ರಧಾನಿ ಮೋದಿ ಅವರಿಗೆ ಬಹ್ರೇನ್ ನ ಅತ್ಯುನ್ನತ ಪ್ರಶಸ್ತಿಯಾದ ಕಿಂಗ್ ಹಮದ್ ಆರ್ಡರ್ ಆಫ್ ದಿ ರಿನೈಸಾನ್ಸ್ ಪ್ರಶಸ್ತಿಯನ್ನು ನೀಡಲಾಯಿತು. ಅದೇ ಸಮಯದಲ್ಲಿ, ಮಾಲ್ಡೀವ್ಸ್ ಅತ್ಯುನ್ನತ ಗೌರವ 'ನಿಶಾನ್ ಇಜುದ್ದಿನ್' ಅನ್ನು ನೀಡಿದರೆ, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ರಷ್ಯಾ ಒಕ್ಕೂಟದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಆರ್ಡರ್ ಆಫ್ ಸೇಂಟ್ ಆಂಡ್ರ್ಯೂ ದಿ ಅಪೋಸ್ಟಲ್' ನೀಡಿ ಗೌರವಿಸಿದರು. ಅದೇ ವರ್ಷ ಪ್ರಧಾನಮಂತ್ರಿ ಮೋದಿ ಅವರಿಗೆ ಸಿಯೋಲ್ ಶಾಂತಿ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಯಿತು.

# ಗುಜರಾತ್‌ಗೆ ಬ್ರಿಟನ್ ಪ್ರಧಾನಮಂತ್ರಿ ಜೊಚ್ಸನ್ ಭೇಟಿ

**ಭಾರತ ಮತ್ತು ಯುನೈಟೆಡ್ ಕಿಂಗ್ ಡಮ್ ಕೇವಲ ವ್ಯಾಪಾರ ಮಾತ್ರವಲ್ಲ, ಪ್ರಮುಖ ಕಾರ್ಯತಂತ್ರದ ಸಹಭಾಗಿಗಳೂ ಹೌದು. ಯುಕೆ ಪ್ರಧಾನಮಂತ್ರಿ ಬೋರಿಸ್ ಜಾನ್ಸನ್ ಅವರು ಏಪ್ರಿಲ್ 21 ರಂದು ಗುಜರಾತ್ ಗೆ ಆಗಮಿಸುವ ಮೂಲಕ ಎರಡು ದಿನಗಳ ಭಾರತ ಭೇಟಿ ಆರಂಭಿಸಿದರು, ಮಾರನೆಯ ದಿನ ದೆಹಲಿಗೆ ಆಗಮಿಸಿದರು. ಗುಜರಾತ್ ಭೇಟಿ ವೇಳೆ, ಮಹಾತ್ಮಾ ಗಾಂಧಿಯವರ ಸಾಬರಮತಿ ಆಶ್ರಮದಲ್ಲಿ ಚರಕ ತಿರುಗಿಸಿ ಅಥವಾ ಚರಕದಿಂದ ನೂಲುವ ಮೂಲಕ, ಪ್ರಧಾನಮಂತ್ರಿ ಜಾನ್ಸನ್ ಹೊಸ ಸಂದೇಶವನ್ನು ನೀಡಿದರು ಮತ್ತು ದೆಹಲಿಯಲ್ಲಿ ಪ್ರಧಾನಮಂತ್ರಿ ಮೋದಿ ಅವರೊಂದಿಗಿನ ಸಭೆಯಲ್ಲಿ, ಅವರು ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಅನೇಕ ಪ್ರಮುಖ ಕ್ರಮಗಳನ್ನು ಘೋಷಿಸಿದರು.**

ಯುಕೆ, ಭಾರತದಲ್ಲಿ 4ನೇ ಅತಿದೊಡ್ಡ ಹೂಡಿಕೆದಾರನಾಗಿದ್ದರೆ, ಭಾರತವು ಯುಕೆಯಲ್ಲಿ ಮೂರನೇ ಅತಿದೊಡ್ಡ ಹೂಡಿಕೆದಾರ ರಾಷ್ಟ್ರವಾಗಿದೆ. ಭಾರತದಲ್ಲಿ ಒಟ್ಟು ವಿದೇಶಿ ನೇರ ಹೂಡಿಕೆಯಲ್ಲಿ ಯುಕೆಯ ಪಾಲು ಸುಮಾರು 6 ಪ್ರತಿಶತದಷ್ಟಿದೆ, ಆದರೆ ಭಾರತೀಯ ಹೂಡಿಕೆಯು ಯುಕೆಯಲ್ಲಿ 1.16 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಅಂದಾಜಿಸಲಾಗಿದೆ. ಭಾರತವು ಪ್ರತಿ ವರ್ಷ ಯುಕೆಗೆ ಸುಮಾರು 12 ಶತಕೋಟಿ ಪೌಂಡ್ ಮೌಲ್ಯದ ರಫ್ತು ಮಾಡುತ್ತದೆ. ಅದೇ ವೇಳೆ, ಯುಕೆಯಿಂದ ಭಾರತಕ್ಕೆ ಸುಮಾರು 6.6 ಶತಕೋಟಿ ಪೌಂಡ್ ಗಳಷ್ಟು ಮೌಲ್ಯದ ರಫ್ತು ಮಾಡಲಾಗುತ್ತದೆ. ಎರಡೂ ದೇಶಗಳು ಈಗ ಈ ಐತಿಹಾಸಿಕ ಪಾಲುದಾರಿಕೆಯನ್ನು ಮುಕ್ತ ವ್ಯಾಪಾರ ಒಪ್ಪಂದದೊಂದಿಗೆ ಹೊಸ ಮಟ್ಟಕ್ಕೆ ಕೊಂಡೊಯ್ಯಲು ಬಯಸುತ್ತವೆ. ಇದನ್ನು ಉಲ್ಲೇಖಿಸಿದ ಪ್ರಧಾನಮಂತ್ರಿ ಜಾನ್ಸನ್ ಅವರು ಎಫ್.ಟಿ.ಎ ಕುರಿತ ಮಾತುಕತೆಯನ್ನು ಅಕ್ಟೋಬರ್ ವೇಳೆಗೆ ಪೂರ್ಣಗೊಳಿಸುವುದಾಗಿ ಘೋಷಿಸಿದ್ದಾರೆ. ಉಭಯ ದೇಶಗಳ ಪ್ರಧಾನಮಂತ್ರಿಗಳ ನಡುವಿನ ಸಭೆಯಲ್ಲಿ, 'ಮಾರ್ಗಸೂಚಿ 2030' ಸೇರಿದಂತೆ ದ್ವಿಪಕ್ಷೀಯ ಸಂಬಂಧಗಳ ಎಲ್ಲಾ ಅಂಶಗಳನ್ನೂ ಪರಾಮರ್ಶಿಸಲಾಯಿತು, ವಿವಿಧ ಕ್ಷೇತ್ರಗಳಲ್ಲಿನ ಸಂಬಂಧಗಳನ್ನು ಮತ್ತಷ್ಟು ತೀವ್ರಗೊಳಿಸಲು ಮಹತ್ವಾಕಾಂಕ್ಷೆಯ ಗುರಿಗಳನ್ನು ನಿಗದಿಪಡಿಸಲಾಯಿತು. ವೈದ್ಯಕೀಯ, ಉನ್ನತ ಶಿಕ್ಷಣ ಮತ್ತು ಹೂಡಿಕೆಗೆ ಸಂಬಂಧಿಸಿದಂತೆ ಅನೇಕ ಪ್ರಮುಖ ಘೋಷಣೆಗಳನ್ನೂ ಸಹ ಮಾಡಲಾಯಿತು.



ರಕ್ಷಣಾ ವಲಯದಲ್ಲಿ ಸಹಕಾರವನ್ನು ಹೆಚ್ಚಿಸಲು ನಾವು ಸಮ್ಮತಿಸಿದ್ದೇವೆ. ಭಾರತದಲ್ಲಿ ನಡೆಯುತ್ತಿರುವ ಸಮಗ್ರ ಸುಧಾರಣೆಗಳು, ನಮ್ಮ ಮೂಲಸೌಕರ್ಯಗಳ ಆಧುನೀಕರಣಕ್ಕೆ ಸಂಬಂಧಿಸಿದ ಯೋಜನೆಗಳು ಮತ್ತು ರಾಷ್ಟ್ರೀಯ ಮೂಲಸೌಕರ್ಯ ಪೈಪ್ ಲೈನ್ ಬಗ್ಗೆಯೂ ನಾವು ಚರ್ಚಿಸಿದ್ದೇವೆ. ಭಾರತದಲ್ಲಿ ಹೆಚ್ಚುತ್ತಿರುವ ಯುಕೆ ಕಂಪನಿಗಳ ಹೂಡಿಕೆಯನ್ನು ನಾವು ಸ್ವಾಗತಿಸುತ್ತೇವೆ. ಯುಕೆಯಲ್ಲಿ ವಾಸಿಸುತ್ತಿರುವ 1.6 ದಶಲಕ್ಷ ಭಾರತೀಯ ಮೂಲದ ಜನರು ಸಮಾಜದ ಪ್ರತಿಯೊಂದು ವಲಯ ಮತ್ತು ಆರ್ಥಿಕತೆಗೆ ಸಕಾರಾತ್ಮಕ ಕೊಡುಗೆ ನೀಡುತ್ತಿದ್ದಾರೆ.
-ನರೇಂದ್ರ ಮೋದಿ, ಭಾರತದ ಪ್ರಧಾನಮಂತ್ರಿ

ನಾವು ಹೊಸ, ವಿಸ್ತೃತವಾದ ರಕ್ಷಣಾ ಮತ್ತು ಭದ್ರತಾ ಸಹಭಾಗಿತ್ವಕ್ಕೆ ಸಮ್ಮತಿಸಿದ್ದೇವೆ. ಇದು ನಮ್ಮ ಬಾಂಧವ್ಯಗಳನ್ನು ಗಾಢವಾಗಿಸುವ ನಮ್ಮ ದಶಕಗಳ ಹಿಂದಿನ ಬದ್ಧತೆಗೆ ಅನುಗುಣವಾಗಿದೆ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮೇಕ್ ಇನ್ ಇಂಡಿಯಾ ಗುರಿಯ ನಿಟ್ಟಿನಲ್ಲಿದೆ. ಭಾರತದಲ್ಲಿ ನೀಡಿದ ಸ್ವಾಗತದಿಂದ ಆನಂದ ತುಂದಿಲನಾಗಿದ್ದೇನೆ. ನಾನು ಇಲ್ಲಿಗೆ ಆಗಮಿಸಿದಾಗ, ನಾನು ಸಚಿನ್ ತೆಂಡೂಲ್ಕರ್ ಆಗಿದ್ದೇನೆ ಎಂದು ನನಗೆ ಅನಿಸಿತು. ನಂತರ ಸುತ್ತಲೂ ಹೋರ್ಡಿಂಗ್ ಗಳನ್ನು ನೋಡಿದಾಗ, ನಾನು ಅಮಿತಾಬ್ ಬಚ್ಚನ್ ಎಂದು ನನಗೆ ಅನಿಸಿತು. ಈ ಭವ್ಯ ಸ್ವಾಗತಕ್ಕಾಗಿ ನಾನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ.
-ಬೋರಿಸ್ ಜಾನ್ಸನ್, ಬ್ರಿಟನ್ ಪ್ರಧಾನಮಂತ್ರಿ

## 7ನೇ ರೈಸಿನಾ ಮಾತುಕತೆ | ಭವಿಷ್ಯ ಭಾರತಕ್ಕೆ ಸೇರಿದ್ದು : ಐರೋಪ್ಯ ಒಕ್ಕೂಟದ ಅಧ್ಯಕ್ಷೆ

2016ರಲ್ಲಿ ರೈಸಿನಾ ಮಾತುಕತೆಯನ್ನು ಪ್ರಾರಂಭಿಸಲಾಯಿತು, ಇದು ರಾಜಕಾರಣಿಗಳು, ಮಾಜಿ ನಾಯಕರು, ಚಿಂತಕರ ಚಾವಡಿಗಳು ಮತ್ತು ವಿಶ್ವದಾದ್ಯಂತದ ಗಣ್ಯ ವ್ಯಕ್ತಿಗಳು ಜಾಗತಿಕ ಪರಿಸ್ಥಿತಿ ಮತ್ತು ಸವಾಲುಗಳ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಸುವ ಸಲುವಾಗಿ ಒಟ್ಟುಗೂಡುವ ವಾರ್ಷಿಕ ಸಭೆಯಾಗಿದೆ. ಈ ಬಾರಿ, ಏಪ್ರಿಲ್ 25ರಂದು ಮೂರು ದಿನಗಳ ರೈಸಿನಾ ಸಂವಾದ ಪ್ರಾರಂಭವಾದಾಗ, 90 ದೇಶಗಳ ರಾಜತಾಂತ್ರಿಕರು ಮತ್ತು ತಜ್ಞರು ಸೇರಿದ್ದರು. ಉದ್ಘಾಟನಾ ಅಧಿವೇಶನದಲ್ಲಿ ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲಾ ವೊನ್ ಡೆರ್ ಲೆಯೆನ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಭಾರತವನ್ನು ಶ್ಲಾಘಿಸಿದರು. ರೈಸಿನಾ ಸಂವಾದದ ಆರಂಭದಲ್ಲಿ ಮಾತನಾಡಿದ ಅವರು, 2047ರ ವೇಳೆಗೆ ಹಸಿರು ಇಂಧನ ಕ್ಷೇತ್ರದಲ್ಲಿ ಭಾರತವನ್ನು ಸಂಪೂರ್ಣವಾಗಿ ಸ್ವಾವಲಂಬಿಯನ್ನಾಗಿ ಮಾಡುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಘೋಷಣೆಯು ತನಗೆ ಸ್ಫೂರ್ತಿ ನೀಡಿದೆ ಎಂದು ಹೇಳಿದರು. ಮುಂಬರುವ ದಶಕದಲ್ಲಿ ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಸಂಬಂಧವು ನಿರ್ಣಾಯಕವಾಗಲಿದೆ. ಭವಿಷ್ಯ ಭಾರತಕ್ಕೆ ಸೇರಿದ್ದು ಎಂದು ಅವರು ಹೇಳಿದರು.







# ಸಶಕ್ತ ರೈತರು ಮತ್ತು ಸಂಪದ್ಭರಿತ ಗ್ರಾಮಗಳು



ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಹೀಗೆ ಹೇಳಿದ್ದರು- 'ಭಾರತದ ಆತ್ಮವು ಅದರ ಹಳ್ಳಿಗಳಲ್ಲಿ ವಾಸಿಸುತ್ತದೆ. ಆದ್ದರಿಂದ ಹಳ್ಳಿಗಳು ಮತ್ತು ರೈತರ ಅಭಿವೃದ್ಧಿಯಾಗದೆ, ದೇಶವು ಪ್ರಗತಿ ಹೊಂದಲು ಸಾಧ್ಯವಿಲ್ಲ'. ಈ ಕಾರಣಕ್ಕಾಗಿಯೇ ಪ್ರಸ್ತುತ ಸರ್ಕಾರವು ಆದರ್ಶ ಗ್ರಾಮ ಯೋಜನೆ ಅಥವಾ ಗ್ರಾಮಗಳಿಗೆ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಇಂಟರ್ನೆಟ್ ಸೌಲಭ್ಯ ಒದಗಿಸುವುದು ಅಥವಾ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಇ-ಆಡಳಿತವನ್ನು ಬಲಪಡಿಸುವ ಇ-ಗ್ರಾಮ ಸ್ವರಾಜ್ ಯೋಜನೆ ಸೇರಿದಂತೆ ಅನೇಕ ಕ್ರಾಂತಿಕಾರಿ ಯೋಜನೆಗಳ ಮೂಲಕ ರೈತರು ಮತ್ತು ಹಳ್ಳಿಗಳ ಸಬಲೀಕರಣಕ್ಕಾಗಿ ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಅಲ್ಲದೆ, ಹಳ್ಳಿಗಳು ಮತ್ತು ರೈತರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಹೊಸ ಯೋಜನೆಗಳನ್ನೂ ಪ್ರಾರಂಭಿಸಲಾಗಿದೆ ಮಾತ್ರವಲ್ಲದೆ ಅವುಗಳನ್ನು ಜನಸ್ನೇಹಿಯನ್ನಾಗಿ ಮಾಡಲು ಹಳೆಯ ಯೋಜನೆಗಳನ್ನು ಸಹ ನವೀಕರಿಸಲಾಗಿದೆ. ಕನಿಷ್ಠ ಬೆಂಬಲ ಬೆಲೆಗಳನ್ನು ನೀಡುವುದು, ಕಿಸಾನ್ ಸಮ್ಮಾನ್ ನಿಧಿ ಹಣವನ್ನು ನೇರವಾಗಿ ರೈತರ ಖಾತೆಗಳಿಗೆ ವರ್ಗಾಯಿಸುವುದು, ರೈತರ ಆದಾಯವನ್ನು ದ್ವಿಗುಣಗೊಳಿಸಲು ಇ-ನ್ಯಾಮ್ ಪ್ರಾರಂಭಿಸುವುದು, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ಅಥವಾ ಭೂ ವಿವಾದಗಳನ್ನು ಬಗೆಹರಿಸುವ ಮತ್ತು ಭೂಮಿಯ ಕಾನೂನುಬದ್ಧ ಹಕ್ಕುಗಳನ್ನು ನೀಡುವ ಗುರಿ ಹೊಂದಿರುವ ಸ್ವಾಮಿತ್ವ ಯೋಜನೆ ಮುಂತಾದ ಹಲವಾರು ಯೋಜನೆಗಳ ಮೂಲಕ ರೈತರು ಮತ್ತು ಗ್ರಾಮಗಳನ್ನು ಬಲಪಡಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

# ರೈತರ ಆದಾಯ ಹೆಚ್ಚಿಸುವ ಯೋಜನೆಗಳು

ಯೋಜನೆ

## ರೈತರ ಆದಾಯ ಹೆಚ್ಚಿಸುವ ಯೋಜನೆಗಳು

**ಆರಂಭ** ಫೆಬ್ರವರಿ 24, 2019 ರಿಂದ

## ಆರ್ಥಿಕ ನೆರವು

**ಉದ್ದೇಶ:** ಭೂ ಹಿಡುವಳಿದಾರ ರೈತರ ಆರ್ಥಿಕ ಅಗತ್ಯವನ್ನು ಪೂರೈಸುವುದು

ಪ್ರಗತಿ

- ಈ ಯೋಜನೆಯು ಆರಂಭದಲ್ಲಿ 2 ಹೆಕ್ಟೇರ್ ವರೆಗೆ ಭೂ ಹಿಡುವಳಿ ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ (ಎಸ್‌ಎಂಎಫ್ ಗಳು) ಸೀಮಿತವಾಗಿತ್ತು, ಆದರೆ ಯೋಜನೆಯ ವ್ಯಾಪ್ತಿಯನ್ನು ಎಲ್ಲಾ ಭೂ ಹಿಡುವಳಿ ರೈತರೂ ಒಳಗೊಳ್ಳುವಂತೆ ವಿಸ್ತರಿಸಲಾಯಿತು. ಈ ಯೋಜನೆಯಡಿ, ಕೇಂದ್ರ ಸರ್ಕಾರದ ಪರವಾಗಿ ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಸವಲತ್ತು ವರ್ಗಾವಣೆಯ ಮೂಲಕ ಮೂರು ಕಂತುಗಳಲ್ಲಿ ಪ್ರತಿ ವರ್ಷ 6000 ರೂ.ಗಳನ್ನು ಆನ್ ಲೈನ್ ನಲ್ಲಿ ಬಿಡುಗಡೆ ಮಾಡಲಾಗುತ್ತದೆ. 2022ರ ಏಪ್ರಿಲ್ 25ರವರೆಗೆ, ಈ ಯೋಜನೆಯಡಿ 11.30 ಕೋಟಿಗೂ ಹೆಚ್ಚು ರೈತರ ಖಾತೆಗಳಿಗೆ 1.82 ಲಕ್ಷ ಕೋಟಿ ರೂ.ಗಳನ್ನು ವರ್ಗಾಯಿಸಲಾಗಿದೆ. 2022ರ ಏಪ್ರಿಲ್ 1ರಿಂದ, ಎಲ್ಲಾ ಪಾವತಿಗಳನ್ನು ಪಿಎಂ ಕಿಸಾನ್ ಅಡಿಯಲ್ಲಿ ಆಧಾರ್ ಕಾರ್ಡ್ ಮೂಲಕ ಮಾಡಲಾಗುತ್ತದೆ.



**ಆರಂಭ** ಏಪ್ರಿಲ್ 14, 2016 ರಿಂದ

ಯೋಜನೆ

### ರಾಷ್ಟ್ರೀಯ ಕೃಷಿ ಮಾರುಕಟ್ಟೆ (ಇ-ನ್ಯಾಮ್)

## ಈಗ ರೈತರ ಉತ್ಪನ್ನಗಳ ಆನ್ ಲೈನ್ ಬಿಡ್ಡಿಂಗ್, ಸಮೃದ್ಧಿಗೆ ದಾರಿ ಮಾಡಿಕೊಡುತ್ತಿದೆ

**ಉದ್ದೇಶ:** ರೈತರು ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಪಡೆಯಲು ಆನ್ ಲೈನ್ ಪಾರದರ್ಶಕ ಬಿಡ್ಡಿಂಗ್ ವ್ಯವಸ್ಥೆಯನ್ನು ರೂಪಿಸುವುದು.

**ಇದರ ಪ್ರಯೋಜನ ಪಡೆಯಿರಿ:** ಉಚಿತ ಕರೆ ಸಂಖ್ಯೆ 1800-2700-224 ಮತ್ತು ಇ-ಮೇಲ್: enam.helpdesk@gmail.com ಬಾಧ್ಯಸ್ಥರ ನೆರವಿಗಾಗಿ ಲಭ್ಯವಿದ್ದರೆ, ಆನ್ ಲೈನ್ ಮಾರ್ಗದರ್ಶನಗಳಿಗೆ www.enam.gov.in.in ರ ಮೂಲಕ ಪ್ರವೇಶಿಸಬಹುದು.

### ಪ್ರಗತಿ

ವಿವಿಧ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ 1000 ಮಾರುಕಟ್ಟೆಗಳನ್ನು ಇ-ನ್ಯಾಮ್ ಗೆ ಸೇರಿಸಲಾಗಿದೆ. ವ್ಯಾಪಾರಿಗಳು, ರೈತರು, ಕಮಿಷನ್ ಏಜೆಂಟರು ಮತ್ತು ರೈತ ಉತ್ಪಾದಕ ಸಂಸ್ಥೆಗಳು ಇ-ನ್ಯಾಮ್ ಬಗ್ಗೆ ಸಾಕಷ್ಟು ಉತ್ಸಾಹವನ್ನು ತೋರಿಸುತ್ತಿವೆ. ರೈತರು ತಮ್ಮ ಉತ್ಪನ್ನಗಳನ್ನು ಇ-ನ್ಯಾಮ್ ಪೋರ್ಟಲ್ ನಲ್ಲಿ ಪಾರದರ್ಶಕ ಮತ್ತು ಸ್ಪರ್ಧಾತ್ಮಕ ಬಿಡ್ಡಿಂಗ್ ನಲ್ಲಿ ಆನ್ ಲೈನ್ ನಲ್ಲಿ ಮಾರಾಟ ಮಾಡಲು ಮುಕ್ತರಾಗಿದ್ದಾರೆ, ಈ ಕಾರಣದಿಂದಾಗಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ. 2022ರ ಮಾರ್ಚ್ 31 ರವರೆಗೆ 21 ರಾಜ್ಯಗಳಲ್ಲಿ 1.73 ಕೋಟಿ ರೈತರು, 3.24 ಲಕ್ಷ ವ್ಯಾಪಾರಿಗಳು ಮತ್ತು 2113 ಎಫ್.ಪಿ.ಒಗಳು ನೋಂದಾಯಿಸಿಕೊಂಡಿವೆ. 2020ರ ಮಾರ್ಚ್ 22 ರವರೆಗೆ ಇ-ನ್ಯಾಮ್ ವೇದಿಕೆಯಲ್ಲಿ 1.82 ಲಕ್ಷ ಕೋಟಿ ರೂ.ಗಳ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲಾಗಿದೆ.

**ಕಿಸಾನ್ ರೈಲು:** ಶೈತ್ಯಾಗಾರಗಳನ್ನೊಳಗೊಂಡ ಕಿಸಾನ್ ರೈಲು ಅಂತಹ ಒಂದು ಉಪಕ್ರಮವಾಗಿದ್ದು, ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ದೂರದ ಮಾರುಕಟ್ಟೆಗಳಿಗೆ ವೇಗವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಸಾಗಿಸಲು ಅನುವು ಮಾಡಿಕೊಟ್ಟಿದೆ. 2020ರ ಆಗಸ್ಟ್ 7ರಿಂದ ಸಂಪೂರ್ಣವಾಗಿ ಪ್ರಾರಂಭಿಸಲಾದ ಈ ಯೋಜನೆಯು ರೈತರ ಆದಾಯವನ್ನು ದ್ವಿಗುಣಗೊಳಿಸಲು ಮತ್ತು ಅವರ ಉತ್ಪನ್ನಗಳು ಹಾನಿಯಾಗುವ ಮೊದಲೇ ಮಾರುಕಟ್ಟೆಯನ್ನು ತಲುಪಲು ಪರಿಣಾಮಕಾರಿ ಎಂದು ಸಾಬೀತುಪಡಿಸುತ್ತಿದೆ. ಕಿಸಾನ್ ರೈಲು ಸರ್ಕ್ಯೂಟ್ ಅನ್ನು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಏಜೆನ್ಸಿಗಳು ಮತ್ತು ಮಂಡಿಗಳೊಂದಿಗೆ ಸಮಾಲೋಚಿಸಿ ಗುರುತಿಸಿದೆ. ಬೇಡಿಕೆಯ ಆಧಾರದ ಮೇಲೆ, ಕಿಸಾನ್ ರೈಲು ಕಾರ್ಯಾಚರಣೆಗೆ ಬೋಗಿಗಳನ್ನು ಲಭ್ಯವಾಗುವಂತೆ ಮಾಡಲಾಗುತ್ತದೆ. 2020ರ ಮಾರ್ಚ್ 25ರವರೆಗೆ, ಕಿಸಾನ್ ರೈಲುಗಳು 2190 ಸಂಚಾರಗಳನ್ನು ನಡೆಸಿವೆ. 'ಆಪರೇಷನ್ ಗ್ರೀನ್ಸ್ - ಟಾಪ್ ಟು ಟೋಟಲ್' ಅಡಿಯಲ್ಲಿ, ಕಿಸಾನ್ ರೈಲಿನಲ್ಲಿ ಹಣ್ಣುಗಳು ಮತ್ತು ತರಕಾರಿಗಳ ಸಾಗಣೆಗೆ ಆಹಾರ ಸಂಸ್ಕರಣಾ ಸಚಿವಾಲಯವು ಶೇಕಡಾ 50ರಷ್ಟು ಸಬ್ಸಿಡಿಯನ್ನು ನೀಡುತ್ತದೆ.

**ಕನಿಷ್ಠ ಬೆಂಬಲ ಬೆಲೆ (ಎಂಎಸ್.ಪಿ.):** ಗೋಧಿ ಮತ್ತು ಅಕ್ಕಿಯನ್ನು ದೇಶಾದ್ಯಂತ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಲಾಗುತ್ತಿದೆ. 2022-2023 ರ ಹಿಂಗಾರು ಮಾರುಕಟ್ಟೆ ಹಂಗಾಮಿನಲ್ಲಿ, 2022ರ ಏಪ್ರಿಲ್ 24ರವರೆಗೆ 137 ಲಕ್ಷ ಮೆಟ್ರಿಕ್ ಟನ್ ಗೋಧಿಯನ್ನು ಸಂಗ್ರಹಿಸಲಾಗಿದೆ, ಇದರಲ್ಲಿ ಸುಮಾರು 12 ಲಕ್ಷ ರೈತರಿಗೆ 27 ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚಿನ ಕನಿಷ್ಠ ಬೆಂಬಲ ಬೆಲೆ ಮೊತ್ತವನ್ನು ವಿತರಿಸಲಾಗಿದೆ. ಅಂತೆಯೇ, 2021-2022ರ ಮುಂಗಾರು ಮಾರುಕಟ್ಟೆ ಹಂಗಾಮಿನಲ್ಲಿ 757.27 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಖರೀದಿಸಲಾಗಿದ್ದು, ಇದರಲ್ಲಿ ಸುಮಾರು 1.10 ಕೋಟಿ ರೈತರಿಗೆ 1.5 ಲಕ್ಷ ಕೋಟಿ ರೂ.ಗಳ ಎಂಎಸ್ಪಿಯನ್ನು ವಿತರಿಸಲಾಗಿದೆ. ಹಿಂಗಾರು ಬೆಳೆಗಳಿಗೆ ನಿಗದಿಪಡಿಸಲಾದ ಕನಿಷ್ಠ ಬೆಂಬಲ ಬೆಲೆ ರೈತರಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ದರಕ್ಕೆ ಸಮನಾಗಿರುತ್ತದೆ. ಗೋಧಿ ಮತ್ತು ಸಾಸಿವೆಯ ಮೇಲೆ ಶೇ.100ರಷ್ಟು ಲಾಭ ಪಡೆಯುವ ಸಾಧ್ಯತೆಯಿದೆ. ಬೇಳೆಕಾಳುಗಳಲ್ಲಿ, ಕಡಲೆ, ಬಾರ್ಲಿಯಲ್ಲಿ, 60-69 ಪ್ರತಿಶತದಷ್ಟು ಆದಾಯ ಬರುವ ಸಾಧ್ಯತೆಯೂ ಇದೆ.

ಯೋಜನೆ

## ಪ್ರಧಾನ ಮಂತ್ರಿ ಬೆಳೆ ವಿಮಾ ಯೋಜನೆ

**ಪ್ರಾರಂಭ** 2016 ರ ಮುಂಗಾರು ಹಂಗಾಮು

### ನೈಸರ್ಗಿಕ ವಿಪತ್ತುಗಳ ಸಮಯದಲ್ಲಿ ತಕ್ಷಣದ ಪರಿಹಾರ

**ಉದ್ದೇಶ:** ನೈಸರ್ಗಿಕ ಪ್ರಕೋಪಗಳಿಂದ ಪರಿಹಾರಕ್ಕಾಗಿ ಅಗ್ಗದ ಬೆಳೆ ವಿಮೆ.

**6 ವರ್ಷಗಳಲ್ಲಿ 36 ಕೋಟಿಗೂ ಹೆಚ್ಚು ರೈತರಿಗೆ 1,00,000 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಪರಿಹಾರ ನೀಡಲಾಗಿದೆ.**

### ಪ್ರಗತಿ

2015-2016ರಲ್ಲಿ ಹಿಂದಿನ ಬೆಳೆ ವಿಮಾ ಯೋಜನೆಗಳ ಅಡಿಯಲ್ಲಿ ನೋಂದಾಯಿಸಿಕೊಂಡಿದ್ದ 4.85 ಕೋಟಿ ರೈತರಿಗೆ ಹೋಲಿಸಿದರೆ, 2021-2022ರಲ್ಲಿ 7.65 ಕೋಟಿಗೂ ಹೆಚ್ಚು ರೈತರು ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆಯಡಿ ಅರ್ಜಿ ಸಲ್ಲಿಸಿದ್ದಾರೆ. 2016-2017 ರಿಂದ 2021-2022 ರವರೆಗೆ ಯೋಜನೆ ಪ್ರಾರಂಭವಾದಾಗಿನಿಂದ ಸುಮಾರು 36.98 ಕೋಟಿ ರೈತರು ಅರ್ಜಿ ಸಲ್ಲಿಸಿದ್ದಾರೆ. ರಾಷ್ಟ್ರೀಯ ಬೆಳೆ ವಿಮಾ ಪೋರ್ಟಲ್ ಮೂಲಕ ಬೆಳೆ ವಿಮೆ ಕ್ಲೇಮುಗಳನ್ನು ನೇರವಾಗಿ ರೈತರ ಖಾತೆಗೆ ವಿದ್ಯುನ್ಮಾನದ ಮೂಲಕ ಜಮಾ ಮಾಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಅಂತೆಯೇ, ಬೆಳೆ ನಷ್ಟವನ್ನು ತ್ವರಿತವಾಗಿ ನಿರ್ಣಯಿಸಲು ದೂರ ಸಂವೇದಿ (ರಿಮೋಟ್ ಸೆನ್ಸಿಂಗ್), ತಂತ್ರಜ್ಞಾನ, ಸ್ಮಾರ್ಟ್ ಫೋನ್ ಗಳು, ಡ್ರೋನ್ ಗಳು ಮತ್ತು ಬೆಳೆ ವಿಮಾ ಅಪ್ಲಿಕೇಶನ್ ಗಳನ್ನು ಬಳಸಲಾಗುತ್ತಿದೆ.

ಯೋಜನೆ

## ಕೃಷಿ ಉಡಾನ್ ಯೋಜನೆ

**ಆಗಸ್ಟ್** 2020 ರಿಂದ ಆರಂಭ

### ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸೂಕ್ತ ಮಾರುಕಟ್ಟೆ ಪಡೆಯುತ್ತಾರೆ

**ಉದ್ದೇಶ:** ರೈತರಿಗೆ ತಮ್ಮ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ಮತ್ತು ಆದಾಯವನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವುದು

ಪ್ರಗತಿ

ಮಾರುಕಟ್ಟೆಯನ್ನು ತಲುಪುವ ಮೊದಲೇ ಅನೇಕ ಕೃಷಿ ಉತ್ಪನ್ನಗಳು ಹಾನಿಗೀಡಾಗುತ್ತವೆ. ಇದನ್ನು ತಪ್ಪಿಸಲು, ಕೃಷಿ ಉಡಾನ್ ಯೋಜನೆಯನ್ನು ಆಗಸ್ಟ್ 2020 ರಲ್ಲಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಾರ್ಗಗಳಲ್ಲಿ ಪ್ರಾರಂಭಿಸಲಾಯಿತು, ಇದರಿಂದ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಪಡೆಯಬಹುದಾಗಿದೆ. ಈ ಯೋಜನೆಯನ್ನು ಅಕ್ಟೋಬರ್ 2021 ರಲ್ಲಿ ಕೃಷಿ ಉಡಾನ್ 2.0 ಎಂದು ಮುಂದುವರಿಸಲಾಯಿತು. ಉಡಾನ್ ವಿಮಾನಗಳಲ್ಲಿ ಕನಿಷ್ಠ ಅರ್ಧದಷ್ಟು ಸೀಟುಗಳನ್ನು ರೈತರಿಗೆ ಸಬ್ಸಿಡಿ ದರದಲ್ಲಿ ನೀಡಲಾಗುತ್ತದೆ. ಬೇಬಿ ಕಾರ್ನ್, ಲಿಚಿ, ಸಾವಯವ ಉತ್ಪನ್ನಗಳು, ಕಡಲ ಆಹಾರೋತ್ಪನ್ನ, ಅನಾನಸ್, ಹಾಲು ಉತ್ಪಾದನೆ ಮತ್ತು ಡೈರಿ ಉತ್ಪನ್ನಗಳು, ಮಾಂಸದಂತಹ ವ್ಯವಹಾರಗಳಲ್ಲಿ ತೊಡಗಿರುವ ರೈತರಿಗೆ ಆದ್ಯತೆ ನೀಡಲಾಗುತ್ತದೆ.

ಈಶಾನ್ಯ, ಬುಡಕಟ್ಟು ಮತ್ತು ಗುಡ್ಡಗಾಡು ಪ್ರದೇಶಗಳ 25 ಸೇರಿದಂತೆ **53** ವಿಮಾನ ನಿಲ್ದಾಣಗಳಲ್ಲಿ ಲ್ಯಾಂಡಿಂಗ್, ಪಾರ್ಕಿಂಗ್ ಮತ್ತು ಕೆಲವು ಶುಲ್ಕಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗಿದೆ.

ಯೋಜನೆ

**ಪ್ರಾರಂಭ** ಜುಲೈ 4, 2018

## ಕಿಸಾನ್ ಕ್ರೆಡಿಟ್ ಕಾರ್ಡ್

### ಪ್ರಕ್ರಿಯೆಯ ಶುಲ್ಕವಿಲ್ಲದೆ ರೈತರಿಗೆ ಸುಲಭ ಬಡ್ಡಿದರದಲ್ಲಿ ಸಾಲ

**ಉದ್ದೇಶ:** ರೈತರಿಗೆ, ಸ್ವಸಹಾಯ ಗುಂಪುಗಳಿಗೆ, ಅಥವಾ ಗೇಣಿದಾರರಿಗೆ ಅಲ್ಪಾವಧಿ ಅಥವಾ ದೀರ್ಘಕಾಲೀನ ಕೃಷಿ ಅಗತ್ಯಗಳು ಅಥವಾ ವೆಚ್ಚಗಳಿಗಾಗಿ ಸುಲಭ ಸಾಲದ ನೆರವನ್ನು ಒದಗಿಸುವುದು.

2022 ಏಪ್ರಿಲ್ ರವರೆಗೆ **3.05** ಕೋಟಿ ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ವಿತರಿಸಲಾಗಿದೆ.

ಲೇವಾದೇವಿದಾರರ ಕಪಿಮುಷ್ಟಿಯಿಂದ ರೈತರನ್ನು ಮುಕ್ತಗೊಳಿಸುವ ಸಲುವಾಗಿ, ಕೇಂದ್ರ ಸರ್ಕಾರವು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ನು ಪ್ರಾರಂಭಿಸಿತು, ಇದು ರೈತರಿಗೆ ಬ್ಯಾಂಕಿಂಗ್ ವ್ಯವಸ್ಥೆಯಿಂದ ಸಾಕಷ್ಟು ಮತ್ತು ಸಕಾಲಿಕ ಸಾಲದ ಬೆಂಬಲವನ್ನು ಒಂದೇ ಗವಾಕ್ಷಿ ಅಡಿಯಲ್ಲಿ ಮತ್ತು ಸರಳೀಕೃತ ಕಾರ್ಯವಿಧಾನಗಳೊಂದಿಗೆ ಪಡೆಯಲು ಅನುವು ಮಾಡಿಕೊಡುತ್ತದೆ. 2019 ಫೆಬ್ರವರಿ 4, ರಂದು, ಪಶುಸಂಗೋಪನೆ ಮತ್ತು ಮೀನುಗಾರಿಕೆಯಲ್ಲಿ ತೊಡಗಿರುವ ರೈತರನ್ನು ಸಹ ಈ ಯೋಜನೆಯಲ್ಲಿ ಸೇರಿಸಲಾಯಿತು.

ರೈತರಿಗೆ ಶೇ.9ರ ದರದಲ್ಲಿ **₹3,00,000** ಗಳನ್ನು ನೀಡಲಾಗುತ್ತಿದೆ. ಇದರಲ್ಲಿ, ಸರ್ಕಾರವು ಶೇ.2 ಬಡ್ಡಿ ಸಹಾಯಧನವನ್ನೂ ನೀಡುತ್ತದೆ.

## ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ

ಪ್ರಾರಂಭ 2015-2016

ಯೋಜನೆ

### ನೀರಿನ ದಕ್ಷ ಬಳಕೆಯೊಂದಿಗೆ ಕೃಷಿ ಜಮೀನುಗಳಿಗೆ ಹೆಚ್ಚಿನ ನೀರಿನ ಲಭ್ಯತೆ

ಉದ್ದೇಶ: ನೀರಿನ ದಕ್ಷ ಬಳಕೆಯೊಂದಿಗೆ ಕೃಷಿ ಜಮೀನುಗಳಿಗೆ ಹೆಚ್ಚಿನ ನೀರಿನ ಲಭ್ಯತೆ

ಪ್ರಗತಿ

- ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ 2015-16ರಲ್ಲಿ ಮಹತ್ವದ ಯೋಜನೆಯಾಗಿ ಪ್ರಾರಂಭವಾಯಿತು. ಇದು ತ್ವರಿತ ನೀರಾವರಿ ಪ್ರಯೋಜನಗಳ ಕಾರ್ಯಕ್ರಮವಾಗಿದ್ದು, ಪ್ರತಿ ಜಮೀನಿಗೂ ನೀರು (ಹರ್ ಖೇತ್ ಕೋ ಪಾನಿ), ಪ್ರತಿ ಹನಿಗೂ, ಹೆಚ್ಚು ಬೆಳೆ ಮತ್ತು ಜಲಾನಯನ ಅಭಿವೃದ್ಧಿ ಘಟಕಗಳನ್ನು ಸಹ ಒಳಗೊಂಡಿದೆ. ಇದರ ಯಶಸ್ವಿ ಅನುಷ್ಠಾನಕ್ಕಾಗಿ ಮೂರು ಸಚಿವಾಲಯಗಳು ಈ ವಿಷಯಗಳ ಕುರಿತು ಕಾರ್ಯ ನಿರ್ವಹಿಸುತ್ತಿವೆ.
- ಪಿಎಂಕೆಎಸ್.ವೈ ಮಾರ್ಚ್ 2021ರವರೆಗೆ ಸಿಂಧುವಾಗಿತ್ತು. ಈಗ 93 ಸಾವಿರ ಕೋಟಿ ರೂ.ಗಳ ವೆಚ್ಚದೊಂದಿಗೆ, ಇದನ್ನು 2021-2022 ರಿಂದ 2025-2026 ರವರೆಗೆ ವಿಸ್ತರಿಸಲಾಗಿದೆ, ಇದರಲ್ಲಿ ಸುಮಾರು 20 ಲಕ್ಷ ಹೆಕ್ಟೇರ್ ಕೃಷಿ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸುವ ಹೊಸ ಗುರಿ ಹೊಂದಲಾಗಿದೆ.
- ಇದರ ಅಡಿಯಲ್ಲಿ, 2016-17 ರಲ್ಲಿ 78 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮದ 99 ದೊಡ್ಡ ಯೋಜನೆಗಳನ್ನು ಅಭಿಯಾನದೋಪಾದಿಯಲ್ಲಿ ಪೂರ್ಣಗೊಳಿಸಲು ಕೆಲಸ ಪ್ರಾರಂಭಿಸಲಾಯಿತು, ಅದರಲ್ಲಿ 46 ಯೋಜನೆಗಳು ಪೂರ್ಣಗೊಂಡಿವೆ. ಈ ಯೋಜನೆಯಲ್ಲಿ, ಮಾರ್ಚ್ 2021 ರವರೆಗಿನ ದತ್ತಾಂಶವು **50.64** ಲಕ್ಷ ಹೆಕ್ಟೇರ್ ಭೂಮಿಗೆ ಹೆಚ್ಚುವರಿ ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸಲಾಗಿದೆ ಎಂಬುದನ್ನು ತೋರಿಸುತ್ತದೆ.

**10 ಸಾವಿರ ರೈತ ಉತ್ಪಾದಕ ಸಂಸ್ಥೆಗಳ ರಚನೆ (ಎಫ್.ಪಿ.ಒ.ಗಳು):** ಸಣ್ಣ, ಅತಿಸಣ್ಣ ಮತ್ತು ಭೂರಹಿತ ಕೃಷಿಕರ ಆದಾಯವನ್ನು ಹೆಚ್ಚಿಸಲು ಅವರ ಆರ್ಥಿಕ ಬಲ ಮತ್ತು ಮಾರುಕಟ್ಟೆ ಸಂಪರ್ಕವನ್ನು ಹೆಚ್ಚಿಸಲು ಅವರನ್ನು ಎಫ್.ಪಿ.ಓ.ಗಳಲ್ಲಿ ಸೇರಿಸುವುದು. ಎಫ್.ಪಿಒಗಳನ್ನು 5 ವರ್ಷಗಳ ಕಾಲ ಬೆಂಬಲಿಸಲಾಗುವುದು. ಏಪ್ರಿಲ್ 2022 ರವರೆಗೆ, 2315 ಎಫ್.ಪಿ.ಒಗಳನ್ನು ನೋಂದಾಯಿಸಲಾಗಿದೆ, ಇದಕ್ಕಾಗಿ ಸರ್ಕಾರವು 410 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

**ಮಣ್ಣಿನ ಆರೋಗ್ಯ ನಿರ್ವಹಣೆ:** ಮಣ್ಣಿನ ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಉತ್ತೇಜಿಸುವುದು. 2018-2019 ರಿಂದ 2020-2021 ರವರೆಗೆ 5.67 ಕೋಟಿಗೂ ಹೆಚ್ಚು ರೈತರು ಈ ಯೋಜನೆಯಿಂದ ಪ್ರಯೋಜನ ಪಡೆದಿದ್ದಾರೆ. ಏಪ್ರಿಲ್ 19, 2022 ರವರೆಗೆ 22.19 ಕೋಟಿಗೂ ಹೆಚ್ಚು ಕಾರ್ಡ್ ಗಳನ್ನು ಸಿದ್ಧಪಡಿಸಿ ರೈತರಿಗೆ ವಿತರಿಸಲಾಗಿದೆ.

**ಪಿಎಂ ಕಿಸಾನ್ ಸಂಪದ ಯೋಜನೆ**ಯನ್ನು 2015 ರ ಮೇ 3 ರಂದು 6 ಸಾವಿರ ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಪ್ರಾರಂಭಿಸಲಾಯಿತು. ಈಗ ಇದನ್ನು ಹೆಚ್ಚುವರಿಯಾಗಿ 4600 ಕೋಟಿ ರೂ.ವೆಚ್ಚದೊಂದಿಗೆ 2025-2026 ರವರೆಗೆ ವಿಸ್ತರಿಸಲಾಗಿದ್ದು, ಇದರ ಅಡಿಯಲ್ಲಿ, ಬೃಹತ್ ಆಹಾರ ಪಾರ್ಕ್, ಮಿನಿ ಫುಡ್ ಪಾರ್ಕ್ ಮತ್ತು ಆಹಾರ ಪರೀಕ್ಷಾ ಪ್ರಯೋಗಾಲಯಗಳು ಸೇರಿದಂತೆ 1088 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ನೈಸರ್ಗಿಕ ಕೃಷಿಯಡಿ 2020-2021 ರ ಅವಧಿಯಲ್ಲಿ ರಾಜ್ಯಗಳಿಗೆ ಸುಮಾರು 49.91 ಕೋಟಿ ರೂ. ಪಾವತಿಸಲಾಗಿದೆ. ಭಾರತ ಸರ್ಕಾರವು 2025ರ ವೇಳೆಗೆ 3.50 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೈಸರ್ಗಿಕ ಕೃಷಿ ವ್ಯಾಪ್ತಿಗೆ ಒಳಪಡಿಸುವ ಗುರಿಯನ್ನು ಹೊಂದಿದೆ.

ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿ, ಸರ್ಕಾರವು ಆರ್ಥಿಕ ನೆರವು ನೀಡುವ ಮೂಲಕ ನಾವೀನ್ಯತೆ ಮತ್ತು ಕೃಷಿ ಉದ್ಯಮಶೀಲತೆ ಉತ್ತೇಜಿಸುತ್ತಿದೆ ಮತ್ತು ಇನ್ ಕ್ಯುಬೇಷನ್ ಪರಿಸರ ವ್ಯವಸ್ಥೆಯನ್ನು ಪೋಷಿಸುತ್ತಿದೆ. ಈ ಯೋಜನೆಯಡಿ 923 ನವೋದ್ಯಮಗಳಿಗೆ 50.90 ಕೋಟಿ ರೂ. ಪಾವತಿಸಲಾಗಿದೆ.

ಪ್ರಾರಂಭ ಜೂನ್ 2021

ಯೋಜನೆ

## ನ್ಯಾನೋ ಯೂರಿಯಾ ಉತ್ತೇಜನ

### ನ್ಯಾನೋ ಯೂರಿಯಾವನ್ನು ವಾಣಿಜ್ಯಾತ್ಮಕವಾಗಿ ಉತ್ಪಾದಿಸಿದ ಮೊದಲ ದೇಶ ಭಾರತ

ಉದ್ದೇಶ: ರಸಗೊಬ್ಬರಗಳ ವಿಷಯದಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡುವತ್ತ ಸಾಗುವುದರ ಜೊತೆಗೆ, ಇಳುವರಿಯನ್ನು ಹೆಚ್ಚಿಸುವುದು ಮತ್ತು ರಸಗೊಬ್ಬರಗಳ ಮೇಲಿನ ವೆಚ್ಚವನ್ನು ತಗ್ಗಿಸುವುದು.

## ಪ್ರಗತಿ

ನ್ಯಾನೋ ಯೂರಿಯಾವನ್ನು ಇಫ್ಕೋ ಅಭಿವೃದ್ಧಿಪಡಿಸಿದೆ. ಇದನ್ನು ಕೃಷಿ ಸಂಶೋಧನಾ ಸಂಸ್ಥೆ ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಭತ್ತ, ಗೋಧಿ, ಸಾಸಿವೆ, ಮೆಕ್ಕೆಜೋಳ, ಟೊಮೆಟೊ, ಎಲೆಕೋಸು, ದೊಣ್ಣೆ ಮೆಣಸಿನಕಾಯಿ ಮತ್ತು ಈರುಳ್ಳಿಯ ಮೇಲೆ ಪರೀಕ್ಷೆ ನಡೆಸಿದವು ಮತ್ತು ಇದು ಇಳುವರಿಯನ್ನು ಹೆಚ್ಚಿಸಿತು ಮತ್ತು ರಸಗೊಬ್ಬರವನ್ನು 50 ಪ್ರತಿಶತದಷ್ಟು ಉಳಿಸಿತು. ಪ್ರಸ್ತುತ, ದಿನವೊಂದಕ್ಕೆ ಒಂದು ಲಕ್ಷ ಬಾಟಲಿ ನ್ಯಾನೊ ದ್ರವರೂಪಿ ಯೂರಿಯಾವನ್ನು ಉತ್ಪಾದಿಸಲಾಗುತ್ತಿದೆ.

# ರೈತರನ್ನು ಸಬಲೀಕರಿಸಲು ಇತರ ಪ್ರಮುಖ ಯೋಜನೆಗಳು

**ಕೃಷಿ ಮೂಲಸೌಕರ್ಯ ನಿಧಿ:** ಈ ಯೋಜನೆಯು ದೇಶದ ಕೃಷಿ ಮೂಲಸೌಕರ್ಯವನ್ನು ಸುಧಾರಿಸಲು ಬಡ್ಡಿ ಸಹಾಯಧನ ಮತ್ತು ಆರ್ಥಿಕ ನೆರವಿನ ಮೂಲಕ ಮೂಲಸೌಕರ್ಯ ಮತ್ತು ಸಮುದಾಯ ಕೃಷಿ ಸ್ವತ್ತುಗಳಲ್ಲಿ ಹೂಡಿಕೆ ಮಾಡಲು ಸಾಲ ರೂಪದ ಹಣಕಾಸು ಸೌಲಭ್ಯವನ್ನು ಒದಗಿಸುತ್ತದೆ. ಮಾರ್ಚ್ 22, 2022ರವರೆಗೆ, 13,400 ಕೋಟಿ ರೂ.ಗಳ 19 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಕೃಷಿ ಮೂಲಸೌಕರ್ಯ ನಿಧಿ ಪೋರ್ಟಲ್ ನಲ್ಲಿ ಸ್ವೀಕರಿಸಲಾಗಿದೆ, ಇದರಲ್ಲಿ 10 ಸಾವಿರಕ್ಕೂ ಹೆಚ್ಚು ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.



**ರಾಷ್ಟ್ರೀಯ ಬಿದಿರು ಅಭಿಯಾನ:** ಬಿದಿರು ಕೃಷಿಯ ವಿಷಯದಲ್ಲಿ ಭಾರತವು ಚೀನಾದ ನಂತರ ಎರಡನೇ ಅತಿದೊಡ್ಡ ದೇಶವಾಗಿದೆ. ಏಪ್ರಿಲ್ 25, 2018 ರಂದು ಸಂಪುಟವು ರಾಷ್ಟ್ರೀಯ ಬಿದಿರು ಅಭಿಯಾನವನ್ನು ಪುನಾರಚಿಸಲು ಅನುಮೋದನೆ ನೀಡಿತು. ಈ ಅಭಿಯಾನದ ಅಡಿಯಲ್ಲಿ, ಬಿದಿರು ಕೃಷಿಗಾಗಿ ಸರ್ಕಾರವು ರೈತರಿಗೆ 50,000 ರೂ.ಗಳ ಸಹಾಯಧನವನ್ನು ನೀಡುತ್ತದೆ ಮತ್ತು ಸಣ್ಣ ರೈತರಿಗೆ ಪ್ರತಿ ಗಿಡಕ್ಕೆ 120 ರೂ.ಗಳ ಸಬ್ಸಿಡಿಯನ್ನು ಒದಗಿಸುತ್ತದೆ. ಪ್ರಸ್ತುತ ದೇಶದಲ್ಲಿ 136 ಬಿದಿರು ಪ್ರಭೇದಗಳನ್ನು ಬೆಳೆಯಲಾಗುತ್ತಿದ್ದು, ಅವುಗಳಲ್ಲಿ 125 ಸ್ಥಳೀಯವಾಗಿವೆ. ಭಾರತವು ಪ್ರತಿವರ್ಷ ಸುಮಾರು 140 ಲಕ್ಷ ಟನ್ ಬಿದಿರನ್ನು ಉತ್ಪಾದಿಸುತ್ತದೆ.



**ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ:** ಅಕ್ಕಿ, ಗೋಧಿ, ದ್ವಿದಳ ಧಾನ್ಯಗಳು, ಸಿರಿಧಾನ್ಯಗಳು (ಮೆಕ್ಕೆಜೋಳ ಮತ್ತು ಬಾರ್ಲಿ), ಪೌಷ್ಟಿಕ ಧಾನ್ಯಗಳು (ಜೋಳ, ಸಜ್ಜೆ, ರಾಗಿ), ವಾಣಿಜ್ಯ ಬೆಳೆಗಳು (ಸೆಣಬು, ಹತ್ತಿ ಮತ್ತು ಕಬ್ಬು), ಎಣ್ಣೆ ಕಾಳುಗಳು ಮತ್ತು ತಾಳೆಎಣ್ಣೆ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯನ್ನು ಇದು ಹೊಂದಿದೆ. ಇದರ ಅಡಿಯಲ್ಲಿ, 28 ರಾಜ್ಯಗಳು ಹಾಗು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ನ ಎರಡು ಕೇಂದ್ರಾಡಳಿತ ಪ್ರದೇಶಗಳ ರೈತರು ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.



**ಪರಂಪರಾಗತ ಕೃಷಿ ವಿಕಾಸ ಯೋಜನೆ:** ಸಾಂಪ್ರದಾಯಿಕ ಮತ್ತು ಸಾವಯವ ಕೃಷಿಯನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ. ಇದಕ್ಕಾಗಿ ಸರ್ಕಾರವು ಆರ್ಥಿಕ ಸಹಾಯವನ್ನು ಒದಗಿಸುತ್ತದೆ. ಕ್ಲಸ್ಟರ್ ನಿರ್ಮಾಣ, ಸಾಮರ್ಥ್ಯ ವರ್ಧನೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಉದ್ದೇಶಕ್ಕಾಗಿ ಈ ಯೋಜನೆಯಡಿ 3 ವರ್ಷಗಳ ಕಾಲ ಪ್ರತಿ ಹೆಕ್ಟೇರ್ ಗೆ 50 ಸಾವಿರ ರೂ.ಗಳ ಮೊತ್ತವನ್ನು ನೀಡಲಾಗುತ್ತದೆ.



**ರಾಷ್ಟ್ರೀಯ ಗೋಕುಲ ಗ್ರಾಮ ಅಭಿಯಾನ:** ಈ ಅಭಿಯಾನದ ಅಡಿಯಲ್ಲಿ, 16 ಗೋಕುಲ ಗ್ರಾಮಗಳನ್ನು ಸಮಗ್ರ ದೇಶೀಯ ಜಾನುವಾರು ಅಭಿವೃದ್ಧಿ ಕೇಂದ್ರಗಳಾಗಿ ಸ್ಥಾಪಿಸಲು ಮಾರ್ಚ್ 31, 2022 ರವರೆಗೆ ಹಣವನ್ನು ಬಿಡುಗಡೆ ಮಾಡಲಾಗಿದೆ. ದೇಶೀಯ ಗೋವಿನ ತಳಿಗಳನ್ನು ವೈಜ್ಞಾನಿಕ ಮತ್ತು ಸಮಗ್ರ ರೀತಿಯಲ್ಲಿ ಅಭಿವೃದ್ಧಿಪಡಿಸುವುದು ಮತ್ತು ಸಂರಕ್ಷಿಸುವುದು, ಅವುಗಳ ಉತ್ಪಾದಕತೆಯನ್ನು ಹೆಚ್ಚಿಸುವುದು ಈ ಅಭಿಯಾನದ ಉದ್ದೇಶವಾಗಿದೆ. ಕಳೆದ ಮೂರು ವರ್ಷಗಳಲ್ಲಿ, ಅಭಿಯಾನದ ಅಡಿಯಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಮಾರು 2082 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

**ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರೀಕರಣ (ಪಿಎಂಎಫ್ಎಂಇ) ಯೋಜನೆ**

ಇದು ಆಹಾರ ಸಂಸ್ಕರಣಾ ಉದ್ಯಮದ ಅಸಂಘಟಿತ ವಿಭಾಗದಲ್ಲಿ ಅಸ್ತಿತ್ವದಲ್ಲಿರುವ ವೈಯಕ್ತಿಕ ಸೂಕ್ಷ್ಮ ಉದ್ಯಮಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ, ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಗುಂಪುಗಳು ಮತ್ತು ಉತ್ಪಾದಕ ಸಹಕಾರ ಸಂಘಗಳು ಸೇರಿದಂತೆ ಸಂಪೂರ್ಣ ಮೌಲ್ಯ ಸರಪಳಿಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. 2025 ರವರೆಗೆ ಕಾರ್ಯನಿರ್ವಹಿಸಲಿರುವ ಎರಡು ಲಕ್ಷ ಸೂಕ್ಷ್ಮ ಆಹಾರ ಉದ್ಯಮಗಳಿಗೆ ಸಹಾಯ ಮಾಡಲು 10,000 ಕೋಟಿ ರೂ.ಗಳ ಯೋಜನೆಯನ್ನು ಜಾರಿಗೆ ತರಲಾಗುವುದು.



ಪ್ರಾರಂಭ 1 ಏಪ್ರಿಲ್, 2018ರಿಂದ

ಯೋಜನೆ

## ಹಳ್ಳಿಗಳು, ಹಳ್ಳಿಗರು ಮತ್ತು ಭೂಮಿ

### ಸರ್ಕಾರವನ್ನು ನಡೆಸಲು ಸಾರ್ವಜನಿಕ ಪ್ರತಿನಿಧಿಗಳ ವ್ಯಾಪ್ತಿಯ ವಿಸ್ತರಣೆ

ಉದ್ದೇಶ: ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಸಾಮರ್ಥ್ಯ ವರ್ಧನೆ ಮತ್ತು ತರಬೇತಿ ನೀಡುವ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವುದು.

## ಪ್ರಗತಿ

ಈ ಯೋಜನೆಯಡಿ 2021-2022ರಲ್ಲಿ 25.75 ಲಕ್ಷ ಜನರಿಗೆ ತರಬೇತಿ ನೀಡಲಾಗಿದೆ. ಇ-ಗ್ರಾಮ ಸ್ವರಾಜ್ ಪೋರ್ಟಲ್ https://egramswaraj. gov.in ಆರಂಭಿಸಲಾಗಿದೆ. ಈ ವೇದಿಕೆಯಲ್ಲಿ ಗ್ರಾಮ ಪಂಚಾಯತ್ ಯೋಜನೆಗಳನ್ನು ಅಪ್ ಲೋಡ್ ಮಾಡಲಾಗುತ್ತದೆ. 2021-2022 ರ ಆರ್ಥಿಕ ವರ್ಷದಲ್ಲಿ, 2.54 ಲಕ್ಷ ಯೋಜನೆಗಳನ್ನು ಅಪ್ಲೋಡ್ ಮಾಡಲಾಗಿದೆ ಮತ್ತು 2.32 ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯತ್‌ಗಳು ಇ-ಸ್ವರಾಜ್ ಪೋರ್ಟಲ್ ಗೆ ಸೇರ್ಪಡೆಗೊಂಡಿವೆ, ಇದು ಈ ಇಂಟರ್ಫೇಸ್ ಮೂಲಕ 70 ಸಾವಿರ ಕೋಟಿ ರೂ.ಗಳ ವಿವಿಧ ಯೋಜನೆಗಳಿಗೆ ಪಾವತಿಗಳನ್ನು ಮಾಡಿದೆ.

ಯೋಜನೆ

## ಸ್ವಾಮಿತ್ವ

ಪ್ರಾರಂಭ ಏಪ್ರಿಲ್ 24, 2021

### ಆಸ್ತಿ ಹಕ್ಕುಗಳನ್ನು ಪಡೆಯುವುದು ಈಗ ಸುಲಭ

ಉದ್ದೇಶ: ಗ್ರಾಮೀಣ ಪ್ರದೇಶಗಳ ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ಗ್ರಾಮಸ್ಥರಿಗೆ ಭೂ ಮಾಲೀಕತ್ವ ಮತ್ತು ಕಾನೂನುಬದ್ಧ ಮಾಲೀಕತ್ವದ ಹಕ್ಕುಗಳ ಕಾರ್ಡ್ ಗಳನ್ನು ಒದಗಿಸುವುದು. ಇದು ಸಾಮಾಜಿಕ-ಆರ್ಥಿಕ ಸಬಲೀಕರಣದ ಜೊತೆಗೆ ಸ್ವತ್ತುಗಳ ನಗದೀಕರಣದ ಸೌಲಭ್ಯವನ್ನು ನೀಡಲು ಉದ್ದೇಶಿಸಿದೆ.

ಪ್ರಗತಿ

ಆಂಧ್ರಪ್ರದೇಶ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ಪಂಜಾಬ್, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಪ್ರಾಯೋಗಿಕವಾಗಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯನ್ನು 2021 ರಿಂದ 2025 ರವರೆಗೆ ಹಂತಹಂತವಾಗಿ ದೇಶಾದ್ಯಂತ ಜಾರಿಗೆ ತರಲಾಗುವುದು. ಇಲ್ಲಿಯವರೆಗೆ, 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸ್ವಾಮಿತ್ವ ಯೋಜನೆಯ ಅನುಷ್ಠಾನಕ್ಕಾಗಿ ಸರ್ವೇ ಆಫ್ ಇಂಡಿಯಾದೊಂದಿಗೆ ತಿಳಿವಳಿಕಾ ಒಡಂಬಡಿಕೆಗಳಿಗೆ ಸಹಿ ಹಾಕಿವೆ. ಮಾರ್ಚ್ 31, 2022 ರವರೆಗೆ, ಡ್ರೋನ್ ಹಾರಾಟ ಮತ್ತು ಮ್ಯಾಪಿಂಗ್ ನ ಪ್ರಾಥಮಿಕ ಕಾರ್ಯವನ್ನು ಸುಮಾರು 1.23 ಲಕ್ಷ ಹಳ್ಳಿಗಳಲ್ಲಿ ಮಾಡಲಾಗಿದೆ, ಆದರೆ 31 ಸಾವಿರ ಹಳ್ಳಿಗಳಲ್ಲಿ ಆಸ್ತಿ ಕಾರ್ಡ್ ಗಳನ್ನು ತಯಾರಿಸಲಾಗಿದೆ. ಡಿಜಿಲಾಕರ್ ನಲ್ಲಿ ಸ್ವತ್ತಿನ ಕಾರ್ಡ್ ಗಳು ಲಭ್ಯವಿವೆ.

## ಪಿಎಂ ವಸತಿ ಯೋಜನೆ:

ಪಿಎಂ ವಸತಿ ಯೋಜನೆಯಡಿ ಈವರೆಗೆ 3.1 ಕೋಟಿ ಮನೆಗಳು ಪೂರ್ಣಗೊಂಡಿವೆ. ಕೇಂದ್ರ ಬಜೆಟ್ ನಲ್ಲಿ ಒಂದು ವರ್ಷದಲ್ಲಿ 80 ಲಕ್ಷ ಹೊಸ ಮನೆಗಳಿಗೆ 48 ಸಾವಿರ ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.



**ಪ್ರಧಾನ ಮಂತ್ರಿ ವಸತಿ ಯೋಜನೆ - ಗ್ರಾಮೀಣ:**
ಈ ಯೋಜನೆಯನ್ನು 2016 ರ ಏಪ್ರಿಲ್ 1 ರಂದು 2.95 ಕೋಟಿ ಮನೆಗಳನ್ನು ನಿರ್ಮಿಸುವ ಗುರಿಯೊಂದಿಗೆ ಪ್ರಾರಂಭಿಸಲಾಯಿತು. ಮಾರ್ಚ್ 31, 2022 ರವರೆಗೆ 2.52 ಕೋಟಿ ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. ಗುರಿಯನ್ನು ಪೂರ್ಣಗೊಳಿಸಲು ಮಾರ್ಚ್ 2021 ರಿಂದ ಮಾರ್ಚ್ 2024 ರವರೆಗೆ ಯೋಜನೆಯನ್ನು ಮುಂದುವರಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

**ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ:**
ಈ ಯೋಜನೆಯನ್ನು 25 ಜೂನ್ 2015 ರಂದು ಪ್ರಾರಂಭಿಸಲಾಯಿತು. ಮಾರ್ಚ್ 31, 2022 ರವರೆಗೆ, 1.23 ಕೋಟಿ ಮನೆಗಳು ಮಂಜೂರಾಗಿದ್ದು, ಇದರಲ್ಲಿ 95.13 ಲಕ್ಷ ಮನೆಗಳ ನಿರ್ಮಾಣ ಪ್ರಾರಂಭವಾಗಿದೆ. ಈ ಪೈಕಿ 58.1 ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಂಡ ನಂತರ ವಿತರಿಸಲಾಗಿದೆ.

# ಮಾದರಿ ಗ್ರಾಮ ರೂಪಿಸುವ ಯೋಜನೆಗಳು

**ವೈಬ್ರೆಂಟ್ ವಿಲೇಜ್:**
ಪ್ರಸಕ್ತ ಹಣಕಾಸು ವರ್ಷದ ಆಯವ್ಯಯದಲ್ಲಿ ಅರುಣಾಚಲ ಪ್ರದೇಶ ಮತ್ತು ವಾಸ್ತವಿಕ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಇರುವ ಗ್ರಾಮಗಳಿಗೆ ಈ ಕಾರ್ಯಕ್ರಮವನ್ನು ಘೋಷಿಸಲಾಗಿದೆ. ಗಡಿ ಗ್ರಾಮಗಳಲ್ಲಿ ಸಂಪರ್ಕ, ಮೂಲಸೌಕರ್ಯಗಳ ನಿರ್ಮಾಣ, ಕಾಂಕ್ರೀಟ್ ಮನೆಗಳ ನಿರ್ಮಾಣ ಮತ್ತು ಸರ್ಕಾರಿ ವಾಹಿನಿಗಳು ಮತ್ತು ಡಿಟಿಎಚ್ ಚಾನಲ್ ಗಳು ಹಾಗೂ ಶೈಕ್ಷಣಿಕ ಚಾನೆಲ್ ಗಳಲ್ಲದೆ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು.

**ಸಂಸದ್ ಆದರ್ಶ ಗ್ರಾಮ ಯೋಜನೆ:**
ಇದು ಕೇಂದ್ರ ಸರ್ಕಾರದ ಅಸ್ತಿತ್ವದಲ್ಲಿರುವ ಯೋಜನೆಗಳು, ರಾಜ್ಯ ಸರ್ಕಾರಗಳ ಯೋಜನೆಗಳು, ಸ್ವಯಂಪ್ರೇರಿತ ಮತ್ತು ಸಹಕಾರಿ ವಲಯಗಳೊಂದಿಗೆ ಪಾಲುದಾರಿಕೆ, ಸಾಂಸ್ಥಿಕ ಜವಾಬ್ದಾರಿ ನಿಧಿಯ ಬೆಂಬಲದೊಂದಿಗೆ ಸಂಗ್ರಹಿಸಲಾದ ಸಂಪನ್ಮೂಲಗಳೊಂದಿಗೆ ಸಮನ್ವಯದಿಂದ ನಡೆಸಲಾಗುವ ಯೋಜನೆಯಾಗಿದೆ. 2014ರಲ್ಲಿ ಪ್ರಾರಂಭವಾದ ಈ ಯೋಜನೆಯಡಿ, ಸಂಸದರು ತಮ್ಮ ಅಭಿವೃದ್ಧಿಗಾಗಿ ಗ್ರಾಮಗಳನ್ನು ದತ್ತು ತೆಗೆದುಕೊಳ್ಳುತ್ತಾರೆ. ಈ ಯೋಜನೆಯಲ್ಲಿ ಸುಮಾರು 2100 ಹಳ್ಳಿಗಳನ್ನು ಸೇರಿಸಲಾಗಿದೆ.



## ಬಡ ಜನರಿಗೆ ಜೀವನೋಪಾಯ ಒದಗಿಸುವುದು

**ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ:** ಕೋವಿಡ್ -19 ಸಾಂಕ್ರಾಮಿಕ ರೋಗದ ಸಮಯದಲ್ಲಿ ಸರ್ಕಾರವು 2020ರ ಮಾರ್ಚ್ 26ರಂದು 3 ತಿಂಗಳವರೆಗೆ ಪ್ರಾರಂಭಿಸಲಾದ ಈ ಯೋಜನೆಯನ್ನು ನಿರಂತರವಾಗಿ ವಿಸ್ತರಿಸುತ್ತಿದೆ. ಈ ಯೋಜನೆಯಲ್ಲಿ, 10 ಕೆಜಿ ಹೆಚ್ಚುವರಿ ಉಚಿತ ಗೋಧಿ ಅಥವಾ ಅಕ್ಕಿಯ ಜೊತೆಗೆ, 80 ಕೋಟಿ ಜನರಿಗೆ ಒಂದು ಕೆಜಿ ಬೇಳೆಕಾಳುಗಳನ್ನೂ ಉಚಿತ ಪಡಿತರವಾಗಿ ನೀಡಲಾಗುತ್ತದೆ. ಈ ಯೋಜನೆಯ ಆರನೇ ಹಂತವನ್ನು ಸಂಪುಟವು ಇತ್ತೀಚೆಗೆ ಅನುಮೋದಿಸಿದೆ, ಇದು ಸೆಪ್ಟೆಂಬರ್ 2022 ರವರೆಗೆ ಜಾರಿಯಲ್ಲಿರುತ್ತದೆ. ಸರ್ಕಾರವು ಈ ಯೋಜನೆಗೆ 2 ಲಕ್ಷ 60 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಮತ್ತು ಸೆಪ್ಟೆಂಬರ್ 2022 ರ ವೇಳೆಗೆ, ಇನ್ನೂ 80 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು. ಏಪ್ರಿಲ್ 2022 ರವರೆಗೆ, ಈ ಯೋಜನೆಯಡಿ 1000 ಲಕ್ಷ ಮೆಟ್ರಿಕ್ ಟನ್ ಗಿಂತಲೂ ಹೆಚ್ಚು ಉಚಿತ ಆಹಾರ ಧಾನ್ಯಗಳನ್ನು ವಿತರಿಸಲಾಗಿದೆ.

**ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನ್ರೇಗಾ):** ಮನ್ರೇಗಾ ಒಂದು ಬೇಡಿಕೆ ಆಧಾರಿತ ವೇತನ ಉದ್ಯೋಗ ಕಾರ್ಯಕ್ರಮವಾಗಿದೆ. ಇದರಲ್ಲಿ, ಕೌಶಲ್ಯರಹಿತ ದುಡಿಮೆಯನ್ನು ಮಾಡಲು ಬಯಸುವ ಪ್ರತಿ ಕುಟುಂಬದ ವಯಸ್ಕ ಸದಸ್ಯರಿಗೆ ಪ್ರತಿ ವರ್ಷ 100 ದಿನಗಳ ಉದ್ಯೋಗ ಖಾತರಿಯನ್ನು ನೀಡಲಾಗುತ್ತದೆ. ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರ ಸೂಚಿಸಿದ ವೇತನ ದರಕ್ಕಿಂತ ಹೆಚ್ಚಿನ ವೇತನವನ್ನು ನಿಗದಿಪಡಿಸಬಹುದು. ಈ ಯೋಜನೆಯಡಿ, ಶೇಕಡಾ 99.69 ರಷ್ಟು ಕಾರ್ಮಿಕರ ಖಾತೆಗಳಿಗೆ ವೇತನವನ್ನು ಕಳುಹಿಸಲಾಗುತ್ತಿದೆ.

**ಒಂದು ರಾಷ್ಟ್ರ, ಒಂದು ಪಡಿತರ ಚೀಟಿ**
ಒಂದು ರಾಷ್ಟ್ರ, ಒಂದು ಪಡಿತರ ಚೀಟಿಯನ್ನು 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೆ ತರಲಾಗಿದ್ದು, ಈ ಯೋಜನೆಯಡಿ 77 ಕೋಟಿ ಫಲಾನುಭವಿಗಳು ಅಂದರೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಒಟ್ಟು ಅರ್ಹ ಜನಸಂಖ್ಯೆಯ ಸುಮಾರು 96.8 ಪ್ರತಿಶತದಷ್ಟು ಫಲಾನುಭವಿಗಳು ಇದರ ವ್ಯಾಪ್ತಿಗೆ ಒಳಪಟ್ಟಿದ್ದಾರೆ.

**ಜಾಮ್ ತ್ರಿವಳಿ: ಹಣಕಾಸು ಪೂರಣಕ್ಕಾಗಿ ವಿಶ್ವದ ಅತಿದೊಡ್ಡ ಯೋಜನೆ** ದೇಶದ ಪ್ರತಿಯೊಂದು ವರ್ಗವನ್ನೂ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರಿ ಯೋಜನೆಗಳ ಪ್ರಯೋಜನಗಳೊಂದಿಗೆ ಜೋಡಿಸಲಾಗಿದೆ, ಇದರಲ್ಲಿ 'ಜಾಮ್' ಅಂದರೆ 'ಜನ್ ಧನ್-ಆಧಾರ್-ಮೊಬೈಲ್' ತ್ರಿವಳಿಗಳು ಪಾರದರ್ಶಕತೆಯನ್ನು ಖಾತ್ರಿಪಡಿಸುವ ಮೂಲಕ ಪ್ರಮುಖ ಪಾತ್ರ ವಹಿಸುತ್ತಿವೆ. ಮೊದಲನೆಯದಾಗಿ, ಎಲ್.ಪಿ.ಜಿ ಸಬ್ಸಿಡಿಗಾಗಿ ನೇರ ಪ್ರಯೋಜನ ವರ್ಗಾವಣೆ (ಡಿಬಿಟಿಎಲ್) ಯನ್ನು 1 ಜನವರಿ 2015 ರಂದು ಪ್ರಾರಂಭಿಸಲಾಯಿತು. ಈಗ 53 ಸಚಿವಾಲಯಗಳ 313 ಯೋಜನೆಗಳನ್ನು ನೇರ ಸವಲತ್ತು ವರ್ಗಾವಣೆಯ ಮೂಲಕ ಸಂಪರ್ಕಿಸಲಾಗಿದೆ, ಇದರಿಂದಾಗಿ 2014-2015 ರಿಂದ 2021-2022 ರವರೆಗೆ ಫಲಾನುಭವಿಗಳ ಖಾತೆಗಳಿಗೆ 21.87 ಲಕ್ಷ ಕೋಟಿ ರೂ.ಗಳು ನೇರವಾಗಿ ತಲುಪಿವೆ. 'ಜಾಮ್' ತ್ರಿವಳಿಯಿಂದಾಗಿ ರಾಜ್ಯದ ಬೊಕ್ಕಸದಿಂದ 2,22,968 ಕೋಟಿ ರೂ.ಗಳ ಸೋರಿಕೆಯನ್ನು ತಡೆಯಲಾಗಿದೆ.

**ಜನ್ ಧನ್ ಪ್ರತಿ ಮನೆಗೂ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸುತ್ತಿದೆ**
ದೇಶದ ಜನಸಂಖ್ಯೆಯಲ್ಲಿ ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ಅರ್ಧಕ್ಕಿಂತ ಹೆಚ್ಚು ಜನರಿಗಾಗಿ ಈ ಯೋಜನೆಯನ್ನು ಆಗಸ್ಟ್ 28, 2014ರಂದು ಪ್ರಾರಂಭಿಸಲಾಯಿತು. ಈ ಯೋಜನೆಯಡಿ, ಶೂನ್ಯ ಠೇವಣಿಯೊಂದಿಗೆ ಬ್ಯಾಂಕ್ ಖಾತೆಗಳನ್ನು ತೆರೆಯಲಾಗುತ್ತದೆ. ಈ ಯೋಜನೆಯಡಿ ರುಪೇ ಕಾರ್ಡ್, 10 ಸಾವಿರ ರೂ.ಗಳ ಓವರ್ ಡ್ರಾಫ್ಟ್ ಸೌಲಭ್ಯ ಮತ್ತು ವಿಮಾ ರಕ್ಷಣೆಯನ್ನು ಸಹ ಒದಗಿಸಲಾಗುತ್ತದೆ. ಜನ್ ಧನ್ ಖಾತೆಗಳಲ್ಲಿ 1,67,462.30 ಕೋಟಿ ರೂ. ಠೇವಣಿ ಇಡಲಾಗಿದೆ. ಜನ್ ಧನ್ ಖಾತೆದಾರರಲ್ಲಿ ಸುಮಾರು ಶೇ.55ರಷ್ಟು ಮಹಿಳೆಯರಾಗಿದ್ದಾರೆ.

## ಬೀದಿ ಬದಿ ವ್ಯಾಪಾರಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಿದ ಸ್ವನಿಧಿ

ಸ್ವನಿಧಿ ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ 10,000 ರೂ.ಗಳವರೆಗೆ ಸಾಲ ನೀಡಲಾಗುತ್ತದೆ. ಡಿಸೆಂಬರ್ 202 ರವರೆಗೆ ಪಿಎಂ ಸ್ವನಿಧಿಯನ್ನು ಮುಂದುವರಿಸಲು ಸಂಪುಟವು ಅನುಮೋದನೆ ನೀಡಿದೆ. ನಗರ ಪ್ರದೇಶದ ಸುಮಾರು 1.2 ಕೋಟಿ ಜನರು ಇದರ ಪ್ರಯೋಜನ ಪಡೆಯಲಿದ್ದಾರೆ. 2,931 ಕೋಟಿ ರೂ.ಗಳ ಮೊತ್ತದ 29.6 ಲಕ್ಷ ಸಾಲಗಳನ್ನು ವಿತರಿಸಲಾಗಿದೆ.

## ನವ ಭಾರತದ ಉದಯ

# ವೈಭವೋಪೇತ ಪರಂಪರೆ ಮತ್ತು ಸಂಪ್ರದಾಯದ ಸಂರಕ್ಷಣೆ

ಶ್ರೀ ಗುರು ತೇಗ್ ಬಹಾದೂರ್ ಜೀ ಅವರ ನಾಲ್ಕನೇ ಜನ್ಮ ಶತಮಾನೋತ್ಸವವನ್ನು ಕೆಂಪು ಕೋಟೆಯಲ್ಲಿ ಆಚರಿಸುವುದು ಅಥವಾ ಸಾಹಿಬ್ ಜಾದೋಗಳ ತ್ಯಾಗದ ನೆನಪಿಗಾಗಿ ಡಿಸೆಂಬರ್ 26 ರಂದು ವೀರ್ ಬಾಲ್ ದಿವಸ್ ಎಂದು ಘೋಷಿಸುವುದು, ಅಯೋಧ್ಯೆಯಲ್ಲಿ ಶ್ರೀರಾಮನ ದೇವಾಲಯ ನಿರ್ಮಾಣ, ಕರ್ತಾರ್ಪುರ್ ಕಾರಿಡಾರ್, ಕಾಶಿ ವಿಶ್ವನಾಥ ಕಾರಿಡಾರ್, ಜಮ್ಮು ಮತ್ತು ಕಾಶ್ಮೀರದಿಂದ 370ನೇ ವಿಧಿಯನ್ನು ರದ್ದುಗೊಳಿಸುವುದೂ ಸೇರಿದಂತೆ ಹಲವಾರು ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಕಳೆದ ಎಂಟು ವರ್ಷಗಳಲ್ಲಿ ತ್ರಿವಳಿ ತಲಾಖ್ ರದ್ದುಗೊಳಿಸಿರುವುದು, ಪೌರತ್ವ ತಿದ್ದುಪಡಿ ಕಾಯ್ದೆ, ಪರಸ್ಪರ ಸಾಮರಸ್ಯದ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವ ಮೂಲಕ ಶತಮಾನಗಳ ಪೂರ್ವಗ್ರಹವನ್ನು ಕೊನೆಗೊಳಿಸುವ ಹೊಸ ಭರವಸೆಗಳನ್ನು ಹುಟ್ಟುಹಾಕಿದೆ.

### ಸಿಖ್ ಸಮುದಾಯಕ್ಕಾಗಿ ತೆಗೆದುಕೊಂಡ ಕ್ರಮಗಳು

- ಹಲವಾರು ಶತಮಾನಗಳ ಗುಲಾಮಗಿರಿಯಿಂದ ಸ್ವಾತಂತ್ರ್ಯವನ್ನು ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪ್ರಯಾಣದಿಂದ ಪ್ರತ್ಯೇಕವಾಗಿ ನೋಡಲಾಗುವುದಿಲ್ಲ. ಅದಕ್ಕಾಗಿಯೇ ಇಂದು ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ಗುರು ತೇಗ್ ಬಹಾದುರ್ ಜೀ ಅವರ 400 ನೇ ಪ್ರಕಾಶ್ ಪರ್ವವನ್ನು ಇದೇ ರೀತಿಯ ಸಂಕಲ್ಪಗಳೊಂದಿಗೆ ಆಚರಿಸುತ್ತಿದೆ.
- ಶ್ರೀ ಗುರು ತೇಗ್ ಬಹಾದುರ್ ಜೀ ಅವರ 400 ನೇ ಪ್ರಕಾಶ್ ಪರ್ವವನ್ನು ಏಪ್ರಿಲ್ 21 ರಂದು ಕೆಂಪು ಕೋಟೆಯಲ್ಲಿ ಅದ್ಧೂರಿಯಾಗಿ ಆಯೋಜಿಸಲಾಯಿತು ಮತ್ತು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿ. ಗುರು ತೇಗ್ ಬಹಾದುರ್ ಅವರ ಪರಂಪರೆಯು ಇಡೀ ರಾಷ್ಟ್ರಕ್ಕೆ ಒಂದು ಏಕೀಕರಣ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಗುರುಗಳ ಗೌರವಾರ್ಥ, ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು.
- ಡೇರಾ ಬಾಬಾ ನಾನಕ್ ಅವರಿಂದ ಹಿಡಿದು ಅಂತಾರಾಷ್ಟ್ರೀಯ ಗಡಿಯವರೆಗೆ ಎಲ್ಲಾ ಆಧುನಿಕ ಸೌಲಭ್ಯಗಳೊಂದಿಗೆ ಸಮಗ್ರ ಅಭಿವೃದ್ಧಿ. ಕರ್ತಾರ್ಪುರ್ ಸಾಹಿಬ್ ಕಾರಿಡಾರ್ ಅನ್ನು ಅಕ್ಟೋಬರ್ 2019ರಲ್ಲಿ ನಿರ್ಮಿಸಲಾಯಿತು. ಸಿಖ್ಖರ ಪವಿತ್ರ ಯಾತ್ರಾ ಸ್ಥಳವಾದ ಕರ್ತಾರ್ಪುರ ಕಾರಿಡಾರ್ ಗಾಗಿ ದೀರ್ಘಕಾಲದ ಬೇಡಿಕೆಯನ್ನು ಕೇಂದ್ರ ಸರ್ಕಾರ ಈಡೇರಿಸಿತು.
- ಕರ್ತಾರ್ಪುರ, ಪಾಕಿಸ್ತಾನದಲ್ಲಿರುವ ಗುರುನಾನಕ್ ದೇವ್ ಅವರ ನಿವಾಸ, ಇದನ್ನು ಭಾರತೀಯರು ಬೈನಾಕ್ಯುಲರ್ ಗಳ ಮೂಲಕ ಮಾತ್ರ ನೋಡುತ್ತಿದ್ದರು. ಆದರೆ 2019ರ ನವೆಂಬರ್ 9 ರಂದು, ಪ್ರಧಾನಮಂತ್ರಿ ಮೋದಿ ಅವರು 120 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ಕರ್ತಾರ್ಪುರ ಕಾರಿಡಾರ್ ಅನ್ನು ಉದ್ಘಾಟಿಸಿದರು. ಇದು ಸಿಖ್ ಧರ್ಮದ ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಗೌರವವನ್ನು ನೀಡಿತು.






- ಎಲ್ಲಾ ಧರ್ಮಗಳ ಭಾರತೀಯ ಮೂಲದ ಯಾತ್ರಾರ್ಥಿಗಳು ಈಗ ಈ ಕಾರಿಡಾರ್ ಅನ್ನು ಬಳಸಿಕೊಂಡು ಕರ್ತಾಪುರದಲ್ಲಿಯೇ ಪ್ರಾರ್ಥನೆ ಸಲ್ಲಿಸಬಹುದು. ಅಲ್ಲಿಗೆ ಹೋಗಲು ಯಾವುದೇ ಪ್ರತ್ಯೇಕ ವೀಸಾದ ಅಗತ್ಯವಿಲ್ಲ. ಅವರು ಸಿಂಧುವಾದ ಪಾಸ್ ಪೋರ್ಟ್ ನೊಂದಿಗೆ ಕರ್ತಾರ್ಪುರಕ್ಕೆ ಭೇಟಿ ನೀಡಬಹುದು.
- ಆಸಕ್ತ ಯಾತ್ರಾರ್ಥಿಗಳ ನೋಂದಣಿಗಾಗಿ ಆನ್ ಲೈನ್ ಪೋರ್ಟಲ್ ಅನ್ನು ಪ್ರಾರಂಭಿಸಲಾಗಿದೆ.
- ಲಂಗರ್ ಗೆ ಜಿಎಸ್ಟಿಯಿಂದ ಪರಿಹಾರ
- ದಶಮೇಶ್ ಗುರು ಪ್ರಕಾಶ್ ಪರ್ವ ಕುರಿತ ಕಾರ್ಯಕ್ರಮ
- ಎಸ್.ಜಿ.ಪಿ.ಸಿಯ ಚುನಾವಣೆ ಕೇವಲ ಕೇಶಧಾರಿ ಸಿಖ್ಖರಿಗೆ ಮಾತ್ರ ಸೀಮಿತವಾಗಿತ್ತು ಮತ್ತು ಜೂನ್ 2019 ರ ನಂತರ ಕಪ್ಪುಪಟ್ಟಿಗೆ ಸೇರಿಸಲ್ಪಟ್ಟ ವಿದೇಶಿ ಸಿಖ್ ಪ್ರಜೆಗಳ ಪರಾಮರ್ಶೆ ಮತ್ತು ಕ್ಷಮಾದಾನ ಯೋಜನೆಯ ಭಾಗವಾಗಿ (ಗಾಂಧಿ ಜಯಂತಿಯಂದು) ಸಿಖ್ ಕೈದಿಗಳನ್ನು ತಂಡಗಳಲ್ಲಿ ಬಿಡುಗಡೆ ಮಾಡುವುದು.
- ಪಾಟ್ನಾ ಸಾಹಿಬ್ ಸೇರಿದಂತೆ ಗುರು ಗೋವಿಂದ್ ಸಿಂಗ್ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ರೈಲ್ವೆ ಸೌಲಭ್ಯಗಳನ್ನು ಆಧುನೀಕರಿಸಲಾಗಿದೆ.
- ಪಂಜಾಬ್ ನ ಆನಂದಪುರ ಸಾಹಿಬ್ ಮತ್ತು ಅಮೃತಸರದ ಅಮೃತಸರ ಸಾಹಿಬ್ ಸೇರಿದಂತೆ ಎಲ್ಲಾ ಪ್ರಮುಖ ಸ್ಥಳಗಳನ್ನು 'ಸ್ವದೇಶ್ ದರ್ಶನ್ ಯೋಜನೆ' ಮೂಲಕ ಸಂಪರ್ಕಿಸುವ ಯಾತ್ರಾ ಸರ್ಕ್ಯೂಟ್ ಅನ್ನು ಸಹ ನಿರ್ಮಿಸಲಾಗುತ್ತಿದೆ.
- ಉತ್ತರಾಖಂಡದ ಹೇಮಕುಂಡ್ ಸಾಹಿಬ್ ಗೆ ರೋಪ್ ವೇ ಸೌಲಭ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ.
- ಸಿಖ್ ಸಮುದಾಯದ ಬಗ್ಗೆ ಇರುವ ಶ್ರದ್ಧೆ ಮತ್ತು ಸಮರ್ಪಣೆಯ ನಿಟ್ಟಿನಲ್ಲಿ, ಸಿಖ್ಖರ 5 ತಖ್ತ್ ಗಳಲ್ಲಿ ಒಬ್ಬರಾದ ಸಚ್ ಖಂಡ್ ಶ್ರೀ ಹಜೂರ್ ಸಾಹಿಬ್ ಅವರು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ಗೌರವ ಪತ್ರವನ್ನು ನೀಡಿದ್ದಾರೆ.

## ಇತಿಹಾಸದಲ್ಲಿ ಮೊದಲ ಬಾರಿಗೆ ಮೇಲ್ಜಾತಿಗೂ ಮೀಸಲಾತಿ

ಸಾಮಾನ್ಯ ವರ್ಗಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡಾ 10 ರಷ್ಟು ಮೀಸಲಾತಿ ನೀಡುವ ಮೂಲಕ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಇದರ ಮೂಲಕ, ವಾರ್ಷಿಕ 8 ಲಕ್ಷ ರೂ.ಗಳ ಆದಾಯ ಹೊಂದಿರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಕೆಲವು ಷರತ್ತುಗಳೊಂದಿಗೆ ಮೀಸಲಾತಿಯ ಪ್ರಯೋಜನವನ್ನು ಪಡೆಯುತ್ತಾರೆ.

## ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ)

- ಈ ಮಸೂದೆಯು ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಲ್ಲಿ ಕಿರುಕುಳಕ್ಕೊಳಗಾದ ಕೋಟ್ಯಂತರ ಧಾರ್ಮಿಕ ಅಲ್ಪಸಂಖ್ಯಾತರಿಗೆ ಘನತೆಯಿಂದ ಬದುಕುವ ಅವಕಾಶವನ್ನು ನೀಡುತ್ತದೆ. ಇದಲ್ಲದೆ, ಭಾರತದ ಸಂವಿಧಾನದ ಯಾವುದೇ ನಿಬಂಧನೆಗೆ ವಿರುದ್ಧವಾಗಿ ಹೋಗದ ಅಂತಹ ನಿರಾಶ್ರಿತರಿಗೆ ಪೌರತ್ವವನ್ನು ಒದಗಿಸುವ ಅವಕಾಶಗಳೂ ಇವೆ.
- ಭಾರತದ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ತಾನದಲ್ಲಿ ಕಿರುಕುಳಕ್ಕೊಳಗಾದ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಗೌರವವನ್ನು ರಕ್ಷಿಸಲು ದಶಕಗಳಷ್ಟು ಹಳೆಯದಾದ ಸಮಸ್ಯೆಯನ್ನು ಪರಿಹರಿಸಲು ಪೌರತ್ವ ಕಾನೂನಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡಿತು.
- ಆಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಿಂದ ಧಾರ್ಮಿಕ ಕಿರುಕುಳದಿಂದಾಗಿ ಭಾರತಕ್ಕೆ ಬಂದ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರಿಶ್ಚಿಯನ್ ಸಮುದಾಯಗಳನ್ನು ಬೆಂಬಲಿಸುವ ಮಸೂದೆಯನ್ನು ಡಿಸೆಂಬರ್ 9 ರಂದು ಲೋಕಸಭೆ, ಡಿಸೆಂಬರ್ 11 ರಂದು ರಾಜ್ಯಸಭೆ ಮತ್ತು 2019 ರ ಡಿಸೆಂಬರ್ 12 ರಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅನುಮೋದಿಸಿದರು. ಅವರಿಗೆ ಭಾರತೀಯ ಪೌರತ್ವವನ್ನು ನೀಡಲು ಇದರಲ್ಲಿ ಅವಕಾಶವಿದೆ.
- ಅದೇ ಸಮಯದಲ್ಲಿ, ಈಶಾನ್ಯದ ಜನರ ಭಾಷಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಸ್ಮಿತೆಯನ್ನು ಖಚಿತಪಡಿಸಿಕೊಳ್ಳಲು ವ್ಯವಸ್ಥೆಗಳನ್ನು ಸಹ ಮಾಡಲಾಯಿತು.

## ತ್ರಿವಳಿ ತಲಾಖ್

- 2019 ಜುಲೈ 30, ಭಾರತದ ಸಂಸದೀಯ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲು ಎಂದು ದಾಖಲಿಸಲಾಗಿದೆ. ಐತಿಹಾಸಿಕ ತ್ರಿವಳಿ ತಲಾಖ್ ಮಸೂದೆಯನ್ನು ಅಂಗೀಕರಿಸಿದ ನಂತರ ಅಸ್ತಿತ್ವಕ್ಕೆ ಬಂದ ಈ ಕಾನೂನು, ಮುಸ್ಲಿಂ ಮಹಿಳೆಯರಿಗೆ ನ್ಯಾಯ ಮತ್ತು ಗೌರವವನ್ನು ಒದಗಿಸಿದೆ, ಇದು ದಶಕಗಳಿಂದ ನನೆಗುದಿಗೆಬಿದ್ದಿತ್ತು.

**ತ್ರಿವಳಿ ತಲಾಖ್ ಕಾನೂನನ್ನು ಅಂಗೀಕರಿಸಿದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹೆಸರು ಖಂಡಿತವಾಗಿಯೂ ಸಮಾಜ ಸುಧಾರಕರಾದ ರಾಜಾ ರಾಮ್ ಮೋಹನ್ ರಾಯ್ ಮತ್ತು ಈಶ್ವರ್ ಚಂದ್ರ ವಿದ್ಯಾಸಾಗರ್ ಅವರಂತಹವರ ಅದೇ ಶ್ರೇಣಿಯಲ್ಲಿ ಇತಿಹಾಸದಲ್ಲಿ ಉಳಿಯುತ್ತದೆ. ತ್ರಿವಳಿ ತಲಾಖ್ ಕಾನೂನು ಮುಸ್ಲಿಂ ಮಹಿಳೆಯರ ಹಿತಾಸಕ್ತಿಗಳು ಮತ್ತು ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಕ್ರಾಂತಿಕಾರಿ ಹೆಜ್ಜೆ ಎಂದು ಸಾಬೀತುಪಡಿಸುತ್ತದೆ ಮತ್ತು ಈಗ ಅವರಿಗೆ ಹೊಸ ಯುಗ ಪ್ರಾರಂಭವಾಗಲಿದೆ.**

**ಅಮಿತ್ ಶಾ, ಕೇಂದ್ರ ಗೃಹ ಸಚಿವ**





## ಗಡಿನಾಡು ಪ್ರದೇಶ ಅಭಿವೃದ್ಧಿ ಉತ್ಸವ

ಗಡಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ವೇಗಗೊಳಿಸಲು ಮತ್ತು ರಾಷ್ಟ್ರೀಯ ಭದ್ರತೆಯಲ್ಲಿ ತಮ್ಮ ಪಾತ್ರದ ಬಗ್ಗೆ ಸ್ಥಳೀಯ ಜನರಿಗೆ ಅರಿವು ಮೂಡಿಸಲು, ಗಡಿ ಪ್ರದೇಶ ವಿಕಾಸೋತ್ಸವವನ್ನು ಪ್ರಾರಂಭಿಸಲಾಯಿತು. ಮೊದಲ "ಗಡಿ ಪ್ರದೇಶ ಅಭಿವೃದ್ಧಿ ಉತ್ಸವ-2020" ನ್ನು ನವೆಂಬರ್ 12, 2020 ರಂದು ಕಚ್ (ಗುಜರಾತ್) ನ ಧೋರ್ಡೊ ಗ್ರಾಮದಲ್ಲಿ ಉದ್ಘಾಟಿಸಲಾಯಿತು. ಗುಜರಾತಿನ ಕಛ್, ಬನಸ್ಕಾಂತ, ಪಟಾನ್ ಜಿಲ್ಲೆಗಳ 158 ಗಡಿ ಗ್ರಾಮಗಳ ಮುಖಂಡರು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## 5 ದಶಕಗಳ ಕಾಯುವಿಕೆಯ ಬಳಿಕ ಬೋಡೋ ಒಪ್ಪಂದಕ್ಕೆ ಅಂಕಿತ

- ಪ್ರಧಾನಮಂತ್ರಿಯವರ 'ಎಲ್ಲರೊಂದಿಗೆ, ಎಲ್ಲರ ವಿಕಾಸ, ಎಲ್ಲರ ವಿಶ್ವಾಸ ಮತ್ತು ಎಲ್ಲರ ಪ್ರಯತ್ನ' ಎಂಬ ದೃಷ್ಟಿಕೋನವು ಮತ್ತೊಂದು ಮೈಲಿಗಲ್ಲನ್ನು ಸಾಧಿಸಿದೆ. 50 ವರ್ಷಗಳಷ್ಟು ಹಳೆಯದಾದ ಬೋಡೋ ವಿವಾದವನ್ನು ಕೊನೆಗಾಣಿಸಲು ಸಮಗ್ರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- ಅಸ್ಸಾಂನ ಪ್ರಾದೇಶಿಕ ಸಮಗ್ರತೆಯನ್ನು ಖಾತ್ರಿಪಡಿಸಲಾಗಿದೆ. ಬೋಡೋ ಪ್ರದೇಶಗಳ ಅಭಿವೃದ್ಧಿಗೆ ಸುಮಾರು 1500 ಕೋಟಿ ರೂ.ಗಳ ವಿಶೇಷ ಅಭಿವೃದ್ಧಿ ಪ್ಯಾಕೇಜ್ ನೀಡಲಾಗಿದೆ.
- ಪ್ರಧಾನಮಂತ್ರಿಯವರ ಕರೆಯ ಮೇರೆಗೆ ಒಪ್ಪಂದದ ನಂತರ 1600ಕ್ಕೂ ಹೆಚ್ಚು ಬೋಡೋ ಕಾರ್ಯಕರ್ತರು ಶರಣಾಗಿದ್ದು ಮುಖ್ಯವಾಹಿನಿಗೆ ಮರಳಿದ್ದಾರೆ.

## ಎಎಫ್‌ಎಸ್‌ಪಿಎ ಕಟ್ ಅಡಿಯಲ್ಲಿ 'ವಿಚಲಿತವಾದ ಪ್ರದೇಶಗಳು'

ಇತ್ತೀಚೆಗೆ, ಅಸ್ಸಾಂ, ನಾಗಾಲ್ಯಾಂಡ್ ಮತ್ತು ಮಣಿಪುರದ ಅನೇಕ ಜಿಲ್ಲೆಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ (ಎ.ಎಫ್.ಎಸ್.ಪಿ.ಎ.) ಅಡಿಯಲ್ಲಿ ಪ್ರಕ್ಷುಬ್ಧ ಪ್ರದೇಶಗಳನ್ನು ಕಡಿಮೆ ಮಾಡಲಾಗಿದೆ. ಈ ಹಿಂದೆ ತ್ರಿಪುರಾ, ಮೇಘಾಲಯ ಮತ್ತು ಅರುಣಾಚಲ ಪ್ರದೇಶದ ಹಲವು ಜಿಲ್ಲೆಗಳಿಂದ ಎಎಫ್. ಎಸ್.ಪಿ.ಎ ಅನ್ನು ತೆಗೆದುಹಾಕಲಾಗಿತ್ತು.



## ಸುಗಮ್ಯ ಭಾರತ ಅಭಿಯಾನದೊಂದಿಗೆ ದಿವ್ಯಾಂಗ ಜನರ ಸಬಲೀಕರಣ

2015ರ ಡಿಸೆಂಬರ್ 3 ರಂದು ಸಾರ್ವತ್ರಿಕ ಸುಗಮ ಪ್ರವೇಶ ಸಾಧಿಸಲು ರಾಷ್ಟ್ರವ್ಯಾಪಿ ಸುಗಮ್ಯ ಭಾರತ ಅಭಿಯಾನವನ್ನು ಪ್ರಾರಂಭಿಸಲಾಯಿತು. ವಿಶೇಷ ಚೇತನರ ಸುರಕ್ಷಿತ, ಸ್ವತಂತ್ರ ಮತ್ತು ಘನತೆಯ ಜೀವನಕ್ಕೆ ಅಡೆತಡೆಗಳಿಲ್ಲದ ವಾತಾವರಣವನ್ನು ಸೃಷ್ಟಿಸುವುದು ಇದರ ಉದ್ದೇಶವಾಗಿದೆ. 35 ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು, 55 ದೇಶೀಯ ವಿಮಾನ ನಿಲ್ದಾಣಗಳು ಮತ್ತು ಎ 1 ದರ್ಜೆ ಸೇರಿದಂತೆ 709 ಗುರುತಿಸಲಾದ ರೈಲ್ವೆ ನಿಲ್ದಾಣಗಳಿಗೆ ಸುಗಮ ಪ್ರವೇಶ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಂತೆಯೇ, ರಾಜ್ಯ ಸರ್ಕಾರ ಮತ್ತು ಅವುಗಳ ಇಲಾಖೆಗಳ 603 ವೆಬ್ ಸೈಟ್ ಗಳನ್ನು ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ಕಟ್ಟಡಗಳನ್ನು ಸುಗಮ್ಯಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ.

## ಬಗೆಹರಿದ ಬ್ರು (ರಿಯಾಂಗ್) ನಿರಾಶ್ರಿತರ ಬಿಕ್ಕಟ್ಟು

- ಕೇಂದ್ರ ಸರ್ಕಾರವು ಮಿಜೋರಾಂ ಮತ್ತು ತ್ರಿಪುರಾ ನಡುವೆ ತ್ರಿಪಕ್ಷೀಯ ಒಪ್ಪಂದದೊಂದಿಗೆ ಎರಡು ದಶಕಗಳಷ್ಟು ಹಳೆಯದಾದ ಬ್ರು (ರಿಯಾಂಗ್) ನಿರಾಶ್ರಿತರ ಬಿಕ್ಕಟ್ಟನ್ನು ಪರಿಹರಿಸಿದೆ.
- ಆಂತರಿಕವಾಗಿ ಸ್ಥಳಾಂತರಗೊಂಡ ಸುಮಾರು 37,000 ಜನರನ್ನು ತ್ರಿಪುರಾಕ್ಕೆ ಸ್ಥಳಾಂತರಿಸಲಾಗಿದೆ.
- ಬ್ರು (ರಿಯಾಂಗ್) ನಿರಾಶ್ರಿತರ ಪುನರ್ವಸತಿ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ತ್ರಿಪುರಾಕ್ಕೆ 600 ಕೋಟಿ ರೂ. ನೀಡಲಾಗಿದೆ.

## ಎನ್.ಎಲ್.ಎಫ್.ಟಿ (ತ್ರಿಪುರಾ) ಒಪ್ಪಂದ

- ಭಾರತ ಸರ್ಕಾರ, ತ್ರಿಪುರಾ ಸರ್ಕಾರ ಮತ್ತು ರಾಷ್ಟ್ರೀಯ ತ್ರಿಪುರಾ ಮುಕ್ತಿ ಮೋರ್ಚಾ (ಎನ್.ಎಲ್.ಎಫ್.ಟಿ. / ಎಸ್.ಡಿ.) ನಡುವೆ 2019ರ ಆಗಸ್ಟ್ ನಲ್ಲಿ ತ್ರಿಪಕ್ಷೀಯ ಒಡಂಬಡಿಕೆಗೆ ಅಂಕಿತ ಹಾಕಲಾಯಿತು.
- ಎನ್.ಎಲ್.ಎಫ್.ಟಿ. (ಎಸ್.ಡಿ.) ಹಿಂಸಾಚಾರದ ಮಾರ್ಗವನ್ನು ತ್ಯಜಿಸಿ, ಮುಖ್ಯವಾಹಿನಿಗೆ ಸೇರಲು ಮತ್ತು ಭಾರತದ ಸಂವಿಧಾನಕ್ಕೆ ಬದ್ಧವಾಗಿರಲು ಒಪ್ಪಿಕೊಂಡಿತು. ಇದರ ಪರಿಣಾಮವಾಗಿ, 44 ಶಸ್ತ್ರಾಸ್ತ್ರಗಳೊಂದಿಗೆ ಅದರ 88 ಕಾರ್ಯಕರ್ತರು ಶರಣಾಗತರಾದರು.

## ಅಯೋಧ್ಯೆ ತೀರ್ಪು



- ಈ ಐತಿಹಾಸಿಕ ತೀರ್ಪು ಶತಮಾನಗಳಷ್ಟು ಹಳೆಯದಾದ ವಿವಾದವನ್ನು ಕೊನೆಗೊಳಿಸಿತು ಮತ್ತು ದೇಶದಲ್ಲಿ ಸಾಮಾಜಿಕ ಸಾಮರಸ್ಯ ಮತ್ತು ಸದ್ಭಾವನೆಯ ಸಂದೇಶವನ್ನು ಸಾರಿತು.
- 2019ರ ನವೆಂಬರ್ 9ರಂದು ಇಡೀ ಭೂಮಿಯನ್ನು ರಾಮ್ ಲಲ್ಲಾ ವಿರಾಜಮಾನ್ ಗೆ ಹಸ್ತಾಂತರಿಸಿದಾಗ ಮತ್ತು ಮಸೀದಿಗಾಗಿ ಪ್ರತ್ಯೇಕವಾಗಿ 5 ಎಕರೆ ಭೂಮಿಯನ್ನು ನೀಡುವ ಸುಪ್ರೀಂ ಕೋರ್ಟ್ ತೀರ್ಪಿನೊಂದಿಗೆ 492 ವರ್ಷಗಳ ವಿವಾದಾತ್ಮಕ ಇತಿಹಾಸವು ಸುಖಾಂತ್ಯ ಕಂಡಿತು.
- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2020ರ ಆಗಸ್ಟ್ 5 ರಂದು ಅಯೋಧ್ಯೆಯಲ್ಲಿ ರಾಮ ಜನ್ಮಭೂಮಿ ಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಈ ಮಂದಿರದ ನಿರ್ಮಾಣದ ನಂತರ, ಅಯೋಧ್ಯೆಯ ಭವ್ಯತೆ ಮಾತ್ರ ಹೆಚ್ಚಾಗುವುದಿಲ್ಲ, ಈ ಪ್ರದೇಶದ ಇಡೀ ಆರ್ಥಿಕತೆಯೇ ಬದಲಾಗುತ್ತದೆ ಎಂದು ಅವರು ಹೇಳಿದರು. ಇಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಹೊಸ ಅವಕಾಶಗಳು ಸೃಷ್ಟಿಯಾಗುತ್ತವೆ., ಪ್ರಪಂಚದಾದ್ಯಂತದ ಜನರು ಇಲ್ಲಿಗೆ ಬರುತ್ತಾರೆ, ಇಡೀ ಜಗತ್ತು ಭಗವಾನ್ ರಾಮ ಮತ್ತು ತಾಯಿ ಜಾನಕಿಯನ್ನು ನೋಡಲು ಬರುತ್ತಾರೆ.

## ಕಾಶಿ ವಿಶ್ವನಾಥ ಕಾರಿಡಾರ್

- ಶ್ರೀ ಕಾಶಿ ವಿಶ್ವನಾಥ ತೀರ್ಥ ಕ್ಷೇತ್ರವು ಸಂಪನ್ನವಾಗಿದೆ, ಇದನ್ನು ಈ ವರ್ಷ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಆದಿ ಶಂಕರಾಚಾರ್ಯರು ಸ್ಥಾಪಿಸಿದ ಶ್ರೀ ಕಾಶಿ ವಿಶ್ವನಾಥ ದೇವಾಲಯವು ಹಿಂದೂ ಧರ್ಮದ ಪ್ರಮುಖ ಕೇಂದ್ರವಾಗಿದೆ. ಈಗ ತಾಯಿ ಗಂಗಾ ಹಾಗು ಕಾಶಿ ವಿಶ್ವನಾಥ ದೇಗುಲದ ನಡುವೆ ಸಂಪರ್ಕ ಕಲ್ಪಿಸುವ ಸಂಕಲ್ಪವೂ ಸಾಕಾರಗೊಂಡಿದೆ.
- ಈ ಯೋಜನೆಯ ಮೂಲಕ ಸುತ್ತಮುತ್ತಲಿನ ಪ್ರದೇಶ ಮಾತ್ರವಲ್ಲದೆ ಇಡೀ ವಾರಾಣಸಿ ನಗರವನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಈ ಯೋಜನೆ ಸಾಕಾರಗೊಂಡಿರುವುದಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರಯತ್ನಗಳಿಗೆ ಅಭಿನಂದನೆಗಳು.

## ಭಗವಾನ್ ಕೇದಾರನಾಥ ಧಾಮ್ ನಗರದ ನವೀಕರಣ

- ಭೀಕರ ಪ್ರಕೃತಿ ವಿಕೋಪದಿಂದ ವ್ಯಾಪಕ ಹಾನಿಗೊಳಗಾಗಿದ್ದ ಕೇದಾರನಾಥ ಧಾಮವು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕನಸಿನ ಯೋಜನೆಯಲ್ಲಿ ಸೇರ್ಪಡೆಯಾದ ತರುವಾಯ ಏಳು ವರ್ಷಗಳ ಬಳಿಕ ಮರಳಿ ತನ್ನ ವೈಭವ ಪಡೆಯುತ್ತಿದೆ. ಕರೋನಾ ಸಾಂಕ್ರಾಮಿಕ ರೋಗದ ಹೊರತಾಗಿಯೂ, ಬಾಕಿ ಉಳಿದಿರುವ ಯೋಜನೆಗಳು ವೇಗವನ್ನು ಪಡೆದುಕೊಂಡಿವೆ ಮತ್ತು ಐಟಿ ಸಹಾಯದಿಂದ ತೀರ್ಥಯಾತ್ರೆಯ ಐತಿಹಾಸಿಕ-ಸಾಂಸ್ಕೃತಿಕ ಮಹತ್ವವನ್ನು ಪ್ರದರ್ಶಿಸುವ ಉಪಕ್ರಮವೂ ಇದೆ.
- ಪ್ರಧಾನಮಂತ್ರಿ ಮೋದಿಯವರು ಮಾನಸಿಕ ಶಾಂತಿಗಾಗಿ ಕೇದಾರನಾಥಕ್ಕೆ ಹೋಗುತ್ತಾರೆ ಎನ್ನುವ ಅಂಶದಿಂದ ಅವರಿಗೆ ಆ ಕ್ಷೇತ್ರ ಎಷ್ಟು ಮಹತ್ವದ್ದು ಎಂಬುದನ್ನು ಅಳೆಯಬಹುದು. ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿಯಾಗುವ ಮೊದಲೇ ಅವರು ಆಧ್ಯಾತ್ಮಿಕ ಜ್ಞಾನೋದಯಕ್ಕಾಗಿ ಕೇದಾರನಾಥ ಧಾಮಕ್ಕೆ ಭೇಟಿ ನೀಡುತ್ತಿದ್ದರು.



# ನನಸಾದ ಒಂದು ರಾಷ್ಟ್ರ, ಒಂದು ಕಾನೂನು, ಒಂದು ಲಾಂಛನದ ಕನಸು

- 370ನೇ ವಿಧಿ ರದ್ದು, 6 ದಶಕಗಳ ಅಂತರ 6 ವರ್ಷಗಳಲ್ಲಿ ಅಂತ್ಯ.
- ಡಾ. ಶ್ಯಾಮಾಪ್ರಸಾದ್ ಮುಖರ್ಜಿಯವರ "ಒಂದು ರಾಷ್ಟ್ರ, ಒಂದು ಕಾನೂನು ಮತ್ತು ರಾಷ್ಟ್ರಕ್ಕೆ ಒಬ್ಬ ಮುಖ್ಯಸ್ಥ, ಒಂದು ಲಾಂಛನ" ಎಂಬ ನಿರ್ಣಯವನ್ನು ಸ್ವಾತಂತ್ರ್ಯದ 72 ವರ್ಷಗಳ ನಂತರ ಈಡೇರಿಸಲಾಯಿತು. 370 ಮತ್ತು 35ಎ ವಿಧಿಗಳ ರದ್ದತಿಯ ನಂತರ, ಭೂಮಿಯ ಮೇಲಿನ ಸ್ವರ್ಗ ಎಂದು ಕರೆಯಲಾಗುವ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಸಹ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿವೆ.
- ಇದು ಜಮ್ಮು ಮತ್ತು ಕಾಶ್ಮೀರದ ನಿಜವಾದ ಏಕೀಕರಣವನ್ನು ಸಾಧಿಸಿದೆ. ಇಡೀ ಪ್ರದೇಶವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿದೆ - ಜಮ್ಮು ಮತ್ತು ಕಾಶ್ಮೀರ (ಶಾಸಕಾಂಗದೊಂದಿಗೆ) ಹಾಗು (ಶಾಸಕಾಂಗವಿಲ್ಲದೆ) ಲಡಾಖ್ ವಿಶೇಷ ಸಂದರ್ಭದಿಂದಾಗಿ.
- ಲಡಾಖ್ ನ 70 ವರ್ಷಗಳ ಹಿಂದಿನ ಬೇಡಿಕೆಯನ್ನು ಸಂಸತ್ತು ರಾಜ್ಯ ಪುನರ್ವಿಂಗಡಣಾ ಮಸೂದೆಯನ್ನು ಅಂಗೀಕರಿಸುವ ಮೂಲಕ ಈಡೇರಿಸಿದೆ. ಈಗ ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್ ಸಾಮಾಜಿಕ-ಆರ್ಥಿಕ ಸಬಲೀಕರಣದತ್ತ ಸಾಗುತ್ತಿವೆ, ಸ್ಥಳೀಯ ಕಾನೂನು ಜಾರಿಗೆ ಬಂದಿದ್ದು, ಸ್ಥಳೀಯ ಜನರು ಪ್ರಜಾಪ್ರಭುತ್ವದ ಹಕ್ಕುಗಳನ್ನು ಪಡೆದಿದ್ದಾರೆ.

**"ವಿಧಿ 370 ಮತ್ತು 35ಎ" ಜಮ್ಮು ಮತ್ತು ಕಾಶ್ಮೀರಕ್ಕೆ ಭಯೋತ್ಪಾದನೆ, ಪ್ರತ್ಯೇಕತಾವಾದ, ಕುಟುಂಬವಾದ ಮತ್ತು ಭ್ರಷ್ಟಾಚಾರವನ್ನು ಹೊರತುಪಡಿಸಿ ಬೇರೇನೂ ನೀಡಿರಲಿಲ್ಲ. ಜಮ್ಮು ಮತ್ತು ಕಾಶ್ಮೀರ ಹಾಗು ಲಡಾಖ್ ಗಳು ತಮಗೆ ಅರ್ಹವಾದ ವೇಗದಲ್ಲಿ ಅಭಿವೃದ್ಧಿ ಹೊಂದಲಿಲ್ಲ. ಈಗ ಈ ಪಕ್ಷಪಾತಿ ವ್ಯವಸ್ಥೆಯನ್ನು ತೆಗೆದುಹಾಕುವ ಮೂಲಕ, ಈ ಪ್ರದೇಶದ ಜನರ ಸ್ಥಿತಿ ಸುಧಾರಿಸುವುದಷ್ಟೇ ಅಲ್ಲ, ಅವರ ಭವಿಷ್ಯವೂ ಸುರಕ್ಷಿತವಾಗಿರುತ್ತದೆ.**

ನರೇಂದ್ರ ಮೋದಿ, ಪ್ರಧಾನಮಂತ್ರಿ

## 370 ನೇ ವಿಧಿ ರದ್ದುಗೊಳಿಸಿದ ನಂತರ ಪ್ರಧಾನಮಂತ್ರಿ ಮೋದಿ ಅವರ ಮೊದಲ ಜಮ್ಮು ಮತ್ತು ಕಾಶ್ಮೀರ ಭೇಟಿ



370 ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಏಪ್ರಿಲ್ 24ರಂದು ಮೊದಲ ಬಾರಿಗೆ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದರು. ತಮ್ಮ ಭೇಟಿಯ ಸಮಯದಲ್ಲಿ, ಅವರು 20 ಸಾವಿರ ಕೋಟಿ ರೂ.ಗಳ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಅಮೃತಕಾಲದ 25 ವರ್ಷಗಳಲ್ಲಿ, ಹೊಸ ಜಮ್ಮು ಮತ್ತು ಕಾಶ್ಮೀರವು ಹೊಸ ಅಭಿವೃದ್ಧಿಯ ಯಶೋಗಾಥೆಯನ್ನು ಬರೆಯಲಿದೆ ಎಂಬ ಸಂದೇಶವನ್ನು ನೀಡಲು ಅವರು ಈ ಅವಕಾಶವನ್ನು ಬಳಸಿಕೊಂಡರು. ಸ್ವಾತಂತ್ರ್ಯದ ಏಳು ದಶಕಗಳ ಕಾಲ, ಜಮ್ಮು ಮತ್ತು ಕಾಶ್ಮೀರದಲ್ಲಿ ಕೇವಲ 17 ಸಾವಿರ ಕೋಟಿ ರೂ.ಗಳ ಖಾಸಗಿ ಹೂಡಿಕೆ ಆಗಿತ್ತು, ಆದರೆ ಕಳೆದ ಎರಡು ವರ್ಷಗಳಲ್ಲಿ, 38,000 ಕೋಟಿ ರೂ. ಹೂಡಿಕೆ ಆಗಿದೆ. ಖಾಸಗಿ ಕಂಪನಿಗಳು ಮತ್ತು ಹೂಡಿಕೆದಾರರು ಈಗ ಇಲ್ಲಿಗೆ ಬರುತ್ತಿದ್ದಾರೆ. ಭಾರತದ ಅಭಿವೃದ್ಧಿಯು ಸ್ಥಳೀಯತೆಗೆ ಧ್ವನಿಯಾಗಿ ಎಂಬ ಮಂತ್ರದಲ್ಲಿ ಅಡಗಿದೆ, ಆದ್ದರಿಂದ ಭಾರತೀಯ ಪ್ರಜಾಪ್ರಭುತ್ವದ ಅಭಿವೃದ್ಧಿಯ ಚೈತನ್ಯ ಸ್ಥಳೀಯ ಆಡಳಿತದಲ್ಲಿ ಅಂದರೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿದೆ. ಕಾರ್ಯ ವ್ಯಾಪ್ತಿಯು ಸ್ಥಳೀಯವಾಗಿರಬಹುದು, ಆದರೆ ಅದರ ಸಾಮೂಹಿಕ ಪರಿಣಾಮವು ಜಾಗತಿಕವಾಗಿರಲಿದೆ. ಈ ಕಾರಣಕ್ಕಾಗಿಯೇ ಪಂಚಾಯತ್‌ಗಳ ಅಧಿಕಾರವನ್ನು ನಿರಂತರವಾಗಿ ವಿಸ್ತರಿಸಲಾಗುತ್ತಿದೆ. ಪಂಚಾಯತ್ ರಾಜ್ ದಿನಾಚರಣೆಯ ಸಂದರ್ಭದಲ್ಲಿ ಅವರು ಭೇಟಿ ನೀಡಿದಾಗ, ಸ್ವಾಮಿತ್ವ ಕಾರ್ಡ್ ಗಳನ್ನು ವಿತರಿಸಿದರು, ಅಮೃತ ಸರೋವರ ಉಪಕ್ರಮವನ್ನು ಪ್ರಾರಂಭಿಸಿದರು ಮತ್ತು ಜನೌಷಧಿ ಕೇಂದ್ರಗಳನ್ನು ಸಮರ್ಪಿಸಿದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಪಂಚಾಯತ್ ರಾಜ್ ದಿನವನ್ನು ಆಚರಿಸುವುದು ಒಂದು ಪ್ರಮುಖ ಬದಲಾವಣೆಯನ್ನು ಸೂಚಿಸುತ್ತದೆ.








# ಮಹಾನ್ ವೀರರ ಪರಂಪರೆಗೆ ಜೀವ ತುಂಬಿದ ಸರ್ಕಾರ

ಇಲ್ಲಿಯವರೆಗೆ ನಿರ್ಲಕ್ಷಿಸಲಾಗಿದ್ದ ರಾಷ್ಟ್ರದ ಅಪ್ರತಿಮ ವೀರರಿಗೆ ಮೊದಲ ಬಾರಿಗೆ, ಕೇಂದ್ರ ಸರ್ಕಾರ, ಮಾನ್ಯತೆ ನೀಡಲು ಕ್ರಮಗಳನ್ನು ಕೈಗೊಂಡಿತು. ಅವರನ್ನು ಗೌರವಿಸುವ ಮೂಲಕ ಸರ್ಕಾರವು ಯುವ ಮನಸ್ಸುಗಳನ್ನು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆಗಳನ್ನು ನೀಡಲು ಪ್ರೇರೇಪಿಸುವ ಗುರಿಯನ್ನು ಹೊಂದಿದೆ.



## ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್

ಡಾ.ಬಿ.ಆರ್. ಅಂಬೇಡ್ಕರ್ ಅವರು ಆಧುನಿಕ ಭಾರತದ ವಾಸ್ತು ಶಿಲ್ಪಿಗಳಲ್ಲಿ ಒಬ್ಬರು. ಭಾರತದ ರಾಜಕೀಯ ಚಿಂತನೆಗೆ ಅವರು ನೀಡಿದ ಕೊಡುಗೆಗೆ ಸರಿಸಾಟಿ ಇಲ್ಲ. ಆದಾಗ್ಯೂ, ಈ ಮೊದಲು ಅವರ ಪರಂಪರೆಯನ್ನು ಅರ್ಹವಾದ ರೀತಿಯಲ್ಲಿ ಗೌರವಿಸುತ್ತಿರಲಿಲ್ಲ. ಈ ಐತಿಹಾಸಿಕ ತಪ್ಪುಗಳನ್ನು ಸರಿಪಡಿಸಿಕೊಂಡು ನರೇಂದ್ರ ಮೋದಿ ಸರ್ಕಾರವು, ಡಾ. ಅಂಬೇಡ್ಕರ್ ಅವರ ಜೀವನಕ್ಕೆ ನಿಕಟವಾಗಿ ಸಂಬಂಧಿಸಿದ ಐತಿಹಾಸಿಕ ಪ್ರಾಮುಖ್ಯದ ಸ್ಥಳಗಳನ್ನು 'ಪಂಚತೀರ್ಥ'ದ ರೂಪದಲ್ಲಿ ಅಭಿವೃದ್ಧಿಪಡಿಸುವ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿತು. ಡಾ. ಅಂಬೇಡ್ಕರ್ ಅವರ ಗೌರವಾರ್ಥವಾಗಿ ನವೆಂಬರ್ 26 ಅನ್ನು 'ಸಂವಿಧಾನ ದಿನ' ಎಂದು ಘೋಷಿಸಲಾಯಿತು.

## ನೇತಾಜಿ ಅವರ ಪರಂಪರೆಯ ಪುನಶ್ಚೇತನ

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು 'ಆಜಾದ್ ಹಿಂದ್ ಸರ್ಕಾರ'ವನ್ನು ರಚಿಸಿದ 75ನೇ ವಾರ್ಷಿಕೋತ್ಸವದ ನೆನಪಿಗಾಗಿ ಪ್ರಧಾನಮಂತ್ರಿಯವರು ದೆಹಲಿಯ ಕೆಂಪು ಕೋಟೆಯಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದರು. ಸ್ವಾತಂತ್ರ್ಯಾನಂತರ ಭಾರತದ ಸ್ವಾತಂತ್ರ್ಯ ಚಳವಳಿಯ ಮಹಾನ್ ನಾಯಕನ ಪರಂಪರೆಯನ್ನು ಗೌರವಿಸಿದಾಗ ಇದು ಇಡೀ ದೇಶಕ್ಕೆ ಹೆಮ್ಮೆಯ ಕ್ಷಣವಾಗಿತ್ತು. ಆಜಾದ್ ಹಿಂದ್ ಫೌಜ್ ನ ನಾಲ್ವರು ಸದಸ್ಯರು 2019ರ ಗಣರಾಜ್ಯೋತ್ಸವ ಪರೇಡ್ ನಲ್ಲಿ ಭಾಗವಹಿಸಿದ್ದರು. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರಿಗೆ ಸಂಬಂಧಿಸಿದ ಕಡತಗಳನ್ನು ಸಾರ್ವಜನಿಕಗೊಳಿಸುವ ಮೂಲಕ ನೇತಾಜಿ ಅವರ ಕುಟುಂಬದ ದೀರ್ಘಕಾಲದ ಬೇಡಿಕೆಯನ್ನು ಮೋದಿ ಸರ್ಕಾರ ಈಡೇರಿಸಿದೆ. ಇಂಡಿಯಾ ಗೇಟ್ ನಲ್ಲಿ ನೇತಾಜಿ ಅವರ ಪ್ರತಿಮೆಯನ್ನು ಸ್ಥಾಪಿಸುವ ಘೋಷಣೆ ಮಾಡಲಾಯಿತು.

## ಭಾರತವನ್ನು ಏಕತೆಯ 7 ಸೂತ್ರದಲ್ಲಿ ಕಟ್ಟಿದ ಸರ್ದಾರ್ ಪಟೇಲ್

- ಭಾರತವನ್ನು ಏಕೀಕರಿಸಿದ ಮಹಾನ್ ವ್ಯಕ್ತಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಗೌರವ ಸೂಚಕವಾಗಿ ಪ್ರಧಾನಮಂತ್ರಿ ಮೋದಿ ಅವರು 'ಏಕತಾ ಪ್ರತಿಮೆ'ಯನ್ನು ಅನಾವರಣಗೊಳಿಸಿದರು. 600 ಅಡಿ ಎತ್ತರದ ಪ್ರತಿಮೆಯು ವಿಶ್ವದ ಅತ್ಯಂತ ಎತ್ತರದ ಪ್ರತಿಮೆಯಾಗಿದೆ. ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2013 ರಲ್ಲಿ ಈ ಪ್ರತಿಮೆಗೆ ಅಡಿಪಾಯ ಹಾಕಲಾಗಿತ್ತು.
- ಅಂತೆಯೇ, ಶೌರ್ಯ ಮತ್ತು ಬ್ರಿಟಿಷರ ವಿರುದ್ಧದ ಉಗ್ರ ಹೋರಾಟಕ್ಕೆ ಹೆಸರುವಾಸಿಯಾದ ತಾಯ್ನಾಡಿನ ಧೈರ್ಯಶಾಲಿ ಪುತ್ರ ವೀರ್ ಸಾವರ್ಕರ್ ಅವರ ಪರಂಪರೆಯನ್ನು ಪುನರುಜ್ಜೀವಗೊಳಿಸಲಾಯಿತು. ಕಠಿಣ ಶಿಕ್ಷೆಗೆ ಒಳಗಾಗಿ ವೀರ ಸಾವರ್ಕರ್ ಅವರು ತಮ್ಮ ಯೌವನವನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸೆಲ್ಯುಲಾರ್ ಜೈಲಿನ ಒಂದು ಸಣ್ಣ ಕೋಣೆಯಲ್ಲಿ ಕಳೆದರು. ಈಗ ಅವರು ಭಾರತೀಯ ಇತಿಹಾಸದಲ್ಲಿ ತಮ್ಮ ನೈಜ ಸ್ಥಾನ ಪಡೆದಿದ್ದಾರೆ.








# ಬೆಳಕಿಗೆ ಬಾರದ ಸಾಧಕರಿಗೆ ಪದ್ಮ ಗೌರವ

ಅತಿ ಗಣ್ಯರ ಸಂಸ್ಕೃತಿಯನ್ನು ಕೊನೆಗೊಳಿಸುವುದರಿಂದ ಹಿಡಿದು ದೇಶದ ಅತ್ಯುನ್ನತ ನಾಗರಿಕ ಗೌರವವನ್ನು ಸಾಮಾನ್ಯ ನಾಗರಿಕರಿಗೂ ಲಭ್ಯವಾಗುವಂತೆ ಮಾಡುವವರೆಗೆ, ಪ್ರಸ್ತುತ ಆಡಳಿತದಲ್ಲಿ ಹಲವಾರು ಉಪಕ್ರಮಗಳನ್ನು ಕೈಗೊಳ್ಳಲಾಯಿತು. ಸರ್ಕಾರವು ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನ ಪ್ರಕ್ರಿಯೆಯನ್ನು ಸಾರ್ವಜನಿಕರಿಗೆ ತೆರೆದಿದ್ದರಿಂದ ಈಗ ಅರ್ಹ ಶ್ರೀಸಾಮಾನ್ಯರು ಮಾನ್ಯತೆಯನ್ನು ಪಡೆಯುತ್ತಿದ್ದಾರೆ. ಪದ್ಮ ಪ್ರಶಸ್ತಿಗಳ ಬದಲಾದ ನೀತಿಯ ಪರಿಣಾಮವಾಗಿ ಈಗ ನವ ಭಾರತದ ಸಾಧಕರು ದೇಶದ ನಾಗರಿಕ ಗೌರವವನ್ನು ಪಡೆಯಲು ಪ್ರಾರಂಭಿಸಿದ್ದಾರೆ, ಇದು ಸಮಾಜಕ್ಕೆ ಹೊಸ ಸ್ಫೂರ್ತಿದಾಯಕ ಗಾಥೆಗಳು ಮತ್ತು ಅನುಭವಗಳನ್ನು ನೀಡುತ್ತಿದೆ.



## ಪ್ರಧಾನ ಮಂತ್ರಿಗಳ ವಸ್ತುಸಂಗ್ರಹಾಲಯ

- ದೇಶದ 70 ವರ್ಷಗಳ ಅಭಿವೃದ್ಧಿ ಮತ್ತು ಸಹಯೋಗದ ಪರಂಪರೆಯ ಒಂದು ಇಣುಕುನೋಟವನ್ನು ದೆಹಲಿಯ ತೀನ್ ಮೂರ್ತಿ ಭವನದಲ್ಲಿರುವ ಪ್ರಧಾನಮಂತ್ರಿಗಳ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದರ ಲೋಕಾರ್ಪಣೆ ನೆರವೇರಿಸಿದರು.
- ಈ ವಸ್ತುಸಂಗ್ರಹಾಲಯವು ಭಾರತದ ಪ್ರತಿಯೊಬ್ಬ ಪ್ರಧಾನಮಂತ್ರಿಯ ಕೊಡುಗೆಗಳು ಮತ್ತು ಸಾಧನೆಗಳ ಮೂಲಕ ಭಾರತದ ಗಾಥೆಯನ್ನು ವಿವರಿಸುತ್ತದೆ. ಪ್ರಧಾನಮಂತ್ರಿಗಳ ವಸ್ತುಸಂಗ್ರಹಾಲಯವು ದೇಶದ 14 ಮಾಜಿ ಪ್ರಧಾನಮಂತ್ರಿಗಳ ಜೀವನ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಕೊಡುಗೆಯ ಒಂದು ಇಣುಕುನೋಟವನ್ನು ಪ್ರಸ್ತುತಪಡಿಸುತ್ತದೆ.
- ಮಾಜಿ ಪ್ರಧಾನಮಂತ್ರಿಗಳ ಜೀವನಶೈಲಿ ಮತ್ತು ಕಾರ್ಯವನ್ನು ನವ ಪೀಳಿಗೆಗೆ ಪರಿಚಯಿಸುವುದು ಈ ವಸ್ತುಸಂಗ್ರಹಾಲಯದ ಉದ್ದೇಶವಾಗಿದೆ. ಈ ಮೂಲಕ, ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಪ್ರಧಾನಮಂತ್ರಿಗಳ ಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಗುವುದು. ಈ ವಸ್ತುಸಂಗ್ರಹಾಲಯವು ಸ್ವಾತಂತ್ರ್ಯ ಹೋರಾಟ ಮತ್ತು ಸಂವಿಧಾನದ ರಚನೆಯ ಚಿತ್ರಣವನ್ನೂ ನೀಡುತ್ತದೆ.





## ಮೂಲಸೌಕರ್ಯ

# ಒಂದು ರಾಷ್ಟ್ರವನ್ನು ರೂಪಿಸುವ ಮತ್ತು ಪುನಶ್ಚೇತನಗೊಳಿಸುವ ಸಾಧನ

ಮೂಲಸೌಕರ್ಯವು ದೇಶದ ಅಭಿವೃದ್ಧಿಯನ್ನು ಮುನ್ನಡೆಸುವುದು ಮಾತ್ರವಲ್ಲದೆ ಹೊಸ ಉದ್ಯೋಗಾವಕಾಶಗಳನ್ನೂ ಸೃಷ್ಟಿಸುವ ಒಂದು ಕ್ಷೇತ್ರವಾಗಿದೆ. ಉತ್ತಮ ಮೂಲಸೌಕರ್ಯವು ಸಮಯವನ್ನು ಉಳಿಸುವುದು ಮಾತ್ರವಲ್ಲದೆ, ಇದು ದೇಶದ ಅಭಿವೃದ್ಧಿಯ ವೇಗವನ್ನು ಇಮ್ಮಡಿಗೊಳಿಸುತ್ತದೆ. ಅದೇ ಸಮಯದಲ್ಲಿ, ಇದು ಮಧ್ಯಮ ವರ್ಗದ ಅಗತ್ಯಗಳು ಮತ್ತು ಬಯಕೆಗಳನ್ನು ಪೂರೈಸುತ್ತದೆ. ಇದಕ್ಕಾಗಿಯೇ ಸರ್ಕಾರವು ದೇಶದಲ್ಲಿ ಮೂಲಸೌಕರ್ಯಗಳ ಮೂಲಕ ಜನರ ಸಂಪರ್ಕ ಮತ್ತು ಅವಶ್ಯಕತೆಯನ್ನು ಸುಧಾರಿಸಲು ಏಕಕಾಲದಲ್ಲಿ ಅನೇಕ ಹಂತಗಳಲ್ಲಿ ಶ್ರಮಿಸುತ್ತಿದೆ.



## ಭಾರತವು 2024ರ ವೇಳೆಗೆ ಅಮೆರಿಕದಂತಹ ರಸ್ತೆ ಮೂಲಸೌಕರ್ಯವನ್ನು ಹೊಂದಲಿದೆ

ರಸ್ತೆ: 2024ರ ಅಂತ್ಯದ ವೇಳೆಗೆ ಭಾರತದ ರಸ್ತೆ ಮೂಲಸೌಕರ್ಯವನ್ನು ಅಮೆರಿಕದ ರಸ್ತೆಗಳ ಮಟ್ಟಕ್ಕೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ದೇಶದಲ್ಲಿ ಉತ್ತಮ ರಸ್ತೆ ಮೂಲಸೌಕರ್ಯವು ಉದ್ಯೋಗವನ್ನು ಹೆಚ್ಚಿಸುವುದಲ್ಲದೆ, ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ.

### ಮೊದಲು

2014-15ರಲ್ಲಿ ಹೆದ್ದಾರಿ ನಿರ್ಮಾಣದ ದರ ದಿನಕ್ಕೆ 12 ಕಿ.ಮೀ.

### ಈಗ

ಈಗ ಇದು ದಿನಕ್ಕೆ ಸುಮಾರು 37 ಕಿ.ಮೀ. ದೇಶದಲ್ಲಿ ದಿನಕ್ಕೆ 50ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿದೆ.

**₹62**

ಸಾವಿರ ಕೋಟಿ ರೂ.ಗಳ ಯೋಜನೆಯಲ್ಲಿ ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ಮಾಲಿನ್ಯವನ್ನು ತಗ್ಗಿಸಲು ಮತ್ತು ರಸ್ತೆ ಮೂಲಸೌಕರ್ಯಗಳನ್ನು ನಿರ್ಮಿಸಲು ಕಾಮಗಾರಿ ನಡೆಯುತ್ತಿದೆ ಮತ್ತು ಜೋಜಿಲಾ ಸುರಂಗವು ಮೂಲತಃ ನಿಗದಿಯಾಗಿದ್ದಂತೆ 2026ರ ಬದಲಿಗೆ

**2024**

ರ ವೇಳೆಗೇ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ರಾಷ್ಟ್ರೀಯ ಹೆದ್ದಾರಿಯ ಉದ್ದವು ಏಪ್ರಿಲ್ 2014ರಲ್ಲಿ 91,287 ಕಿ.ಮೀ.ನಿಂದ 2021ರ ಡಿಸೆಂಬರ್ ವೇಳೆಗೆ ಸುಮಾರು 1,41,000 ಕಿ.ಮೀ.ಗೆ ಏರಿದೆ. ಈ ಸಮಯದಲ್ಲಿ ಶೇ.50ಕ್ಕೂ ಹೆಚ್ಚು ಹೆಚ್ಚಳವಾಗಿದೆ. ಅದೇ ಸಮಯದಲ್ಲಿ, ಸಚಿವಾಲಯವು 2021-22ರ ಆರ್ಥಿಕ ವರ್ಷದಲ್ಲಿ 5,407 ಕಿಲೋ ಮೀಟರ್ ಹೆದ್ದಾರಿಯನ್ನು ನಿರ್ಮಿಸಿದೆ.

**60**

60 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಕೇವಲ ಒಂದು ಟೋಲ್ ನಾಕಾ ಮಾತ್ರ ಇರುವುದನ್ನು ಖಚಿತಪಡಿಸಿಕೊಳ್ಳಲು ಕಾಮಗಾರಿಗಳನ್ನು ಮಾಡಲಾಗುತ್ತಿದೆ.

ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಪ್ರತಿ ವಾಹನವು ಆರು ಏರ್ ಬ್ಯಾಗ್ ಗಳನ್ನು ಹೊಂದಿರಬೇಕು ಎಂಬುದನ್ನು ಕಡ್ಡಾಯಗೊಳಿಸಲಾಗಿದೆ.

ನಿರ್ಮಾಣ ಕಾರ್ಯಕ್ಕಾಗಿ ಯಾವುದೇ ಮರಗಳನ್ನು ಕಡಿಯದೆ ಕಾಮಗಾರಿ ನಡೆಸಲು ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರು ಸಿದ್ಧರಾಗಿದ್ದಾರೆ.

**650 ಸೌಲಭ್ಯಗಳು**

28 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ತುರ್ತು ಚಿಕಿತ್ಸೆಗಾಗಿ ಟ್ರಾಮಾ ಕೇಂದ್ರಗಳು ಮತ್ತು ತುರ್ತು ಲ್ಯಾಂಡಿಂಗ್ ರಸ್ತೆಗಳು ಸೇರಿದಂತೆ ರಸ್ತೆ ಬದಿಯ 650 ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಕರ್ತವ್ಯದ ಹಾದಿಯತ್ತ
8 ವರ್ಷಗಳು



# ಗತಿ ಶಕ್ತಿ

**107 ಲಕ್ಷ ಕೋಟಿ ರೂ.ಗಳ ಈ ಯೋಜನೆಯು ದೇಶದ ಮೂಲಸೌಕರ್ಯದ ಚಿತ್ರಣವನ್ನೇ ಬದಲಾಯಿಸುತ್ತದೆ**

2022-23ರಲ್ಲಿ ದೇಶದ ರಾಷ್ಟ್ರೀಯ ಹೆದ್ದಾರಿಗಳನ್ನು 25,000 ಕಿ.ಮೀ.ನಷ್ಟು ವಿಸ್ತರಿಸಲಾಗುವುದು.

ಮುಂದಿನ ತಲೆಮಾರಿನ **400** ಸೆಮಿ-ಹೈಸ್ಪೀಡ್ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ಅಭಿವೃದ್ಧಿಪಡಿಸಲಾಗುವುದು

ಮೂಲಸೌಕರ್ಯ ಯೋಜನೆಗಳಿಗೆ ಸಾಮರ್ಥ್ಯ ವರ್ಧನೆ, ಪಿಪಿಪಿ ಮಾದರಿಯಲ್ಲಿ 2 ಸ್ಥಳಗಳಲ್ಲಿ ಬಹು-ಮಾದರಿ ಸಾಗಣೆ ಪಾರ್ಕ್ ಗಳನ್ನು ಸ್ಥಾಪಿಸುವ ಒಪ್ಪಂದ.

- ರಸ್ತೆ, ರೈಲು, ವಾಯು, ವಿಮಾನ ನಿಲ್ದಾಣ, ಸರಕು ಸಾಗಣೆ, ಜಲಮಾರ್ಗಗಳು ಮತ್ತು ಸಾಗಣೆ - ಮೂಲಸೌಕರ್ಯಗಳ ಏಳು ಎಂಜಿನ್ ಗಳಿಂದ ಕೂಡಿದ ಗತಿಶಕ್ತಿ ರಾಷ್ಟ್ರೀಯ ಮಹಾ ಯೋಜನೆ (ಮಾಸ್ಟರ್ ಪ್ಲಾನ್) ವಿಶ್ವದರ್ಜೆಯ ಮೂಲಸೌಕರ್ಯವನ್ನು ಸೃಷ್ಟಿಸಲು ಬಹು-ಮಾದರಿ ಜಾಲವನ್ನು ಅಭಿವೃದ್ಧಿಪಡಿಸುವಲ್ಲಿ ಬಹುದೂರ ಸಾಗುತ್ತದೆ.
- ಏಕೀಕೃತ ಸಾಗಣೆ ಮುಖಾಮುಖಿ ವೇದಿಕೆ (ಯುನಿಫೈಡ್ ಲಾಜಿಸ್ಟಿಕ್ಸ್ ಇಂಟರ್ಫೇಸ್ ಪ್ಲಾಟ್ ಫಾಂ- ಯುಲಿಪ್) ಸ್ಥಾಪನೆ ಮತ್ತು ಓಪನ್-ಸೋರ್ಸ್ ಮೊಬಿಲಿಟಿ ಸ್ಟ್ಯಾಕ್ ಅನ್ನು ಸುಗಮಗೊಳಿಸುವುದು
- ಅಂಚೆ ಮತ್ತು ರೈಲು ಜಾಲಗಳ ಏಕೀಕರಣವು ಒಂದು ನಿಲ್ದಾಣ-ಒಂದು ಉತ್ಪನ್ನವನ್ನು ಉತ್ತೇಜಿಸುವ ಮೂಲಕ ಸ್ಥಳೀಯ ಕೈಗಾರಿಕೆಗಳಿಗೆ ಉತ್ತೇಜನ ನೀಡುತ್ತದೆ
- ಬಹು ಮಾದರಿ ಲಾಜಿಸ್ಟಿಕ್ಸ್ ಸೌಲಭ್ಯಗಳಿಗಾಗಿ 100 ಕಾರ್ಗೋ ಟರ್ಮಿನಲ್ ಗಳನ್ನು ಸ್ಥಾಪಿಸಲಾಗುವುದು.
- ರೈಲು ಜಾಲದ ಸುಮಾರು 2,000 ಕಿ.ಮೀ.ಗಳನ್ನು ಸ್ವದೇಶಿ ವಿಶ್ವದರ್ಜೆಯ ತಂತ್ರಜ್ಞಾನ ಕವಚ್ ಅಡಿಯಲ್ಲಿ ತರಲಾಗುವುದು.
- ಸಾಮೂಹಿಕ ನಗರ ಸಾರಿಗೆ ಮತ್ತು ರೈಲ್ವೆ ನಿಲ್ದಾಣಗಳ ನಡುವೆ ಬಹು ಮಾದರಿ ಸಂಪರ್ಕವನ್ನು ಆದ್ಯತೆಯಾಗಿ ಪರಿಗಣಿಸಿ ಅನುಕೂಲ ಕಲ್ಪಿಸಲಾಗುವುದು.
- ರಾಷ್ಟ್ರೀಯ ರೋಪ್ ವೇ ಅಭಿವೃದ್ಧಿ ಯೋಜನೆಯಡಿ 60 ಕಿ.ಮೀ ಉದ್ದದ ರೋಪ್ ವೇ ಯೋಜನೆಗಳಿಗೆ ಗುತ್ತಿಗೆ ನೀಡಲಾಗುವುದು.



# "ಸುಧಾರಣೆ, ಕಾರ್ಯನಿರ್ವಹಣೆ ಮತ್ತು ಪರಿವರ್ತನೆ" ಯೊಂದಿಗೆ ರೈಲ್ವೆ ಸಾಗುತ್ತಿದೆ

ಮೂಲಸೌಕರ್ಯ ಅಭಿವೃದ್ಧಿ, ನಾವಿನ್ಯತೆ, ನೆಟ್ವರ್ಕ್ ಸಾಮರ್ಥ್ಯ ವಿಸ್ತರಣೆ, ಸರಕು ವೈವಿಧ್ಯೀಕರಣ ಮತ್ತು ಪಾರದರ್ಶಕತೆಯ ವಿಷಯದಲ್ಲಿ ರೈಲ್ವೆ ಅಸಾಧಾರಣ ಬೆಳವಣಿಗೆಯನ್ನು ಸಾಧಿಸಿದೆ. ಅಷ್ಟೇ ಅಲ್ಲ, ರೈಲ್ವೆ ಭವಿಷ್ಯದ ಬೆಳವಣಿಗೆ ಮತ್ತು ಮುಂದಿನ ಹಂತದ ಪ್ರಯಾಣಕ್ಕೆ ಅಡಿಪಾಯ ಹಾಕಲು ಶ್ರಮಿಸಿದೆ. ಅದೇ ಸಮಯದಲ್ಲಿ, ರೈಲ್ವೆಯು "ಸುಧಾರಣೆ, ಕಾರ್ಯನಿರ್ವಹಣೆ ಮತ್ತು ಪರಿವರ್ತನೆ" ಎಂಬ ಮಂತ್ರಕ್ಕೆ ಅನುಗುಣವಾಗಿ ಕಾರ್ಯಾಚರಣೆ ಮತ್ತು ನಿರ್ವಹಣೆಯ ಎಲ್ಲಾ ಆಯಾಮಗಳಲ್ಲಿ ಯುಗಮಾನದ ಬದಲಾವಣೆಗಳನ್ನು ತಂದಿದೆ.

2014 ರಿಂದ 2021 ರವರೆಗೆ ಹೊಸ ಮಾರ್ಗಗಳು ಮತ್ತು ಬಹು-ಮಾರ್ಗ ಯೋಜನೆಗಳ ಮೂಲಕ ವಾರ್ಷಿಕ

**1,835**

ಕಿ.ಮೀ.ಹೊಸ ಹಳಿಗಳ ಸೇರ್ಪಡೆ.

- 2021-22ರ ಆರ್ಥಿಕ ವರ್ಷದಲ್ಲಿ, ಹೊಸ ಮಾರ್ಗ, ಜೋಡಿ ಮಾರ್ಗ ಮತ್ತು ಗೇಜ್ ಪರಿವರ್ತನೆಯ 2400 ಕಿ.ಮೀ ಗುರಿ ಮೀರಿ, 2904 ಕಿ.ಮೀ ಸಾಧನೆ ಮಾಡಲಾಗಿದೆ.
- ಭಾರತೀಯ ರೈಲ್ವೆಯು 2030ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವ ಗುರಿಯೊಂದಿಗೆ ವಿಶ್ವದ ಅತಿದೊಡ್ಡ ಹಸಿರು ರೈಲ್ವೆಯಾಗುವ ಗುರಿ ಹೊಂದಿದೆ.
- 2014 ರಿಂದ, ರೈಲ್ವೆ ವಿದ್ಯುದ್ದೀಕರಣವು ಸುಮಾರು ಹತ್ತು ಪಟ್ಟು ಹೆಚ್ಚಾಗಿದೆ. 31.03.2022 ರವರೆಗೆ, ಭಾರತೀಯ ರೈಲ್ವೆಯ ಬಿ.ಜಿ. ನೆಟ್ವರ್ಕ್ ನ 52,247 ಬಿ.ಜಿ. ರೂಟ್ ಕಿಲೋಮೀಟರ್ ಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದ್ದು, ಇದು 65,141 ರೂಟ್ ಕಿಲೋ ಮೀಟರ್ ಗಳ ಒಟ್ಟು ಬಿ.ಜಿ. ನೆಟ್ವರ್ಕ್ ನ ಶೇಕಡಾ 80.20 ರಷ್ಟಿದೆ.



ದೇಶದ ಪ್ರಥಮ ಐ.ಎಸ್.ಓ. ಪ್ರಮಾಣೀಕೃತ ಪಿಪಿಪಿ ಮಾದರಿ ಆಧಾರಿತ ರೈಲ್ವೆ ನಿಲ್ದಾಣವನ್ನು 15 ನವೆಂಬರ್ 2021 ರಂದು ರಾಣಿ ಕಮಲಾಪತಿ ರೈಲ್ವೆ ನಿಲ್ದಾಣವಾಗಿ ರಾಷ್ಟ್ರಕ್ಕೆ ಸಮರ್ಪಿಸಲಾಯಿತು. ಸುಮಾರು 200 ನಿಲ್ದಾಣಗಳಲ್ಲಿ ಕಾಮಗಾರಿ ನಡೆಯುತ್ತಿದೆ.

## ಸುರಕ್ಷಿತ ರೈಲ್ವೆಯತ್ತ ಕ್ರಮ

- ಒಟ್ಟು 444 ಪ್ಯಾನೆಲ್ ಗಳು/ನಿಲ್ದಾಣಗಳ ವಿದ್ಯುನ್ಮಾನ ಇಂಟರ್ ಲಾಕಿಂಗ್ ಅನ್ನು ನಡೆಸಲಾಗಿದೆ, ಮತ್ತು ಪ್ರಮುಖ ಮಾರ್ಗಗಳಲ್ಲಿ ಮಾನವರಹಿತ ಲೆವೆಲ್ ಕ್ರಾಸಿಂಗ್ ಗೇಟ್ ಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. 68,800 ಬೋಗಿಗಳಲ್ಲಿ ಶೇ.100ವ್ಯಾಪ್ತಿಯೊಂದಿಗೆ ಜೈವಿಕ ಶೌಚಾಲಯಗಳನ್ನು ಸ್ಥಾಪಿಸಲಾಗಿದೆ.
- ಕವಚ್ ನಂತಹ ಹೊಸ ದೇಶೀಯ ತಂತ್ರಜ್ಞಾನ ಮತ್ತು ವಂದೇ ಭಾರತ್ ರೈಲುಗಳು ಹಾಗೂ ನಿಲ್ದಾಣಗಳ ಮರು ಅಭಿವೃದ್ಧಿಗೆ ಗಮನ ಹರಿಸಲಾಗಿದೆ.
- ಕೇಂದ್ರ ಬಜೆಟ್ 2022-23 ರಲ್ಲಿ, ಮುಂದಿನ ಮೂರು ವರ್ಷಗಳಲ್ಲಿ ದೇಶದಲ್ಲಿ 400 ವಂದೇ ಭಾರತ್ ರೈಲುಗಳನ್ನು ಘೋಷಿಸಲಾಗಿದೆ.
- ಸಣ್ಣ ರೈತರನ್ನು ಗಮನದಲ್ಲಿಟ್ಟುಕೊಂಡು, ಒಂದು ನಿಲ್ದಾಣ, ಒಂದು ಉತ್ಪನ್ನ ಯೋಜನೆಯನ್ನು ಪ್ರಾರಂಭಿಸಲಾಗಿದೆ.
- 7 ಹೈಸ್ಪೀಡ್ ರೈಲು ಕಾರಿಡಾರ್ ಗಳಿಗೆ ಸಮೀಕ್ಷೆ ನಡೆಸಿ ಡಿಪಿಆರ್ ತಯಾರಿಸಲು ನಿರ್ಧರಿಸಲಾಗಿದೆ.
- ಅಹ್ಮದಾಬಾದ್ ಮತ್ತು ಮುಂಬೈ ನಡುವೆ ಬುಲೆಟ್ ರೈಲು ಯೋಜನೆ ಪ್ರಗತಿಯಲ್ಲಿದೆ. ಭರೂಚ್ ನಲ್ಲಿ ಆಧಾರ ಸ್ತಂಭ ಕಾಮಗಾರಿ ಪೂರ್ಣಗೊಂಡಿದೆ. ಇಂತಹ ಮೊದಲ ಪರೀಕ್ಷೆ 2026 ರಲ್ಲಿ ಗುಜರಾತ್ ನ ಬಿಲಿಮೋರಾ ಮತ್ತು ಸೂರತ್ ನಡುವೆ ನಡೆಯಲಿದೆ.
- ಗೂಡ್ಸ್ ರೈಲುಗಳಿಗಾಗಿ ಮೀಸಲಾದ ಎರಡು ಸರಕು ಕಾರಿಡಾರ್ ಗಳ ನಿರ್ಮಾಣವನ್ನು ಪ್ರಾರಂಭಿಸಲಾಗಿದೆ. 1504 ಕಿ.ಮೀ ಉದ್ದದ ದಾದ್ರಿಯಿಂದ ಮುಂಬೈ ಪಶ್ಚಿಮ ಕಾರಿಡಾರ್ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. 1856 ಕಿ.ಮೀ ದೂರದಲ್ಲಿರುವ ದಾನಕುನಿಯಿಂದ ಲೂಧಿಯಾನವರೆಗಿನ ಪೂರ್ವ ಕಾರಿಡಾರ್ ಕಾಮಗಾರಿ ಪ್ರಗತಿಯಲ್ಲಿದೆ.
- ಕಾಶ್ಮೀರದ ಚೆನಾಬ್ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯ ಕಮಾನು ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಬನಿಹಾಲ್ ನಿಂದ ಬಾರಾಮುಲ್ಲಾವರೆಗೆ 136ಕಿ. ಮೀ ಉದ್ದದ ರೈಲು ಮಾರ್ಗವನ್ನು ಪ್ರಾರಂಭಿಸಲಾಗಿದೆ. ಅದೇ ಸಮಯದಲ್ಲಿ, ಈಶಾನ್ಯ ರೈಲ್ವೆಯ ಶೇ.75ಕ್ಕೂ ಹೆಚ್ಚು ಮಾರ್ಗಗಳು ಇಲ್ಲಿಯವರೆಗೆ ವಿದ್ಯುದ್ದೀಕರಣಗೊಂಡಿವೆ.



# ಸಾಗರಮಾಲಾ ಯೋಜನೆ: ಬಂದರು ಅಭಿವೃದ್ಧಿಗೆ ಸಮರ್ಪಿತ

- ಬಂದರುಗಳ ಆಧುನೀಕರಣ ಮತ್ತು ಹೊಸ ಬಂದರುಗಳನ್ನು ಅಭಿವೃದ್ಧಿಪಡಿಸುವುದು, ಬಂದರು ಸಂಪರ್ಕವನ್ನು ಸುಧಾರಿಸುವುದು, ಬಂದರು ಆಧಾರಿತ ಕೈಗಾರಿಕೀಕರಣವನ್ನು ಸಾಧಿಸುವುದು ಮತ್ತು ಕರಾವಳಿ ಸಮುದಾಯಗಳನ್ನು ಅಭಿವೃದ್ಧಿಪಡಿಸುವ ಗುರಿಗಳೊಂದಿಗೆ ಸಾಗರಮಾಲಾ ಕಾರ್ಯಕ್ರಮವನ್ನು ಮಾರ್ಚ್ 2015ರಲ್ಲಿ ಪ್ರಾರಂಭಿಸಲಾಯಿತು.
- ಮಾರ್ಚ್ 2014ರ ಅಂತ್ಯಕ್ಕೆ 13 ಪ್ರಮುಖ ಬಂದರುಗಳ ಸಾಮರ್ಥ್ಯವು 871.52 ಎಂಟಿಪಿಎ ಆಗಿತ್ತು, ಮತ್ತು ಇದು ಮಾರ್ಚ್ 2021ರ ಅಂತ್ಯದ ವೇಳೆಗೆ 1560.61 ಎಂಟಿಪಿಎಗೆ ಶೇಕಡಾ 79 ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ.
- ಬಂದರು, ಹಡಗು ಮತ್ತು ಜಲಸಾರಿಗೆ ಸಚಿವಾಲಯದ ಫಲಿತಾಂಶ ವರದಿ ಪ್ರಕಾರ, 2035ರೊಳಗೆ ಪೂರ್ಣವಾಗಬೇಕಾದ 5.48 ಲಕ್ಷ ಕೋಟಿ ರೂ. ಮೌಲ್ಯದ 802 ಯೋಜನೆಗಳಿವೆ, ಇದರಲ್ಲಿ 99 ಸಾವಿರ ಕೋಟಿ ರೂ. ಮೌಲ್ಯದ 194 ಯೋಜನೆಗಳು ಪೂರ್ಣಗೊಂಡಿವೆ. ಪಿಪಿಪಿ ಮಾದರಿಯನ್ನು 45,000 ಕೋಟಿ ರೂ.ಗಳ ಒಟ್ಟು 29 ಯೋಜನೆಗಳಿಗೆ ಬಳಸಲಾಗುತ್ತಿದೆ. ಇದಲ್ಲದೆ, 2.12 ಲಕ್ಷ ಕೋಟಿ ರೂ.ಗಳ ಒಟ್ಟು 218 ಯೋಜನೆಗಳು ಪ್ರಸ್ತುತ ನಿರ್ಮಾಣ ಹಂತದಲ್ಲಿವೆ ಮತ್ತು ಎರಡು ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇದಲ್ಲದೆ, 2.37 ಲಕ್ಷ ಕೋಟಿ ರೂ.ಗಳ 390 ಯೋಜನೆಗಳ ಕಾಮಗಾರಿ ಪ್ರಗತಿಯಲ್ಲಿವೆ.
- ಕರಾವಳಿಯುದ್ದಕ್ಕೂ ಕೈಗಾರಿಕಾ ಮತ್ತು ರಫ್ತು ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ ಬಂದರು ಆಧರಿತ ಕೈಗಾರಿಕೀಕರಣವನ್ನು ಜಾರಿಗೆ ತರಲಾಗುತ್ತಿದೆ. ಕರಾವಳಿಯುದ್ದಕ್ಕೂ ಹಾದುಹೋಗುವ 14 ಕರಾವಳಿ ಆರ್ಥಿಕ ವಲಯಗಳ ಮೂಲಕ ಇದನ್ನು ಸಾಧಿಸಲಾಗುವುದು. ಹಿಂದೂ ಮಹಾಸಾಗರದ, ವಾಧ್ವಾನ್ ನಲ್ಲಿ ಹೊಸ ಆಳವಾದ-ಡ್ರಾಫ್ಟ್ ಬಂದರನ್ನು ನಿರ್ಮಿಸಲಾಗುತ್ತಿದೆ.



## ಭಾರತಮಾಲಾ ಪರಿಯೋಜನೆ

ಭಾರತಮಾಲಾ ಪರಿಯೋಜನಾ ಹಂತ-1ರ ಅಡಿಯಲ್ಲಿ, 9,000 ಕಿ.ಮೀ ಆರ್ಥಿಕ ಕಾರಿಡಾರ್ ಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಒಟ್ಟು 6,087 ಕಿ.ಮೀ ಉದ್ದದ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಉಳಿದ ಮಾರ್ಗಕ್ಕೆ ಮುಂದಿನ ಎರಡು ಹಣಕಾಸು ವರ್ಷಗಳಲ್ಲಿ ಅನುಮೋದನೆ ನೀಡಲಾಗುವುದು. ಇಲ್ಲಿಯವರೆಗೆ, ಒಟ್ಟು 1,613 ಕಿ.ಮೀ ಉದ್ದದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಕಾಮಗಾರಿ 2026-27 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.



## ಪರ್ವತ ಮಾಲಾ

ಹಿಮಾಚಲ ಪ್ರದೇಶ, ಉತ್ತರಾಖಂಡ್, ಜಮ್ಮು ಮತ್ತು ಕಾಶ್ಮೀರ ಹಾಗು ಈಶಾನ್ಯದಂತಹ ಪ್ರದೇಶಗಳಿಗೆ ದೇಶದಲ್ಲಿಯೇ ಮೊದಲ ಬಾರಿಗೆ "ಪರ್ವತಮಾಲಾ ಯೋಜನೆ" ಯನ್ನು ಪ್ರಾರಂಭಿಸಲಾಗಿದೆ. ಪ್ರತಿ ಗಂಟೆಗೆ 6000-8000 ಪ್ರಯಾಣಿಕರನ್ನು ಸಾಗಿಸುವ ಈ ರೋಪ್ ವೇ ಯೋಜನೆಯು 3S (ಒಂದು ರೀತಿಯ ಕೇಬಲ್ ಕಾರ್ ವ್ಯವಸ್ಥೆ) ಅಥವಾ ತತ್ಸಮಾನ ತಂತ್ರಜ್ಞಾನಗಳನ್ನು ಆಧರಿಸಿದೆ. 2022-23ರಲ್ಲಿ 60 ಕಿಲೋಮೀಟರ್ ಉದ್ದದ ಎಂಟು ಯೋಜನೆಗಳ ಗುತ್ತಿಗೆ ನೀಡಲಾಗುವುದು.



# ಜಲ ಮಾರ್ಗಗಳು

24 ರಾಜ್ಯಗಳಲ್ಲಿ **106** ಹೊಸ ರಾಷ್ಟ್ರೀಯ ಜಲಮಾರ್ಗಗಳನ್ನು ಗುರುತಿಸಲಾಗಿದ್ದು, ಒಟ್ಟು ಜಲಮಾರ್ಗಗಳು 111 ಕ್ಕೆ ಏರಿವೆ.

- ಬಂದರುಗಳು, ಹಡಗು ಮತ್ತು ಜಲಸಾರಿಗೆ ಸಚಿವಾಲಯದ ಅಧೀನದಲ್ಲಿರುವ ಪ್ರಮುಖ ಭಾರತೀಯ ಬಂದರುಗಳು 2021-22 ರ ಹಣಕಾಸು ವರ್ಷದಲ್ಲಿ ಹಡಗುಗಳ ಸಂಚಾರದಲ್ಲಿ ಹಿಂದಿನ ಹಣಕಾಸು ವರ್ಷಕ್ಕೆ (ವರ್ಷದಿಂದ ವರ್ಷಕ್ಕೆ) ಹೋಲಿಸಿದರೆ ಶೇ.6.94ರಷ್ಟು ತೃಪ್ತಿದಾಯಕ ಬೆಳವಣಿಗೆ ದರವನ್ನು ದಾಖಲಿಸಿವೆ.
- ಭಾರತದ ಜಲಮಾರ್ಗಗಳ ಉಸ್ತುವಾರಿ ಹೊತ್ತಿರುವ ಭಾರತೀಯ ಒಳನಾಡು ಜಲಸಾರಿಗೆ ಪ್ರಾಧಿಕಾರ (ಐಡಬ್ಲ್ಯೂಎಐ) ಒಟ್ಟು 105 ದಶಲಕ್ಷ ಟನ್ ಸರಕುಗಳನ್ನು ರಾಷ್ಟ್ರೀಯ ಜಲಮಾರ್ಗಗಳ ಮೂಲಕ ಸಾಗಿಸಿದ್ದು, ವರ್ಷದಿಂದ ವರ್ಷಕ್ಕೆ 25.61 ಪ್ರತಿಶತದಷ್ಟು ತೃಪ್ತಿದಾಯಕ ಬೆಳವಣಿಗೆಯನ್ನು ದಾಖಲಿಸಿದೆ.
- ಪ್ರಮುಖ ಬಂದರುಗಳಲ್ಲಿ ಕಂಟೈನರ್ ಹಡಗುಗಳ ಸರಾಸರಿ ಸುತ್ತಾಟದ ಸಮಯವು 2014 ರಲ್ಲಿ 43.44 ಗಂಟೆಗಳಿದ್ದದ್ದು 2021ರಲ್ಲಿ 26.58 ಗಂಟೆಗಳಿಗೆ ಇಳಿದಿದೆ. ಇದು ಸಮಯದ ಉಳಿತಾಯದ ರೂಪದಲ್ಲಿ ಪ್ರಯೋಜನವನ್ನು ಪಡೆದಿದೆ.



## ಸ್ಮಾರ್ಟ್ ಸಿಟಿ ಅಭಿಯಾನ ನಗರ ಭೂದೃಶ್ಯವನ್ನು ಬದಲಾಯಿಸುತ್ತಿದೆ

- ಇದು ಒಂದು ಪರಿವರ್ತನಾ ಅಭಿಯಾನ-ವಾಗಿದ್ದು, ದೇಶದ ನಗರಾಭಿವೃದ್ಧಿ ಕಾಮಗಾರಿ ವಿಧಾನದಲ್ಲಿ ಒಂದು ಮಾದರಿ ಬದಲಾವಣೆಯನ್ನು ತರುವ ಗುರಿಯನ್ನು ಹೊಂದಿದೆ.
- ಒಟ್ಟು ಉದ್ದೇಶಿತ ಯೋಜನೆಗಳಲ್ಲಿ 2022 ಏಪ್ರಿಲ್ 10ರಂದು, 1,93,143 ಕೋಟಿ ರೂ.ಗಳ ಮೌಲ್ಯದ 7,905 ಯೋಜನೆಗಳಿಗೆ ಟೆಂಡರ್ ಮತ್ತು 1,80,508 ಕೋಟಿ ರೂ. ಮೌಲ್ಯದ 7,692 ಯೋಜನೆಗಳಿಗೆ ಕಾರ್ಯಾದೇಶಗಳನ್ನು ಸ್ಮಾರ್ಟ್ ಸಿಟಿ ಅಭಿಯಾನ (ಎಸ್ಸಿಎಂ) ದ ಅಡಿಯಲ್ಲಿ ನೀಡಲಾಗಿದೆ. 60,919 ಕೋಟಿ ರೂ. ಮೌಲ್ಯದ 3,830 ಯೋಜನೆಗಳು ಪೂರ್ಣಗೊಂಡಿವೆ ಮತ್ತು ಈಗ ಕಾರ್ಯಾರಂಭ ಮಾಡಿವೆ.
- ಸ್ಮಾರ್ಟ್ ಸಿಟಿ ಅಭಿಯಾನದ ಅಡಿಯಲ್ಲಿ, ಕೇಂದ್ರ ಮತ್ತು ರಾಜ್ಯ ನಿಧಿಗಳಿಂದ ಒಟ್ಟು 2,05,018 ಕೋಟಿ ರೂ.ಗಳ ಹೂಡಿಕೆಯಲ್ಲಿ 93,552 ಕೋಟಿ ರೂ. ಮೌಲ್ಯದ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. 2022 ಏಪ್ರಿಲ್ 10ರ ಹೊತ್ತಿಗೆ, ಈ ಎಲ್ಲಾ ಯೋಜನೆಗಳ ಒಟ್ಟು 92,300 ಕೋಟಿ ರೂ. ಮೌಲ್ಯದ ಕಾಮಗಾರಿಯನ್ನು ಆದೇಶ ನೀಡಲಾಗಿದೆ. ಸ್ಮಾರ್ಟ್ ಸಿಟಿ ಅಭಿಯಾನದಲ್ಲಿ ಆರ್ಥಿಕ ಪ್ರಗತಿಯೂ ವೇಗ ಪಡೆದುಕೊಂಡಿದೆ. 2018 ರಲ್ಲಿ ಅಭಿಯಾನದ ಒಟ್ಟು ವೆಚ್ಚ 1,000 ಕೋಟಿ ರೂ.ಗಳಾಗಿದ್ದು, ಈಗ ಅದು 45,000 ಕೋಟಿ ರೂ.ಗೆ ಏರಿದೆ. ನಗರಗಳಿಗೆ ಬಿಡುಗಡೆಯಾದ ಭಾರತ ಸರ್ಕಾರದ ಒಟ್ಟು ಅನುದಾನದಲ್ಲಿ ಶೇ.91ರಷ್ಟು ಹಣವನ್ನು ಬಳಸಲಾಗಿದೆ.

# ಗ್ರಾಹಕ ಉದ್ಯಮಕ್ಕಾಗಿ ರೇರಾದ ಪರಿವರ್ತನಾತ್ಮಕ ನಿಬಂಧನೆಗಳು

- **ರೇರಾ:** ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ನಿರಂತರವಾಗಿ ಹಾನಿ ಮಾಡಿದವರನ್ನು ಗುರಿಯಾಗಿಸುವ ಪರಿವರ್ತನಾತ್ಮಕ ನಿಬಂಧನೆಗಳನ್ನು ರೇರಾ ಕಾಯ್ದೆ ಒಳಗೊಂಡಿದೆ. ಸಕ್ಷಮ ಪ್ರಾಧಿಕಾರದಿಂದ ಯೋಜನಾ ನಕ್ಷೆಗೆ ಅನುಮೋದನೆ ದೊರೆಯದ ಹೊರತು ಯಾವುದೇ ಯೋಜನೆಯನ್ನು ಮಾರಾಟ ಮಾಡುವಂತಿಲ್ಲ ಎಂದು ಅದು ಹೇಳುತ್ತದೆ. ಹೆಚ್ಚಿನ ಮೌಲ್ಯದ ನೋಟುಗಳ ಅಮಾನ್ಯತೆಯೊಂದಿಗೆ ಸರಕು ಮತ್ತು ಸೇವಾ ತೆರಿಗೆ ಕಾನೂನುಗಳೊಂದಿಗೆ, ರೇರಾ ಹೆಚ್ಚಾಗಿ ರಿಯಲ್ ಎಸ್ಟೇಟ್ ವಲಯದಿಂದ ಕಪ್ಪು ಹಣವನ್ನು ತೆಗೆದುಹಾಕಿದೆ.
- ನಾಗಾಲ್ಯಾಂಡ್ ಹೊರತುಪಡಿಸಿ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ರೇರಾ ನಿಯಮಗಳ ಅಧಿಸೂಚನೆ ಹೊರಡಿಸಿವೆ. ನಾಗಾಲ್ಯಾಂಡ್ ನಲ್ಲಿ ಈ ಪ್ರಕ್ರಿಯೆ ನಡೆಯುತ್ತಿದೆ. ಅಲ್ಲದೆ, 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಲ್ಯಾಂಡ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಿವೆ.
- ರಿಯಲ್ ಎಸ್ಟೇಟ್ ಮೇಲ್ಮನವಿ ನ್ಯಾಯಮಂಡಳಿಯನ್ನು 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಥಾಪಿಸಲಾಗಿದೆ, ಮತ್ತು ಅವುಗಳ ವೆಬ್ ಸೈಟ್ ಗಳನ್ನು ನಿಯಂತ್ರಣ ಪ್ರಾಧಿಕಾರವು ನಿರ್ವಹಿಸುತ್ತದೆ.
- ರೇರಾ ನೋಂದಾಯಿತ 78,734 ರಿಯಲ್ ಎಸ್ಟೇಟ್ ಯೋಜನೆಗಳು ಮತ್ತು 62,204 ರಿಯಲ್ ಎಸ್ಟೇಟ್ ಏಜೆಂಟರು ದೇಶಾದ್ಯಂತ ರೇರಾ ಅಡಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ದೇಶಾದ್ಯಂತ 88,894 ದೂರುಗಳನ್ನು ಲ್ಯಾಂಡ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಗಳು ಇತ್ಯರ್ಥಪಡಿಸಿವೆ. (ಏಪ್ರಿಲ್ 16, 2022 ರ ದತ್ತಾಂಶ)

# ರಾಷ್ಟ್ರೀಯ ಮೂಲಸೌಕರ್ಯ ಪೈಪ್ ಲೈನ್ ಯೋಜನೆ

ರಾಷ್ಟ್ರೀಯ ಮೂಲಸೌಕರ್ಯ ಪೈಪ್ ಲೈನ್ ಯೋಜನೆಯನ್ನು (ಎನ್‌ಐಪಿ) 6,835 ಯೋಜನೆಗಳೊಂದಿಗೆ ಪ್ರಾರಂಭಿಸಲಾಯಿತು. ಈಗ ಎನ್‌ಐಪಿ ಸುಮಾರು 9,367 ಯೋಜನೆಗಳಿಗೆ ವಿಸ್ತರಿಸಿದ್ದು, ಇದರ ಒಟ್ಟು ವೆಚ್ಚ 142.45 ಲಕ್ಷ ಕೋಟಿ ರೂ. ಆಗಿದೆ. ಪ್ರಸ್ತುತ 2,444 ಯೋಜನೆಗಳ ಕಾಮಗಾರಿ ನಡೆಯುತ್ತಿದೆ.

## ನಗರ ಸಾರಿಗೆ

2014 ಕ್ಕಿಂತ ಮೊದಲು, ದೇಶಾದ್ಯಂತ ಕೇವಲ ಐದು ನಗರಗಳಲ್ಲಿ ಮಾತ್ರ ಮೆಟ್ರೋ ಸೌಲಭ್ಯವಿತ್ತು. 2014 ರವರೆಗೆ, ದೇಶದ ದೆಹಲಿ-ಎನ್.ಸಿ.ಆರ್ ಪ್ರದೇಶದಲ್ಲಿ ಮಾತ್ರ ಮೆಟ್ರೋ ಬೃಹತ್ ವಿಸ್ತರಣೆಯನ್ನು ಕಂಡಿತು. ಇಂದು, ಮೆಟ್ರೋ ದೇಶದ ಎರಡು ಡಜನ್ ಗಿಂತ ಹೆಚ್ಚು ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ ಅಥವಾ ಶೀಘ್ರದಲ್ಲೇ ಪ್ರಾರಂಭವಾಗಲಿವೆ. ದೆಹಲಿ ಮೆಟ್ರೋ ಜಾಲದ 94 ಕಿ.ಮೀ.ನಲ್ಲಿ ಚಾಲಕ ರಹಿತ ರೈಲು ಕಾರ್ಯಾಚರಣೆಗಳನ್ನು ಹೊಂದಿರುವ ಭಾರತವು, ಚಾಲಕರಹಿತ ರೈಲುಗಳನ್ನು ನಿರ್ವಹಿಸುವ ವಿಶ್ವದ ಗಣ್ಯ ವರ್ಗದ ಮೆಟ್ರೋ ವ್ಯವಸ್ಥೆಗಳಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

## ಸೆಂಟ್ರಲ್ ವಿಸ್ಟಾ



ಸೆಂಟ್ರಲ್ ವಿಸ್ಟಾ ಯೋಜನೆಯು ಸ್ವಾವಲಂಬಿ ಭಾರತವನ್ನು ನಿರ್ಮಿಸುವ ನಮ್ಮ ಬದ್ಧತೆ ಮತ್ತು ಪ್ರಯತ್ನಗಳ ಸಂಕೇತವಾಗಿದೆ. ಹೊಸ ಸಂಸತ್ತನ್ನು ಭಾರತೀಯರೇ ಭಾರತೀಯ ವಸ್ತುಗಳನ್ನು ಬಳಸಿಕೊಂಡು ವಿನ್ಯಾಸಗೊಳಿಸಿ ನಿರ್ಮಿಸುತ್ತಿದ್ದಾರೆ. ಇದು ಜನರಿಂದ, ಜನರಿಗೋಸ್ಕರ ಮತ್ತು ಜನರಿಗಾಗಿ ಮಾಡಿದ ಮೊದಲ ಭಾರತೀಯ ಸಂಸತ್ತು ಆಗಲಿದೆ.



**2021ರ ವೇಳೆಗೆ ಮೆಟ್ರೋ ಮಾರ್ಗದ ಉದ್ದವು 700 ಕಿ.ಮೀ ಆಗಿದೆ. 2014 ರಲ್ಲಿ ಇದು 250 ಕಿ.ಮೀ ಆಗಿತ್ತು. 1000 ಕಿ.ಮೀ ಉದ್ದದ ಹೊಸ ಮೆಟ್ರೋ ಮಾರ್ಗಗಳ ಕಾಮಗಾರಿ ಮುಂದುವರಿದಿದೆ.**

# ಅಮೃತ್: ನಗರ ನವೀಕರಣ ಮತ್ತು ಪರಿವರ್ತನೆಗಾಗಿ ಅಟಲ್ ಅಭಿಯಾನ

- ಎಸ್‌ಎಎಪಿ (ರಾಜ್ಯ ವಾರ್ಷಿಕ ಕ್ರಿಯಾ ಯೋಜನೆ)ಯ ಒಟ್ಟು ಗಾತ್ರ 77,640 ಕೋಟಿ ರೂ.ಗಳಿಗೆ ಹೋಲಿಸಿದರೆ, 80,713 ಕೋಟಿ ರೂ.ಗಳ ಮೌಲ್ಯದ 5818 ಯೋಜನೆಗಳು ಸಾಕಾರವಾಗಿವೆ.
- ಅಕ್ಟೋಬರ್ 1, 2021 ರಂದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಗರಗಳನ್ನು "ಜಲ-ಸುರಕ್ಷಿತ" ಮಾಡುವ ಗುರಿಯೊಂದಿಗೆ ಮತ್ತು ಎಲ್ಲಾ ಮನೆಗಳಿಗೆ ಕೊಳಾಯಿ ಸಂಪರ್ಕಗಳ ಮೂಲಕ ನೀರನ್ನು ಒದಗಿಸುವ ಗುರಿಯೊಂದಿಗೆ ಅಮೃತ್ 2.0 ಗೆ ಚಾಲನೆ ನೀಡಿದರು.
- ಅಮೃತ್ 2.0 ಗಾಗಿ ಒಟ್ಟು 2,77,000 ಕೋಟಿ ರೂ.ಗಳ ವೆಚ್ಚವಾಗಿದ್ದು, 2021-22 ರಿಂದ 2025-26 ರ ಅವಧಿಯಲ್ಲಿ 76,760 ಕೋಟಿ ರೂ.ಗಳ ಕೇಂದ್ರದ ಪಾಲನ್ನು ಒಳಗೊಂಡಿದೆ. ನೀರು ಸರಬರಾಜು ವಲಯದಲ್ಲಿ ಗುತ್ತಿಗೆಗಳನ್ನು ನೀಡಲಾಗಿದೆ.
- 41,850 ಕೋಟಿ ರೂ.ಗಳ 1,326 ಯೋಜನೆಗಳಿಗೆ ಗುತ್ತಿಗೆ ನೀಡಲಾಗಿದೆ. ಇದರಲ್ಲಿ 11,530 ಕೋಟಿ ರೂ.ಗಳ 740 ಯೋಜನೆಗಳು ಪೂರ್ಣಗೊಂಡಿವೆ.
- ಇದಲ್ಲದೆ, 358 ಕೋಟಿ ರೂ.ಗಳ 18 ಯೋಜನೆಗಳು ವಿವಿಧ ಹಂತಗಳಲ್ಲಿ ಟೆಂಡರ್ ಮಟ್ಟದಲ್ಲಿವೆ. ಕೊಳಾಯಿಯಿಂದ ಎಲ್ಲರಿಗೂ ನೀರು ತಲುಪಲು 1.39 ಕೋಟಿ ಕೊಳಾಯಿ ಸಂಪರ್ಕಗಳನ್ನು ಒದಗಿಸುವ ಗುರಿ ಹೊಂದಲಾಗಿದೆ.

# ರಕ್ಷಣಾ ವಲಯದ ಪುನಶ್ಚೇತನ

**ಭಾ**ರತದಲ್ಲಿ ರಕ್ಷಣಾ ಸಚಿವಾಲಯವು ಹಲವು ವರ್ಷಗಳಿಂದ ಒಂದು ಬೃಹತ್ ಸಂಸ್ಥೆಯಾಗಿ ಚಿತ್ರಿತವಾಗಿದ್ದರೂ, ನಿಪುಣತೆಯ ಕೊರತೆ ಮತ್ತು ನಿಧಾನಗತಿಯ ಕಾರ್ಯವೈಖರಿಗೂ ಹೆಸರಾಗಿತ್ತು. ಈ ಸಚಿವಾಲಯವು ದೇಶದ ರಕ್ಷಣೆಯ ಹೊಣೆ ಹೊತ್ತಿರುವುದಲ್ಲದೆ ಸುಮಾರು 15 ಲಕ್ಷ ಸೈನಿಕರೊಂದಿಗೆ ಬೃಹತ್ ಸೈನ್ಯದ (ಭೂಸೇನೆ, ನೌಕಾಪಡೆ, ವಾಯುಪಡೆ ಮತ್ತು ಕರಾವಳಿ ಭದ್ರತಾ ಪಡೆ) ಆಡಳಿತವನ್ನು ಸಹ ನಿರ್ವಹಿಸುತ್ತದೆ. ಈ ಸಚಿವಾಲಯವು ಸಾಂಪ್ರದಾಯಿಕವಾಗಿ ಬಜೆಟ್ ನಲ್ಲಿ ಅತ್ಯಧಿಕ ಹಂಚಿಕೆಯನ್ನು ಪಡೆಯುತ್ತದೆ. ಈ ಸವಾಲುಗಳ ನಡುವೆ, 2014ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಹೊಸ ಸರ್ಕಾರವು ಪ್ರಮಾಣವಚನ ಸ್ವೀಕರಿಸಿತು. ಹಲವಾರು ದಶಕಗಳಿಂದ ರಕ್ಷಣಾ ಸಾಮರ್ಥ್ಯಗಳನ್ನು ನಿರ್ಮಿಸುವ ವಿಷಯವನ್ನು ಹೆಚ್ಚಾಗಿ ನಿರ್ಲಕ್ಷಿಸಲಾಗಿತ್ತು, ಇದಕ್ಕೆ ಆದ್ಯತೆಯ ಆಧಾರದ ಮೇಲೆ ಗಮನ ನೀಡಬೇಕಾಗಿತ್ತು. ಸರ್ಕಾರವು ರಕ್ಷಣಾ ಉತ್ಪಾದನೆಯಲ್ಲಿ ಮೇಕ್ ಇನ್ ಇಂಡಿಯಾ ಉಪಕ್ರಮವನ್ನು ಕೈಗೊಂಡಿತು ಮತ್ತು ಅದೇ ಸಮಯದಲ್ಲಿ ಬಾಹ್ಯ ಅನಿವಾರ್ಯತೆಗಳನ್ನು ಎದುರಿಸಲು ಸೈನ್ಯಕ್ಕೆ ಅಗತ್ಯವಾದ ಮೂಲಸೌಕರ್ಯಗಳ ನಿರ್ಮಾಣಕ್ಕೆ ಪ್ರಮುಖ ಆದ್ಯತೆ ನೀಡಿತು...

**ಸ್ವದೇಶಿಗೆ ಲಾಭವನ್ನು ತರುತ್ತಿರುವ ರಕ್ಷಣಾ ಖರೀದಿ ನೀತಿ**

ರಕ್ಷಣಾ ಖರೀದಿ ನೀತಿ 2016 ರ ಘೋಷಣೆಯು ದೇಶದಲ್ಲಿ ರಕ್ಷಣಾ ಉಪಕರಣಗಳ ಖರೀದಿಯಲ್ಲಿ ಮೂಲಭೂತ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿದೆ. ಈ ನೀತಿಯು ಸ್ವತಃ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ಅದರ ನಿಬಂಧನೆಗಳ ಪ್ರಕಾರ, ದೇಶದಲ್ಲಿ ರಕ್ಷಣಾ ಉತ್ಪನ್ನಗಳನ್ನು ಯೋಜಿಸುವ ಮತ್ತು ಅಭಿವೃದ್ಧಿಪಡಿಸುವ ಹಾಗು ಅವುಗಳನ್ನು ಇಲ್ಲಿ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುವ ಭಾರತೀಯ ಕಂಪನಿಗಳಿಗೆ ದೇಶದ ಮೂರು ಸೈನ್ಯಗಳಿಗೆ ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳನ್ನು ಖರೀದಿಸುವಾಗ ಆದ್ಯತೆ ನೀಡಬೇಕು. ಇಲ್ಲಿಯವರೆಗೆ, ಒಟ್ಟು 310 ರಕ್ಷಣಾ ಉತ್ಪನ್ನಗಳು / ವ್ಯವಸ್ಥೆಗಳ 3 ಪಟ್ಟಿಗಳನ್ನು ಬಿಡುಗಡೆ ಮಾಡಲಾಗಿದೆ, ಅವುಗಳ ಆಮದನ್ನು ನಿರ್ಬಂಧಿಸಲಾಗುತ್ತದೆ ಮತ್ತು ದೇಶದೊಳಗೆ ಖರೀದಿಸಲಾಗುವುದು. ಭಾರತವು ತನ್ನ ಬಂಡವಾಳ ಸಂಗ್ರಹಣೆ ಬಜೆಟ್ ನ ಶೇ.68ರಷ್ಟನ್ನು ದೇಶೀಯ ಉದ್ಯಮಕ್ಕಾಗಿ ರಕ್ಷಣಾ ವಲಯಕ್ಕೆ ಮೀಸಲಿಟ್ಟಿದೆ.

**₹48,000** ಕೋಟಿ ರೂ. ವೆಚ್ಚದಲ್ಲಿ ದೇಶೀಯ ತೇಜಸ್ ಖರೀದಿಗೆ ಅನುಮೋದನೆ. ವಾಯುಪಡೆಯನ್ನು ಬಲಪಡಿಸಲು ಫ್ರಾನ್ಸ್ ನಿಂದ 36 ರಫೇಲ್ ಯುದ್ಧ ವಿಮಾನಗಳ ಖರೀದಿ.

ಭಾರತವು ಮೊದಲ ಬಾರಿಗೆ ಅಗ್ರ **25** ರಫ್ತುದಾರರಲ್ಲಿ ಒಂದಾಗಿದೆ.

ಫ್ರಾನ್ಸ್ ನಿಂದ **36** ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸಲು ನಿರ್ಧರಿಸಲಾಯಿತು. ಫೆಬ್ರವರಿ 2022ರ ವೇಳೆಗೆ, ಈ ಪೈಕಿ 35 ವಿಮಾನಗಳು ಭಾರತವನ್ನು ತಲುಪಿವೆ. ಅಂಬಾಲಾ ಮತ್ತು ಹಾಶೀಮಾರಾ ವಾಯುನೆಲೆಗಳಲ್ಲಿ ಅದಕ್ಕಾಗಿ ಸ್ಕ್ವಾಡ್ರನ್ ಗಳನ್ನು ನಿಯೋಜಿಸಲಾಗಿದೆ.

**ಪ್ರತಿಯೊಂದು ಅಗತ್ಯದ ಬಗ್ಗೆಯೂ ಕಾಳಜಿ..**

ರಕ್ಷಣಾ ಸಚಿವಾಲಯದ ಮುಂದಿನ ಕ್ರಮ, ಮೂರೂ ಸೇನೆಗಳಲ್ಲಿನ ಆ ಪ್ರಮುಖ ಯೋಜನೆಗಳನ್ನು ಗುರುತಿಸುವುದಾಗಿದೆ, ಅದಕ್ಕೆ ತಕ್ಷಣದ ಧನಸಹಾಯ ಮತ್ತು ಅನುಷ್ಠಾನದ ಅಗತ್ಯವಿತ್ತು. ಉದಾಹರಣೆಗೆ, 50,000 ಗುಂಡು ನಿರೋಧಕ ಜಾಕೆಟ್ ಗಳನ್ನು ಖರೀದಿಸುವ ಕಾರ್ಯ ತ್ವರಿತಗತಿಯ ಆಧಾರದ ಮೇಲೆ ಮಾಡಲಾಯಿತು, ಏಕೆಂದರೆ ಭಯೋತ್ಪಾದನೆ ನಿಗ್ರಹ ಮತ್ತು ಒಳನುಸುಳುವಿಕೆ ವಿರೋಧಿ ಕಾರ್ಯಾಚರಣೆಗಳಲ್ಲಿ ನಿಯೋಜಿಸಲಾದ ಯೋಧರಿಗೆ ಗುಂಡು ನಿರೋಧಕ ಜಾಕೆಟ್ ಗಳ ತೀವ್ರ ಕೊರತೆ ಇತ್ತು. ಸೈನಿಕರ ಸುರಕ್ಷತೆಗೆ ಬಹಳ ಮುಖ್ಯವಾದ ಹೆಲ್ಮೆಟ್ ಗಳು ಅವರಿಗೆ ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿರಲಿಲ್ಲ. ಸೈನಿಕರಿಗೆ ಹೆಲ್ಮೆಟ್ ಖರೀದಿಸುವ ಕಾರ್ಯವನ್ನು ಸುಮಾರು ಎರಡು ದಶಕಗಳ ಸುದೀರ್ಘ ಅಂತರದ ಬಳಿಕ ಪ್ರಾರಂಭಿಸಲಾಯಿತು. ಸುಮಾರು 180 ಕೋಟಿ ರೂ.ಗಳ ಮೌಲ್ಯದ ಈ ಒಪ್ಪಂದವನ್ನು ಕಾನ್ಪುರ ಮೂಲದ ಎಂಕೆಯು ಇಂಡಸ್ಟ್ರೀಸ್ ಎಂಬ ಕಂಪನಿಗೆ ನೀಡಲಾಗಿದ್ದು, 1.58 ಲಕ್ಷ ಹೆಲ್ಮೆಟ್ ಗಳನ್ನು ತಯಾರಿಸುವ



## ಸೇನೆಗೆ ಖರೀದಿ ಅಧಿಕಾರ

- ಕೇಂದ್ರ ಬಜೆಟ್ 2022-23 ರಲ್ಲಿ, ಸಶಸ್ತ್ರ ಪಡೆಗಳ ಆಧುನೀಕರಣ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಬಂಡವಾಳ ಹಂಚಿಕೆಯನ್ನು ಗಮನಾರ್ಹವಾಗಿ 1.52 ಲಕ್ಷ ಕೋಟಿ ರೂ.ಗೆ ಹೆಚ್ಚಿಸಲಾಗಿದೆ.
- ಮೂರೂ ಸೇನೆಗಳ ಕಮಾಂಡಿಂಗ್ ಮಟ್ಟದ ಅಧಿಕಾರಿಗಳು ಮತ್ತು ಸೇನಾ ಸಿಬ್ಬಂದಿಯ ಉಪ ಸೇನಾ ಮುಖ್ಯಸ್ಥರುಗಳಿಗೆ ಅನುಕ್ರಮವಾಗಿ 100 ಕೋಟಿ ಮತ್ತು 200 ಕೋಟಿ ರೂ.ಗಳವರೆಗಿನ ಯೋಜನೆಗಳನ್ನು ಅಖೈರುಮಾಡಲು ಹಣಕಾಸು ಅಧಿಕಾರದ ಅವಕಾಶ ನೀಡಲಾಗಿದೆ.
- ಮಾರಕ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ಖರೀದಿಗಾಗಿ ಮೂರೂ ಸೇನೆಗಳಿಗೆ ಪ್ರತಿ ಯೋಜನೆಗೆ 500 ಕೋಟಿ ರೂ.ಗಳವರೆಗೆ ಆರ್ಥಿಕ ಅನುಮೋದನೆ ನೀಡಲಾಗಿದೆ.

### ಗಡಿಯಲ್ಲಿ ಬಲವಾದ ಮೂಲಸೌಕರ್ಯ

2008 ರಿಂದ 2014

| 3600 ಕಿ.ಮೀ. ರಸ್ತೆ | 7270 ಸೇತುವೆಗಳು |
|---|---|

2014-2021

| 5547 ಕಿ.ಮೀ. ರಸ್ತೆ | ಸುಮಾರು 15,000 ಸೇತುವೆ |
|---|---|

**ಮಾರಕ ಶಸ್ತ್ರಾಸ್ತ್ರಗಳ ಖರೀದಿ:** ಎಸ್-400 ವಾಯು ರಕ್ಷಣಾ ವ್ಯವಸ್ಥೆಯ ಮೊದಲ ದಾಸ್ತಾನನ್ನು ರಷ್ಯಾದಿಂದ ಪಡೆಯಲಾಗಿದೆ. ಕಲಾಶ್ನಿಕೋವ್ ಎಕೆ-203 ಅನ್ನು ಈಗ ದೇಶದಲ್ಲಿಯೇ ತಯಾರಿಸಲಾಗುತ್ತಿದೆ. ಧನುಷ್, ಕೆ9 ವಜ್ರ, ಶರಣ್ ಮತ್ತು ಅಲ್ಟ್ರಾ ಲೈಟ್ ಹೊವಿಟ್ಜರ್ ಬಂದೂಕುಗಳನ್ನು ಈಗ ದೇಶದಲ್ಲಿ ತಯಾರಿಸಲಾಗುತ್ತಿದೆ. ನೌಕಾಪಡೆಯನ್ನು ಬಲಪಡಿಸಲು, ಭಾರತದಲ್ಲಿಯೇ 6 ಸ್ಕಾರ್ಪೀನ್ ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಲಾಗಿದೆ.

**ಯುಎಪಿಎಗೆ ಹೆಚ್ಚಿನ ಶಕ್ತಿ ಪ್ರದಾನ:** ಮಸೂದೆಗೆ ತಿದ್ದುಪಡಿ ತರುವ ಮೂಲಕ ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತೊಗೆಯಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್ಐಎ) ವ್ಯಾಪಕ ಅಧಿಕಾರ ನೀಡಲಾಗಿದೆ. ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ-ಯುಎಪಿಎಗೆ ತಿದ್ದುಪಡಿ ತರುವ ಮೂಲಕ ಇದನ್ನು ಹೆಚ್ಚು ಕಠಿಣಗೊಳಿಸಲಾಗಿದೆ.



## ರಕ್ಷಣಾ ವಲಯದಲ್ಲಿ ಸ್ವಾವಲಂಬನೆ ಉಪಕ್ರಮ





- ನವೋದ್ಯಮಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳೊಂದಿಗೆ ಸಂಪರ್ಕ ಕಲ್ಪಿಸಲು ಸೂಚ್ಯಂಕ ಅಭಿಯಾನವನ್ನು ನಡೆಸಲಾಯಿತು.
- ಮೇಕ್ ಇನ್ ಇಂಡಿಯಾ ಅಡಿಯಲ್ಲಿ ಶಸ್ತ್ರಾಸ್ತ್ರಗಳು ಮತ್ತು ಪೂರಕ ಪರಿಕರಗಳ ತಯಾರಿಕೆ ಆರಂಭ.
- ತಯಾರಿಕೆಗಾಗಿ 52000 ಕೋಟಿ ರೂ.ಗಳ ಪ್ರತ್ಯೇಕ ಬಜೆಟ್.
- ದೇಶೀಯ ಉತ್ಪಾದನೆಯನ್ನು ಉತ್ತೇಜಿಸಲು ತಮಿಳುನಾಡು ಮತ್ತು ಉತ್ತರ ಪ್ರದೇಶದಲ್ಲಿ 2 ರಕ್ಷಣಾ ಕಾರಿಡಾರ್ ಗಳ ಸ್ಥಾಪನೆ.







## ಸಿಡಿಎಸ್ ಹುದ್ದೆ ರಚನೆ

ಸೇನೆಗಳ ನಡುವೆ ಉತ್ತಮ ಸಮನ್ವಯಕ್ಕಾಗಿ ಹಲವು ವರ್ಷಗಳಿಂದ ನಡೆಯುತ್ತಿದ್ದ ಮೂರೂ ಸೇನಾ ಪಡೆಗಳಿಗೆ ಓರ್ವ ಮುಖ್ಯಸ್ಥರ (ಚೀಫ್ ಆಫ್ ಡಿಫೆನ್ಸ್ ಸ್ಟಾಫ್) ಹುದ್ದೆಯನ್ನು ಸೃಷ್ಟಿಸಬೇಕೆಂಬ ಬೇಡಿಕೆಯನ್ನು ಅಂಗೀಕರಿಸಲಾಯಿತು. ಜನರಲ್ ಬಿಪಿನ್ ರಾವತ್ ಅವರನ್ನು ಮೊದಲ ಸಿಡಿಎಸ್ ಆಗಿ ನೇಮಿಸಲಾಯಿತು.

## ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ

370ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯಗಳ ಸಂಖ್ಯೆ ಗಮನಾರ್ಹವಾಗಿ ತಗ್ಗಿದೆ.

ಜವಾಬ್ದಾರಿಯನ್ನು ವಹಿಸಲಾಯಿತು. 2016ರ ಸೆಪ್ಟೆಂಬರ್ ನಲ್ಲಿ ಪಾಕಿಸ್ತಾನದ ಮೇಲೆ ಸರ್ಜಿಕಲ್ ದಾಳಿ ಬಳಿಕ, ಭದ್ರತೆ ಕುರಿತ ಸಂಪುಟ ಸಮಿತಿಯು ಪಾಕಿಸ್ತಾನದಿಂದ ಯಾವುದೇ ಅನಿರೀಕ್ಷಿತ ದುಸ್ಸಾಹಸ ನಡೆಸಬಹುದಾಗಿದ್ದ ಹಿನ್ನೆಲೆಯಲ್ಲಿ ತ್ವರಿತ ಪ್ರಕ್ರಿಯೆಯ ಮೂಲಕ 20 ಸಾವಿರ ಕೋಟಿ ರೂ.ಗಳ ರಕ್ಷಣಾ ಒಪ್ಪಂದಗಳನ್ನು ಅನುಮೋದಿಸಲು ಮೂರೂ ಪಡೆಗಳಿಗೆ ಅಧಿಕಾರ ನೀಡಿತು. ಹಿಂದಿನ ಸರ್ಕಾರಗಳು ಮೂರೂ ಸೇನೆಗಳ ಮೂಲಭೂತ ಅಗತ್ಯಗಳನ್ನು ಸಹ ನಿರ್ಲಕ್ಷಿಸಿದ್ದರಿಂದ ಈ ಕ್ರಮಗಳನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳುವುದು ಅಗತ್ಯವಾಗಿತ್ತು. ಈ ನಿಟ್ಟಿನಲ್ಲಿ, ಸಂಸತ್ತಿನಲ್ಲಿ ಮಂಡಿಸಲಾದ ಮಹಾ ಲೇಖಪಾಲರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿಯು ಸ್ಪಷ್ಟವಾಗಿ ಹೀಗೆ ಹೇಳಿದೆ: "ಕನಿಷ್ಠ ಸ್ವೀಕಾರಾರ್ಹ ಮಟ್ಟದ ಅಪಾಯದ ಹೊರತಾಗಿಯೂ, ಶಸ್ತ್ರಾಸ್ತ್ರಗಳ ಸಂಗ್ರಹವನ್ನು ಖಚಿತಪಡಿಸಲಾಗಿರಲಿಲ್ಲ. ಮಾರ್ಚ್ 2013ರಲ್ಲಿ, ಸೈನ್ಯದಲ್ಲಿ ಬಳಸಲಾದ ಒಟ್ಟು 179 ರೀತಿಯ ಶಸ್ತ್ರಾಸ್ತ್ರಗಳ ಪೈಕಿ, 125 ಶಸ್ತ್ರಾಸ್ತ್ರಗಳ ಸಂಗ್ರಹ ಮತ್ತು ಲಭ್ಯತೆಯು ಈ ಅಪಾಯದ ಮಟ್ಟಕ್ಕಿಂತ ಕಡಿಮೆಯಾಗಿತ್ತು. ಇದಲ್ಲದೆ, ಈ ಮಟ್ಟವನ್ನು ತಲುಪದ ಇತರ 50 ರೀತಿಯ ಆಯುಧಗಳ ಸಂಗ್ರಹ ಮತ್ತು ಲಭ್ಯತೆಯು ಸಹ ಬಹಳ ಗಂಭೀರ ಸ್ಥಿತಿಯಲ್ಲಿತ್ತು. ಯಾವುದೇ ರೀತಿಯ ಯುದ್ಧದ ಸಂದರ್ಭದಲ್ಲಿ ನಮ್ಮ ಬಳಿ 10 ದಿನಗಳಿಗಾಗುವಷ್ಟು ಆಯುಧಗಳು ಸಹ ಇರಲಿಲ್ಲ. ಈ ಸೂಕ್ಷ್ಮ ಮತ್ತು ಅಪಾಯಕಾರಿ ಪರಿಸ್ಥಿತಿಯನ್ನು ಈಗ ಸರಿಪಡಿಸಲಾಗಿದೆ. ಕೇಂದ್ರ ಸಶಸ್ತ್ರ ಪಡೆಗಳ ಅಡಿಯಲ್ಲಿ ಏಳು ಪಡೆಗಳ ಸಿಬ್ಬಂದಿ ಮತ್ತು ಅವರ ಕುಟುಂಬಗಳಿಗೆ 35 ಲಕ್ಷ 'ಆಯುಷ್ಮಾನ್' ಆರೋಗ್ಯ ಕಾರ್ಡ್ ಗಳನ್ನು ವಿತರಿಸುವ ಕೆಲಸ ಪೂರ್ಣಗೊಂಡಿದೆ. ಇದರ ಅಡಿಯಲ್ಲಿ, ಅವರು ದೇಶಾದ್ಯಂತ 24 ಸಾವಿರ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆಯನ್ನು ಪಡೆಯಬಹುದು. ■



## ಕನಿಷ್ಠ ಸರ್ಕಾರ - ಗರಿಷ್ಠ ಆಡಳಿತ

# ನವ ಭಾರತದ ಕನಸುಗಳಿಗೆ ಡಿಜಿಟಲ್ ಉತ್ತೇಜನ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗಿಂತ ರಾಜಕೀಯದಲ್ಲಿ ಅಥವಾ ರಾಷ್ಟ್ರೀಯ ನೀತಿಯಲ್ಲಿ ಡಿಜಿಟಲ್ ನ ಪ್ರಾಮುಖ್ಯವನ್ನು ಯಾರು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯ? ಇದು ವರ್ತಮಾನ ಮತ್ತು ಭವಿಷ್ಯದ ಅಗತ್ಯಗಳೆರಡೂ ಆಗಿದೆ. ಅದಕ್ಕಾಗಿಯೇ, 2014 ರಲ್ಲಿ ಅವರು ಅಧಿಕಾರ ವಹಿಸಿಕೊಂಡ ತಕ್ಷಣ, ಸರ್ಕಾರದ ಉಪಕ್ರಮಗಳಿಂದ ಹಿಡಿದು ತಳಮಟ್ಟದ ಉಪಕ್ರಮಗಳವರೆಗೆ, ಮಂಡಳಿಯಾದ್ಯಂತ ಡಿಜಿಟಲ್ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ನೀಡಿದರು. ಡಿಜಿಟಲ್ ಇಂಡಿಯಾ ಅಭಿಯಾನ ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದೆ. ಏಕೆಂದರೆ ಕನಿಷ್ಠ ಸರ್ಕಾರ ಮತ್ತು ಗರಿಷ್ಠ ಆಡಳಿತದೊಂದಿಗೆ ಜೀವನವನ್ನು ಸುಲಭಗೊಳಿಸುವ ನೀಲನಕ್ಷೆಯನ್ನು ಬಿಡುಗಡೆ ಮಾಡಲಾಗಿದೆ...

ಡಿಜಿಟಲ್ ಇಂಡಿಯಾ ಕಾರ್ಯಕ್ರಮ

ಪ್ರಾರಂಭ ಜುಲೈ 1, 2015

ಯೋಜನೆ

## ಡಿಜಿಟಲ್ ಇಂಡಿಯಾ: ಡಿಜಿಟಲ್ ಆರ್ಥಿಕತೆಯತ್ತ ದಾಪುಗಾಲು

**ಉದ್ದೇಶ:** ಭಾರತವನ್ನು ಡಿಜಿಟಲ್ ದಕ್ಷ ಸಮಾಜ ಮತ್ತು ಡಿಜಿಟಲ್ ಸೇರ್ಪಡೆ ಮತ್ತು ಡಿಜಿಟಲ್ ಸಬಲೀಕರಣಕ್ಕಾಗಿ ಜ್ಞಾನದ ಆರ್ಥಿಕತೆಯಾಗಿ ರೂಪಿಸುವುದು.

ಪ್ರಗತಿ

- ಭಾರತೀಯ ಐಟಿ ವೃತ್ತಿಪರರಿಗೆ ತರಬೇತಿ ನೀಡಲು ಇಂಟರ್ನೆಟ್ ಆಫ್ ಥಿಂಗ್ಸ್, ಬ್ಲಾಕ್ ಚೈನ್, ದತ್ತಾಂಶ ವಿಶ್ಲೇಷಣೆ ಮತ್ತು ಆರ್ಟಿಫಿಷಿಯಲ್ ಇಂಟಲಿಜೆನ್ಸ್‌ನಂತಹ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಉತ್ಕೃಷ್ಟತಾ ಕೇಂದ್ರ (ಸಿಒಇ) ಅನ್ನು ಅಭಿವೃದ್ಧಿಪಡಿಸುವುದು ಮತ್ತು ಬಲವಾದ ಭಾರತೀಯ ತಂತ್ರಾಂಶ ಉತ್ಪನ್ನ ಅಭಿವೃದ್ಧಿಯನ್ನು ಬೆಂಬಲಿಸಲು ಬೃಹತ್ ದತ್ತಾಂಶದಂತಹ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಭವಿಷ್ಯದ ಕೌಶಲ್ಯಗಳ ಪ್ರಮುಖ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುವುದು. ತಂತ್ರಾಂಶ ಉತ್ಪನ್ನಗಳ ರಾಷ್ಟ್ರೀಯ ನೀತಿ-2019ನ್ನು ಪರಿಸರ ವ್ಯವಸ್ಥೆಯನ್ನು ರೂಪಿಸುವ ಗುರಿಯೊಂದಿಗೆ ಪ್ರಾರಂಭಿಸಲಾಗಿದೆ.
- ಇದು ಸಾಲದ ಹರಿವನ್ನು ಸುಗಮಗೊಳಿಸುತ್ತದೆ ಮತ್ತು ಬ್ಯಾಂಕ್ ಖಾತೆಗಳನ್ನು ಮೊಬೈಲ್ ಫೋನ್ ಗಳು ಮತ್ತು ಆಧಾರ್ ನೊಂದಿಗೆ ಸಂಪರ್ಕ ಮಾಡುವ ಮೂಲಕ ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುತ್ತದೆ.
- ಅಂತೆಯೇ, ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಮಾಹಿತಿ ತಂತ್ರಜ್ಞಾನ ಉದ್ಯಮಗಳಲ್ಲಿ, ಸಾರ್ವಜನಿಕ ಡಿಜಿಟಲ್ ವೇದಿಕೆಗಳು ಸಮಗ್ರ ಬೆಳವಣಿಗೆ ಮತ್ತು ಪರಿವರ್ತನಾತ್ಮಕ ವೈವಿಧ್ಯದ ಮೂಲಗಳಾಗಿವೆ.
- ರುಪೇ ಪೇಮೆಂಟ್ ಗೇಟ್ ವೇ ವಿಸ್ತರಣೆ, ಡಿಜಿಟಲ್ ಕರೆನ್ಸಿಗೆ ಬದಲಾಗುವುದು ಮತ್ತು 5ಜಿ ಸೇವೆಗಳು ಹೆಚ್ಚು ಸುಗಮವಾಗುವಂತೆ ಮಾಡುತ್ತದೆ.

## ಡಿಜಿಟಲ್ ಸೇವೆಗಳು: ಆಧಾರ್

ಫೆಬ್ರವರಿ 2022 ರವರೆಗೆ **132** ಕೋಟಿ ಆಧಾರ್ ಕಾರ್ಡ್ ಗಳನ್ನು ನೋಂದಾಯಿಸಲಾಗಿದೆ.

ಯುಐಡಿಎಐ ದೇಶಾದ್ಯಂತ 55,000 ಕ್ಕೂ ಹೆಚ್ಚು ಕೇಂದ್ರಗಳ ಮೂಲಕ ಆಧಾರ್ ನೋಂದಣಿ ಮತ್ತು ಇತರ ಸೇವೆಗಳನ್ನು ಒದಗಿಸುತ್ತದೆ. ಇದರೊಂದಿಗೆ, 79 ಆಧಾರ್ ಸೇವಾ ಕೇಂದ್ರಗಳನ್ನು ಸಹ ನಡೆಸಲಾಗುತ್ತಿದೆ. ತಮ್ಮ ಮೊಬೈಲ್ ಸಂಖ್ಯೆಗಳನ್ನು ಆಧಾರ್ ನೊಂದಿಗೆ ಸಂಪರ್ಕ ಕಲ್ಪಿಸಿರುವ ನಿವಾಸಿಗಳು myaadhaar.gov.in ಆನ್ ಲೈನ್ ಪೋರ್ಟಲ್ ನಲ್ಲಿ ತಮ್ಮ ಹೆಸರು, ವಯಸ್ಸು, ಲಿಂಗ ಮತ್ತು ಹುಟ್ಟಿದ ದಿನಾಂಕವನ್ನು ಬದಲಾಯಿಸಬಹುದು.

### ಯುನಿಫೈಡ್ ಪೇಮೆಂಟ್ ಇಂಟರ್ಫೇಸ್ -ಯುಪಿಐ

ಪ್ರಮುಖ ಡಿಜಿಟಲ್ ಪಾವತಿ ವೇದಿಕೆ ಆಗಿದೆ. ಒಂದೇ ಮೊಬೈಲ್ ಆನ್ವಯಿಕದಲ್ಲಿ ಅನೇಕ ಬ್ಯಾಂಕ್ ಖಾತೆಗಳನ್ನು ಸಂಪರ್ಕ ಮಾಡಬಹುದು. ಇದಕ್ಕಾಗಿ ಪಾವತಿಯನ್ನು ಸಹ ನಿಗದಿಪಡಿಸಬಹುದು. ಫೆಬ್ರವರಿ 2022 ರ ವೇಳೆಗೆ, 229 ಬ್ಯಾಂಕುಗಳು ಯುಪಿಐ ಸೇವೆಯಲ್ಲಿ ಸೇರಿವೆ. ಹಣಕಾಸು ವಲಯ ಮತ್ತು ಆರ್ಥಿಕತೆಯನ್ನು ಡಿಜಿಟಲೀಕರಣಗೊಳಿಸುವ ಸರ್ಕಾರದ ಕಾರ್ಯತಂತ್ರದ ಭಾಗವಾಗಿ, ಡಿಜಿಟಲ್ ಪಾವತಿಗಳು ಇತ್ತೀಚಿನ ವರ್ಷಗಳಲ್ಲಿ ವೇಗವಾಗಿ ಬೆಳೆಯುತ್ತಿವೆ.




ಭೀಮ್-ಯುಪಿಐ 2022ರ ಫೆಬ್ರವರಿ 28 ರವರೆಗೆ **₹ 8.27** ಲಕ್ಷ ಕೋಟಿಗಳ ಮೌಲ್ಯದ 452.75 ಕೋಟಿ ಡಿಜಿಟಲ್ ಪಾವತಿಗಳನ್ನು ಸ್ವೀಕರಿಸಿದೆ.

### ಯುಪಿಐ ಪಾವತಿ




ಅಂಕಿ ಅಂಶಗಳು ಕೋಟಿಗಳಲ್ಲಿ, * ಫೆಬ್ರವರಿ 2022

# ಹಳ್ಳಿಗಳೂ ಸಹ ಈಗ ಡಿಜಿಟಲ್ ಆಗುತ್ತಿವೆ

## ಡಿಜಿಟಲ್ ಇಂಡಿಯಾ ಭೂದಾಖಲೆಗಳ ಆಧುನೀಕರಣ ಕಾರ್ಯಕ್ರಮ



- ಇದು ಏಪ್ರಿಲ್ 1, 2016 ರಂದು ಕೇಂದ್ರ ಸರ್ಕಾರದ ಸಂಪೂರ್ಣ ಧನಸಹಾಯದೊಂದಿಗೆ ಕಾರ್ಯಾರಂಭ ಮಾಡಿತು. ಸಕಾಲದಲ್ಲಿ ಭೂ ಮಾಹಿತಿಯನ್ನು ಸುಧಾರಿಸುವ, ಭೂ ಸಂಪನ್ಮೂಲಗಳನ್ನು ಉತ್ತಮಗೊಳಿಸುವ, ಭೂ ವಿವಾದಗಳನ್ನು ತಗ್ಗಿಸುವ, ಬೇನಾಮಿ ವಹಿವಾಟುಗಳನ್ನು ತಡೆಗಟ್ಟುವ ಹಾಗು ಮಾರಾಟಗಾರರು ಮತ್ತು ಖರೀದಿದಾರರಿಗೆ ಪ್ರಯೋಜನವಾಗುವ ಸಮಗ್ರ ಭೂ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸುವುದು ಇದರ ಗುರಿಯಾಗಿದೆ.
- ಒಟ್ಟು 1,62,71,251 ನಕ್ಷೆಗಳಲ್ಲಿ 1,11,47,387 ನಕ್ಷೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ.

**6, 11, 178**

**ಗ್ರಾಮಗಳಲ್ಲಿ ಭೂದಾಖಲೆ ಗಣಕೀಕರಣ ಪೂರ್ಣಗೊಂಡಿದೆ. ಇದು ದೇಶದ ಒಟ್ಟು ಹಳ್ಳಿಗಳ ಸಂಖ್ಯೆಯ ಶೇ. 93.10ರಷ್ಟನ್ನು ಪ್ರತಿನಿಧಿಸುತ್ತದೆ.**

## ಪ್ರಧಾನಮಂತ್ರಿ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಪ್ರಚಾರಾಂದೋಲನ

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮಾರ್ಚ್ 31, 2023 ರೊಳಗೆ 6 ಕೋಟಿ ಗ್ರಾಮೀಣ ಕುಟುಂಬಗಳಲ್ಲಿ ಪ್ರತಿ ಕುಟುಂಬದ ಒಬ್ಬ ವ್ಯಕ್ತಿಯನ್ನು ತಲುಪುವ ಗುರಿಯೊಂದಿಗೆ ಗ್ರಾಮೀಣ ಭಾರತದಲ್ಲಿ ಡಿಜಿಟಲ್ ಸಾಕ್ಷರತಾ ಪ್ರಚಾರಾಂದೋಲನವನ್ನು ಪ್ರಾರಂಭಿಸಿದೆ. ಮಾರ್ಚ್ 15, 2022 ರವರೆಗೆ, 4.81 ಕೋಟಿಗೂ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ಮತ್ತು 3.56 ಕೋಟಿಗೂ ಹೆಚ್ಚು ಅಭ್ಯರ್ಥಿಗಳು ಪ್ರಮಾಣಪತ್ರ ಪಡೆದಿದ್ದಾರೆ.

## ಡಿಜಿಟಲ್ ವಿಲೇಜ್ ಪ್ರಾಯೋಗಿಕ ಯೋಜನೆ

ಈ ಯೋಜನೆಯು ಅಕ್ಟೋಬರ್ 2018ರಲ್ಲಿ ಪ್ರಾರಂಭವಾಯಿತು. ಆಯ್ದ 700 ಗ್ರಾಮ ಪಂಚಾಯತ್‌ಗಳಲ್ಲಿ, ಡಿಜಿಟಲ್ ಆರೋಗ್ಯ ಸೇವೆಗಳು, ಶಿಕ್ಷಣ ಸೇವೆಗಳು, ಹಣಕಾಸು ಸೇವೆಗಳು, ಕೌಶಲ್ಯ ಅಭಿವೃದ್ಧಿ ಮತ್ತು ಸರ್ಕಾರಿ ಮತ್ತು ನಾಗರಿಕ ಸೇವೆಗಳನ್ನು ಒದಗಿಸಲಾಗುತ್ತಿದೆ.

## ಭಾರತ್ ನೆಟ್

ಭಾರತ್ ನೆಟ್ ಗ್ರಾಮೀಣ ಬ್ರಾಡ್ ಬ್ಯಾಂಡ್ ಕಾರ್ಯಕ್ರಮವನ್ನು ವೇಗಗೊಳಿಸುವ ಉಪಕ್ರಮವಾಗಿದೆ. ದೂರಸಂಪರ್ಕ ಇಲಾಖೆಯು ಈ ಯೋಜನೆಯ ಮೂಲಕ 2.5 ಲಕ್ಷ ಗ್ರಾಮ ಪಂಚಾಯತ್‌ಗಳು ಮತ್ತು ಗ್ರಾಮಗಳ ನಡುವೆ ಸಂಪರ್ಕ ಕಲ್ಪಿಸಲು ಯೋಜಿಸಿದೆ. ಮಾರ್ಚ್ 15, 2022 ರ ವೇಳೆಗೆ, 1,75,827 ಗ್ರಾಮ ಪಂಚಾಯತ್ ಗಳು ಬ್ರಾಡ್ ಬ್ಯಾಂಡ್ ಮೂಲಸೌಕರ್ಯವನ್ನು ಹೊಂದಿರುತ್ತವೆ.

## ಕಿಸಾನ್ ರಥ್ ಮೊಬೈಲ್ ಆಪ್

ಕಿಸಾನ್ ರಥ್ ಎಂಬುದು ರೈತರು, ರೈತ ಉತ್ಪಾದಕ ಸಂಸ್ಥೆಗಳು ಮತ್ತು ವ್ಯಾಪಾರಿಗಳಿಗೆ ಕೃಷಿ ಉತ್ಪನ್ನ ಸಾಗಣೆಗಾಗಿ ವಾಹನಗಳನ್ನು ಬಾಡಿಗೆಗೆ ಪಡೆಯಲು ಸುಲಭಗೊಳಿಸಲು ವಿನ್ಯಾಸಗೊಳಿಸಲಾದ ಮೊಬೈಲ್ ಅಪ್ಲಿಕೇಶನ್ ಆಗಿದೆ. ಮೊಬೈಲ್ ಅಪ್ಲಿಕೇಶನ್ ಆಂಡ್ರಾಯ್ಡ್ ಮತ್ತು ಐಒಎಸ್ ಆವೃತ್ತಿಗಳು ಹಿಂದಿ ಮತ್ತು ಇಂಗ್ಲಿಷ್ ಸೇರಿದಂತೆ 10 ಭಾಷೆಗಳಲ್ಲಿ ಲಭ್ಯವಿದೆ. ರಥ್ ಮೊಬೈಲ್ ಅಪ್ಲಿಕೇಶನ್ ನಲ್ಲಿ

**5.84** ಲಕ್ಷ ರೈತರು, ರೈತ ಉತ್ಪಾದಕ ಸಂಸ್ಥೆಗಳು, ವ್ಯಾಪಾರಿಗಳು ಮತ್ತು ಸೇವಾ ಪೂರೈಕೆದಾರರು ನೋಂದಾಯಿಸಿಕೊಂಡಿದ್ದಾರೆ.

## ಡಿಜಿಟಲ್ ನೊಂದಿಗೆ ಜೀವನ ಸುಗಮಗೊಂಡಿದೆ

### ಸಾಮಾನ್ಯ ಸೇವಾ ಕೇಂದ್ರ (ಸಿ.ಎಸ್.ಸಿ.)

ದೇಶದ 2.5 ಲಕ್ಷ ಗ್ರಾಮ ಪಂಚಾಯತ್‌ಗಳನ್ನು ಒಳಗೊಳ್ಳುವ ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಭಾಗವಾಗಿ ಆಗಸ್ಟ್ 2015ರಲ್ಲಿ ಸಾಮಾನ್ಯ ಸೇವಾ ಕೇಂದ್ರ 2.0 ಅನ್ನು ಪ್ರಾರಂಭಿಸಲಾಯಿತು. ಈ ಕೇಂದ್ರಗಳು 400ಕ್ಕೂ ಹೆಚ್ಚು ಡಿಜಿಟಲ್ ಸೇವೆಗಳನ್ನು ಒದಗಿಸುತ್ತವೆ. ಡಿಸೆಂಬರ್ 2021 ರ ಹೊತ್ತಿಗೆ, 4.46 ಲಕ್ಷಕ್ಕೂ ಹೆಚ್ಚು ಸಿಎಸ್.ಸಿಗಳಿವೆ, ಅವುಗಳಲ್ಲಿ 3.48 ಲಕ್ಷ ಗ್ರಾಮ ಪಂಚಾಯತ್ ಮಟ್ಟದಲ್ಲಿವೆ.

### ಡಿಜಿಟಲ್ ಲಾಕರ್

ಡಿಜಿಟಲ್ ಲಾಕರ್ ಎಂಬುದು ಒಂದು ವ್ಯವಸ್ಥೆಯಾಗಿದ್ದು, ಇದು ರೆಪೊಸಿಟರಿಗಳು ಮತ್ತು ಗೇಟ್ ವೇಗಳನ್ನು ಒಳಗೊಂಡಿದೆ, ಇದು ವಿತರಕರಿಗೆ ಡಿಜಿಟಲ್ ಭಂಡಾರಕ್ಕೆ ದಾಖಲೆಗಳನ್ನು ಅಪ್ ಲೋಡ್ ಮಾಡಲು ಅನುಮತಿಸುತ್ತದೆ. 2022 ರ ಫೆಬ್ರವರಿ ಮೊದಲ ವಾರದ ವೇಳೆಗೆ 9.23 ಕೋಟಿಗೂ ಹೆಚ್ಚು ಬಳಕೆದಾರರು ಡಿಜಿಟಲ್ ಲಾಕರ್ ನಲ್ಲಿ ನೋಂದಾಯಿಸಿಕೊಂಡಿದ್ದರು. ಇದರ ಪರಿಣಾಮವಾಗಿ ಏಪ್ರಿಲ್ 19, 2022 ರವರೆಗೆ 507 ಕೋಟಿಗೂ ಹೆಚ್ಚು ದಾಖಲೆಗಳನ್ನು ನೀಡಲಾಗಿದೆ. ಇದರಲ್ಲಿ 1695 ವಿತರಕರು ಮತ್ತು 349 ವಿನಂತಿ ಮಾಡುವ ಸಂಸ್ಥೆಗಳನ್ನು ಒಳಗೊಂಡಿದೆ.

## ಇ-ಸಹಿ

- ನಾಗರಿಕರು ಈಗ ಇ-ಸಹಿ ಸೇವೆಯಿಂದಾಗಿ ಕಾನೂನುಬದ್ಧವಾಗಿ ಸ್ವೀಕಾರಾರ್ಹ ಸ್ವರೂಪದಲ್ಲಿ ಆನ್ ಲೈನ್ ನಲ್ಲಿ ಫಾರ್ಮ್ ಗಳು ಮತ್ತು ದಾಖಲೆಗಳಿಗೆ ತಕ್ಷಣವೇ ಸಹಿ ಮಾಡಬಹುದು. ಸೇವೆಗಳನ್ನು ಪ್ರವೇಶಿಸಲು ವಿವಿಧ ಅಪ್ಲಿಕೇಶನ್ ಗಳು ಯುಐಡಿಎಐನ ಒಟಿಪಿ-ಆಧಾರಿತ ದೃಢೀಕರಣ ಸೇವೆಗಳನ್ನು ಬಳಸಬಹುದು. ಫೆಬ್ರವರಿ ಮೊದಲ ವಾರದವರೆಗೆ ಒಟ್ಟು 23.72 ಕೋಟಿ ಇ-ಸಹಿಗಳನ್ನು ನೀಡಲಾಗಿದೆ. ಸಿ-ಡಾಕ್ ಒಟ್ಟು 4.45 ಕೋಟಿಗೂ ಹೆಚ್ಚು ಇ-ಸಹಿಗಳನ್ನು ನೀಡಿದೆ.

## ಜೀವನ್ ಪ್ರಮಾಣ್

- ಜೀವನ್ ಪ್ರಮಾಣ್ ಎಂದು ಕರೆಯಲಾಗುವ ಪಿಂಚಣಿದಾರರಿಗೆ ಡಿಜಿಟಲ್ ಜೀವಿತ ಪ್ರಮಾಣ ಪತ್ರ ಯೋಜನೆ (ಲೈಫ್ ಸರ್ಟಿಫಿಕೇಟ್ ಸ್ಕೀಮ್) ಯಲ್ಲಿ, ಜೀವನ ಪ್ರಮಾಣ ಪತ್ರವನ್ನು ಪಡೆಯುವ ಸಂಪೂರ್ಣ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಲಾಗಿದೆ. ಈ ಉಪಕ್ರಮದಿಂದಾಗಿ, ಪಿಂಚಣಿದಾರರು ವಿತರಣಾ ಸಂಸ್ಥೆ ಅಥವಾ ಪ್ರಮಾಣೀಕರಣ ಪ್ರಾಧಿಕಾರದ ಮುಂದೆ ಖುದ್ದಾಗಿ ಹಾಜರಾಗುವ ಅಗತ್ಯವಿಲ್ಲ. 2014 ರಿಂದ ಫೆಬ್ರವರಿ 2022 ರವರೆಗೆ, ಸುಮಾರು 5.58 ಶತಕೋಟಿ ಡಿಜಿಟಲ್ ಜೀವಿತ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.

## ಇ- ಡಿಸ್ಟ್ರಿಕ್ಟ್ ಅಭಿಯಾನದೋಪಾದಿಯ ಯೋಜನೆ

- ಇ-ಡಿಸ್ಟ್ರಿಕ್ಟ್ ಎಂ.ಎಂ.ಪಿ.ಗಳ ರಾಷ್ಟ್ರೀಯ ಅನುಷ್ಠಾನ ಗುರಿಯು ಜಿಲ್ಲಾ ಮಟ್ಟದಲ್ಲಿ ಗುರುತಿಸಲಾದ ನಾಗರಿಕ ಕೇಂದ್ರಿತ ಸೇವೆಗಳು ದೊಡ್ಡ ಪ್ರಮಾಣದಲ್ಲಿ ವಿದ್ಯುನ್ಮಾನವಾಗಿ ಲಭ್ಯವಾಗುವಂತೆ ಮಾಡುವುದಾಗಿದೆ. ದೇಶಾದ್ಯಂತ 709 ಜಿಲ್ಲೆಗಳಲ್ಲಿ 3916 ಇ-ಡಿಸ್ಟ್ರಿಕ್ಟ್ ಸೇವೆಗಳನ್ನು ಪ್ರಾರಂಭಿಸಲಾಗಿದೆ.



## ಉಮಂಗ್ ಆಪ್

ಉಮಂಗ್ ಹೊಸ ಯುಗದ ಆಡಳಿತಕ್ಕಾಗಿ ಮೊಬೈಲ್ ಅಪ್ಲಿಕೇಶನ್ ಆಗಿದೆ. ನಿರ್ಣಾಯಕ ಸೇವೆಗಳನ್ನು ಒದಗಿಸಲು ಉಮಂಗ್ ಅನ್ನು ಒಂದೇ ಮೊಬೈಲ್ ವೇದಿಕೆಯಾಗಿ ರಚಿಸಲಾಗಿದೆ. ಉಮಂಗ್ ಪ್ರಸ್ತುತ 20,527 ಭಾರತ್ ಬಿಲ್ ಪಾವತಿ ವ್ಯವಸ್ಥೆ (ಬಿಬಿಪಿಎಸ್) ಉಪಯುಕ್ತ ಸೇವೆಗಳನ್ನು ಮತ್ತು 279 ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳು ಮತ್ತು 33 ರಾಜ್ಯ ಸಂಸ್ಥೆಗಳ 1417 ಸೇವೆಗಳನ್ನು ಒಳಗೊಂಡಿದೆ.

## ಇ-ಆಸ್ಪತ್ರೆ-: ಆನ್ ಲೈನ್ ನೋಂದಣಿ ವ್ಯವಸ್ಥೆ

ಆನ್ ಲೈನ್ ನೋಂದಣಿ ವ್ಯವಸ್ಥೆ ಮತ್ತು ಇ-ಆಸ್ಪತ್ರೆ ಅಪ್ಲಿಕೇಶನ್ ಗಳನ್ನು ಎನ್ಐಸಿಯ ರಾಷ್ಟ್ರೀಯ ಕ್ಲೌಡ್ ನಲ್ಲಿ ಹೋಸ್ಟ್ ಮಾಡಲಾಗುತ್ತದೆ. ಪ್ರಸ್ತುತ, 631 ಆಸ್ಪತ್ರೆಗಳು ಇ-ಆಸ್ಪತ್ರೆಗಳಿಗೆ ಸಂಪರ್ಕ ಹೊಂದಿದ್ದು, 23.38 ಕೋಟಿಗೂ ಹೆಚ್ಚು ವಹಿವಾಟುಗಳು ನಡೆಯುತ್ತಿವೆ. ಆನ್ ಲೈನ್ ನೋಂದಣಿ ವ್ಯವಸ್ಥೆಯನ್ನು ಬಳಸಿಕೊಂಡು ದೇಶಾದ್ಯಂತ 422 ಆಸ್ಪತ್ರೆಗಳಲ್ಲಿ 49 ಲಕ್ಷಕ್ಕೂ ಹೆಚ್ಚು ಸಮಯ ನಿಗದಿ ಮಾಡಲಾಗಿದೆ.

## ರುಪೇ ಪಾವತಿ ಗೇಟ್ ವೇ

- ಭಾರತದ ಮೊದಲ ಜಾಗತಿಕ ಪಾವತಿ ಜಾಲ. ಇದು ಬ್ಯಾಂಕ್ ಖಾತೆಗೆ ಸಂಪರ್ಕಿತವಾಗಿರುತ್ತದೆ. ಇದರ ಅಡಿಯಲ್ಲಿ, ಕಾರ್ಡ್ ಅಥವಾ ಆನ್ ಲೈನ್ ಮಾದರಿ ಮೂಲಕ ವಹಿವಾಟುಗಳನ್ನು ಮಾಡಬಹುದು. ಆದರೆ, ರುಪೇ ಕ್ರೆಡಿಟ್ ಕಾರ್ಡ್ ಗಳನ್ನು ಯಾವುದೇ ಬ್ಯಾಂಕ್ ಖಾತೆಯೊಂದಿಗೆ ಸಂಪರ್ಕ ಕಲ್ಪಿಸದೆ ವಿತರಿಸಲಾಗುತ್ತದೆ.
- ನಮ್ಮ ರುಪೇ ಕಾರ್ಡ್ ನಾಲ್ಕು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇವುಗಳಲ್ಲಿ ಸಿಂಗಾಪುರ, ಯುಎಇ, ಭೂತಾನ್ ಮತ್ತು ನೇಪಾಳ ಸೇರಿವೆ. ಪಶುಪತಿನಾಥ, ಲುಂಬಿನಿ, ಜನಕಪುರ ಮತ್ತು ಮನ್‌ಕಾಮನಾ ಸೇರಿದಂತೆ ಅನೇಕ ಸ್ಥಳಗಳಲ್ಲಿ ನೇಪಾಳದಲ್ಲಿ ಒಂದು ಸಾವಿರ ಯಂತ್ರಗಳನ್ನು ಸ್ಥಾಪಿಸಲಾಗಿದೆ.




**70** ಕೋಟಿ ಭಾರತೀಯರು ರುಪೇ ಕಾರ್ಡ್ ಗಳನ್ನು ಹೊಂದಿದ್ದಾರೆ.

# ಜ್ಞಾನ ಮತ್ತು ಪ್ರೋತ್ಸಾಹಕ ಯೋಜನೆಗಳು

## ರಾಷ್ಟ್ರೀಯ ಜ್ಞಾನ ಜಾಲ

- ಸಂಪನ್ಮೂಲ ಹಂಚಿಕೆ ಮತ್ತು ಸಹಯೋಗದ ಸಂಶೋಧನೆಯನ್ನು ಉತ್ತೇಜಿಸಲು ಎಲ್ಲಾ ಜ್ಞಾನ ಸಂಸ್ಥೆಗಳನ್ನು ಹೈ-ಸ್ಪೀಡ್ ದತ್ತಾಂಶ ಪ್ರಸರಣಗಳೊಂದಿಗೆ ಸಂಪರ್ಕ ಕಲ್ಪಿಸುವುದು ರಾಷ್ಟ್ರೀಯ ಜ್ಞಾನ ಜಾಲದ ಗುರಿಯಾಗಿದೆ. ಫೆಬ್ರವರಿ 20, 2022 ರವರೆಗೆ 1752 ಸಂಪರ್ಕ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲ, ಎನ್‌ಐಸಿ ಜಿಲ್ಲಾ ಕೇಂದ್ರಗಳೊಂದಿಗೆ 522 ರಾಷ್ಟ್ರೀಯ ಜ್ಞಾನ ಜಾಲದ ಸಂಪರ್ಕಗಳು ದೇಶಾದ್ಯಂತ ಹರಡಿವೆ.

## ಸೈಬರ್ ಭದ್ರತೆ

- ಅಂತಾರಾಷ್ಟ್ರೀಯ ದೂರಸಂಪರ್ಕ ಸಂಸ್ಥೆ ಬಿಡುಗಡೆ ಮಾಡಿದ ಜಾಗತಿಕ ಸೈಬರ್ ಭದ್ರತಾ ಸೂಚ್ಯಂಕ -2020ರ ಪ್ರಮುಖ ಭದ್ರತಾ ನಿಯತಾಂಕಗಳಲ್ಲಿ ಭಾರತವು ಅಗ್ರ 10 ದೇಶಗಳಲ್ಲಿ ಸ್ಥಾನ ಪಡೆದಿದೆ. ರಾಷ್ಟ್ರೀಯ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್ ನಲ್ಲಿ ಸೈಬರ್ ವಂಚನೆಯ ದೂರನ್ನು ದಾಖಲಿಸಲು ಗೃಹ ವ್ಯವಹಾರಗಳ ಸಚಿವಾಲಯವು ಉಚಿತ ಕರೆ ಸಂಖ್ಯೆ 1930 ಅನ್ನು ಬಿಡುಗಡೆ ಮಾಡಿದೆ.

## ಬಿಪಿಒ ಪ್ರೋತ್ಸಾಹಕ ಯೋಜನೆ

- ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ಸಣ್ಣ ಪಟ್ಟಣಗಳಲ್ಲಿ ಬಿಪಿಒ ಕಾರ್ಯಾಚರಣೆಗಳಿಗಾಗಿ ಬಿಪಿಒ ಪ್ರೋತ್ಸಾಹನ್ ಯೋಜನೆ ಮತ್ತು ಈಶಾನ್ಯ ಪ್ರೋತ್ಸಾಹನ್ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಎರಡೂ ಯೋಜನೆಗಳ ಅಡಿಯಲ್ಲಿ, ಕಾರ್ಯಾಚರಣೆಗಳನ್ನು ಆರಂಭಿಸಲು ಅರ್ಹ ಸಂಸ್ಥೆಗಳಿಗೆ 61,208 ಸೀಟುಗಳನ್ನು ಹಂಚಿಕೆ ಮಾಡಲಾಗಿದೆ.

## ಡಿಜಿಟಲ್ ಇಂಡಿಯಾದ ಭವಿಷ್ಯದ ಗುರಿಗಳಲ್ಲಿ ಡಿಜಿಟಲ್ ಕರೆನ್ಸಿ, ಇ-ಪಾಸ್ ಪೋರ್ಟ್ ಗಳೂ ಸೇರಿವೆ,...

ಡಿಜಿಟಲ್ ಕರೆನ್ಸಿ: ಭಾರತೀಯ ರಿಸರ್ವ್ ಬ್ಯಾಂಕ್ ಪ್ರಸ್ತುತ ಕೇಂದ್ರೀಯ ಬ್ಯಾಂಕ್ ಡಿಜಿಟಲ್ ಕರೆನ್ಸಿ, ಡಿಜಿಟಲ್ ರೂಪಾಯಿಯನ್ನು ಪ್ರಾರಂಭಿಸಲು ಹಂತಹಂತವಾಗಿ ಅನುಷ್ಠಾನ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸುತ್ತಿದೆ. ಯಾವುದೇ ಅನಾನುಕೂಲತೆಯನ್ನು ಉಂಟುಮಾಡದೆ ಕಾರ್ಯಗತಗೊಳಿಸಬಹುದಾದ ಬಳಕೆಯ ಉಪ-ವಿಧಾನಗಳನ್ನು ಪರಿಶೀಲಿಸಲಾಗುತ್ತಿದೆ. ಇದು ಡಿಜಿಟಲ್ ಅಥವಾ ನಗದುರಹಿತ ಆರ್ಥಿಕತೆಯಾಗಿ ಭಾರತದ ಪರಿವರ್ತನೆಗೆ ಸಹಾಯ ಮಾಡುತ್ತದೆ. ನಗದು ಬಳಕೆ ಕಡಿಮೆಯಾಗುತ್ತದೆ, ವಹಿವಾಟು ವೆಚ್ಚಗಳು ಇಳಿಯುತ್ತವೆ, ಮತ್ತು ಡಿಜಿಟಲ್, ಆನ್ಲೈನ್ ಮತ್ತು ಚಿಲ್ಲರೆ ಪಾವತಿ ಹೆಚ್ಚು ಸುರಕ್ಷಿತ ಮತ್ತು ಅಪಾಯ-ಮುಕ್ತವಾಗುತ್ತದೆ. ಇದು ಜಾಗತಿಕ ಡಿಜಿಟಲ್ ಪಾವತಿ ವ್ಯವಸ್ಥೆಯ ಅಭಿವೃದ್ಧಿಯನ್ನು ಸುಗಮಗೊಳಿಸುತ್ತದೆ.

### ಈ ವರ್ಷ 5ಜಿ ಬಿಡುಗಡೆ

ಮೇ 2021 ರಲ್ಲಿ, ದೂರಸಂಪರ್ಕ ಇಲಾಖೆಯು ಕಂಪನಿಗಳಿಂದ ಸ್ವೀಕರಿಸಿದ ಅರ್ಜಿಗಳ ಆಧಾರದ ಮೇಲೆ ಒಂದು ವರ್ಷದವರೆಗೆ 5 ಜಿ ತಂತ್ರಜ್ಞಾನವನ್ನು ಪರೀಕ್ಷಿಸಲು ಅನುಮತಿ ನೀಡಲಾಗಿದೆ. 2022 ರಲ್ಲಿಯೇ 5 ಜಿ ನೆಟ್ವರ್ಕ್ ಅನ್ನು ಕ್ರಮೇಣ ಪ್ರಾರಂಭಿಸುವ ಯೋಜನೆ ಇದೆ.

### ಅನಿಮೇಷನ್ ಮತ್ತು ಗೇಮಿಂಗ್ ವಲಯಕ್ಕೂ ಪ್ರವೇಶ

ಅನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ (ಎವಿಜಿಸಿ) ಮೇಲೆ ಕೆಲಸ ಮಾಡುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಜನರನ್ನು ಆಗ್ರಹಿಸುತ್ತಿದ್ದಾರೆ. ಭಾರತವನ್ನು ಗೇಮ್ ಉತ್ಪಾದಕ ಮತ್ತು ಗೇಮಿಂಗ್ ಸೇವೆಗಳ ಜಾಗತಿಕ ಕೇಂದ್ರವನ್ನಾಗಿ ಮಾಡಲು ಪ್ರಸಕ್ತ ಹಣಕಾಸು ವರ್ಷದ ಬಜೆಟ್ ನಲ್ಲಿ ಕಾರ್ಯಪಡೆಯನ್ನು ಘೋಷಿಸಲಾಗಿದೆ.

### ಇ-ಪಾಸ್ ಪೋರ್ಟ್ ಸೇವೆ

ಪ್ರಸಕ್ತ ಹಣಕಾಸು ವರ್ಷದಲ್ಲಿ, ಸರ್ಕಾರವು ವ್ಯಕ್ತಿಗಳಿಗೆ ದಾಖಲೆಗಳು ಮತ್ತು ವಿದ್ಯುನ್ಮಾನ ಮಾಹಿತಿಯನ್ನು ಒಳಗೊಂಡ ಇ-ಪಾಸ್ ಪೋರ್ಟ್‌ಗಳನ್ನು ಜಂಟಿಯಾಗಿ ನೀಡಲು ಉದ್ದೇಶಿಸಿದೆ. ಇದು ಬ್ಯಾಕ್ ಕವರ್ ನಲ್ಲಿ ಸೇರಿಸಲಾದ ಆಂಟೆನಾ ಮತ್ತು ಅಂತರ್ಗತ ರೇಡಿಯೋ ಫ್ರೀಕ್ವೆನ್ಸಿ ಗುರುತಿನ (ಎಐಡಿ) ಚಿಪ್ ಅನ್ನು ಒಳಗೊಂಡಿರುತ್ತದೆ. ದತ್ತಾಂಶ ಪುಟವು ಪ್ರಮುಖ ಪಾಸ್ ಪೋರ್ಟ್ ಮಾಹಿತಿಯನ್ನು ಮುದ್ರಿಸುತ್ತದೆ, ಅದನ್ನು ಚಿಪ್ ನಲ್ಲಿ ದಾಖಲಿಸಲಾಗುತ್ತದೆ. ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯ ದಾಖಲೆಗೆ ಅನುಗುಣವಾಗಿ ದಾಖಲೆ ಮತ್ತು ಚಿಪ್ ನ ಗುಣಲಕ್ಷಣಗಳನ್ನು ಅಭಿವೃದ್ಧಿಪಡಿಸಲಾಗುವುದು. ನಾಸಿಕ್ ನ ಇಂಡಿಯಾ ಸೆಕ್ಯುರಿಟಿ ಪ್ರೆಸ್ ಈ ಇ-ಪಾಸ್ ಪೋರ್ಟ್ ಅನ್ನು ಉತ್ಪಾದಿಸಲಿದ್ದು, ಇದು ಆಪರೇಟಿಂಗ್ ಸಿಸ್ಟಂ ಸೇರಿದಂತೆ 45 ಕೋಟಿ ಎಲೆಕ್ಟ್ರಾನಿಕ್ ಚಿಪ್ ಗಳ ಖರೀದಿಯನ್ನು ಪ್ರಾರಂಭಿಸಿದೆ. ಇ-ಪಾಸ್ ಪೋರ್ಟ್ ಅನ್ನು ಅಂತಾರಾಷ್ಟ್ರೀಯ ಅತ್ಯುತ್ತಮ ರೂಢಿಗಳಿಗೆ ಅನುಗುಣವಾಗಿ ಜಾರಿಗೆ ತರಲಾಗುವುದು.

### 75 ಡಿಜಿಟಲ್ ಬ್ಯಾಂಕ್ ಘಟಕಗಳ ಪ್ರಾರಂಭ.

ಡಿಜಿಟಲ್ ಬ್ಯಾಂಕಿಂಗ್ ಅನ್ನು ಉತ್ತೇಜಿಸಲು ದೇಶಾದ್ಯಂತ 75 ಪ್ರದೇಶಗಳಲ್ಲಿ ಡಿಜಿಟಲ್ ಬ್ಯಾಂಕುಗಳನ್ನು ಸ್ಥಾಪಿಸಲಾಗುವುದು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಸಕ್ತ ಹಣಕಾಸು ವರ್ಷದ ತಮ್ಮ ಬಜೆಟ್ ನಲ್ಲಿ ಇದನ್ನು ಪ್ರಕಟಿಸಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ ಡಿಜಿಟಲ್ ಬ್ಯಾಂಕಿಂಗ್ ಸ್ಥಾಪಿಸಲು ಸೂಚನೆಗಳನ್ನು ಸಹ ಒದಗಿಸಿದೆ. ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ಭೌತಿಕ ಬ್ಯಾಂಕಿಂಗ್ ತಾಣಗಳಾಗಿ ಪರಿಗಣಿಸಲಾಗುತ್ತದೆ.



ಬುಡಕಟ್ಟು-ಅಲ್ಪಸಂಖ್ಯಾತರ ಅಭಿವೃದ್ಧಿ

# ದೇಶದ ಸಂಪನ್ಮೂಲಗಳ ಮೇಲೆ ಎಲ್ಲರಿಗೂ ಸಮಾನ ಹಕ್ಕು

ಪ್ರತಿಯೊಂದು ದೇಶದ ಪ್ರಗತಿಯಲ್ಲಿ ಜನರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು, ಸಮಾಜದ ಎಲ್ಲಾ ವರ್ಗಗಳು ದೇಶದ ಸಂಪನ್ಮೂಲಗಳಿಗೆ ಸಮಾನ ಅವಕಾಶ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು 2014 ರಿಂದ ಅನೇಕ ದೀರ್ಘಕಾಲೀನ ಕಾರ್ಯತಂತ್ರಗಳನ್ನು ಪ್ರಾರಂಭಿಸಲಾಯಿತು. ಜನರ ಜೀವನವನ್ನು ಸುಧಾರಿಸುವ ಕೇಂದ್ರ ಸರ್ಕಾರದ ಎಲ್ಲಾ ಯೋಜನೆಗಳಲ್ಲಿ ಮತ್ತು ಬಡವರು ಹಾಗೂ ಹಿಂದುಳಿದವರಿಗಾಗಿ ರೂಪಿಸಲಾದ ನಿರ್ದಿಷ್ಟ ಯೋಜನೆಗಳಲ್ಲಿಯೂ ಅವುಗಳನ್ನು ಸೇರಿಸಲಾಗಿದೆ. ಈ ಕಾರಣಕ್ಕಾಗಿಯೇ, ದಶಕಗಳಿಂದ, ದೂರದ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನರಲ್ಲಿ ಅಥವಾ ದೇಶದ ಎಲ್ಲ ಭಾಗದಲ್ಲಿರುವ ಅಲ್ಪಸಂಖ್ಯಾತ ಜನಸಂಖ್ಯೆಗೂ ಯಾವುದೇ ಪೂರ್ವಗ್ರಹವಿಲ್ಲದೆ ಯೋಜನೆ ರೂಪಿಸಲಾಗಿದೆ. ಏಕೆಂದರೆ ಪ್ರತಿಯೊಬ್ಬರೂ ದೇಶದ ಸಂಪನ್ಮೂಲಗಳಿಗೆ ಸಮಾನ ಅವಕಾಶವನ್ನು ಹೊಂದಿದ್ದಾರೆ.

**ಬುಡಕಟ್ಟುಗಳ ಸಮುದಾಯ ಸಬಲೀಕರಣ, ರಾಷ್ಟ್ರದ ಸಶಕ್ತೀಕರಣ**

ಪರಿಶಿಷ್ಟ ಪಂಗಡಗಳು (ಎಸ್ಟಿ) ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ 8.6 ರಷ್ಟಿದ್ದಾರೆ, ಅಥವಾ ಸುಮಾರು 10.4 ಕೋಟಿ ಜನರಿದ್ದಾರೆ. ಭಾರತದ ಸಂವಿಧಾನದ ಅನುಚ್ಛೇದ 342 ರ ಅಡಿಯಲ್ಲಿ ಅಧಿಸೂಚಿತ ಪರಿಶಿಷ್ಟ ಪಂಗಡಗಳ ಸಂಖ್ಯೆ 705 ಕ್ಕಿಂತ ಹೆಚ್ಚಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ "ಎಲ್ಲರೊಂದಿಗೆ ಎಲ್ಲರ ವಿಕಾಸ, ಎಲ್ಲರ ವಿಶ್ವಾಸ ಮತ್ತು ಎಲ್ಲರ ಪ್ರಯತ್ನ" ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡು, ಸಮಾಜದ ಎಲ್ಲಾ ವರ್ಗಗಳ ಸಮಾನ ಅಭಿವೃದ್ಧಿಯ ಬಗ್ಗೆ ನಿರಂತರವಾಗಿ ಶ್ರಮಿಸಲಾಗುತ್ತಿದೆ. ಈ ಬೆಳವಣಿಗೆಯಲ್ಲಿ, ಕೇಂದ್ರ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿ ಮತ್ತು ಅವರ ಪರಂಪರೆ ಮತ್ತು ಸಂಸ್ಕೃತಿಯ ರಕ್ಷಣೆಗೆ ಆದ್ಯತೆ ನೀಡಿದೆ ಮತ್ತು ಹೆಚ್ಚಿನ ಬದ್ಧತೆಯೊಂದಿಗೆ, ಪ್ರಗತಿಯ ಹೊಸ ಮಾರ್ಗವನ್ನು ಸಕ್ರಿಯಗೊಳಿಸಲಾಗಿದೆ.




## ದುಪ್ಪಟ್ಟಿಗಿಂತ ಹೆಚ್ಚು ಬಜೆಟ್

ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ (ಇಎಂಆರ್.ಎಸ್) ಮತ್ತಷ್ಟು ಉತ್ತೇಜನ ನೀಡಲು, 2026 ರ ವೇಳೆಗೆ ಶೇ.50ಕ್ಕಿಂತ ಹೆಚ್ಚು ಎಸ್ಟಿ ಜನಸಂಖ್ಯೆ ಮತ್ತು ಕನಿಷ್ಠ 20,000 ಬುಡಕಟ್ಟು ಜನರನ್ನು ಹೊಂದಿರುವ ಪ್ರತಿ ವಿಭಾಗದಲ್ಲಿ 740 ಏಕಲವ್ಯ ಮಾದರಿ ಶಾಲೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಬುಡಕಟ್ಟುಗಳ ಅಭಿವೃದ್ಧಿಯ ಬಗ್ಗೆ ಸರ್ಕಾರದ ಚಿಂತನೆಯ ಪರಿಣಾಮವಾಗಿ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಬಜೆಟ್ 2014-15 ರಲ್ಲಿದ್ದ 3850 ಕೋಟಿ ರೂ.ಗಳಿಂದ 2022-23 ರಲ್ಲಿ 8407 ಕೋಟಿ ರೂ.ಗೆ ಏರಿದೆ.

## ಬುಡಕಟ್ಟು ಹೆಮ್ಮೆಯ ದಿನ

ನವೆಂಬರ್ 15 ನ್ನು ಬುಡಕಟ್ಟು ಹೆಮ್ಮೆಯ ದಿನವೆಂದು ಘೋಷಿಸಲಾಗಿದೆ, ಈ ದಿನ ಬುಡಕಟ್ಟು ಜನರ ಗೌರವಾನ್ವಿತ ದೇವರು ಬಿರ್ಸಾ ಮುಂಡಾ ಅವರ ಜನ್ಮದಿನವಾಗಿದೆ.

## ಬುಡಕಟ್ಟು ವಸ್ತುಸಂಗ್ರಹಾಲಯ

ದೇಶಾದ್ಯಂತ 10 ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯಗಳು ನಿರ್ಮಾಣವಾಗುತ್ತಿವೆ. ಇದರಲ್ಲಿ, ಬುಡಕಟ್ಟು ಜನರು ತಮ್ಮ ಕಾಡುಗಳು, ಭೂಮಿಯ ಹಕ್ಕುಗಳು ಮತ್ತು ಸಂಸ್ಕೃತಿಯನ್ನು ರಕ್ಷಿಸಲು ನಡೆಸಿದ ಹೋರಾಟ ಮತ್ತು ಅವರ ಶೌರ್ಯ ತ್ಯಾಗ ಬಿಂಬಿಸಲಾಗುತ್ತಿದೆ, ಇದು ರಾಷ್ಟ್ರ ನಿರ್ಮಾಣಕ್ಕೆ ಮುಖ್ಯವಾಗಿದೆ. ಈ ವಸ್ತುಸಂಗ್ರಹಾಲಯಗಳು ಗುಜರಾತ್, ಜಾರ್ಖಂಡ್, ಆಂಧ್ರಪ್ರದೇಶ, ಛತ್ತೀಸ್ ಗಢ, ಕೇರಳ, ಮಧ್ಯಪ್ರದೇಶ, ತೆಲಂಗಾಣ, ಮಣಿಪುರ, ಮಿಜೋರಾಂ ಮತ್ತು ಗೋವಾದಲ್ಲಿವೆ.

## ಏಕಲವ್ಯ ಮಾದರಿ ಶಾಲೆ

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಆಜಾದಿ ಕಾ ಅಮೃತ ಮಹೋತ್ಸವದ ಅಡಿಯಲ್ಲಿ ಬುಡಕಟ್ಟು ಹೆಮ್ಮೆಯ ದಿನದ ಸಂದರ್ಭದಲ್ಲಿ 27 ಜಿಲ್ಲೆಗಳಲ್ಲಿ 50 ಹೊಸ ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ ಶಿಲಾನ್ಯಾಸ ನೆರವೇರಿಸಿದರು. ■

## ಬುಡಕಟ್ಟು ಸಂಶೋಧನಾ ಸಂಸ್ಥೆ

2014ರಿಂದೀಚೆಗೆ ದೇಶದಲ್ಲಿ 10 ಬುಡಕಟ್ಟು ಸಂಶೋಧನಾ ಸಂಸ್ಥೆಗಳಿಗೆ ಅನುಮೋದನೆ ನೀಡಲಾಗಿದೆ. ಆಂಧ್ರಪ್ರದೇಶ, ಉತ್ತರಾಖಂಡ, ಕರ್ನಾಟಕ, ಅರುಣಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ಮೇಘಾಲಯ ಮತ್ತು ಗೋವಾದಲ್ಲಿ ಈ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತಿದೆ. ಈ ಪೈಕಿ ಮೂರು ಸಂಸ್ಥೆಗಳ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದವುಗಳ ಕಾಮಗಾರಿ ಪ್ರಗತಿಯಲ್ಲಿದೆ.



# ಏಕಲವ್ಯ ಮಾದರಿ ಹಗಲು ವಸತಿ ಶಾಲೆ (ಇ.ಎಂ.ಡಿ.ಬಿ.ಎಸ್)



- ಆಯ್ದ ಉಪ-ಜಿಲ್ಲೆಗಳಲ್ಲಿ ಎಸ್ಟಿ ಜನಸಂಖ್ಯೆಯು ಶೇ.90 ಅಥವಾ ಅದಕ್ಕಿಂತ ಹೆಚ್ಚು ಇರುವ ಕಡೆ ವಸತಿ ಸೌಲಭ್ಯವಿಲ್ಲದ ಶಾಲೆಯನ್ನು ಪಡೆಯಲು ಬಯಸುವ ಎಸ್ಟಿ ವಿದ್ಯಾರ್ಥಿಗಳಿಗಾಗಿ ಪ್ರಾಯೋಗಿಕ ಆಧಾರದ ಮೇಲೆ ಏಕಲವ್ಯ ಮಾದರಿ ಹಗಲು ವಸತಿ ಶಾಲೆ (ಇಎಂಡಿಬಿಎಸ್) ಸ್ಥಾಪಿಸಲು ಉದ್ದೇಶಿಸಲಾಗಿದೆ.
- ಬುಡಕಟ್ಟು ವ್ಯವಹಾರಗಳ ಸಚಿವಾಲಯ ಮತ್ತು ಸಿಬಿಎಸ್‌ಇ ಜಂಟಿಯಾಗಿ ಇಎಂಆರ್.ಎಸ್ ಮತ್ತು ಸಿಬಿಎಸ್‌ಇ ಶಿಕ್ಷಕರಿಗೆ 21 ನೇ ಶತಮಾನದ ಪ್ರಾಯೋಗಿಕ ಶಿಕ್ಷಣದ ಆನ್ ಲೈನ್ ಪ್ರಮಾಣಪತ್ರ ಕೋರ್ಸ್ ಅನ್ನು ಪ್ರಾರಂಭಿಸಿವೆ.
- ಇಎಂಆರ್.ಎಸ್ ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ಸಾಮರ್ಥ್ಯ ವರ್ಧನೆ ಕಾರ್ಯಕ್ರಮಗಳಿಗಾಗಿ, ಬುಡಕಟ್ಟು ವ್ಯವಹಾರಗಳ ಸಚಿವಾಲಯ ಮತ್ತು ಎನ್.ಸಿ.ಇ.ಆರ್.ಟಿ. ಒಗ್ಗೂಡಿವೆ.
- ಎಲ್ಲಾ ರೀತಿಯ ವಿದ್ಯಾರ್ಥಿವೇತನಗಳು ಸೇರಿದಂತೆ, 30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 2500 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತವನ್ನು ವಿದ್ಯಾರ್ಥಿವೇತನವಾಗಿ ನೀಡಲಾಗುತ್ತಿದೆ.
- ಪ್ರತಿ ವರ್ಷ, ಐಐಟಿ, ಐಐಎಂ ಮತ್ತು ಏಮ್ಸ್ ನಂತಹ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಒಂದು ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.



## ನಾಯಕರಂತೆ ಆನ್ ಲೈನ್ ನತ್ತ ಸಾಗುವುದು

ಜಿ.ಓ.ಎ.ಎಲ್. -ಗೋಲ್ (ನಾಯಕರಂತೆ ಆನ್ ಲೈನ್ ನತ್ತ ಸಾಗುವುದು) ಎಂಬುದು ಡಿಜಿಟಲ್ ಸಕ್ರಿಯ ಮಾರ್ಗದರ್ಶನವನ್ನು ಒದಗಿಸಲು ಮತ್ತು ಬುಡಕಟ್ಟು ಯುವಕರನ್ನು ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ನಾಯಕರಾಗಲು ಸಶಕ್ತಗೊಳಿಸಲು ಫೇಸ್ಬುಕ್ ನೊಂದಿಗೆ - ಸಚಿವಾಲಯದ ಜಂಟಿ ಉಪಕ್ರಮವಾಗಿದೆ. ಇಲ್ಲಿಯವರೆಗೆ, 23 ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳನ್ನು ಗೋಲ್ (ಗೋಯಿಂಗ್ ಆನ್ ಲೈನ್ ಆಸ್ ಲೀಡರ್ಸ್) ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.



## ಭಾರತದ ಬುಡಕಟ್ಟುಗಳು: ಆದಿ ಮಹೋತ್ಸವ

- ಆದಿ ಮಹೋತ್ಸವವು ಒಂದು ವರ್ಣರಂಜಿತ ಪುಟ್ಟ ಭಾರತವೇ ಆಗಿದೆ. ಅಲ್ಲಿ ಬುಡಕಟ್ಟು ಕುಶಲಕರ್ಮಿಗಳಾದ ನೇಕಾರರು, ಕುಂಬಾರರು, ಕೈಗೊಂಬೆ ತಯಾರಕರು ಮತ್ತು ಕಸೂತಿ ಮಾಡುವವರ ಸೊಗಸಾದ ಕರಕುಶಲ ಸಂಪ್ರದಾಯಗಳು ಒಂದೇ ಸ್ಥಳದಲ್ಲಿವೆ.
- ಬುಡಕಟ್ಟು ವ್ಯವಹಾರಗಳ ಸಚಿವಾಲಯ ಮತ್ತು ಗೋವಾ ಸರ್ಕಾರ ಜಂಟಿಯಾಗಿ ವಲಸೆ ಕಾರ್ಮಿಕರು ಮತ್ತು ಬುಡಕಟ್ಟು ವಲಸಿಗರಿಗಾಗಿ ಮಾನವ ಸಂಪನ್ಮೂಲ ಡಿಜಿಟಲ್ ದತ್ತಾಂಶ ಪರಿಹಾರವನ್ನು ಪ್ರಾರಂಭಿಸಿವೆ
- ಜೂನ್ 19, 2021 ರಂದು, ವಿಶ್ವ ಸಿಕಲ್ ಸೆಲ್ ರೋಗ ದಿನದ ಸಂದರ್ಭದಲ್ಲಿ ಭಾರತದಲ್ಲಿ ಸಿಕಲ್ ರೋಗದ 2 ನೇ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಸಿಕಲ್ ಸೆಲ್ ರೋಗವನ್ನು ತೊಡೆದುಹಾಕಲು ಉನ್ಮುಕ್ತ್ ಯೋಜನೆಯನ್ನು ಪ್ರಾರಂಭಿಸಲಾಯಿತು.
- ಬುಡಕಟ್ಟು ಆರೋಗ್ಯ ಸಹಯೋಗ 'ಅನಾಮಯ್': ಬುಡಕಟ್ಟು ಜನರ ಆರೋಗ್ಯ ಮತ್ತು ಪೋಷಣೆಯನ್ನು ಹೆಚ್ಚಿಸಲು ಹಲವು ಭಾಗಿದಾರರನ್ನು ಒಳಗೊಂಡ ಉಪಕ್ರಮವನ್ನು ಪ್ರಾರಂಭಿಸಲಾಗಿದೆ.

# ಬುಡಕಟ್ಟು ಉತ್ಪನ್ನಗಳ ಅಭಿವೃದ್ಧಿ ಮತ್ತು ಮಾರಾಟಕ್ಕೆ ಸಾಂಸ್ಥಿಕ ಬೆಂಬಲ

- ಈ ಯೋಜನೆಯಡಿ, ಟ್ರೈಫೆಡ್ ತನ್ನದೇ ಆದ ಪೋರ್ಟಲ್, www.tribesindia.com ಮತ್ತು ಅಮೆಜಾನ್, ಸ್ನ್ಯಾಪ್ ಡೀಲ್, ಫ್ಲಿಪ್ಕಾರ್ಟ್, ಪೇಟಿಎಂ ಮತ್ತು ಜಿಇಎಂನಂತಹ ಎಲ್ಲಾ ಪ್ರಮುಖ ಇ-ಕಾಮರ್ಸ್ ಪೋರ್ಟಲ್ ಗಳಲ್ಲಿ ಬುಡಕಟ್ಟು ಉತ್ಪನ್ನಗಳ ಇ-ವಾಣಿಜ್ಯ ಮಾರಾಟವನ್ನು ಉತ್ತೇಜಿಸುತ್ತಿದೆ.
- ಟ್ರೈಫೆಡ್ನ ಆನ್‌ಲೈನ್ ಪೋರ್ಟಲ್ ನಲ್ಲಿ 1,25,000 ಕುಶಲಕರ್ಮಿ ಕುಟುಂಬಗಳು ಸಂಪರ್ಕ ಹೊಂದಿವೆ. 100,000 ಕ್ಕೂ ಹೆಚ್ಚು ಉತ್ಪನ್ನಗಳು ಇಲ್ಲಿವೆ.
- ಅಕ್ಟೋಬರ್ 30, 2021 ರವರೆಗೆ ಟ್ರೈಫೆಡ್ ದೇಶಾದ್ಯಂತ 145 ಮಳಿಗೆಗಳ ಜಾಲವನ್ನು ಸ್ಥಾಪಿಸಿದೆ, ಇದರಲ್ಲಿ 97 ಸ್ವಂತ ಮಾರಾಟ ಮಳಿಗೆಗಳು, ಸರಕು ಮಾರಾಟದಲ್ಲಿ 33 ಚಿಲ್ಲರೆ ಮಾರಾಟ ಮಳಿಗೆಗಳು ಮತ್ತು 15 ಫ್ರ್ಯಾಂಚೈಸಿ ಮಳಿಗೆಗಳೂ ಸೇರಿವೆ.

## ವನ್ ಧನ್ ವಿಕಾಸ್ ಯೋಜನೆ

- ಎಂ.ಎಫ್.ಪಿ.ಗಾಗಿ ಎಂ.ಎಸ್.ಪಿ." ಯೋಜನೆಯಡಿ, ಸ್ಥಳೀಯ ಅರಣ್ಯ ಉತ್ಪನ್ನ ಕ್ಲಸ್ಟರ್ ಗಳು (ವಿಡಿವಿಕೆಸಿಗಳು) ಸ್ಥಳೀಯವಾಗಿ ಲಭ್ಯವಿರುವ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಮೌಲ್ಯವರ್ಧಿತ ಸಂಗ್ರಹಣೆಗಾಗಿ ಸಾಮಾನ್ಯ ಸೌಲಭ್ಯ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ.
- ವನ್ ಧನ್ ವಿಕಾಸ್ ಕೇಂದ್ರ ಕ್ಲಸ್ಟರ್ (ವಿಡಿವಿಕೆಸಿ) ಸ್ಥಾಪನೆಗಾಗಿ, ಕಳೆದ ಮೂರು ವರ್ಷಗಳಲ್ಲಿ ಒಟ್ಟು 254.64 ಕೋಟಿ ರೂ.ಗಳನ್ನು ಟ್ರೈಫೆಡ್ ಗೆ ಬಿಡುಗಡೆ ಮಾಡಲಾಗಿದೆ.
- 2019-20ರಲ್ಲಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ, 3110 ವಿಡಿವಿಕೆಸಿಗಳನ್ನು ಮಂಜೂರು ಮಾಡಲಾಗಿದ್ದು, 52,000 ಕ್ಕೂ ಹೆಚ್ಚು ಎಸ್.ಎಚ್.ಜಿ. ಗಳ 9.28 ಲಕ್ಷ ಎಂ.ಎಫ್.ಪಿ. ಸಂಗ್ರಾಹಕರಿಗೆ ಪ್ರಯೋಜನವಾಗಿದೆ.



## ಕಿರು ಅರಣ್ಯ ಉತ್ಪನ್ನಗಳು

ಬಹುತೇಕ ಕಿರು ಅರಣ್ಯ ಉತ್ಪನ್ನಗಳಿಗೆ (ಎಂಎಫ್.ಪಿ.) ಎಂಎಸ್.ಪಿ.ಯನ್ನು ಹೆಚ್ಚಿಸಲಾಗಿದೆ. 2020-21 ರಿಂದ ಎಂಎಸ್.ಪಿ. ಯೋಜನೆಯಡಿ 37 ಹೊಸ ಎಂ.ಎಸ್. ಪಿ.ವಸ್ತುಗಳನ್ನು ತರಲಾಗಿದೆ. 2020-21ರಲ್ಲಿ ಎಂಎಸ್.ಪಿ. ಯೋಜನೆಯಡಿ ಎಂಎಫ್.ಪಿ.ಗಳ ಸಂಖ್ಯೆ 50 ರಿಂದ 87 ಕ್ಕೆ ಏರಿದೆ. ಎಂ.ಎಫ್.ಪಿ.ಗಳಿಗೆ ಎಂ.ಎಸ್.ಪಿ. ಯೋಜನೆ ಜಾರಿಯಾದಾಗಿನಿಂದ ಭಾರತ ಸರ್ಕಾರದ ನಿಧಿಯಿಂದ ರಾಜ್ಯಗಳ ಮೂಲಕ 317.89 ಕೋಟಿ ರೂ.ಗಳ ಮೌಲ್ಯದ ಎಂ.ಎಫ್.ಪಿ.ಗಳನ್ನು ಎಂ.ಎಸ್.ಪಿ.ಯಲ್ಲಿ ಖರೀದಿಸಲಾಗಿದೆ.

## ಎನ್.ಎಸ್.ಟಿ.ಎಫ್.ಡಿ.ಸಿ. / ಎಸ್.ಟಿ.ಎಫ್.ಡಿ.ಸಿ.ಗಾಗಿ ಈಕ್ವಿಟಿ ಬೆಂಬಲ



- ತನ್ನ ಅನುಷ್ಠಾನ ಸಂಸ್ಥೆಗಳ ಮೂಲಕ, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್ಎಸ್.ಟಿ.ಎಫ್.ಡಿ.ಸಿ) ಅರ್ಹ ಎಸ್ಟಿ ಜನರಿಗೆ ಯಾವುದೇ ಆದಾಯ ಉತ್ಪಾದಿಸುವ ಚಟುವಟಿಕೆಗಳು ಅಥವಾ ಸ್ವ-ಉದ್ಯೋಗಕ್ಕಾಗಿ ರಿಯಾಯಿತಿ ಸಾಲಗಳನ್ನು ಒದಗಿಸುತ್ತದೆ.
- ಕಳೆದ ಮೂರು ವರ್ಷಗಳಲ್ಲಿ (2019-20 ರಿಂದ 30.11.2021 ರವರೆಗೆ) ಎನ್ಎಸ್ಟಿಎಫ್ಡಿಸಿ ತನ್ನ ಐದು ಯೋಜನೆಗಳ ಅಡಿಯಲ್ಲಿ 4.04 ಲಕ್ಷ ಬುಡಕಟ್ಟು ಫಲಾನುಭವಿಗಳಿಗೆ 748.75 ಕೋಟಿ ರೂ.ಗಳನ್ನು ವಿತರಿಸಲಾಗಿದೆ.
- ಎನ್ಎಸ್ಟಿಎಫ್ಡಿಸಿ ಮತ್ತು ಕೆವಿಐಸಿ ಪಿಎಂಇಜಿಪಿ ಉಪಕ್ರಮದ ಅನುಷ್ಠಾನ ಏಜೆನ್ಸಿಯಾಗಿ ಒಟ್ಟಾಗಿ ಕೆಲಸ ಮಾಡಲು ಒಪ್ಪಿಕೊಂಡಿವೆ. ಈ ಒಡಂಬಡಿಕೆಯ ಗುರಿ ಬ್ಯಾಂಕುಗಳು ಮತ್ತು ಎಸ್ಸಿಎಗಳ ಮೂಲಕ ಕಡಿಮೆ ಬಡ್ಡಿದರದ ಸಾಲಗಳನ್ನು ಬುಡಕಟ್ಟು ಉದ್ಯಮಿಗಳಿಗೆ ಒದಗಿಸಿ ಬೆಂಬಲಿಸುವುದಾಗಿದೆ, ಎಸ್ಟಿ ಫಲಾನುಭವಿಗಳು ಘಟಕ ವೆಚ್ಚದ 35 ಪ್ರತಿಶತದಷ್ಟು ಬ್ಯಾಕ್-ಎಂಡ್ ಸಬ್ಸಿಡಿಯನ್ನು ಪಡೆಯುತ್ತಾರೆ. ■



# ಅಲ್ಪಸಂಖ್ಯಾತರ ಪ್ರಗತಿಗೆ ವಿಪುಲ ಅವಕಾಶ



ದೇಶದ ಒಟ್ಟಾರೆ ಅಭ್ಯುದಯಕ್ಕಾಗಿ ಎಲ್ಲಾ ಹಂತಗಳಲ್ಲಿ ಅಭಿವೃದ್ಧಿ ಹೊಂದುವುದು ಅಗತ್ಯವಾಗಿದೆ. ಇಂದು, ಎಲ್ಲಾ ನಾಗರಿಕರೂ ಯಾವುದೇ ತಾರತಮ್ಯವಿಲ್ಲದೆ ದೇಶದ ಅಭಿವೃದ್ಧಿಯಿಂದ ಪ್ರಯೋಜನ ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳುವ ಗುರಿಯೊಂದಿಗೆ ದೇಶವು ಆ ನಿಟ್ಟಿನಲ್ಲಿ ಸಾಗುತ್ತಿದೆ. ಇಂದು, ದೇಶವು ಪ್ರತಿಯೊಬ್ಬ ನಾಗರಿಕನಿಗೂ ಸಂವಿಧಾನ ಖಾತರಿಪಡಿಸಿದ ಹಕ್ಕುಗಳು ಖಚಿತವಾಗಿರುವ ಮತ್ತು ಅವರ ಭವಿಷ್ಯದ ಬಗ್ಗೆ ಖಾತ್ರಿಪಡಿಸಿಕೊಳ್ಳುವ ಹಾದಿಯಲ್ಲಿದೆ. ಇಂದು, ದೇಶವು ಯಾರೂ ತಮ್ಮ ಧಾರ್ಮಿಕ ನಂಬಿಕೆಗಳ ವಿಚಾರದಲ್ಲಿ ಹಿಂದೆ ಬೀಳದಂತಹ ಹಾದಿಯಲ್ಲಿದೆ. ಪ್ರತಿಯೊಬ್ಬರೂ ತಮ್ಮ ಗುರಿಗಳನ್ನು ಸಾಧಿಸಲು ಅನುಕೂಲವಾಗುವಂತೆ ಮುನ್ನಡೆಯಲು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಬೇಕು. ಇಂದು, ದೇಶವು ಬಡವರಿಗಾಗಿ ಜಾರಿಗೆ ತರುತ್ತಿರುವ ಯೋಜನೆಗಳು ಯಾವುದೇ ಧರ್ಮದ ಭೇದವಿಲ್ಲದೆ ಪ್ರತಿಯೊಂದು ವರ್ಗವನ್ನೂ ತಲುಪುತ್ತಿವೆ.

### ವಕ್ಫ್ ಆಸ್ತಿಗಳ ಬಳಕೆ

ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದುರ್ಬಲ ವರ್ಗಗಳಿಗಾಗಿ ವಕ್ಫ್ ಭೂಮಿಯಲ್ಲಿ ಶಾಲೆಗಳು, ಕಾಲೇಜುಗಳು, ಆಸ್ಪತ್ರೆಗಳು, ಸಮುದಾಯ ಭವನಗಳು ಮತ್ತು ಇತರ ಮೂಲಸೌಕರ್ಯಗಳ ಅಭಿವೃದ್ಧಿಗೆ ಪ್ರಧಾನಮಂತ್ರಿ ಜನವಿಕಾಸ ಕಾರ್ಯಕ್ರಮ (ಪಿಎಂಜೆವಿಕೆ) ಮೂಲಕ ಸಂಪೂರ್ಣ ಧನಸಹಾಯ ಮಾಡುತ್ತಿದೆ. ಸುಮಾರು 74,875 ನೋಂದಾಯಿತ ವಕ್ಫ್ ಆಸ್ತಿಗಳಿವೆ. ಎಲ್ಲಾ ರಾಜ್ಯ ವಕ್ಫ್ ಮಂಡಳಿಗಳ ಡಿಜಿಟಲೀಕರಣ ಪೂರ್ಣಗೊಂಡಿದೆ. ಶೇ.95ಕ್ಕಿಂತ ಹೆಚ್ಚು ವಕ್ಫ್ ಆಸ್ತಿಗಳನ್ನು ನಕ್ಷೆ ಮಾಡಲು ಜಿಐಎಸ್ / ಜಿಪಿಎಸ್ ತಂತ್ರಜ್ಞಾನವನ್ನು ಬಳಸಲಾಗಿದೆ.

## ಶಿಕ್ಷಣದ ಮೂಲಕ ಸಬಲೀಕರಣ

- ಕಳೆದ ಎಂಟು ವರ್ಷಗಳಲ್ಲಿ ಆರು ಅಧಿಸೂಚಿತ ಅಲ್ಪಸಂಖ್ಯಾತ ಸಮುದಾಯಗಳ (ಪಾರ್ಸಿ, ಜೈನ, ಬೌದ್ಧ, ಸಿಖ್, ಕ್ರಿಶ್ಚಿಯನ್ ಮತ್ತು ಮುಸ್ಲಿಂ) ಸುಮಾರು 5 ಕೋಟಿ ಮತ್ತು 20 ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ, ಪ್ರತಿಭೆ ಆಧಾರಿತ ಮತ್ತು ಬೇಗಂ ಹಜರತ್ ಮಹಲ್ ಬಾಲಕಿಯರ ವಿದ್ಯಾರ್ಥಿವೇತನವನ್ನು ನೀಡಲಾಗಿದೆ. ಎಲ್ಲ ವಿದ್ಯಾರ್ಥಿವೇತನ ಪಡೆದವರಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳಾ ವಿದ್ಯಾರ್ಥಿಗಳಿದ್ದಾರೆ.
- **ಮುಸ್ಲಿಂ ವಿದ್ಯಾರ್ಥಿನಿಯರಲ್ಲಿ ಶಾಲೆಯಿಂದ ಹೊರಗುಳಿಯುವವರ ಪ್ರಮಾಣ ಇಳಿಮುಖ:** ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ಶೇ.70 ಕ್ಕೂ ಹೆಚ್ಚು ಮುಸ್ಲಿಂ ಬಾಲಕಿಯರು ಶಾಲೆಯಿಂದ ಹೊರಗುಳಿಯುತ್ತಿದ್ದರು. ಈ ರೀತಿಯ ಹೆಣ್ಣುಮಕ್ಕಳು ಶಾಲೆಯಿಂದ ಹೊರಗುಳಿಯುವುದು ಸದಾ ಮುಸ್ಲಿಂ ಸಮಾಜದ ಪ್ರಗತಿಗೆ ಪ್ರಮುಖ ಅಡ್ಡಿಯಾಗಿತ್ತು. ಕಳೆದ 70 ವರ್ಷಗಳಲ್ಲಿನ, ಪರಿಸ್ಥಿತಿ ಹೇಗಿತ್ತೆಂದರೆ, ಶೇ.70 ಕ್ಕೂ ಹೆಚ್ಚು ಮುಸ್ಲಿಂ ಹೆಣ್ಣುಮಕ್ಕಳಿಗೆ ತಮ್ಮ ವ್ಯಾಸಂಗವನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿರಲಿಲ್ಲ. ಇದು ಈಗ ಸುಮಾರು ಶೇ.30ಕ್ಕೆ ಇಳಿದಿದೆ.
- ಈ ಹಿಂದೆ, ಶೌಚಾಲಯಗಳ ಕೊರತೆಯಿಂದಾಗಿ ಸಾವಿರಾರು ಮುಸ್ಲಿಂ ಹೆಣ್ಣುಮಕ್ಕಳು ಶಾಲೆಯಿಂದ ಹೊರಗುಳಿಯುತಿದ್ದರು. ಈಗ ಪರಿಸ್ಥಿತಿ ಬದಲಾಗುತ್ತಿದೆ. ಅರ್ಧದಲ್ಲೇ ಶಾಲೆ ಬಿಡುವ ಮುಸ್ಲಿಂ ಹೆಣ್ಣು ಮಕ್ಕಳ ದರವನ್ನು ಕನಿಷ್ಠ ಮಟ್ಟದಲ್ಲಿಡಲು ಸರ್ಕಾರ ಪ್ರಯತ್ನಿಸುತ್ತಿದೆ. ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳಿಗಾಗಿ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ "ಬ್ರಿಡ್ಜ್ ಕೋರ್ಸ್" ಅನ್ನು ನೀಡಲಾಗುತ್ತಿದೆ. ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಶೇ.35ರಷ್ಟು ಹೆಚ್ಚಾಗಿದೆ.



## ಹುನರ್ ಹಾಟ್: ಉದ್ಯಮಶೀಲತೆಗೆ ಹೊಸ ಅವಕಾಶ

- ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ದೇಶಾದ್ಯಂತ ವಿವಿಧ ಸ್ಥಳಗಳಲ್ಲಿ ನಡೆಸಿದ "ಹುನರ್ ಹಾಟ್" ಕಾರ್ಯಕ್ರಮವು ನುರಿತ ಕುಶಲಕರ್ಮಿಗಳು, ಕರಕುಶಲಕರ್ಮಿಗಳು ಮತ್ತು ಕಲೀನಾರಿ ಬಿಶಾರದ್ ಮತ್ತಿತರರಿಗೆ ಮಾರುಕಟ್ಟೆ ಮತ್ತು ಅವಕಾಶಗಳನ್ನು ಒದಗಿಸಲು ವಿಶ್ವಾಸಾರ್ಹ ವೇದಿಕೆಯಾಗಿದೆ ಎಂದು ಸಾಬೀತಾಗಿದೆ.
- "ಹುನರ್ ಹಾಟ್" "ಸ್ವಾವಲಂಬಿ ಭಾರತ" ಮತ್ತು "ಸ್ಥಳೀಯತೆಗೆ ಧ್ವನಿಯಾಗಿ (ವೋಕಲ್ ಫಾರ್ ಲೋಕಲ್)" ಗೂ ವಿಶ್ವಾಸಾರ್ಹ ವೇದಿಕೆ ಎಂದು ಸಾಬೀತಾಗಿದೆ.
- ಕಳೆದ ಸುಮಾರು 8 ವರ್ಷಗಳಲ್ಲಿ, 39 "ಹುನರ್ ಹಾಟ್ ಗಳು" 8,50,000 ಕ್ಕೂ ಹೆಚ್ಚು ನುರಿತ ಕುಶಲಕರ್ಮಿಗಳು, ಕರಕುಶಲಕರ್ಮಿಗಳು ಮತ್ತು ಕಲೀನಾರಿ ಬಿಶಾರದ್ ಮತ್ತು ಅವರಿಗೆ ಸಂಬಂಧಿಸಿದ ಜನರಿಗೆ ಉದ್ಯೋಗ ಮತ್ತು ಅವಕಾಶಗಳನ್ನು ಒದಗಿಸಿವೆ.
- "ಹುನರ್ ಹಾಟ್" ಸರ್ಕಾರದ ಇ-ಮಾರುಕಟ್ಟೆ ತಾಣ ಮತ್ತು ಆನ್ ಲೈನ್ ಪೋರ್ಟಲ್ ನಲ್ಲಿ ಲಭ್ಯವಿದೆ.



## ಪಿಎಂಜೆವಿಕೆ (ಪ್ರಧಾನ ಮಂತ್ರಿ ಜನ ವಿಕಾಸ್ ಕಾರ್ಯಕ್ರಮ)

**ಕಳೆದ 8 ವರ್ಷಗಳಿಂದ, ಸರ್ಕಾರವು ಅಲ್ಪಸಂಖ್ಯಾತ ಕೇಂದ್ರೀಕೃತ ಪ್ರದೇಶಗಳಲ್ಲಿ ದೇಶಾದ್ಯಂತ ಸಾಮಾಜಿಕ-ಆರ್ಥಿಕ-ಶೈಕ್ಷಣಿಕ ಮತ್ತು ಉದ್ಯೋಗ ಆಧರಿತ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದೆ. ಅವುಗಳಲ್ಲಿ ಈ ಕೆಳಕಂಡ ಅಂಶಗಳು ಮುಖ್ಯವಾಗಿವೆ:**

- 1550 ಹೊಸ ಶಾಲಾ ಕಟ್ಟಡಗಳು;
- ಹೆಚ್ಚುವರಿ ಕೊಠಡಿಗಳು: 23094
- 691 ವಸತಿ ನಿಲಯಗಳು;
- 177 ವಸತಿ ಶಾಲೆಗಳು,
- 14312 ಸ್ಮಾರ್ಟ್ ಕ್ಲಾಸ್ ರೂಮ್ ಗಳು
- 38 ಕಾಲೇಜುಗಳು
- ಐಟಿಐ; 94
- 13 ಪಾಲಿಟೆಕ್ನಿಕ್ ಗಳು;
- ಆರು ನವೋದಯ ವಿದ್ಯಾಲಯಗಳು.
- 413 ವಿವಿಧೋದ್ದೇಶ ಸಮುದಾಯ ಕೇಂದ್ರ "ಸದ್ಭಾವ ಮಂಟಪ" ಗಳು;
- 553 ಮಾರುಕಟ್ಟೆ ಶೆಡ್ ಗಳು,
- 6742 ಶೌಚಾಲಯಗಳು ಮತ್ತು ನೈರ್ಮಲ್ಯ ಸೌಲಭ್ಯಗಳು
- 18,692 ಕುಡಿಯುವ ನೀರಿನ ಸೌಲಭ್ಯ
- 170 ಸೇವಾ ಕೇಂದ್ರಗಳು
- 27 ದುಡಿಯುವ ಮಹಿಳೆಯರ ವಸತಿ ನಿಲಯಗಳು;
- 2324 ಆರೋಗ್ಯ ಸಂಬಂಧಿತ ಯೋಜನೆಗಳು;
- 12 ಕರಕುಶಲ ಕೇಂದ್ರಗಳು;
- 91 ವಿವಿಧ ಕ್ರೀಡಾ ಸೌಲಭ್ಯಗಳು.
- 6014 ಅಂಗನವಾಡಿ ಕೇಂದ್ರ
- 11,483 ಪಕ್ಕಾ ಮನೆಗಳನ್ನು ನಿರ್ಮಿಸಲಾಗಿದೆ. ■




# ಅವರ ಬರಹಗಳು

# ಕ್ರಾಂತಿಗೆ ಕಿಚ್ಚು ಹಚ್ಚಿದವು

**ಸ್ವರಾಜ್ಯಕ್ಕೆ ಒಬ್ಬ ಸಂಪಾದಕನ ಅಗತ್ಯವಿದೆ. ಸಂಬಳ: ಎರಡು ಒಣ ರೊಟ್ಟಿಗಳು, ಒಂದು ಲೋಟ ತಣ್ಣೀರು ಮತ್ತು ಪ್ರತಿ ಸಂಪಾದಕೀಯಕ್ಕೆ 10 ವರ್ಷಗಳ ಜೈಲು ಶಿಕ್ಷೆ. ಇದು1884ರಲ್ಲಿ ಪ್ರಕಟವಾದ ಒಂದು ಜಾಹೀರಾತು. ಹತ್ತು ವರ್ಷಗಳ ಸೆರೆವಾಸದ ವೇತನವನ್ನು ಉಲ್ಲೇಖಿಸಲಾದ ವಿಶ್ವದ ಏಕೈಕ ಜಾಹೀರಾತು ಇದಾಗಿದೆ. ಗುಲಾಮಗಿರಿಯ ಸಮಯದಲ್ಲಿ ಭಾರತದಲ್ಲಿ ಪತ್ರಿಕೋದ್ಯಮವು ಎಷ್ಟು ಕಷ್ಟಕರವಾಗಿತ್ತು ಎಂಬುದನ್ನು ಈ ಜಾಹೀರಾತು ಬಣ್ಣಿಸುತ್ತದೆ. ಇದೇ ಅವಧಿಯಲ್ಲಿ, 1826 ಮೇ 30, ರಂದು ಭಾರತದಲ್ಲಿ ಮೊದಲ ಹಿಂದಿ ಭಾಷೆಯ ಪತ್ರಿಕೆ "ಉದಂತ್ ಮಾರ್ತಾಂಡ್" ಪ್ರಕಟವಾಯಿತು. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮವನ್ನು ವಿವಿಧ ರೀತಿಯಲ್ಲಿ ನಡೆಸಲಾಯಿತು, ಜನರು ಪ್ರದೇಶ, ವರ್ಗ ಮತ್ತು ಜಾತಿ ಗುಂಪುಗಳ ಅಡೆತಡೆಗಳನ್ನು ಮುರಿದು ಧ್ವನಿ ಎತ್ತಿದರು. ಈ ಹೋರಾಟದಲ್ಲಿ, ಗಣ್ಯರು ಮತ್ತು ಸಮಾಜದ ಪ್ರಬುದ್ಧ ನಾಗರಿಕರೊಂದಿಗೆ ಪತ್ರಕರ್ತರು, ಬ್ರಿಟಿಷ್ ಸರ್ಕಾರ ಮಾಡುತ್ತಿದ್ದ ಶೋಷಣೆ ಮತ್ತು ಅನ್ಯಾಯದ ವಿರುದ್ಧ ಇಡೀ ದೇಶ ಒಗ್ಗೂಡಿ ನಿಲ್ಲುವಂತಹ ವಾತಾವರಣ ಸೃಷ್ಟಿಸಿದರು. ಈ ಪತ್ರಕರ್ತರು ತಮ್ಮ ಬರವಣಿಗೆಗಳ ಮೂಲಕ ದುಶ್ಚಟಗಳ ಬಗ್ಗೆಯೂ ಜಾಗೃತಿ ಮೂಡಿಸಿದ್ದಲ್ಲದೆ, ಬ್ರಿಟಿಷ್ ಗುಲಾಮಗಿರಿಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಜನರನ್ನು ಪ್ರೇರೇಪಿಸಿದರು.**

ಖ್ಯಾತ ಕವಯಿತ್ರಿ ಮಹಾದೇವಿ ವರ್ಮಾ ಒಮ್ಮೆ ಹೀಗೆ ಹೇಳಿದ್ದರು, "ಇತಿಹಾಸವನ್ನು ಪತ್ರಕರ್ತರ ಕಾಲಿನ ಮೇಲಿನ ಗುಳ್ಳೆಗಳು ಬರೆಯುತ್ತವೆ." ಮಹಾದೇವಿ ವರ್ಮಾ ಅವರ ಈ ಮಾತುಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪತ್ರಕರ್ತರ ಪಾತ್ರದ ಮೇಲೆ ಬೆಳಕು ಚೆಲ್ಲುತ್ತದೆ. ಈ ಪತ್ರಕರ್ತರ ಗುರಿ ಜನಸಾಮಾನ್ಯರನ್ನು ಜಾಗೃತಗೊಳಿಸುವುದು ಮತ್ತು ಸಾಮಾಜಿಕ ಸುಧಾರಣೆ ಹಾಗು ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಲು ಅವರನ್ನು ಪ್ರೇರೇಪಿಸುವಂತೆ ಮಾಡುವುದಾಗಿತ್ತು. ಆ ಸಮಯದಲ್ಲಿ ಪತ್ರಿಕೆಯನ್ನು ಹೊರತರುವುದು ಬಹಳ ಧೈರ್ಯದ ಕಾರ್ಯವಾಗಿತ್ತು, ಏಕೆಂದರೆ ಅದರಲ್ಲಿ ಪ್ರಕಟವಾದ ವಿಷಯಗಳು ತಮ್ಮ ವಿರುದ್ಧ ಇದೆ ಎಂಬುದು ಬ್ರಿಟಿಷರಿಗೆ ತಿಳಿದರೆ, ಪತ್ರಕರ್ತರು ಅತ್ಯಂತ ಕಠಿಣ ಶಿಕ್ಷೆಯನ್ನು ಎದುರಿಸಬೇಕಾಗುತ್ತಿತ್ತು. ಸ್ವಾತಂತ್ರ್ಯ ಚಳವಳಿಯಲ್ಲಿ, ವೃತ್ತಪತ್ರಿಕೆಗಳನ್ನು ಪ್ರಬಲ ಮಾಧ್ಯಮ ಮತ್ತು ಯುದ್ಧ ಆಯುಧವೆಂದು ಪರಿಗಣಿಸಲಾಗುತ್ತಿತ್ತು. ಭಾರತದಾದ್ಯಂತ ಆರಂಭವಾದ ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ವಸಾಹತುಶಾಹಿ ಆಡಳಿತದ ವಿರುದ್ಧ ದೇಶದ ಜನರನ್ನು ಒಗ್ಗೂಡಿಸುವ ಹೆಮ್ಮೆಯ ಪರಂಪರೆಯನ್ನು ಹೊಂದಿವೆ.

"ಯಾರೂ ಬಾಣಗಳನ್ನು ಎಳೆಯಬೇಡಿ ಅಥವಾ ಖಡ್ಗವನ್ನು ಹಿರಿಯಬೇಡಿ, ತೋಪು ಸಿದ್ಧವಾದ ನಂತರ, ವೃತ್ತಪತ್ರಿಕೆಯನ್ನು ತೋರಿಸಿರಿ." ಎಂದು ಸಹ ಹೇಳಲಾಗುತ್ತದೆ. ಈ ಸಾಲು ಪತ್ರಿಕೆಯ ಶಕ್ತಿಯನ್ನು ವಿವರಿಸುತ್ತದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪತ್ರಿಕೋದ್ಯಮದ ಮೂಲಕ ಇಂತಹ ಅನೇಕ ಜನರು ದೇಶಕ್ಕೆ ಸೇವೆ ಸಲ್ಲಿಸಿದರು. ವಿಮೋಚನಾ ಹೋರಾಟದ ಸಮಯದಲ್ಲಿ ಬಹುತೇಕ ಪ್ರತಿಯೊಬ್ಬ ಪ್ರಮುಖ ವ್ಯಕ್ತಿಯೂ ಬರವಣಿಗೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತೊಡಗಿಸಿಕೊಂಡಿದ್ದರು. ಇಂದಿನ ಜಗತ್ತಿನಲ್ಲಿ, ಭಾರತದಲ್ಲಿ ಪತ್ರಿಕೋದ್ಯಮದ ವ್ಯಾಪ್ತಿಯು ವ್ಯಾಪ್ತಿಯು ಅಗಾಧವಾಗಿ ವಿಸ್ತರಿಸಿರುವುದಷ್ಟೇ ಅಲ್ಲ, ಜವಾಬ್ದಾರಿಯೂ ಹೆಚ್ಚಾಗಿದೆ, ಅದರ ಜವಾಬ್ದಾರಿಯೂ ಇದೆ. ಈ ಕಾರಣಕ್ಕಾಗಿಯೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪತ್ರಿಕೋದ್ಯಮದ ಮೂಲಕ ರಾಷ್ಟ್ರದ ಉದ್ಧಾರಕ್ಕೆ ಆಗಾಗ್ಗೆ ಒತ್ತು ನೀಡುತ್ತಾರೆ ಮತ್ತು ಪತ್ರಿಕೋದ್ಯಮವು ಸಕಾರಾತ್ಮಕವಾಗಿದ್ದರೆ ಮಾತ್ರ ಅದು ಅರ್ಥಪೂರ್ಣವಾಗಿರುತ್ತದೆ ಎಂದು ಅವರು ಹೇಳುತ್ತಾರೆ. ಪತ್ರಿಕೋದ್ಯಮದ ಮೂಲಕ ಸಾಮಾಜಿಕ ಸುಧಾರಣೆ ಮತ್ತು ಸ್ವಾತಂತ್ರ್ಯ ಚಳವಳಿಗೆ ಹೊಸ ದಿಕ್ಕು ನೀಡಲು ಶ್ರಮಿಸಿದ ಮಖನ್ ಲಾಲ್ ಚತುರ್ವೇದಿ, ಅಜೀಮುಲ್ಲಾ ಖಾನ್, ಬರೀಂದ್ರ ಘೋಷ್ ಮತ್ತು ರಾಜಾ ರಾಮ್ ಮೋಹನ್ ರಾಯ್ ಅವರ ಕಥೆಗಳನ್ನು ಈ ಸಂಚಿಕೆಯಲ್ಲಿ ಓದಿ.

# ಮೊದಲ ಪತ್ರಿಕಾ ಸ್ವಾತಂತ್ರ್ಯ ಚಳವಳಿ ಹುಟ್ಟುಹಾಕಿದ ರಾಜಾರಾಮ್ ಮೋಹನ್ ರಾಯ್



ತಮ್ಮ ಪತ್ರಿಕಾ ವೃತ್ತಿಯ ಮೂಲಕ ಭಾರತದ ಸ್ವಾತಂತ್ರ್ಯ ಚಳವಳಿಗೆ ಹೊಸ ದಿಕ್ಕನ್ನು ನೀಡಿದ ರಾಜಾ ರಾಮಮೋಹನ ರಾಯ್ ಅವರನ್ನು ಆಧುನಿಕ ಭಾರತದ ಪುನರುತ್ಥಾನದ ಪಿತಾಮಹ ಎಂದು ಪರಿಗಣಿಸಲಾಗಿದೆ, ಅವರು ರಾಷ್ಟ್ರಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದರು. 1772ರ ಮೇ 22ರಂದು ಬಂಗಾಳದ ರಾಧಾನಗರದಲ್ಲಿ ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ರಾಜಾ ರಾಮಮೋಹನ ರಾಯ್ ಅವರನ್ನು ಸ್ವತಂತ್ರ ಪತ್ರಿಕೋದ್ಯಮದ ಪಿತಾಮಹ ಎಂದು ವ್ಯಾಪಕವಾಗಿ ಪರಿಗಣಿಸಲಾಗುತ್ತದೆ. ಅವರು ಇಂಗ್ಲಿಷ್, ಬಂಗಾಳಿ ಮತ್ತು ಉರ್ದು ಎಂಬ ಮೂರು ಭಾಷೆಗಳಲ್ಲಿ ಪತ್ರಿಕೆಯನ್ನು ಪ್ರಕಟಿಸಿದರು. ಅಷ್ಟೇ ಅಲ್ಲ, ಬರೆವಣಿಗೆ ಮತ್ತು ಇತರ ಚಟುವಟಿಕೆಗಳ ಮೂಲಕ ಅವರು ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಸಕ್ರಿಯವಾಗಿ ಬೆಂಬಲಿಸಿದರು ಮತ್ತು ಹೋರಾಡಿದರು. ರಾಜಾ ರಾಮ್ ಮೋಹನ್ ರಾಯ್ ಅವರು ಪತ್ರಿಕಾ ರಂಗಕ್ಕೆ ಕಾಲಿಟ್ಟಾಗ 1778ರಲ್ಲಿ, ಮುದ್ರಣಾಲಯದ ಆವಿಷ್ಕಾರ ಆಯಿತು. ಬ್ರಿಟಿಷ್ ಸರ್ಕಾರವು ಭಾರತೀಯ ಪತ್ರಿಕೆಗಳನ್ನು ನಿಯಂತ್ರಿಸಿತು. ಅಂತಹ ಪರಿಸ್ಥಿತಿಯಲ್ಲಿ, ಅವರು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಮೊದಲ ಚಳವಳಿಯನ್ನು ಪ್ರಾರಂಭಿಸಿದರು. 1819ರಲ್ಲಿ ಲಾರ್ಡ್ ಹೇಸ್ಟಿಂಗ್ಸ್ ಪತ್ರಿಕಾ ಸೆನ್ಸಾರ್ ಶಿಪ್ ಅನ್ನು ಸಡಿಲಿಸಿದಾಗ, ರಾಮ್ ಮೋಹನ ರಾಯ್ ಮೂರು ನಿಯತಕಾಲಿಕಗಳನ್ನು ಪ್ರಕಟಿಸಿದರು: ಬ್ರಾಹ್ಮಣವಾದಿ ನಿಯತಕಾಲಿಕ (1821), ಬಂಗಾಳಿ ಸಾಪ್ತಾಹಿಕ-ಸಂವಾದ್ ಕೌಮುದಿ (1821) ಮತ್ತು ಪರ್ಷಿಯನ್ ಸಾಪ್ತಾಹಿಕ-ಮಿರಾತ್-ಉಲ್-ಅಕ್ಬರ್ (1821). ಭಾರತೀಯ ನವೋದಯದ ಹರಿಕಾರರಾಗಿದ್ದ ಅವರು ಬ್ರಹ್ಮಸಮಾಜವನ್ನು ಸ್ಥಾಪಿಸಿದ್ದಲ್ಲದೆ, ಪತ್ರಿಕೋದ್ಯಮದ ಮೂಲಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸುಧಾರಣಾ ಚಳವಳಿಗಳಿಗೆ ಹೊಸ ದಿಕ್ಕನ್ನು ನೀಡಿದರು. ಅವರ ಕಾರ್ಯ ಚಟುವಟಿಕೆಗಳು ಪತ್ರಿಕಾ ರಂಗಕ್ಕೆ ಹೊಳಪನ್ನು ನೀಡಿದ್ದಷ್ಟೇ ಅಲ್ಲ, ಅವರ ಪತ್ರಿಕಾ ವೃತ್ತಿಯು ಚಳವಳಿ ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುವಲ್ಲಿ ಒಂದು ಪಾತ್ರವನ್ನೂ ವಹಿಸಿತು. ರಾಜಾ ರಾಮ್ ಮೋಹನ್ ರಾಯ್ ತಮ್ಮ ಜೀವಿತಾವಧಿಯಲ್ಲಿ ಹಲವು ಪತ್ರಿಕೆಗಳನ್ನು ಸಂಪಾದಿಸಿ ಪ್ರಕಟಿಸಿದರು. ಬಂಗ್ ದೂತ್ ಇಂತಹ ಒಂದು ಪ್ರಕಟಣೆಯಾಗಿದ್ದು, ಅದರಲ್ಲಿ ಬಾಂಗ್ಲಾ, ಹಿಂದಿ ಮತ್ತು ಪರ್ಷಿಯನ್ ಭಾಷೆಗಳನ್ನು ಏಕಪ್ರಕಾರವಾಗಿ ಬಳಸಲಾಗುತ್ತಿತ್ತು. ಈ ಕೆಳಗಿನ ಘಟನೆಯಿಂದ ಅವರ ಯುದ್ಧೋನ್ಮಾದ ಮತ್ತು ಬಲವಾದ ವ್ಯಕ್ತಿತ್ವವನ್ನು ಅಳೆಯಬಹುದು. 1821ರಲ್ಲಿ ಪ್ರತಾಪ ನಾರಾಯಣ ದಾಸ್ ಎಂಬ ಭಾರತೀಯ ಚಾಟಿ ಬೀಸಿದ್ದಕ್ಕಾಗಿ ಅವರಿಗೆ ಬ್ರಿಟಿಷ್ ನ್ಯಾಯಾಧೀಶರು ಮರಣದಂಡನೆ ವಿಧಿಸಿದರು. ಈ ಅನ್ಯಾಯ ಖಂಡಿಸಿ ರಾಯ್ ಲೇಖನವೊಂದನ್ನು ಪ್ರಕಟಿಸಿದರು. ಅವರ ಪ್ರಯತ್ನಗಳು ಭಾರತೀಯ ಪತ್ರಿಕೋದ್ಯಮಕ್ಕೆ ಬಲವಾದ ಅಡಿಪಾಯವನ್ನು ಮತ್ತು ಭಾರತೀಯ ಪತ್ರಿಕೋದ್ಯಮಕ್ಕೆ ಹೊಸ ಆಯಾಮ ನೀಡಿತು. ಆಧುನಿಕ ಯುಗದ ಮಹತ್ವವನ್ನು ಗುರುತಿಸಿದ ಅವರ ತಲೆಮಾರಿನ ಕೆಲವೇ ಜನರಲ್ಲಿ ರಾಜಾ ರಾಮ್ ಮೋಹನ್ ರಾಯ್ ಒಬ್ಬರು. ಮಾನವ ನಾಗರಿಕತೆಯ ಆದರ್ಶವು ಸ್ವಾತಂತ್ರ್ಯದಿಂದ ಪ್ರತ್ಯೇಕವಾಗಿಲ್ಲ, ಬದಲಾಗಿ ಅದರೊಂದಿಗೆ ಸಮ್ಮಿಲಿತವಾಗಿದೆ ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು.

# ಕ್ರಾಂತಿಯನ್ನು ಪ್ರಚೋದಿಸಲು 'ಪಯಾಮ್-ಇ-ಆಜಾದಿ' ಪ್ರಕಟಿಸಿದ ಅಜೀಮುಲ್ಲಾ ಖಾನ್



ಒಮ್ಮೆ ಒಬ್ಬ ಬ್ರಿಟಿಷ್ ಅಧಿಕಾರಿ ಅಜೀಮುಲ್ಲಾ ಖಾನ್ ರ ತಂದೆ ನಜೀಬ್ ಮಿಸ್ತ್ರಿಗೆ ಕುದುರೆ ಲಾಯವನ್ನು ಸ್ವಚ್ಛಗೊಳಿಸಲು ಸೂಚಿಸಿದನು. ಅವರು ನಿರಾಕರಿಸಿದಾಗ, ಅಧಿಕಾರಿ ನಜೀಬ್ ರನ್ನು ಮಹಡಿಯಿಂದ ತಳ್ಳಿ, ಮೇಲಿನಿಂದ ಇಟ್ಟಿಗೆಯಿಂದ ಅವರಿಗೆ ಹೊಡೆದನು. ಇದರ ಪರಿಣಾಮವಾಗಿ, ನಜೀಬ್ ಆರು ತಿಂಗಳ ಕಾಲ ಹಾಸಿಗೆಯಲ್ಲಿ ನರಳಿ ನಂತರ ಮರಣ ಹೊಂದಿದರು. ಹೀಗಾಗಿ ಅಜೀಮುಲ್ಲಾ ಖಾನ್ ಚಿಕ್ಕವರಾಗಿದ್ದಾಗಲೇ ತನ್ನ ತಂದೆಯನ್ನು ಕಳೆದುಕೊಂಡರು. ಈ ಘಟನೆ ಅವರ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. 1857ರ ದಂಗೆಯಲ್ಲಿ ಅಜೀಮುಲ್ಲಾ ಖಾನ್‌ರ ಪಾತ್ರವು ಕೇವಲ ಸೇನಾ ಮತ್ತು ರಾಜಕೀಯವಷ್ಟೇ ಆಗಿರಲಿಲ್ಲ. ಆ ದಂಗೆಯಲ್ಲಿ ಅವರು ಪ್ರಮುಖ ಚಿಂತಕರೂ ಆಗಿದ್ದರು. ಅವರು ಮಹಾನ್ ಕ್ರಾಂತಿಕಾರಿ

ಮತ್ತು ತಂತ್ರಗಾರರಾಗಿದ್ದರು, ಅವರು 1857 ರಲ್ಲಿ ಕಾನ್ಪುರದಿಂದ ಮೊದಲ ಭಾರತೀಯ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿದರು. ಕಾನ್ಪುರದ ಆಡಳಿತಗಾರ ನಾನಾ ಸಾಹೇಬ್ ಪೇಶ್ವೆಯವರಿಗೆ ಮೊದಲು ಸಲಹೆಗಾರರಾಗಿ ನಂತರ ಪ್ರಧಾನಮಂತ್ರಿಯಾದ ಅಜೀಮುಲ್ಲಾ ಯೂರೋಪಿಗೆ ಪ್ರಯಾಣ ಬೆಳೆಸಿದಾಗ, ಅವರು ಮುದ್ರಣ ಯಂತ್ರದೊಂದಿಗೆ ಮರಳಿದರು. ಅವರು ತಮ್ಮ ಮುದ್ರಣಾಲಯದಿಂದ "ಪಯಾಮ್-ಎ-ಆಜಾದಿ" ಎಂಬ ಪತ್ರಿಕೆಯನ್ನು ಪ್ರಕಟಿಸಿದರು, ಅದನ್ನು ಅವರು ಕ್ರಾಂತಿ ಮತ್ತು ದಂಗೆಯನ್ನು ಪಸರಿಸಲು ಬಳಸುತ್ತಿದ್ದರು. "ಪಯಾಮ್-ಎ-ಆಜಾದಿ" ಎಂಬ ಪ್ರಕಟಣೆಯ ಮೂಲಕ ಅಜೀಮುಲ್ಲಾ 1857ರ ದಂಗೆಗೆ ಕಾರ್ಯತಂತ್ರವನ್ನು ರೂಪಿಸಿದರು ಎಂದು ಹೇಳಲಾಗುತ್ತದೆ. ಈ ಪತ್ರಿಕೆಯು ಹಿಂದಿ, ಉರ್ದು ಮತ್ತು ಮರಾಠಿಯಲ್ಲಿ ಪ್ರಕಟವಾಗುತ್ತಿತ್ತು. "ಹಮ್ ಹೈ ಇಸ್ಕೆ ಮಾಲಿಕ್, ಹಿಂದೂಸ್ತಾನ್ ಹಮಾರಾ, ಪಾಕ್ ವತನ್ ಹೈ ಕೌಮ್ ಕಾ, ಜನ್ನತ್ ಸೇ ಭಿ ಪ್ಯಾರಾ" ಎಂಬ ಅವರ ಒಂದು ಹಾಡು ಅದೇ ಪತ್ರಿಕೆಗೆ ಬರೆಯಲಾಗಿತ್ತು, ನಂತರ ಅದು 1857ರ ದಂಗೆಕೋರರ ಧ್ವಜ ಗೀತೆಯಾಯಿತು. ಈ ಹಾಡು 1857 ರ ಕ್ರಾಂತಿಕಾರಿ ಆದರ್ಶಗಳು ಮತ್ತು ಗುರಿಗಳನ್ನು ಸಂಪೂರ್ಣವಾಗಿ ಸೆರೆಹಿಡಿಯುತ್ತದೆ. 1857 ರ ಯುದ್ಧದಲ್ಲಿ ಜನಪರವಾದುದನ್ನು ಒತ್ತಿಹೇಳುವ ಈ ಹಾಡಿನಲ್ಲಿ ರಾಷ್ಟ್ರೀಯತೆಯು ಸೂಚ್ಯವಾಗಿತ್ತು. 1857ರ ಕ್ರಾಂತಿಕಾರಿ ಸೈನಿಕರ ಈ ಪ್ರಚಾರ ಗೀತೆಯು ರಾಷ್ಟ್ರಗೀತೆಯ ಮಕುಟ ಮಣಿ ಎಂದು ಹೇಳಲಾಗುತ್ತದೆ. ಇದು ನೇರ, ಸರಳ, ಸ್ವಚ್ಛ ಮತ್ತು ಬೃಹತ್ ಶಕ್ತಿಯಿಂದ ತುಂಬಿದೆ. ಇದರಲ್ಲಿ ದೇಶದ ಬಗ್ಗೆ ಹೊಗಳಿಕೆ ಮಾತ್ರವಲ್ಲ, ಸ್ವಾತಂತ್ರ್ಯಕ್ಕಾಗಿ ಕರೆ ಮತ್ತು ಸವಾಲು ಕೂಡ ಇದೆ. ಈ ಹಾಡನ್ನು ಕೇಳಿದ ನಂತರ ಅಜೀಮುಲ್ಲಾ ಖಾನ್ ಅವರನ್ನು ಆಧುನಿಕ ಭಾರತದ ಮೊದಲ ರಾಷ್ಟ್ರೀಯವಾದಿ ಎಂದು ಕರೆಯುವುದು ಅತಿಶಯೋಕ್ತಿಯಾಗಲಾರದು.



ಮಖನ್ ಲಾಲ್ ಚತುರ್ವೇದಿ ಒಬ್ಬ ಅಪರೂಪದ ಯೋಧ ಪತ್ರಕರ್ತ ಮತ್ತು ಸಾಹಿತಿಯಾಗಿದ್ದರು, ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ,ದೇಶಕ್ಕಾಗಿ ಸೆರೆವಾಸ ಅನುಭವಿಸಿದರು. ಮಖನ್ ಲಾಲ್ ಅವರು ನಿಜವಾದ ಹಿತೈಷಿ ಮತ್ತು ಯುವಕರಿಗೆ ಮಾರ್ಗದರ್ಶಕರಾಗಿರುವುದರ ಜೊತೆಗೆ, ರಾಷ್ಟ್ರಕ್ಕಾಗಿ ಅವರ ಪ್ರೀತಿ ಮತ್ತು ಸಮರ್ಪಣೆ ಅನೂಹ್ಯವಾಗಿತ್ತು. ಅವರು ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಲೇಖನಿ ಮತ್ತು ಭಾಷಣದಿಂದ ಇಡೀ ಪೀಳಿಗೆಯ ಮೇಲೆ ಪ್ರಭಾವ ಬೀರಿದರು ಮತ್ತು ಸ್ವಾತಂತ್ರ್ಯಾ ನಂತರ ರಾಷ್ಟ್ರ ನಿರ್ಮಾಣಕ್ಕಾಗಿ ಅವರನ್ನು ಪ್ರೇರೇಪಿಸುವುದನ್ನು ಮುಂದುವರಿಸಿದರು. ಮಖನ್ ಲಾಲ್ ಚತುರ್ವೇದಿ ಅವರು 1889 ಏಪ್ರಿಲ್ 4, ರಂದು ಮಧ್ಯಪ್ರದೇಶದ ಹೋಶಂಗಾಬಾದ್ ಜಿಲ್ಲೆಯ ಬವಾಯಿ ಗ್ರಾಮದಲ್ಲಿ ಜನಿಸಿದರು. ಮಖನ್ ಲಾಲ್ ಚತುರ್ವೇದಿ ತಮ್ಮ ಪತ್ರಿಕಾ ವೃತ್ತಿಜೀವನವನ್ನು ಪ್ರಾರಂಭಿಸಿದಾಗ, ಇಡೀ ದೇಶವು ಬ್ರಿಟಿಷ್ ವಿರೋಧಿ ರಾಷ್ಟ್ರೀಯ ಆಂದೋಲನದ ಹಿಡಿತದಲ್ಲಿತ್ತು. ಆ ಸಮಯದಲ್ಲಿ

**"ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವವು 130 ಕೋಟಿ ಜನರ ಪಾಲ್ಗೊಳ್ಳುವಿಕೆ ಮತ್ತು ಭಾವನೆಗಳ ಹಬ್ಬವಾಗಿದೆ. ಅಮೃತ ಮಹೋತ್ಸವವು ಸನಾತನ ಭಾರತದ ಹೆಮ್ಮೆಯನ್ನು ಉಳಿಸುವ, ದೇಶದ ಹುತಾತ್ಮರ ತ್ಯಾಗದಿಂದ ಸ್ಫೂರ್ತಿ ಪಡೆಯಲು ಮತ್ತು ಅವರ ಕನಸಿನ ಆಧುನಿಕ ಭಾರತವನ್ನು ನಿರ್ಮಿಸುವ ಅವರ ಸಂಕಲ್ಪವನ್ನು ಪುನಶ್ಚೇತನಗೊಳಿಸುವ ಕಾರ್ಯಕ್ರಮವಾಗಿದೆ.**

**ನರೇಂದ್ರ ಮೋದಿ, ಪ್ರಧಾನಮಂತ್ರಿ**

# ಮಖನ್ ಲಾಲ್ ಚತುರ್ವೇದಿ: ಪತ್ರಿಕಾರಂಗಕ್ಕೆ ಸಮರ್ಪಿತರಾಗಿದ್ದ ಯೋಧ

ರಾಷ್ಟ್ರೀಯತೆ ಮತ್ತು ಸಾಮಾಜಿಕ ಸುಧಾರಣೆಯ ಮಾತುಗಳು ಕೇಳಿ ಬರುತ್ತಿದ್ದವು ಮತ್ತು ಬ್ರಿಟಿಷರನ್ನು ದೇಶದಿಂದ ತೊಲಗಿಸುವ ಭಾವನೆಗಳು ಪ್ರಬಲವಾಗಿದ್ದವು. 1913ರಲ್ಲಿ, ಖಾಂಡ್ವಾದ ಕಾಲೂರಾಮ್ ಗಂಗ್ರಾಂಡೆ ಅವರು ಪ್ರಭಾ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು, ಅದರ ಸಂಪಾದನೆಯನ್ನು ಮಖನ್ ಲಾಲ್ ಗೆ ವಹಿಸಲಾಯಿತು. 1913ರಲ್ಲಿ, ಪತ್ರಿಕೋದ್ಯಮ, ಸಾಹಿತ್ಯ ಮತ್ತು ರಾಷ್ಟ್ರೀಯ ಚಳವಳಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಅವರು ತಮ್ಮ ಬೋಧನಾ ಕೆಲಸಕ್ಕೆ ರಾಜೀನಾಮೆ ನೀಡಿದರು. ಮಖನ್ ಲಾಲ್ ಚತುರ್ವೇದಿ ಅವರು ಪ್ರಭಾ ಎಂಬ ಉನ್ನತ ಗುಣಮಟ್ಟದ ಸಾಹಿತ್ಯಿಕ ನಿಯತಕಾಲಿಕವನ್ನು ಪ್ರಕಟಿಸುವ ಮೂಲಕ ಸ್ವಾತಂತ್ರ್ಯ ಚಳವಳಿಗೆ ಕೊಡುಗೆ ನೀಡಲು ಪ್ರಾರಂಭಿಸಿದರು. ಪ್ರಭಾ ಹಿಂದೂ ಸಾಹಿತ್ಯ ಲೋಕದಲ್ಲಿ ಬಹುಬೇಗನೆ ಉತ್ತುಂಗಕ್ಕೆ ಏರಿತು, ಜನರನ್ನು ವಿಚಲಿತಗೊಳಿಸಿದ ಮತ್ತು ಜಾಗೃತಗೊಳಿಸಿದ ಬರಹಗಳಿಗೆ ಧನ್ಯವಾದಗಳು. ಮಖನ್ ಲಾಲ್ ಚತುರ್ವೇದಿ ಅವರು ಕಾನ್ಪುರದಿಂದ ಪ್ರತಾಪ್ ಸಾಪ್ತಾಹಿಕವನ್ನು ಸಂಪಾದಿಸಲು ಪ್ರಾರಂಭಿಸಿದಾಗ ಗಣೇಶ್ ಶಂಕರ್ ವಿದ್ಯಾರ್ಥಿ ಅವರೊಂದಿಗೆ ಸೇರಿಕೊಂಡರು. 1920ರ ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳಿಯ ಸಂದರ್ಭದಲ್ಲಿ ಮಹಾಕೌಶಲ್ ನಲ್ಲಿ ಬಂಧಿತರಾದ ಮೊದಲ ವ್ಯಕ್ತಿ ಮಖನ್ ಲಾಲ್. 1920ರ ಜುಲೈ 17ರಂದು, 'ಕರ್ಮವೀರ್' ನ ಸಂಪಾದನೆಯು ಅವರ ನಾಯಕತ್ವದಲ್ಲಿ ಪ್ರಾರಂಭವಾಯಿತು, ಇದು ರಾಜ ಸಂಸ್ಥಾನಗಳ ಅಸಮಾನತೆಯನ್ನು ಧೈರ್ಯದಿಂದ ತೆರೆದಿಟ್ಟಿತು. ಈ ನಿಯತಕಾಲಿಕದಲ್ಲಿ ಲೇಖನಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಪ್ರಕಟಿಸಲಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ, ಕೆಲವು ರಾಜರು ಪ್ರಕಾಶನಕ್ಕೆ ತಮ್ಮ ಬೆಂಬಲವನ್ನು ಹಿಂಪಡೆದರು. ನಿಯತಕಾಲಿಕವು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವಾಗ ಎಲ್ಲಾ ಅಡೆತಡೆಗಳನ್ನು ಧೈರ್ಯದಿಂದ ಸಹಿಸಿಕೊಂಡಿತು. ಸ್ವಾತಂತ್ರ್ಯದ ಹೊರತಾಗಿ, ಅಸಹಕಾರ, ಪ್ರಜಾಪ್ರಭುತ್ವ, ಖಿಲಾಫತ್, ರೌಲತ್ ಕಾಯ್ದೆ, ಪಂಚಾಯತಿ ರಾಜ್, ದೇಶೀಯ ರಾಜ್ಯ, ಹಿಂದೂ ಮುಸ್ಲಿಂ ತಾರತಮ್ಯ ನೀತಿ, ಕ್ರಾಂತಿಕಾರಿ ಚಳವಳಿ ಹಾಗು ಬಿಸಿ ಮತ್ತು ಮೃದು ಪಕ್ಷಗಳಂತಹ ಅನೇಕ ವಿವಾದಾತ್ಮಕ ವಿಷಯಗಳು ಮತ್ತು ವಸ್ತು ವಿಷಯಗಳ ಬಗ್ಗೆ ಕರ್ಮವೀರದಲ್ಲಿ ಪ್ರಕಟವಾದ ಲೇಖನಗಳು ಇಡೀ ದೇಶವನ್ನು ರೊಚ್ಚಿಗೇಳಿಸುತ್ತಿದ್ದವು. ಮಖನ್ ಲಾಲ್ ಚತುರ್ವೇದಿ ಕರ್ಮವೀರ ಮೂಲಕ ಅಸಹಕಾರ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು, ಮತ್ತು ಇದರ ಪರಿಣಾಮವಾಗಿ, ಅವರು ಬ್ರಿಟಿಷ್ ಆಡಳಿತದ ದೃಷ್ಟಿಯಲ್ಲಿ ತಪ್ಪಿತಸ್ಥರಾಗಿದ್ದರು. ಅವರನ್ನು ಬಂಧಿಸಿದಾಗ, ಮಹಾತ್ಮ ಗಾಂಧಿ ಮತ್ತು ಗಣೇಶ್ ಶಂಕರ್ ವಿದ್ಯಾರ್ಥಿ ಇಬ್ಬರೂ ಯಂಗ್ ಇಂಡಿಯಾ, ಪ್ರತಾಪ್ ಮತ್ತು ದೇಶಾದ್ಯಂತದ ಪತ್ರಿಕೆಗಳಲ್ಲಿ ಕಟುವಾದ ಸಂಪಾದಕೀಯಗಳನ್ನು ಬರೆದರು, ಅವರ ಬಂಧನವನ್ನು ಖಂಡಿಸಿದರು. ಮಖಾನ್ ಲಾಲ್ ಅವರು 'ಕರ್ಮವೀರ್' ಮೂಲಕ ಸ್ಥಾಪಿಸಿದ ಮೌಲ್ಯಾಧಾರಿತ ಪತ್ರಿಕೋದ್ಯಮ ಮಾನದಂಡಗಳು ಭಾರತೀಯ ಪತ್ರಿಕೋದ್ಯಮದ ಅಮೂಲ್ಯ ಪರಂಪರೆಯಾಗಿದೆ. ತಮ್ಮ ಪತ್ರಿಕಾ ವೃತ್ತಿಜೀವನದುದ್ದಕ್ಕೂ, ಮಖನ್ ಲಾಲ್ ಚತುರ್ವೇದಿ ಅವರು ಪ್ರಭಾ, ಪ್ರತಾಪ್ ಮತ್ತು ಕರ್ಮವೀರ್ ಪತ್ರಿಕೆಗಳ ಮೂಲಕ ದೇಶದಲ್ಲಿ ಜಾಗೃತಿ ಮೂಡಿಸಲು ದಣಿವರಿಯದೆ ದುಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಪ್ರಸಿದ್ಧ ಕವಿ ಮಖನ್ ಲಾಲ್ ಚತುರ್ವೇದಿ ಅವರನ್ನು ಅವರ ಅನೇಕ ಕಾರ್ಯಕ್ರಮಗಳಲ್ಲಿ ಅವರ ಕವಿತೆಗಳನ್ನು ವಾಚಿಸುವ ಮೂಲಕ ಆಗಾಗ್ಗೆ ಸ್ಮರಿಸುತ್ತಿರುತ್ತಾರೆ.

# ಪತ್ರಿಕಾವೃತ್ತಿ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಿದ ಗೌರಿ ಶಂಕರ್ ರಾಯ್

ಭೀಕರ ಕ್ಷಾಮದ ಸಮಯದಲ್ಲಿ ಬ್ರಿಟಿಷರ ದಬ್ಬಾಳಿಕೆಯನ್ನು ಬಯಲಿಗೆಳೆಯಲು ಮತ್ತು ಒಡಿಶಾದ ಯುವಕರಿಗೆ ಶಿಕ್ಷಣ ನೀಡಲು ಗೌರಿ ಶಂಕರ್ ರಾಯ್ 1866 ರಲ್ಲಿ ಮೊದಲ ಒಡಿಯಾ ನಿಯತಕಾಲಿಕ ಉತ್ಕಲ್ ದೀಪಿಕಾವನ್ನು ಪ್ರಕಟಿಸಿದರು. ಆ ಸಮಯದಲ್ಲಿ ಒಡಿಶಾದ ವಿವಿಧ ಭಾಗಗಳಲ್ಲಿ ಕ್ಷಾಮದಿಂದಾಗಿ 10 ಲಕ್ಷಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರೆಂದು ಅಂದಾಜಿಸಲಾಗಿದೆ. ನಾವು ಸ್ವತಂತ್ರರಾಗಿದ್ದರೆ, ನಾವು ಅಂತಹ ಕ್ಷಾಮವನ್ನು ಎದುರಿಸಬೇಕಾಗಿರುತ್ತಿರಲಿಲ್ಲ ಎಂದು ಜನರು ನಂಬಿದ್ದರು. ಅಂತಹ ಪರಿಸ್ಥಿತಿಯಲ್ಲಿ, ಸ್ವಾತಂತ್ರ್ಯಕ್ಕಾಗಿ ಹೋರಾಟವು ತೀವ್ರಗೊಂಡಿತು. ಕ್ಷಾಮದ ಸಮಯದಲ್ಲಿ, ಗೌರಿ ಶಂಕರ್ ರಾಯ್ ಮತ್ತು ಬಾಬು ಬಿಚಿತ್ರನಂದಾ ದಾಸ್ ಒರಿಯಾದಲ್ಲಿ ಉತ್ಕಲ್ ದೀಪಿಕಾ ಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಜನರು ಹೆಚ್ಚು ಜಾಗೃತರಾದರು, ಮತ್ತು ಅವರು ಕ್ಷಾಮದ ನಿಜವಾದ ಕಾರಣವನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರು. ಈ ನಿಯತಕಾಲಿಕವನ್ನು 1838 ರ ಜುಲೈ 13 ರಂದು ಕಟಕ್ ನಲ್ಲಿ ಆರಂಭಿಸಲಾಯಿತು ಮತ್ತು 1866ರ ಆಗಸ್ಟ್ 4 ರಂದು ಒಡಿಯಾದಲ್ಲಿ ಗೌರಿ ಶಂಕರ್ ರಾಯ್ ಅವರ ನೇತೃತ್ವದಲ್ಲಿ ಮೊದಲ ಬಾರಿಗೆ ಪ್ರಕಟಿಸಲಾಯಿತು, ಅದಕ್ಕಾಗಿಯೇ ಒಡಿಯಾ ಪತ್ರಿಕೋದ್ಯಮ ದಿನವನ್ನು ಈ ದಿನಾಂಕದಂದು ಆಚರಿಸಲಾಗುತ್ತದೆ. ಒಡಿಶಾವು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದ ಸಮಯದಲ್ಲಿ ಸ್ವಾತಂತ್ರ್ಯದ ಅಲೆಯನ್ನು ಬಲಪಡಿಸಲು, ಈ ನಿಯತಕಾಲಿಕವು ರಾಜ್ಯದಲ್ಲಿನ ಕ್ಷಾಮ ಮತ್ತು ಬಡತನದ ಬಗ್ಗೆ ಲೇಖನಗಳನ್ನು ಪ್ರಕಟಿಸಲು ಪ್ರಾರಂಭಿಸಿತು. ಗೌರಿ ಶಂಕರ ರಾಯ್‌ಯವರು ರಾಷ್ಟ್ರೀಯತಾವಾದಿ ಆಧಾರಿತ ಈ ನಿಯತಕಾಲಿಕದ ಮೂಲಕ ಭಾರತೀಯರ ಹಿತದೃಷ್ಟಿಯಿಂದ ಬ್ರಿಟಿಷರ ವಿರುದ್ಧ ಹೋರಾಡಿದರು.

ಅವರು ನಿಯತಕಾಲಿಕದಲ್ಲಿ ಬ್ರಿಟಿಷರನ್ನು ಟೀಕಿಸುವ ವಿಷಯಗಳನ್ನು ಬರೆಯುತ್ತಿದ್ದರು ಮತ್ತು ಜನರ ಬೇಡಿಕೆಗಳನ್ನು ಅವರ ಮುಂದೆ ಇಡುತ್ತಿದ್ದರು. ಅದೇ ಸಮಯದಲ್ಲಿ, ಪ್ರವಾಹದಂತಹ ನೈಸರ್ಗಿಕ ವಿಪತ್ತುಗಳನ್ನು ತಡೆಗಟ್ಟಲು ಅವರು ತಮ್ಮ ಸಲಹೆಗಳನ್ನೂ ನಿಯತಕಾಲಿಕದಲ್ಲಿ ಪ್ರಕಟಿಸುತ್ತಿದ್ದರು. ಅವರಿಂದ ಪ್ರಭಾವಿತರಾದ ಶಶಿ ಭೂಷಣ್ ರಥ್ ನಂತರ 1913 ರಲ್ಲಿ ಬೆರ್ಹಾಂಪುರದಿಂದ ಒಡಿಯಾ ದಿನಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭಿಸಿದರು ಮತ್ತು ಒಡಿಯಾ ಸಾಹಿತ್ಯ ಉತ್ತೇಜಿಸಲು ಗೋಪಾಬಂಧು ದಾಸ್ 'ಸತ್ಯಬತಿ' ಎಂಬ ನಿಯತಕಾಲಿಕವನ್ನೂ ಪ್ರಕಟಿಸಲು ಪ್ರಾರಂಭಿಸಿದರು. ಈ ನಿಯತಕಾಲಿಕದ ಪ್ರಕಟಣೆಗಾಗಿ ಕಟಕ್ ನಲ್ಲಿ ಕಟಕ್ ಪ್ರಿಂಟಿಂಗ್ ಕಂಪನಿಯನ್ನು ಸ್ಥಾಪಿಸಿದರು. ಬ್ರಿಟಿಷರು ಮನೆಮನೆಗೆ ತಲುಪಿಸಲು ಬೈಬಲ್ ಗಳನ್ನು ಮುದ್ರಿಸುತ್ತಿದ್ದಾಗ, ಮಹಾಭಾರತ, ರಾಮಾಯಣ ಮತ್ತು ಇತರ ಪ್ರಾಚೀನ ಧಾರ್ಮಿಕ ಗ್ರಂಥಗಳನ್ನು ಒಡಿಯಾದಲ್ಲಿ ತನ್ನ ಮುದ್ರಣ ಕಂಪನಿಯಲ್ಲಿ ಪ್ರಕಟಿಸುತ್ತಿದ್ದರು. ಬ್ರಹ್ಮಸಮಾಜದೊಂದಿಗೆ ಗುರುತಿಸಿಕೊಂಡಿದ್ದ ಗೌರಿಶಂಕರ ರಾಯ್‌ಯವರು, ರಾಜ್ಯದಲ್ಲಿ ಸಂಗೀತ ಮತ್ತು ನಾಟಕಗಳನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಮತ್ತು ಸಮಾಜದ ಸಾಂಸ್ಕೃತಿಕ ಉನ್ನತಿಗೆ ಗಮನಾರ್ಹ ಕೊಡುಗೆ ನೀಡಿದರು. ■

# ಅಹಿಲ್ಯಾಬಾಯಿ : ಉದಾತ್ತ ಮಹಾರಾಣಿ



ಭಾರತೀಯ ತತ್ತ್ವಶಾಸ್ತ್ರದಲ್ಲಿ ಒಳ್ಳೆಯ ಆಲೋಚನೆಗಳು ಮತ್ತು ಉತ್ತಮ ನಡತೆಯನ್ನು ಧರ್ಮವೆಂದು ಪರಿಗಣಿಸಲಾಗಿದೆ, ಮತ್ತು ಈ ಎರಡು ಗುಣಗಳು ಇರುವ, ರಾಜ ಅಥವಾ ಆಡಳಿತಗಾರ ಮಾತ್ರ ಸಾರ್ವಜನಿಕರಿಗೆ ಸಂತೋಷವನ್ನು ತರಬಲ್ಲ. ದೇವಿ ಅಹಿಲ್ಯಾಬಾಯಿ ಹೋಳ್ಕರ್ ಅಂತಹ ಗುಣಗಳನ್ನು ಹೊಂದಿದ್ದರು. ಅವರು ಧೈರ್ಯಶಾಲಿ ಯೋಧರಾಗಿದ್ದರು ಮತ್ತು ನುರಿತ ಶೂಟರ್ ಆಗಿದ್ದರು. ಅಷ್ಟೇ ಅಲ್ಲ, ಸಾರ್ವಜನಿಕ ಕಲ್ಯಾಣಕ್ಕಾಗಿ ಅನೇಕ ಕ್ರಮಗಳನ್ನು ಕೈಗೊಂಡ ನುರಿತ ಆಡಳಿತಗಾರರೂ ಆಗಿದ್ದರು ಮತ್ತು ಧರ್ಮದ ಮಾರ್ಗವನ್ನು ಅನುಸರಿಸುವಾಗ, ರಾಜ್ಯದಲ್ಲಿ ಮಾತ್ರವಲ್ಲದೆ ರಾಜ್ಯದ ಹೊರಗೆ ದೇವಾಲಯಗಳು ಮತ್ತು ಪವಿತ್ರ ಘಟ್ಟಗಳನ್ನು ನಿರ್ಮಿಸಿದರು. ಅದಕ್ಕಾಗಿಯೇ ಅವರನ್ನು ಲೋಕಮಾತೆ ಎಂದು ಕರೆಯಲಾಯಿತು.

**ಜನನ: 1725 ಮೇ 31  ನಿಧನ: 1795 ಆಗಸ್ಟ್ 13**

ಅವರು ಮೇ 31, 1725ರಂದು ಮಹಾರಾಷ್ಟ್ರದ ಅಹ್ಮದ್ ನಗರದ ಛೌಂಡಿ ಎಂಬ ಹಳ್ಳಿಯ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಮಂಕೋಜಿ ರಾವ್ ಶಿಂಧೆ ಹಳ್ಳಿಯ ಪಾಟೀಲ್ (ಮುಖ್ಯಸ್ಥ)ರಾಗಿದ್ದರು. ಅಹಿಲ್ಯಾಬಾಯಿ ಓದು ಬರಹವನ್ನು ಮನೆಯಲ್ಲಿಯೇ ಕಲಿತರು. ಅಹಿಲ್ಯಾಬಾಯಿಯವರು ರಾಜಮನೆತನ ಸೇರುವುದು ವಿಧಿ ಲಿಖಿತಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ಮಾಳ್ವ ಪ್ರದೇಶದ ಪ್ರಸಿದ್ಧ ಕುಲೀನರಾಗಿದ್ದ ಮಲ್ಹಾರ್ ರಾವ್ ಹೋಳ್ಕರ್ ಅವರು ಪುಣೆಗೆ ಹೋಗುವಾಗ ಎಂಟು ವರ್ಷದ ಅಹಿಲ್ಯಾಬಾಯಿ ದೇವಾಲಯದಲ್ಲಿ ಹಸಿವಿನಿಂದ ಬಳಲುತ್ತಿದ್ದ ಬಡವರಿಗೆ ಉಣಬಡಿಸುವ ಸೇವೆ ಮಾಡುತ್ತಿದ್ದುದನ್ನು ನೋಡಿದರು. ಆ ಬಾಲಕಿಯ ಕಾರ್ಯದಿಂದ ಪ್ರಭಾವಿತರಾದ ಅವರು, ಆಕೆಯೊಂದಿಗೆ ತಮ್ಮ ಮಗ ಖಂಡೇರಾವ್ ಹೋಳ್ಕರ್‌ರೊಂದಿಗೆ ಮದುವೆ ಮಾಡಲು ನಿರ್ಧರಿಸಿದರು. ಅಹಿಲ್ಯಾಬಾಯಿ 1733 ರಲ್ಲಿ ತನ್ನ 8ನೇ ವಯಸ್ಸಿನಲ್ಲಿ ಖಂಡೇರಾವ್ ಹೋಳ್ಕರ್ ಅವರನ್ನು ವಿವಾಹವಾದರು. ಇದರ ನಂತರ, ಮಗ ಮಲ್ರಾವ್ ಮತ್ತು ಮಗಳು ಮುಕ್ತಾಬಾಯಿ ಜನಿಸಿದರು. ಅಹಲ್ಯಾಬಾಯಿಯ ಪತಿ ಖಂಡೇರಾವ್ ಹೋಳ್ಕರ್ 1754ರಲ್ಲಿ ಕುಂಬೇರ್ ಯುದ್ಧದ ಸಮಯದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ನಿಧನಹೊಂದಿದರು. ಹನ್ನೆರಡು ವರ್ಷಗಳ ನಂತರ, ಅವರ ಮಾವ ಮಲ್ಹಾರ್ ರಾವ್ ಹೋಳ್ಕರ್ ಸಹ ನಿಧನರಾದರು. ಒಂದು ವರ್ಷದ ನಂತರ ಅವರು ಮಾಳ್ವ ರಾಜ್ಯದ ಸಾಮ್ರಾಜ್ಞಿಯಾಗಿ ಅಹಿಲ್ಯಾಬಾಯಿ ಪಟ್ಟಾಭಿಷಿಕ್ತರಾದರು.

ಅಹಿಲ್ಯಾಬಾಯಿಗೆ ಶಿವನ ಬಗ್ಗೆ ಅಪಾರ ಭಕ್ತಿಯಿತ್ತು. ಅವರು ಶಾಸನಗಳಿಗೆ ತಮ್ಮ ಹೆಸರಿನೊಂದಿಗೆ ಸಹಿ ಹಾಕುತ್ತಿರಲಿಲ್ಲ, ಆದರೆ ಪತ್ರದ ಕೆಳಭಾಗದಲ್ಲಿ ಶ್ರೀ ಶಂಕರ ಎಂದು ಮಾತ್ರ ಸಹಿ ಮಾಡುತ್ತಿದ್ದರು. ನಂದಿಯ ಚಿತ್ರವಷ್ಟೇ ಅಲ್ಲ, ಶಿವಲಿಂಗ ಮತ್ತು ಬಿಲ್ವಪತ್ರೆಯ ಚಿತ್ರಗಳನ್ನೂ ಸಹ ನಾಣ್ಯದ ಮೇಲೆ ಅವರು ಮುದ್ರಿಸುತ್ತಿದ್ದರು. ಅಂದಿನಿಂದ ಸ್ವಾತಂತ್ರ್ಯ ಬರುವವರೆಗೆ, ಇಂದೋರ್‌ನ ಸಿಂಹಾಸನದ ಮೇಲೆ ಕುಳಿತಿದ್ದ ಎಲ್ಲ ರಾಜರು ಶ್ರೀ ಶಂಕರರ ಹೆಸರನ್ನು ಉಲ್ಲೇಖಿಸದೆ ಶಾಸನಗಳನ್ನು ಹೊರಡಿಸುತ್ತಿರಲಿಲ್ಲ ಎಂದು ಹೇಳಲಾಗುತ್ತದೆ. ಶ್ರೀ ಶಂಕರ ಎಂಬ ಪದ ಇಲ್ಲದೆ, ಯಾರೂ ಈ ಶಾಸನವನ್ನು ಪರಿಗಣಿಸುತ್ತಿರಲಿಲ್ಲ, ಮತ್ತು ಅದು ಎಂದಿಗೂ ಜಾರಿಗೆ ಬರುತ್ತಿರಲಿಲ್ಲ.

ದೇವಿ ಅಹಿಲ್ಯಾಬಾಯಿ ಒಬ್ಬ ನುರಿತ ರಾಜಕಾರಣಿಯೂ ಆಗಿದ್ದರು. ಅಹಿಲ್ಯಾ ಅವರ ರಾಜ್ಯ ದುರ್ಬಲವಾಗಿದೆ ಎಂದು ನಂಬಿ ಮರಾಠ ಪೇಶ್ವೆಗಳು ಒಮ್ಮೆ ಮಾಳ್ವವನ್ನು ವಶಪಡಿಸಿಕೊಳ್ಳುವ ಸಲುವಾಗಿ ಮುತ್ತಿಗೆ ಹಾಕಿದರು, ಅಹಿಲ್ಯಾ ಬಾಯಿ ಮರಾಠ ಪೇಶ್ವೆಯವರಿಗೆ ಒಂದು ರಾಜತಾಂತ್ರಿಕ ಪತ್ರವನ್ನು ಕಳುಹಿಸಿದರು, ಅದರಲ್ಲಿ ಅವರು ಮಹಿಳಾ ಸೈನ್ಯದ ವಿರುದ್ಧ ವಿಜಯ ಸಾಧಿಸಿರೂ, ನಿಮ್ಮ ಕೀರ್ತಿಯಲ್ಲಿ ಯಾವುದೇ ಹೆಚ್ಚಳವಾಗುವುದಿಲ್ಲ, ನೀವು ಮಹಿಳಾ ಸೈನ್ಯವನ್ನು ಮಾತ್ರ ಸೋಲಿಸಿದ್ದು ಎಂದು ಜಗತ್ತು ಹೇಳುತ್ತದೆ, ಮತ್ತು ಮಹಿಳಾ ಸೈನ್ಯದಿಂದ ನೀವು ಸೋತರೆ ಜಗತ್ತು ಎಷ್ಟು ನಗುತ್ತದೆ ಎಂದು ನೀವು ಊಹಿಸಲೂ ಸಹ ಸಾಧ್ಯವಿಲ್ಲ ಎಂದು ತಿಳಿಸಿದ್ದರು. ಅಹಿಲ್ಯಾಬಾಯಿಯ ಬುದ್ಧಿವಂತಿಕೆಯ ಪರಿಣಾಮವಾಗಿ ಪೇಶ್ವೆ ಆಕ್ರಮಣ ಮಾಡುವ ಆಲೋಚನೆಯನ್ನೇ ಕೈಬಿಟ್ಟರು.

ದೇವಿ ಅಹಿಲ್ಯಾಬಾಯಿ ಹೋಳ್ಕರ್ ಅವರ ಸನಾತನ ಧರ್ಮದ ತತ್ವಗಳು ಮತ್ತು ತತ್ವಶಾಸ್ತ್ರವನ್ನು ಎತ್ತಿಹಿಡಿಯಲು ಕೆಲವು ಆಧುನಿಕ ಭಾರತೀಯ ನಾಯಕರು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಪ್ರಧಾನಮಂತ್ರಿ ಮೋದಿ ಅವರ ಹೆಸರು ಎದ್ದು ಕಾಣುತ್ತದೆ. ಅನೇಕ ಜನರು ಮೋದಿಯವರ ಆಡಳಿತವನ್ನು ಅಹಿಲ್ಯಾಬಾಯಿ ಹೋಳ್ಕರ್ ಅವರ ಪ್ರಭಾವಶಾಲಿ, ಬಲವಾದ ಮತ್ತು ಕಲ್ಯಾಣ ಆಡಳಿತಕ್ಕೆ ಹೋಲಿಸಿದ್ದಾರೆ, ಇತಿಹಾಸಕಾರ ಜಾನ್ ಕೇಯ್ ಅಹಿಲ್ಯಾ ಬಾಯ್ ಅವರನ್ನು ತತ್ವಜ್ಞಾನಿ ಮಹಾರಾಣಿ (ಫಿಲಾಸಫರ್ಸ್ ಕ್ವೀನ್) ಎಂದು ಬಣ್ಣಿಸಿದ್ದರು.

ಅಂತೆಯೇ, ಎರಡೂ ಆಡಳಿತಗಳ ನಡುವೆ ಹೆಚ್ಚಿನ ಹೋಲಿಕೆಗಳಿವೆ. ಅಹಿಲ್ಯಾಬಾಯಿ ತಮ್ಮ ಜೀವಿತಾವಧಿಯಲ್ಲಿ ಆಕ್ರಮಣಕಾರರು ಮತ್ತು ಬ್ರಿಟಿಷ್ ಆಡಳಿತಗಾರರ ದೌರ್ಜನ್ಯದಿಂದ ನಾಶವಾದ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರು. ಮೋದಿ ಅವರೂ ಕಾಶಿ ವಿಶ್ವನಾಥ ದೇವಾಲಯವನ್ನು ಪುನರ್ನಿರ್ಮಿಸಿದರು. ನೆಲಸಮಗೊಂಡಿದ್ದ ಸೋಮನಾಥ ದೇವಾಲಯದ ಬಳಿ, ಎರಡು ಅಂತಸ್ತಿನ ದೇವಾಲಯವನ್ನು ನಿರ್ಮಿಸಲಾಯಿತು. ದೇವಾಲಯಗಳ ಜೀರ್ಣೋದ್ಧಾರಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರಸ್ತುತ ಪ್ರಯತ್ನಗಳಲ್ಲಿ ಇದೇ ರೀತಿಯ ಹೋಲಿಕೆಗಳನ್ನು ಕಾಣಬಹುದು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ, ಈ ಪೌರಾಣಿಕ ಮತ್ತು ಧಾರ್ಮಿಕ ತಾಣಗಳನ್ನು ಅವುಗಳ ದೈವಿಕ ಮತ್ತು ಭವ್ಯ ರೂಪಗಳಂತೆಯೇ ಮರು ಸ್ಥಾಪಿಸಲಾಗುತ್ತಿದೆ. ಲೋಕಮಾತಾ ಅಹಿಲ್ಯಾಬಾಯಿಯಂತೆ ಮೋದಿ ಸರ್ಕಾರವೂ ಸಾಂಸ್ಕೃತಿಕ ಪರಂಪರೆ ಮತ್ತು ಧಾರ್ಮಿಕ ಅಸ್ಮಿತೆಯನ್ನು ಪುನಃ ಸ್ಥಾಪಿಸಲು ಮತ್ತು ಸಂರಕ್ಷಿಸಲು ಪ್ರಯತ್ನಗಳನ್ನು ಮಾಡಿದೆ, ಅದು ಈಗ ವಿದೇಶಗಳಲ್ಲಿಯೂ ಹರಡಿದೆ. ಬಹ್ರೇನ್ ನ ರಾಜಧಾನಿ ಮನಾಮದಲ್ಲಿ ಜೀರ್ಣೋದ್ಧಾರವಾದ 200 ವರ್ಷಗಳಷ್ಟು ಹಳೆಯದಾದ ಶ್ರೀನಾಥ್ ಜಿ ದೇವಾಲಯವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಅವರ ಪ್ರಯತ್ನಗಳ ಫಲವಾಗಿ ಯುಎಇಯ ಅಬುಧಾಬಿಯಲ್ಲಿ ಮೊದಲ ಸಾಂಪ್ರದಾಯಿಕ ಹಿಂದೂ ದೇವಾಲಯವಾದ ಸ್ವಾಮಿನಾರಾಯಣ ದೇವಾಲಯವನ್ನು ನಿರ್ಮಿಸಲೂ ಅನುವು ಮಾಡಿಕೊಟ್ಟಿತು. ಕಳೆದ ಐದು ವರ್ಷಗಳಲ್ಲಿ, ಸರ್ಕಾರವು ವಿಶ್ವದಾದ್ಯಂತದಿಂದ ದಾಖಲೆಯ ಕಲಾಕೃತಿಗಳನ್ನು ಪಡೆದುಕೊಂಡಿದೆ. ಅಹಿಲ್ಯಾಬಾಯಿ ಸರ್ಕಾರವು ಭೂಕಂದಾಯ ನಿರ್ವಹಣಾ ಕಾರ್ಯವಿಧಾನಗಳನ್ನು ಸರಳೀಕರಿಸಿತ್ತು. ಅಹಿಲ್ಯಾಬಾಯಿ ಸರ್ಕಾರವು ಭೂಕಂದಾಯ ನಿರ್ವಹಣಾ ಕಾರ್ಯವಿಧಾನಗಳನ್ನು ಸರಳೀಕರಿಸಿತ್ತು. ಮೋದಿ ಸರ್ಕಾರ ಸಹ ಭೂ ನಿರ್ವಹಣೆಯನ್ನು ಸರಳೀಕರಿಸಲು ಶ್ರಮಿಸುತ್ತಿದೆ. ಮಹೇಶ್ವರದಲ್ಲಿ ಸ್ಥಳೀಯ ಕೈಮಗ್ಗ ಉದ್ಯಮವನ್ನು ಅಭಿವೃದ್ಧಿಪಡಿಸುವ ಮೂಲಕ, ಅಹಿಲ್ಯಾಬಾಯಿ ಅವರು ಮಹೇಶ್ವರ ಸೀರೆಯನ್ನು ಜಗತ್ತಿಗೆ ಉಡುಗೊರೆಯಾಗಿ ನೀಡಿದರು. ಮೋದಿ ಅವರು 'ಸ್ಥಳೀಯತೆಗೆ ಧ್ವನಿಯಾಗಿ ಎಂದು ಉತ್ತೇಜಿಸುತ್ತಿದ್ದಾರೆ. ■



PMO India @PMOIndia

आज भारत के पास इतना कुछ है।

हमें बस अपने आत्मविश्वास को, आत्मनिर्भरता के अपने जज्बे को मज़बूत करना है।

ये आत्मविश्वास तभी आएगा जब विकास में सबकी भागीदारी होगा, सबका प्रयास लगेगा: PM @narendramodi



Rajnath Singh @rajnathsingh

The procurement by MoD on Government e-Marketplace (GeM) for 2021-22 reaches an all-time high of Rs 15047.98 Cr, which is a 3 times jump from FY 2020-21. Congratulations to Armed Forces & other stakeholders for their efforts in fulfilling PM Modi's vision for #EaseofDoingBusiness



Amit Shah @AmitShah

श्री @narendramodi जी ने #AzadiKaAmritMahotsav में आजादी के शताब्दी वर्ष में भारत को पूरी दुनिया में हर क्षेत्र में सर्वोच्च स्थान पर बिठाने का लक्ष्य देश के सामने रखा है। देश के हर नागरिक को इसके लिए संकल्प लेना चाहिए।

यही बाबू वीर कुंवर सिंह जी को सच्ची श्रद्धांजलि हो सकती है।



Nitin Gadkari @nitin_gadkari · 5d

The 3,300 km long East - West Corridor connecting Silchar to Porbandar, is a part of Golden Quadrilateral, a dream project of revered Atal ji.

Also, it has reduced the travel time by approximately one hour between Siliguri and Alipurduar in West Bengal. #PragatiKaHighway #GatiShakti



Dr Mansukh Mandaviya @...

India under PM @NarendraModi Ji's leadership has emerged as Global Medical Superpower by:

💊 Providing essential drugs, vaccines, medical expertise to various nations

📦 Boosting pharmaceutical exports & domestic manufacturing

🧑‍🔬 Strengthening research & development ecosystem



Anurag Thakur Retweeted

Office of Mr. Anurag Thakur · 6h

जहाँ विश्व की अर्थव्यवस्थाएं ग्रोथ के लिए संघर्ष कर रही हैं, वहीं भारत में नए-नए रिकॉर्ड बन रहे हैं! जीएसटी संग्रह में लगातार वृद्धि हो रही है; अप्रैल 2022 में ₹1.68 लाख करोड़ का रिकॉर्ड जीएसटी संग्रह हुआ है।



# Efforts on to lift Afspa in all of North-East, says PM

Utpal Parashar

PM Narendra Modi with Assam CM Himanta Biswa Sarma and Union minister Sarbananda Sonowal.



# Will try to strengthen spirit of cooperation with Europe: PM

Region facing many challenges and choices, says Modi ahead of three-nation visit

Through my engagements, I intend to strengthen the spirit of cooperation with our European partners, who are important companions in India's quest for peace and prosperity



# Country remains indebted to Sree Narayana Guru: PM



# Devise ways to release 3.5L undertrials: PM to top judges

'Dist Panels Can Examine Cases, Grant Bail'

Dhananjay.Mahapatra

PM Modi with CJI NV Ramana at the joint conference of chief ministers and chief justices of high courts in Delhi on Saturday



# Govt approves ₹60,939 crore subsidy for P&K fertilisers



# PM: India eyeing a key role in semiconductor supply



# India doesn't dream of own uplift at cost of others: PM

RNI No. :
DELKAN/2020/78828
May: 16-31, 2022

ನ್ಯೂ ಇಂಡಿಯಾ ಸಮಾಚಾರ ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 13-17 advance Fortnightly (Publishing Date May 5, 2022, Pages -84)



# ಈ ಮಣ್ಣಿನ ಮಗ
# ವೀರ್ ಸಾವರ್ಕರ್ ಗೆ
## ಅವರ ಜನ್ಮದಿನದಂದು
## ಭಾರತದ ಗೌರವ ನಮನ
## (28 ಮೇ 1883)

ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಸಾವರ್ಕರ್ ಅವರ ಬಗ್ಗೆ ಅದ್ಭುತವಾಗಿ ವರ್ಣನೆ ಮಾಡಿದ್ದಾರೆ. ಅಟಲ್ ಜೀ ಹೀಗೆ ಹೇಳುತ್ತಾರೆ, ಸಾವರ್ಕರ್ ಎಂಬುದು ಸಂಸ್ಕೃತ ಪದವಾಗಿದ್ದು, ಅದನ್ನು "ಉಪವಾಸ", "ತ್ಯಾಗ,", "ದೃಢತೆ," "ಧಾತು, "ತರ್ಕ, "ತಾರುಣ್ಯ", "ಬಾಣ", ಮತ್ತು "ಖಡ್ಗ" ಎಂದು ಭಾಷಾಂತರಿಸಬಹುದಾಗಿರುತ್ತದೆ. ಅಟಲ್ ಜೀ ಅವರ ಬಣ್ಣನೆ ಅತಿಶಯವಲ್ಲದ್ದು. ಸಾವರ್ಕರ್ ತಮ್ಮೊಂದಿಗೆ ಕಾವ್ಯ ಮತ್ತು ಕ್ರಾಂತಿಯನ್ನು ಹೊತ್ತುತಂದಿದ್ದರು. ಅವರು ಸಂವೇದನಾಶೀಲ ಕವಿ ಮಾತ್ರವಲ್ಲ, ಧೈರ್ಯಶಾಲಿ ಕ್ರಾಂತಿಕಾರಿಯೂ ಆಗಿದ್ದರು.

- ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಪೋರ್ಟ್ ಬ್ಲೇರ್ ನ ಸೆಲ್ಯುಲಾರ್ ಜೈಲಿನಲ್ಲಿ ಪ್ರಧಾನಮಂತ್ರಿ ಮೋದಿ ಅವರು ವೀರ್ ಸಾವರ್ಕರ್ ಅವರಿಗೆ ಗೌರವ ಸಲ್ಲಿಸುತ್ತಿರುವ ವೀಡಿಯೊವನ್ನು ವೀಕ್ಷಿಸಲು ಸ್ಕ್ಯಾನ್ ಮಾಡಿ.

ಪ್ರಧಾನಮಂತ್ರಿಯವರು ವೀರ್ ಸಾವರ್ಕರ್ ಅವರ ಜನ್ಮದಿನದಂದು ಅವರನ್ನು ಸ್ಮರಿಸಿರುವುದನ್ನು ಆಲಿಸಲು ಸ್ಕ್ಯಾನ್ ಮಾಡಿ.

ಸಂಪಾದಕರು
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು,
ಪಿಐಬಿ ನವದೆಹಲಿ

ಮುದ್ರಕರು ಮತ್ತು ಪ್ರಕಾಶಕರು
**ಸತ್ಯೇಂದ್ರ ಪ್ರಕಾಶ್**
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್ ಪರವಾಗಿ

ಪ್ರಕಾಶಕರು
**ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್**
ಕೊಠಡಿ ಸಂ. 278, 2ನೇ ಮಹಡಿ, ಸೂಚನಾ ಭವನ,
ನವದೆಹಲಿ - 110003

ಮುದ್ರಣ:
**ಇನ್ಫಿನಿಟಿ ಅಡ್ವಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್**
ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ
ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003

Kannada Vol. 2
Issue 22